
ಕಸ್ತೂರಿ


ಜನವರಿ 1991 ರೂ. 3-00



- ಹಿಮಗಿರಿಯ ಧಾಮಗಳಲ್ಲಿ....
- ದೃಷ್ಟಿಕುದುರಿಸುವ ಕುಂದಣಗಾರ !



- ಕೆಂಬಾವುಟಗಳೇಕೆ ಕಳಚಿಬಿದ್ದವು ?
- "ಋತುಬಂಧ-ಕೆಲವು ಹೊಸ ಅಂಶಗಳು"



ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: 35

ಸಂಚಿಕೆ: 5

ಜನವರಿ 1991

ವ್ಯವಸ್ಥಾಪಕ ಸಂಪಾದಕ

ಕೆ. ಶಾಮರಾವ್

ಸಂಪಾದಕ

ಆರ್.ಎ. ಉಪಾಧ್ಯ

ನಿರ್ವಹಣೆ

ರವಿ ಬೆಳಗೆರೆ

ಮುಖಪುಟ ಚಿತ್ರ

ದೇಬಬ್ರತ ಬ್ಯಾನರ್ಜಿ

ಕಸ್ತೂರಿ ಕಾರ್ಯಾಲಯ

ಕೊಪ್ಪೀಕರ ರಸ್ತೆ

ಹುಬ್ಬಳ್ಳಿ-580020

ಬೆಳಕಿಂಡಿ

* ನಿನಗೇನು ಮಾಡಬೇಕೆಂಬುದು ತಿಳಿಯದಿದ್ದಾಗ ಚೆನ್ನಾಗಿ ನಗು.

-ಆಂಗ್ಲಗಾದೆ

* ನಿನ್ನ ವಿಷಯವಾಗಿ ಆಡಿದ ಕೆಡುಕು ನಿಜವಿದ್ದರೆ ತಿದ್ದಿಕೋ, ಇಲ್ಲದಿದ್ದರೆ ನಕ್ಕುಬಿಡು.

-ಶೇಕ್ಸ್‌ಪಿಯರ್

* ಎಲ್ಲರನ್ನೂ ಪ್ರೀತಿಸು, ಆದರೆ ಕೆಲವರನ್ನು ಮಾತ್ರ ನಂಬು.

-ಅನಾಮಿಕ

ದ್ವೇಷ, ಶ್ರೀಮಂತಿಕೆಯನ್ನು ಮುಚ್ಚಿಡಬಹುದು. ಆದರೆ ಪ್ರೀತಿಯನ್ನೂ, ಬಡತನವನ್ನೂ ಮುಚ್ಚಿಡಲಾಗುವುದಿಲ್ಲ.

-ಶ್ರೀರಂಗ

ಚಂದಾ ದರಗಳು

ಬಿಡಿ ಸಂಚಿಕೆ	....	3-00
1 ವರ್ಷಕ್ಕೆ	ಅಂಚೆ ಸೇರಿ	34-00
2 ವರ್ಷಕ್ಕೆ	....	65-00
3 ವರ್ಷಕ್ಕೆ	....	100-00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

KASTURI, JANUARY

1991

ಸಹಚಿಂತನ

ಎಲ್ಲಿ ಹೋದವು ಆ ದಿನಗಳು ?

ಖಜಾನೆಯವರು ಬರೆದ "ಮೂರ್ತಿರಾಯರಿಗೊಂದು ಪತ್ರ" ಓದಿ ಶಿವಮೊಗ್ಗೆಯ ಕಳೆದ ದಿನಗಳ ನೆನಪಾಯ್ತು. ನಾನೂ ಅದೇ ಪೇಟಾ ಪ್ರೈಮರಿ ಶಾಲೆಯ ವಿದ್ಯಾರ್ಥಿಯಾಗಿದ್ದೆ. ಆಗಿನ ಕಾಲಕ್ಕೆ ತುಂಬಾ ಪರಿಚಿತರಾಗಿದ್ದ ಮತ್ತಿಬ್ಬರು ವ್ಯಕ್ತಿಗಳನ್ನು ಹೆಸರಿಸಬಹುದೇನೋ; ಹುಚ್ ಕಮಲಿ ಮತ್ತು ಮೋಜ! ಮೋಜನ ಬೆಳಗಿನ "ಗೌರೀ ಕಿಟ್ಟೂ" ಪಲ್ಲವಿ. ಯಾವ ಗೌರಿಯೋ ಯಾವ ಕಿಟ್ಟುವೊ! ಖಜಾನೆಯವರಿಗೆ ಕೃತಜ್ಞತೆಗಳು.

ಬೆಂಗಳೂರು ಸಾ. ದತ್ತಾತ್ರಿ

ಇದೊಂದು ಸುಂದರ ನೆನಪಿನ ಚಿತ್ರ. ನಾಕದಿಂದ ನರಕಕ್ಕೆ ಜಿಗಿದ ವ್ಯಥೆಯ ಕಥೆ. ಕೃಷ್ಣಮೂರ್ತಿಯವರ 'ಖಜಾನೆ'ಯಲ್ಲಿ ಇಂತಹ ಇನ್ನೂ ಅನೇಕ ಸಾಹಿತ್ಯ ರತ್ನಗಳಿವೆ ಎಂಬುದು ನನಗೆ ಗೊತ್ತು. ಅವುಗಳನ್ನೂ ಅವರು ಚಲಾವಣೆಗೆ ತರಲಿ ಎಂದು ಅಪೇಕ್ಷಿಸುತ್ತೇನೆ.

ಚಿಕ್ಕನಾಯಕನಹಳ್ಳಿ ಆರ್. ಬಸವರಾಜ್

ಏಕೀಕರಣಕ್ಕೆ ಅರ್ಥ

ಡಿಸೆಂಬರ್ ಸಂಚಿಕೆಯ 'ಒಂದಾಯಿತು ಜರ್ಮನಿ: ಮುಂದೇನು ?' (ವಿಶ್ವೇಶ್ವರ ಭಟ್) ಲೇಖನದ ಆಳಕ್ಕಿಳಿದು ಅವಲೋಕಿಸಿದಾಗ ಅನೇಕ ಸತ್ಯ ಸಂಗತಿಗಳು ಹೊರಬೀಳುತ್ತವೆ. ಪಶ್ಚಿಮ ಜರ್ಮನಿ ಮತ್ತು ಪುಟ್ಟ ಜಪಾನ್ ದೇಶಗಳು ಮಾನವ ಸಂಪನ್ಮೂಲದ ಸದ್ಬಳಕೆಯಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿವೆ. ಅಂತೆಯೇ ಅಗಾಧ ಮಾನವ ಸಂಪನ್ಮೂಲ ಹೊಂದಿರುವ ಭವ್ಯ ಭಾರತ ಅಜ್ಞಾನ, ಅನಕ್ಷರತೆ, ನಿರುದ್ಯೋಗ, ಬಡತನಗಳಿಂದ ಮೇಲೇಳುವಂತಹ ಅರ್ಥವ್ಯವಸ್ಥೆ ಕಲ್ಪಿಸುವ ಅಗತ್ಯವಿದೆ.

ಎರಡು ಜರ್ಮನಿಗಳು ಒಂದಾಗಿರುವುದು ಸಂತಸದ ಸಂಗತಿಯೇನೋ ಸರಿ. ಆದರೆ ಪೂರ್ವ ಜರ್ಮನಿಯ ಜ್ವಲಂತ ಸಮಸ್ಯೆಗಳಾದ ಬಡತನ, ನಿರುದ್ಯೋಗಗಳನ್ನು ನಿರ್ಮೂಲನ ಮಾಡುವುದರೊಂದಿಗೆ ಸಂಪೂರ್ಣ ಕೃಶಗೊಂಡಿರುವ ಆರ್ಥಿಕ ವ್ಯವಸ್ಥೆಯನ್ನು ಸರಿದಾರಿಗೆ ತಂದಾಗಲೇ ಏಕೀಕೃತ ಜರ್ಮನಿಗೊಂದು ಅರ್ಥ ಬರುತ್ತದೆ.

ಗುಳಿಗೇನಹಳ್ಳಿ ಜಿ.ಕೆ. ನಾಗಲಿಂಗಪ್ಪ

ಲೇಖನದ ಆರಂಭದಲ್ಲಿ ಬರೆದ "ಪೂರ್ವ ಪೂರ್ವವೇ; ಪಶ್ಚಿಮ ಪಶ್ಚಿಮವೇ! ಅವು ಎಂದೂ ಒಂದುಗೂಡಲಾರವು" ಎಂಬ ಮಾತು ಇಂಗ್ಲೆಂಡ್ ಹಾಗೂ ಭಾರತಕ್ಕೆ ಸಂಬಂಧಿಸಿದುದು. ಇದು ಪ್ರಸ್ತುತ ಜರ್ಮನ್ ಲೇಖನಕ್ಕೆ ಎಷ್ಟು ಸಮಂಜಸ ?

ಸಿದ್ದಿ ಲೇಖನ (ರವಿ ಬೆಳಗೆರೆ)ವೂ ಸುಂದರವಾಗಿದೆ. ಕಿತ್ತೂರ ರಾಣಿ ಚೆನ್ನಮ್ಮನ ಸೈನ್ಯವಡೆಯಲ್ಲಿ ಸಿದ್ದಿ ಜನರಿದ್ದರು. 'ಸಿದ್ದಿ ಬಾಬಾ ಜಂಗಲ್ ಮೇ ದೂದಪಿಯಾ ಮಂಗಲ್ ಮೇ' ಎಂಬ ಹಾಡು ಈಗಲೂ ಪ್ರಚಲಿತದಲ್ಲಿದೆ.

ಉಪನಾಳ ಎಸ್.ಬಿ. ಸಾಸನೂರ

ಕರ್ನಾಟಕದ ಸಿದ್ದಿಗಳು

'ಕರ್ನಾಟಕದ ಕರಿಯರು: ಸಿದ್ದಿಗಳು' ಲೇಖನ ತುಂಬ ಮಾರ್ಮಿಕವಾಗಿತ್ತು. ರವಿ ಬೆಳೆಗೆರೆಯವರು ಕರಿಯರ ಕಷ್ಟಗಳನ್ನು ಮನ ಮುಟ್ಟುವಂತೆ ವಿಶ್ಲೇಷಿಸಿದ್ದಾರೆ.

ಮಾಗಡಿ ಶಿವಾನಂದ ರಾ. ಕುಂದಿ

ಲೇಖನ ಸಿದ್ದಿಗಳ ಬದುಕಿನ ಮುಖವಾಣಿಯಂತೆ ಅಭಿವ್ಯಕ್ತಗೊಂಡಿದೆ. ಅವರ ಅಂತರಂಗದ ಅಳಲು ಹಾಗೂ ನೆಲೆ-ಬೆಲೆಯನ್ನು ಲೇಖಕರು ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಸರ್ಕಾರ ಸಿದ್ದಿಗಳಿಗೆ ಸರಿಯಾದ ನೆಲೆಯನ್ನು ಕಲ್ಪಿಸಬೇಕು.

ಹಾನಗಲ್ಲ ಪ್ರೊ. ಎಂ.ಎಂ. ಶಿಡ್ಲಾಪುರ

ಹೀಗಿದ್ದವು ಅಂದಿನ ಶಸ್ತ್ರಾಸ್ತ್ರಗಳು

ಪ್ರಾಚೀನ ಶಸ್ತ್ರಾಸ್ತ್ರಗಳ ಬಗೆಗೆ ವಿವರವಾದ ಮಾಹಿತಿ ನೀಡಿದ 'ಹೀಗಿದ್ದವು ಅಂದಿನ ಶಸ್ತ್ರಾಸ್ತ್ರಗಳು' ಲೇಖನ ಸುಂದರವಾಗಿ ಮೂಡಿ ಬಂದಿದೆ. ಎಂ.ವಿ. ಶರ್ಮಾ ತದ್ದಲಸೆ ಅವರ ಈ ಲೇಖನ ಸಂಗ್ರಹಾರ್ಹವಾದುದು.

ಕರ್ಜಗಿ ಕಾವ್ಯ. ಬಿ. ಕುಲಕರ್ಣಿ

ರಾಸಾಯನಿಕ ಅಸ್ತ್ರಗಳ ಆಧುನಿಕ ಯುಗದಲ್ಲಿ ಹಿಂದಿನ ಕಾಲದ ಶಸ್ತ್ರಾಸ್ತ್ರಗಳು ಎಷ್ಟು ಪ್ರಸ್ತುತ ಎಂಬ ಸಂಶಯವನ್ನು ಉಳಿಸಿತು ಲೇಖನ.

ಶಿವಮೊಗ್ಗ ಕೆ.ಪಿ. ಪ್ರಕಾಶ್

ಕತೆಗಳು

ಖ್ಯಾತ ಲೇಖಕ-ಪತ್ರಕರ್ತ ಖುಷವಂತ್ ಸಿಂಗ್‌ರ 'ಕರುಣಾಮಯಿ' ಕತೆಯನ್ನು ಹೊತ್ತುತಂದ ಕಸ್ತೂರಿ ತುಂಬಾ ಹಿಡಿಸಿತು.

ಗುಲಬರ್ಗಾ ಸಿದ್ದಣ್ಣ ಹೂಗಾರ್

ಶ್ರೀಮತಿ ಶೋಭಾ ವಾರಿಯರ್ ಅವರು ಬರೆದ ಮಲೆಯಾಳಂ ಕಥೆ 'ಕರೆ' ಮನೋಜ್ಞವಾಗಿತ್ತು. ಅನ್ಯ ಭಾಷೆಗಳ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವ 'ಕಸ್ತೂರಿ'ಯ ಕಾರ್ಯ ಸ್ತುತ್ಯರ್ಹ.

ಬೆಂಗಳೂರು ಕೆ.ಜಿ. ಸೋಮಶೇಖರ

ಒಂದಾಯಿತು ಜರ್ಮನಿ

ವಿಶ್ವೇಶ್ವರ ಭಟ್ ಅವರು 'ಒಂದಾಯಿತು ಜರ್ಮನಿ: ಮುಂದೇನು?' ಲೇಖನದಲ್ಲಿ ಜರ್ಮನಿಯ ಇತಿಹಾಸವನ್ನು ಎಳೆಎಳೆಯಾಗಿ ಚಿತ್ರಿಸಿದ್ದಾರೆ. ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ಸಂಗಮವಾಗಿರುವುದು ಅತ್ಯಂತ ಸಂತಸದ ಸಂಗತಿ. ಇದೇ ರೀತಿ ಇಡೀ ಪ್ರಪಂಚದ ಮಾನವ-ಮಾನವರ ನಡುವೆ ಭಾವನಾತ್ಮಕ ಸಂಬಂಧ ಅಂಕುರಿಸಬೇಕು.

ರಾಮನಾಥಪುರ ಆರ್.ಎಸ್. ಸುಬ್ರಹ್ಮಣ್ಯ

ವಿಷಾದ

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ಅಂಬಾ' ಕತೆಯೊಂದಿಗೆ ಕಣ್ತಪ್ಪಿನಿಂದಾಗಿ ಅದರ ಮೂಲ ಲೇಖಕಿ ಹಾಗೂ ಅನುವಾದಕರ ಹೆಸರುಗಳು ಬಿಟ್ಟುಹೋಗಿವೆ. ಮೂಲ ಲೇಖಕಿ ಶ್ರೀಮತಿ ಶಶಿದೇಶಪಾಂಡೆ ಮತ್ತು ಅನುವಾದಕಿ ಶ್ರೀಮತಿ ವಿಜಯಾ ಕಣೇಕಲ್ ಎಂದು ಇರಬೇಕಾಗಿತ್ತು. ಇದಕ್ಕಾಗಿ ವಿಷಾದಿಸುತ್ತೇವೆ.

ಎಂ.ವಿ. ಶರ್ಮಾ ತದ್ದಲಸೆ ಅವರ 'ಹೀಗಿದ್ದವು ಅಂದಿನ ಶಸ್ತ್ರಾಸ್ತ್ರಗಳು' ಲೇಖನದೊಂದಿಗೆ ಪ್ರಕಟವಾದ ಕಲಾಕೃತಿಗಳ ಕರ್ತೃ ಜಿ.ಎಂ. ಹೆಗಡೆ ತಾರಗೋಡು. ಪ್ರಮಾದವಶಾತ್ ಲೇಖನದೊಂದಿಗೆ ಕಲಾವಿದರ ಹೆಸರು ಬಿಟ್ಟುಹೋಗಿದ್ದಕ್ಕೆ ವಿಷಾದಿಸುತ್ತೇವೆ.

—ಸಂ—

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಹಿಮಗಿರಿಯ ಧಾಮಗಳಲ್ಲಿ



● · ಕಿಬ್ಬಳ್ಳಿ ಗಣಪತಿ ಶರ್ಮ

ಹಿಮಾಲಯ-ಗಂಗೆಯ ತವರು ಮನೆ. ಆತ ಈಶ್ವರ-ಕಣ್ಮುಚ್ಚಿ ಮೌನ ಗುಹೆಯೊಳಗೆ ಕುಳಿತು ನೆಮ್ಮದಿಗೆ ಗಾಳ ಹಾಕಿದ ತಾಣ. ಒಂದು ಸವಿಸ್ತಾರ ಮುಗ್ಧತೆ, ಸೌಂದರ್ಯ, ನೆಮ್ಮದಿ, ರಮ್ಯ ಭೀಕರತೆ ಮತ್ತು ಇಡೀ ಮಾನವ ಸಂಕುಲಕ್ಕೆ ಪ್ರಕೃತಿ ಒದಗಿಸುವ ಅನನ್ಯ ರಕ್ಷಣಾಭಾವ- ಇವೆಲ್ಲವುಗಳ ಸಂಕಲನವೇ ಹಿಮಗಿರಿ. ಇಲ್ಲಿ ಹುಟ್ಟುವ ಮಂಜು ಗಂಗೆಯಾಗಿ ಶಿವನ ಜಟಾಜೂಟಗಳಿಂದ ಧಬಾಲನೆ ಜಾರಿ ಧರೆಗಿಳಿದು ಬರುವ ಮೋದಕ್ಕೆ ಬೆರಗಾಗಿ ಆ ಎತ್ತರದ ಹಿಮಶಿಖರಗಳ ಸಮ್ಮುಖದಲ್ಲಿ ಮನುಷ್ಯ ಇನ್ನಷ್ಟು

ಕಿರಿದಾಗಿ, ಕುಬ್ಜನಾಗಿ, ತನ್ನ ಅಸ್ತಿತ್ವ ಅರಸುವ ಅದಮ್ಯ ಬಯಕೆಗಳನ್ನು ಹತ್ತಿಕ್ಕಲಾಗದೆ ಗಿರಿಯ ಅಗಾಧ ಕಣಿವೆಗಳಲ್ಲಿ ಕೈಮುಗಿದು ನಿಂತು ಓಂ... ಶಾಂತಿಃ ಶಾಂತಿಃ ಶಾಂತಿಃ... ಎಂದು ಮೊರೆದರೆ ಅದು ಆರ್ತನಾದವಲ್ಲ. ಆತ್ಮನಾದ !

ಬದುಕಿನಲ್ಲಿ ಒಮ್ಮೆಯಾದರೂ ಈ ಮಂಜು ಬೆಟ್ಟಗಳನ್ನೇರುವ ಅದಮ್ಯ ಆಸೆ ನನ್ನದು. ಸಾಹಿತ್ಯದಲ್ಲಿ ವರ್ಣಿತವಾಗಿರುವ ಹಿಮಾಲಯ ಎಷ್ಟೆಷ್ಟು ಆಸೆಗಳನ್ನೂರಿಸು ತ್ತಿತ್ತು. ಕಾಳಿದಾಸನಂತೂ ಹಿಮಾಲಯವನ್ನು ಪೂರ್ವಾಪರ ಸಮುದ್ರಗಳವರೆಗೂ ವ್ಯಾಪಿ ಸಿದ ಪೃಥ್ವಿಯ ಮಾನದಂಡವೆಂದು ಕರೆದಿ ದ್ದಾನೆ.

ಸಾಹಸಿಗಳ ಕೆಚ್ಚನ್ನೂ, ಸೊಕ್ಕನ್ನೂ ಕೆಣ ಕುವ ಅಗಣಿತ ಶಿಖರಗಳಿವೆ. ಪುಣ್ಯ ಹುಡು ಕಿಕೊಂಡು ಬರುವವರಿಗೆ ಗಂಗೋತ್ರಿ, ಯಮುನೋತ್ರಿ, ಅಮರನಾಥ, ಕೇದಾರ, ಬದರೀನಾಥ... ಹೀಗೆ ಹತ್ತು ಹಲವು ತಾಣ ಗಳು. ಉಳ್ಳವರ ಆರೋಗ್ಯ ಖರೀದಿಗೆ ಡಾರ್ಜಿಲಿಂಗ್, ಮಸೂರಿ, ನೈನಿತಾಲ್, ಪಹಲ್‌ಗಾಂವ್, ಸಿಮ್ಲಾಗಳಿವೆ. ನಿಸರ್ಗ ಪ್ರಿಯರಿಗೆ ಪ್ರೀತಿಸಿದಷ್ಟೂ ಲೋಕವಿದೆ. ಇವೆ ಲ್ಲವನ್ನು ತೊರೆದು ತನ್ನನ್ನು ತಾನು ಹುಡು ಕಿಕೊಳ್ಳುವ ಯೋಗಿಯೊಬ್ಬನಿಗೆ ಶೂನ್ಯದ ನಡುವೆಯೇ ಉದ್ಭವಿಸುವ 'ಸಮಸ್ತ'ವೂ ಇದೆ.

ಈ ಹಿಂದೆಯೇ ನಾನು ಡಾರ್ಜಿಲಿಂಗ್, ಶ್ರೀನಗರ್, ಪಹಲಗಾಂವ್‌ಗಳನ್ನು ನೋಡಿದ್ದೆ. ಆದರೆ ಹಿಮಾಲಯದ ಒಟ್ಟು ಜೀವಾಳವಡಗಿರುವ ಬದರಿ-ಕೇದಾರಗಳಿಗೆ ಹೋಗಲು ಸಾಧ್ಯವಾಗಿರಲಿಲ್ಲ. ದೆಹಲಿ ತಲು ಪುತ್ತಿದ್ದಂತೆಯೇ ಹಿಮಗಿರಿಗೆ ಹೋಗುವ ಸಡಗರ ನನ್ನ ತುಂಬ ವ್ಯಾಪಿಸಿಕೊಂಡಿತ್ತು. ದೆಹಲಿಯಿಂದ ಬದರಿ-ಕೇದಾರಗಳಿಗೆ ಹೋಗಿಬರಲು ಸಾಕಷ್ಟು ಪ್ರವಾಸಿ ಬಸ್ಸುಗ ಳಿವೆ. ನಾನು ಮಿತ್ರರೊಬ್ಬರನ್ನು ಕೂಡಿ ಕೊಂಡು ಅಂಥದೊಂದು ಬಸ್ಸಿನಲ್ಲಿ ಹೋಗಿ ಬರಲು ನಿಶ್ಚಯಿಸಿದೆ.

ಮೇ ೧೮, ೧೯೯೦ ರಂದು ರಾತ್ರಿ ಹೊರಡುವ ಬಸ್ಸಿನಲ್ಲಿ ಹೋಗುವುದೆಂದು ನಿಶ್ಚಯಿಸಲಾಯಿತು. ಟ್ರಾವೆಲರ್ಸ್ ಸಂಸ್ಥೆಗೆ ಸಂಬಂಧಿಸಿದ ಏಳೆಂಟು ಬಸ್ಸುಗಳು ಒಟ್ಟಿಗೇ ಹೊರಟಿದ್ದವು. ನಾವಿದ್ದ ಬಸ್ಸಿನಲ್ಲಿ ಇಪ್ಪ ತ್ತಾರು ಜನ ಯಾತ್ರಿಕರು. ಆರು ಜನರಿದ್ದ ಒಂದು ಬಂಗಾಳಿ ಕುಟುಂಬ, ಏಳು ಜನರ ಎರಡು ತೆಲುಗರ ಪರಿವಾರಗಳು, ಒಂದು ವೃದ್ಧ ದಂಪತಿ ಜೋಡಿ, ಹಿಂದಿ ಮಾತಾ ಡುವ ಐವರ ಕುಟುಂಬ, ನಾಲ್ವರು ತಮಿ ಳರು, ಮೇಲೆ ನಾವಿಬ್ಬರು ಕನ್ನಡಿಗರು. ಒಟ್ಟಿನಲ್ಲಿ ಅದೊಂದು ಪುಟ್ಟ ಭಾರತ. ಮಿನಿ ಯೇಚರ್ ಇಂಡಿಯಾ !

ರಾತ್ರಿ ದೆಹಲಿ ಬಿಟ್ಟು ಬೆಳಗಾಗುವ ಹೊತ್ತಿಗೆ ಹರಿದ್ವಾರ (ಹರ್ದ್ವಾರ) ತಲುಪಿ ದ್ದೆವು. ಅಲ್ಲಿ ಪ್ರಾತರ್ವಿಧಿ, ಸ್ನಾನಗಳಿಗೆ ಕೊಟ್ಟದ್ದು ಒಂದೇ ತಾಸಾದ್ದರಿಂದ ಗಂಗೆ ಯಲ್ಲಿ ಮಿಂದು, ಉಪಹಾರ ಮುಗಿಸಿ ಹೃಷಿ ಕೇಶಕ್ಕೆ ಹೊರಟದ್ದಾಯಿತು. ಹರಿದ್ವಾರದಿಂದ ಕೇವಲ ಹದಿನೈದು ಮೈಲು ದೂರದಲ್ಲಿದೆ ಹೃಷಿಕೇಶ. ಇಲ್ಲಿ ಗಂಗೆಗೆ ಅದೇನೋ ರೋಷ

ವಿಪರೀತ ರಭಸದಿಂದ ಹರಿಯುತ್ತಾಳೆ. ಆಕೆಯ ಇಕ್ಕೆಲಗಳಲ್ಲೂ ಆಶ್ರಮಗಳು, ಭವ ನಗಳು ಸಾಲು ಸಾಲು. ಎಡದಂಡೆಯಿಂದ ಬಲದಂಡೆಗೆ ಹೋಗಲು ಇರುವ ಸೇತುವೆ 'ಲಕ್ಷ್ಮಣ ಝೂಲಾ'. ಕಬ್ಬಿಣದ ಬಲವಾದ ತಂತಿಗಳ ಆಧಾರದಿಂದ ಕಟ್ಟಲಾದ ಈ ಸೇತುವೆ ಉಯ್ಯಾಲೆಯಂತಿರುವುದರಿಂದ ಇದಕ್ಕೆ 'ಝೂಲಾ' ಅನ್ನುವುದು ರೂಢಿ. ಕೇವಲ ಪಾದಚಾರಿಗಳಿಗೆ ಇದರಲ್ಲಿ ಸಂಚರಿ ಸಲು ಅನುಮತಿ.

ಗಂಗಾನದಿಯ ಎಡದಂಡೆಯಲ್ಲಿ ಗೀತಾ ಭವನ, ಕೈಲಾಸಾಶ್ರಮ, ಸ್ವರ್ಗಾಶ್ರಮಗ

ಳಿವೆ. ಸುಮಾರು ಹದಿನೈದು ವರ್ಷಗಳ ಹಿಂದೆ ನಾನಿಲ್ಲಿಗೆ ಬಂದಿದ್ದೆ. ಆಗ ಈ ಆಶ್ರಮಗಳ ಹಿಂದಿನ ಗುಡ್ಡಗಳ ಇಳಿಜಾರಿನಲ್ಲಿ ಸಾಕಷ್ಟು ಮರಗಳಿದ್ದವು. ಈಗ ಅವೆಲ್ಲ ಮಾಯವಾಗಿವೆ. ಹಿಮ ಬೆಟ್ಟದ ಪಾದದ ಮೇಲೂ ಕೊಡಲಿಗಳಿಗೆ ಕರುಣೆಯಿಲ್ಲ. ಮೊದಲು ಲಕ್ಷ್ಮಣ ಝೂಲಾದಿಂದ ಸ್ವರ್ಣಾಶ್ರಮದವರೆಗೂ ನಡೆದೇ ಹೋಗಬೇಕಾಗುತ್ತಿತ್ತು. ಈಗ ರಿಕ್ಷಾಗಳೂ, ಟ್ಯಾಕ್ಸಿಗಳೂ ಓಡಾಡುತ್ತವೆ. ಸುಮಾರು ನಾಲ್ಕು ಕಿಲೋಮೀಟರು ದೂರದ ಈ ಹಾದಿಯ ಪಕ್ಕದಲ್ಲಿ ಅಲ್ಲಲ್ಲಿ ಯಾತ್ರಿಕರಿಗೆ ಕುಳಿತುಕೊಳ್ಳಲು ಕಟ್ಟೆಗಳಿವೆ. ಮೊದಲು ಹಸಿರ ಹಿನ್ನೆಲೆಯಲ್ಲಿ ಕಾವಿಯುಟ್ಟ ಸಾಧುಗಳು ಕೂತಿದ್ದರೆ ಆ ದೃಶ್ಯಕ್ಕೊಂದು ಸೊಬಗಿರುತ್ತಿತ್ತು. ಈಗಲೂ ಸಾಧುಗಳು ಕುಳಿತಿರುತ್ತಾರೆ, ಸುಮ್ಮನೆ.

ಸ್ವರ್ಣಾಶ್ರಮದ ಎದುರಿನಲ್ಲೇ ಶಿವಾನಂದಾಶ್ರಮವಿದೆ. ಶಿವಾನಂದರ ಜನ್ಮಶತಾಬ್ದಿಯ ಸಂದರ್ಭದಲ್ಲಿ ಈಗ 'ರಾಮ ಝೂಲಾ' ನಿರ್ಮಿತವಾಗಿದೆ. ಇಲ್ಲಿ ಗಂಗೆಯನ್ನು ದಾಟಲು ದೋಣಿಗಳೂ ಉಂಟು. ಹಿಂದೆ ಇದೊಂದೇ ನದಿ ದಾಟುವ ಸಾಧನವಾಗಿತ್ತು. ಹೃಷಿಕೇಶದ ಶಿವಾನಂದಾಶ್ರಮ ಒಂದು ಸೇವಾ ಸಂಸ್ಥೆ. ಔಷಧಾಲಯ, ಪಾಠಶಾಲೆ, ಯೋಗಶಾಲೆಗಳು ಕಾರ್ಯನಿರತವಾಗಿವೆ. ಇಲ್ಲಿಗೆ ಅನೇಕ ಜನ ವೇದಾಂತ ಹಾಗೂ ಯೋಗಕ್ಕೆ ಸಂಬಂಧಿಸಿದ ಅಧ್ಯಯನಕ್ಕಾಗಿ ಬರುತ್ತಾರೆ. ಇಲ್ಲಿಯ ಅನ್ನಪೂರ್ಣಾ ಕುಟೀರದಲ್ಲಿ ಯಾತ್ರಾರ್ಥಿಗಳಿಗೆ ಪ್ರಸಾದವಿದೆ. ಅಂದು ಮಧ್ಯಾಹ್ನ ನಾವು ಅಲ್ಲೇ ಊಟ ಮಾಡಿದೆವು. ಮುನ್ನೂರು ಜನ ಒಟ್ಟಿಗೆ ಕುಳಿತು ಊಟ ಮಾಡಬಲ್ಲಷ್ಟು ವಿಶಾಲವಾದ ಭೋಜನ ಮಂದಿರ. ದೊರಕುವ ಊಟವೂ ಸರಳ, ರುಚಿಕರ. ಊಟ ಬಡಿಸುವ ರೀತಿ, ಊಟದ ನಂತರ ನಮ್ಮ ನಮ್ಮ ತಟ್ಟೆಗಳನ್ನು ತೊಳೆದು ಒಪ್ಪಿಸುವ ವ್ಯವಸ್ಥೆ ಎಲ್ಲ ತುಂಬ ಅಚ್ಚುಕಟ್ಟು.

ವಿಪರ್ಯಾಸ

ಮದುವೆಗೆ
ಮುನ್ನ
ಮುಸಿ ಮುಸಿ
ನಗುತ್ತಿದ್ದ
ಹುಡುಗಿ
ಅನಂತರ
ಬುಸುಗುಡತೊಡಗಿದಳು!

ಪ್ರಕಾಶ.ಎಸ್.ಮನ್ನಂಗಿ

ನಾವು ಹೃಷಿಕೇಶ ಬಿಟ್ಟಾಗ ಮಧ್ಯಾಹ್ನದ ಎರಡು ದಾಟಿತ್ತು. ನಮ್ಮ ಬಸ್ಸು ಗಢವಾಲ ಜಿಲ್ಲೆಯೊಳಕ್ಕೆ ಹೊಕ್ಕ ತಕ್ಷಣ ನನಗೆ ನೆನಪಾದದ್ದು ಸುಂದರಲಾಲ್ ಬಹುಗುಣರ 'ಚಿಪ್ಕೋ'. ಮತ್ತದೇ ದೃಶ್ಯ. ಪರ್ವತದ ತಪ್ಪಲಿನ ಮರಗಳನ್ನು ಕೊಡಲಿಗಳು ನುಂಗಿ ಹಾಕಿರುವದು ಕಣ್ಣಿಗೆ ರಾಚುತ್ತದೆ. ಗುಡ್ಡದ ತೊಡೆಯೇರತೊಡಗಿದ ಬಸ್ಸುಗಳ ಸಾಲು ಕಾಣಿಸುತ್ತಿತ್ತು. ಇಲ್ಲಿ ಸಂಜೆಯ ನಂತರ ಬಸ್ ಸಂಚಾರವಿರುವುದಿಲ್ಲವಂತೆ. ಇಕ್ಕಟ್ಟಾದ ರಸ್ತೆಯ ಒಂದು ಬದಿಗೆ ಭೀಕರ ಪ್ರಪಾತವಾದರೆ ಮತ್ತೊಂದು ಬದಿಗೆ ಎತ್ತರದ ಗುಡ್ಡ. ಕಳೆದ ವರ್ಷ ಕಾಶ್ಮೀರದಲ್ಲಿ ಪ್ರವಾಸ ಮಾಡಿದಾಗ ಇಂತಹ ಗುಡ್ಡಗಳ ಮೇಲೆ ಪೈನ್ ಮರಗಳ ಸಮೂಹವನ್ನೇ ಕಂಡಿದ್ದೆ. ಆ ಚೆಲುವು, ಅಂಥ ಸೊಬಗು ಇಲ್ಲಿಲ್ಲ. ಅಲ್ಲಲ್ಲಿ ದೇವದಾರು ಮರಗಳನ್ನು ಬೆಳೆಸುವ ಯತ್ನ ನಡೆದಿದೆ. ಹಿಂದೆ ವಾರಾಹಿ ಉದ್ಘಾಟನೆಗೆ ಬಂದಿದ್ದ ಅಂದಿನ ಪ್ರಧಾನಿ ವಿ.ಪಿ. ಸಿಂಗ್



ಪಶ್ಚಿಮ ಘಟ್ಟಗಳ ಅರಣ್ಯ ಕಂಡು, ಹಿಮಾಲಯ ಬೋಳಾಗುತ್ತಿರುವುದನ್ನು ನೆನಪಿಸಿಕೊಂಡು ನನಗೆ ದುಃಖವಾಗುತ್ತಿದೆ ಅಂದಿದ್ದರು. ಆ ಮಾತು ಸತ್ಯವೆನಿಸಿತು. ಇಷ್ಟಾದರೂ ಗಥವಾಲ ಜಿಲ್ಲೆಗೆ ತೆವಳಿ ಬಂದ ಮೇಲೆ ಹರಿದ್ವಾರದ ಉಷ್ಣತೆ ಮಾಯವಾಗಿ ತಂಪು ಹವೆ ಮೈತಾಕಿದ ಅನುಭವವಾಯಿತು.

ಗಂಗೆಯನ್ನೇ ನಾವು ಮಂದಾಕಿನೀ, ಭಾಗೀರಥಿ, ಅಲಕನಂದಾ ಮುಂತಾದ ಹೆಸ

ರುಗಳಿಂದ ಸಂಬೋಧಿಸುವುದು ತಪ್ಪು ಅಂತ ನನಗೆ ಗೊತ್ತಾದದ್ದು ಇಲ್ಲಿಗೆ ಬಂದ ಮೇಲೆಯೇ. ವಸ್ತುತಃ ಮೇಲೆ ಸೂಚಿಸಿದ ನದಿಗಳೆಲ್ಲ ಸೇರಿ ಗಂಗೆಯಾಗುತ್ತವೆ. ಇವು ಒಂದೊಂದಾಗಿ ಬಂದು ಗಂಗೆಯಲ್ಲಿ ಲೀನ ವಾಗುವ ಸ್ಥಳಗಳಿಗೆ 'ಪ್ರಯಾಗ'ಗಳೆಂದು ಹೆಸರಿಸಲಾಗಿದೆ. ಒಟ್ಟು ಐದು ಪ್ರಯಾಗಗ ಳಿವೆ. ದೇವ ಪ್ರಯಾಗ, ರುದ್ರ ಪ್ರಯಾಗ, ನಂದ ಪ್ರಯಾಗ, ಕರ್ಣ ಪ್ರಯಾಗಗಳಲ್ಲಿ ಹರಿದುಬಂದ ಗಂಗೆ ಬಯಲು ಪ್ರದೇಶದಲ್ಲಿ ಅಂತಿಮವಾಗಿ ಯಮುನೆ ಮತ್ತು ಗುಪ್ತಗಾ ಮಿನಿಯಾದ ಸರಸ್ವತಿಯೊಂದಿಗೆ ಸೇರಿ 'ತ್ರಿವೇಣಿ ಸಂಗಮ' ವಾಗುತ್ತದೆ. ಅಲಹಾ ಬಾದ್‌ನಲ್ಲಿನ ಈ ಸಂಗಮವೂ ಪ್ರಯಾಗ ವೆಂದೇ ಖ್ಯಾತವಾಗಿದೆ.

ಸಮುದ್ರ ಮಟ್ಟಕ್ಕೆ ೧೩೫೦ ಅಡಿ ಎತ್ತರ ದಲ್ಲಿರುವ 'ದೇವ ಪ್ರಯಾಗ' ಅಲಕನಂದಾ ಮತ್ತು ಭಾಗೀರಥಿ ಸೇರುವ ಸ್ಥಳ. ಅಲ್ಲಿಗೆ ನಾವು ತಲುಪಿದಾಗ ಸಂಜೆಯಾಗುತ್ತಲಿತ್ತು. ಗುಡ್ಡದ ಇಳಿಜಾರಿನಲ್ಲಿ ಕಟ್ಟಿರುವ ಮನೆಗಳ ಮಧ್ಯೆ ನುಸುಳಿಕೊಂಡು ಇಕ್ಕಟ್ಟಾದ ಹಾದಿ ಯಲ್ಲಿ ಸಂಗಮ ಸ್ಥಳಕ್ಕೆ ಹೋದೆವು. ಅಲ್ಲಿ ಕೇವಲ ಪಾದಚಾರಿಗಳಿಗಾಗಿ ಕಟ್ಟಲಾದ ತೂಗು ಸೇತುವೆಯಿದೆ. ಅಲಕನಂದಾ ನದಿ ಯನ್ನು ದಾಟಿ ಸ್ನಾನಘಟ್ಟ ತಲುಪಿದರೆ ಅಲ್ಲಿ ಇಬ್ಬರೂ ಕಾಣುತ್ತಾರೆ. ರಭಸವಾಗಿ ಹರಿದು ಬರುವ ಮಣ್ಣಿನ ಬಣ್ಣದ ಅಲಕನಂದಾ ಮತ್ತು ಶುಭ್ರ ತಿಳಿನೀರಿನ ಭಾಗೀರಥಿ. ಹಿಂದೆ ಈ ಸ್ನಾನಘಟ್ಟದಲ್ಲಿ ಇಳಿದು ಮೀಯಲು ಜನ ಹೆದರುತ್ತಿದ್ದರು. ದೊಡ್ಡ ಮರದ ದಿಮ್ಮಿಗ ಳನ್ನು ನೀರೊಳಕ್ಕೆ ನೂಕಿ, ಸುಲಭವಾಗಿ ಮತ್ತು ಖರ್ಚಿಲ್ಲದೆ ದಿಮ್ಮಿಗಳ ಸಾಗಾಣಿಕೆ ಮಾಡುತ್ತಿದ್ದ ಕಾಲವೂ ಇತ್ತು. ಹಾಗೆ ತೇಲಿ ಬಂದ ದಿಮ್ಮಿಗಳು ಪುಣ್ಯಸ್ನಾನಕ್ಕಿಳಿದವರನ್ನು ಸದ್ದಿಲ್ಲದೆ ಆಹುತಿ ತೆಗೆದುಕೊಂಡ ಉದಾಹ ರಣೆಗಳಿವೆಯಂತೆ. ಈಗ ಅಂಥ ಭಯ ವೇನೂ ಇಲ್ಲ. ಮರಗಳಿರಲಿ, ಸಣ್ಣ ಸೌದೆಯ ತುಂಡೂ ತೇಲಿ ಬರಲಿಲ್ಲ. ಕಬ್ಬಿಣದ ಸರಪ ಳಿಗಳನ್ನು ತೂಗುಹಾಕಲಾಗಿದ್ದು ಅವುಗಳನ್ನು ಭದ್ರವಾಗಿ ಹಿಡಿದುಕೊಂಡೇ ಸ್ನಾನ ಮಾಡ ಬೇಕು. ಸರಪಳಿ ತಪ್ಪಿದರೆ, ಕೈ ಸೋತರೆ, ಸೆಳವು ಎಳೆದರೆ... ಅಷ್ಟೇ ! ನಮ್ಮ ಬಸ್ಸಿನ ಲ್ಲಿದ್ದವರ ಪೈಕಿ ತಮಿಳರ ವಾಧ್ಯಾಯರನ್ನು ಬಿಟ್ಟರೆ ಉಳಿದವರ್‍ಯಾರೂ ಮೀಯಲಿಲ್ಲ. ಸಂಗಮದ ನೀರನ್ನು ತಲೆಗೆ ಪ್ರೋಕ್ಷಣೆ ಮಾಡಿಕೊಂಡು ತರ್ಪಣ ಬಿಟ್ಟರು.

ಸಂಗಮದ ರುದ್ರ ರಮಣೀಯ ದೃಶ್ಯ ನಮ್ಮನ್ನು ಕಟ್ಟಿಹಾಕಿತ್ತು. ಅಲ್ಲಿ ಎಷ್ಟು ನಿಂತರೂ ತೃಪ್ತಿಯಾಗಲಿಲ್ಲ. ಒಂದೆರಡು ಸಾರಿ ಕಣ್ಣು ಮಿಟುಕಿಸಿದ ನನ್ನ ಕೆಮೆರಾ ಕೆಲ ದೃಶ್ಯಗಳನ್ನು ಸೆರೆಹಿಡಿದಿತ್ತಾದರೂ ಅಷ್ಟೆಲ್ಲ ಸೌಂದರ್ಯವನ್ನು ತುಂಬಿ ತರುವ ತಾಕತ್ತು ಅದಕ್ಕೆಲ್ಲಿಯದು ?

ನಮಗೆ ಮೈಕೊರೆಯುವ ಚಳಿಯ ಮೊದಲ ಅನುಭವವಾದದ್ದು ದೇವಪ್ರಯಾ ಗದಲ್ಲಿ. ಬಸ್ಸಿನ ಕಿಟಕಿಯಾಚೆ ಕಣ್ಣೆಸೆದರೆ ಈಗ ಬರೀ ಬೋಳು ಗುಡ್ಡಗಳು ಕಾಣುತ್ತಿ ರಲಿಲ್ಲ. ಒತ್ತರಿಸಿ ನಿಂತ ಹಸಿರು ಕಾಡುಗಳು ಕಾಣತೊಡಗಿದವು. ಕಡಿದಾದ ಕಣಿವೆಯಲ್ಲಿ ದಾರಿ ಸಾಗುತ್ತಿದ್ದರೆ ಆ ಚಳಿಗೋ ಏನೋ, ಉಲ್ಲಾಸಗೊಂಡಿದ್ದೆವು.

ದೇವಪ್ರಯಾಗದಿಂದ ಶ್ರೀನಗರಕ್ಕೆ ಮೂವತ್ತೈದು ಕಿಲೋ ಮೀಟರುಗಳ ಹಾದಿ. ಈ ಶ್ರೀನಗರ ಗಢವಾಲ ಜಿಲ್ಲೆಯ ಕೇಂದ್ರ ಸ್ಥಳ. ಕೀರ್ತಿ ನಗರದಲ್ಲಿ ಅಲಕನಂದೆಯನ್ನು ದಾಟಲು ಸೇತುವೆ ಕಟ್ಟಿದ ನಂತರ ಈ ಊರು ಸಾಕಷ್ಟು ಬೆಳೆದಿದೆ. ಅಲಕನಂದೆಯ ಸೇತುವೆ ಮೇಲೆ ಒಂದು ಬಾರಿಗೆ ಒಂದೇ ವಾಹನ ಸಂಚರಿಸುವಂತೆ ವ್ಯವಸ್ಥೆ ಮಾಡಲಾ ಗಿದೆ. ಪ್ರವಾಸಿಗಳಿಗೆ ತಂಗಲು ಸಾಕಷ್ಟು ಹೋಟೆಲುಗಳು, ವಿಶ್ರಾಂತಿ ಗೃಹಗಳು



ಮತ್ತು ಸರ್ಕಾರಿ ವಸತಿಗೃಹಗಳಿರುವ ಶ್ರೀನಗರ ದೇವಪ್ರಯಾಗದಂತೆಯೇ ಬೆಟ್ಟದ ಇಳಿಜಾರಿನಲ್ಲಿ ಮೊಳೆತು ನಿಂತಿರುವ ಊರು. ಸಮುದ್ರ ಮಟ್ಟಕ್ಕಿಂತ ೧೩೦೦ ಅಡಿ ಎತ್ತರದಲ್ಲಿದೆ. ಇಲ್ಲಿ ನಮಗೆ ಸರಕಾರಿ ವಸತಿಗೃಹದಲ್ಲಿ ಇಳಿದುಕೊಳ್ಳಲು ವ್ಯವಸ್ಥೆಯಾಗಿತ್ತು. ಮರುದಿನ ನಸುಕಿನಲ್ಲೇ ಪ್ರಯಾಣಿಸಬೇಕಾದುದರಿಂದ ನಮ್ಮ ಮಾರ್ಗದರ್ಶಿಯು ಆವಶ್ಯಕವಾದ ಬಟ್ಟೆಗಳನ್ನು ಮಾತ್ರ ತೆಗೆದುಕೊಂಡು ಉಳಿದವುಗಳನ್ನು ಬಸ್ಸಿನಲ್ಲೇ ಭದ್ರವಾಗಿರಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಹೇಳಿದ್ದ. ಮರುದಿನ ಕೇದಾರನಾಥದ ದಾರಿಯನ್ನು ನಡೆದುಕೊಂಡೇ ಕ್ರಮಿಸಬೇಕಾಗಿದ್ದು, ಬಸ್ಸನ್ನು ಮಾರ್ಗಮಧ್ಯದಲ್ಲೇ (ಗೌರಿಕುಂಡದಲ್ಲಿ) ಬಿಡಬೇಕಾಗಿತ್ತು. ಶ್ರೀನಗರದಲ್ಲಿ ನಮಗೆ ಮರೆಯಲಾರದ ಅನುಭವ ನೀಡಿದ್ದು ಅಲ್ಲಿನ ಹೋಟೆಲೊಂದರಲ್ಲಿ ತಿಂದ ಇಡ್ಲಿ ಮತ್ತು ದೋಸೆಗಳು ! ನಾವು ತಿಂದದ್ದು ನಿಜಕ್ಕೂ ಇಡ್ಲಿ ಮತ್ತು ದೋಸೆಗಳಾಗಿರದೆ ಕೊಟ್ಟ ಹಣ ಮಾತ್ರ ಬೆಂಗಳೂರಿಗಿಂತ ಮೂರರಷ್ಟು ಹೆಚ್ಚಿತ್ತು.

ಶ್ರೀನಗರದಿಂದ ರುದ್ರಪ್ರಯಾಗಕ್ಕೆ ಮೂವತ್ತೈದು ಕಿಲೋ ಮೀಟರುಗಳ ದೂರ. ಆದರೆ ಐದು ಗಂಟೆಗೆ ಹೊರಟ ನಮ್ಮ ಬಸ್ಸು ಅಲ್ಲಿಗೆ ತಲುಪಿದ್ದು ಏಳು ಗಂಟೆಗೆ ! ಪರ್ವತಗಳ ಏರುದಾರಿಯಲ್ಲಿ ಅದು ಏದುಸಿರುಬಿಡುತ್ತ ಹತ್ತುತ್ತಿದ್ದರೆ ನಮಗೆ ಚಳಿಯು ಗದಗದ. ರುದ್ರಪ್ರಯಾಗವೆಂಬುದು ಮಂದಾಕಿನೀ-ಅಲಕನಂದೆಯರ ಸಂಗಮ ಸ್ಥಾನ. ಇಲ್ಲಿ ಬೆರೆತ ನಂತರ ಮಂದಾಕಿನೀ ತನ್ನ ಹೆಸರನ್ನು ಮರೆತು ಅಲಕನಂದೆಯಾಗಿ ಮುನ್ನಾಗುತ್ತಾಳೆ. ಇತರೆಡೆಗಳಂತೆ ಇಲ್ಲೂ ಕಬ್ಬಿಣದ ಸರಪಳಿ ಹಿಡಿದು ನದಿಯಲ್ಲಿ ಮೀಯುವ ವ್ಯವಸ್ಥೆಯಿದೆ. ಹಿಮಾಲಯದ

ನದಿಗಳ ರಭಸವೆಷ್ಟೆಂಬುದನ್ನು ತಿಳಿದುಕೊಳ್ಳ ಬಯಸುವವರು ಇಲ್ಲಿ ಒಮ್ಮೆ ಕಣ್ಣು ಹಾಯಿಸಿದರೆ ಸಾಕು. ಸ್ಥಿರವಾಗಿ ಕಾಲೂರಲೂ ಆಗದ ಈ ರಭಸದ ಪ್ರವಾಹವನ್ನು ದಕ್ಷಿಣ ಭಾರತದ ಯಾವ ನದಿಯಲ್ಲೂ ನಾನು ಕಂಡಿಲ್ಲ.

ಆ ಕೊರೆಯುವ ಚಳಿಯಲ್ಲಿ ಸ್ನಾನ ಸಾಧ್ಯವೇ ಎಂಬ ಆತಂಕ ನನಗಿತ್ತು. ನೀರಿನ ಶೈತ್ಯವಂತೂ ಪರಮಾಧಿಯಲ್ಲಿತ್ತು. ಆದರೆ ಒಂದು ಮುಳುಗು ಹಾಕಿದರೆ ಸಾಕು, ಮುಂದೆ ಸ್ನಾನ ಮಾಡಿದ ಖುಷಿಯಲ್ಲಿ ಚಳಿ ತಾನಾಗೇ ಮರೆತುಹೋಗುತ್ತದೆ. ಮಂದಾಕಿನಿಯಲ್ಲಿ ಚಳಿ ಮರೆತು ಮುಳುಗು ಹಾಕಿದೆವು. ರುದ್ರಪ್ರಯಾಗದ ದೃಶ್ಯ ಹೆಸರಿಗೆ ತಕ್ಕಂತೆ ರುದ್ರ ರಮಣೀಯ. ಆಗಷ್ಟೆ ಬೆಳಗು ಬಿಸಿಲಿನ ನೃತ್ಯ ಪ್ರಾರಂಭವಾಗಿತ್ತು. ಮಂದಾಕಿನಿಯ ಧವಳದ ನೊರೆಯಲ್ಲಿ ಅಲಕನಂದಾ ಸೇರುವುದನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುತ್ತಿತ್ತು.

ಈಗ್ಗೆ ಕೆಲ ವರ್ಷಗಳ ಹಿಂದೆ ರುದ್ರಪ್ರಯಾಗದ ತನಕ ಮಾತ್ರ ವಾಹನಗಳು ಚಲಿಸುತ್ತಿದ್ದವು. ಬದರಿ, ಕೇದಾರಗಳ ದಾರಿಗಳು ಬೇರೆಯಾಗಿ ಕವಲೊಡೆಯುವುದೇ ರುದ್ರಪ್ರಯಾಗದ ಬಳಿ. ಮಂದಾಕಿನಿಯ ಮಗ್ಗುಲಲ್ಲಿ ನಡೆದುಹೋದವರು ಕೇದಾರವನ್ನೂ, ಅಲಕನಂದೆಯ ಕೈಹಿಡಿದು ಸಾಗಿದವರು ಬದರೀನಾಥವನ್ನೂ ತಲುಪುತ್ತಾರೆ. ಬದರಿಯ ತನಕ ಬಸ್ಸೇ ಹೋಗುತ್ತದೆ. ಕೇದಾರಕ್ಕೆ ಈ ಸೌಲಭ್ಯವಿಲ್ಲ. ಗೌರಿಕುಂಡದವರೆಗೆ ಮಾತ್ರ ಚಕ್ರಗಳು ಚಲಿಸುತ್ತವೆ. ರುದ್ರಪ್ರಯಾಗದಿಂದ ಕೇದಾರನಾಥಕ್ಕೆ ನಮ್ಮ ಪ್ರಯಾಣವೆಂದು ಮೊದಲೇ ನಿಶ್ಚಿತವಾಗಿತ್ತು. ಗೌರೀಕುಂಡದವರೆಗೆ ಬಸ್ಸಿನಲ್ಲಿ ಸಾಗಿ ಮುಂದೆ ನಡೆಯುವ ಅನಿವಾರ್ಯತೆ. ಗೌರೀಕುಂಡ ತಲುಪಿದಾಗ ಗಂಟೆ ಹನ್ನೆರಡಾಗಿತ್ತು.



ನನ್ಮಾತು ಬಾಯ್ಮುಚ್ಕೊಂಡು ಕೇಳಿ
ಅಂತದ್ರೆ-ಹೀಗಾ ಕೇಳೋದು ?

ಒಂದು ದೊಡ್ಡ ಹಳ್ಳಿಯಂತಿರುವ 'ಗೌರೀಕುಂಡ' ಕೇದಾರನಾಥದಿಂದ ಸುಮಾರು ಹದಿನಾಲ್ಕು ಕಿಲೋಮೀಟರುಗಳ ದೂರದಲ್ಲಿದೆ. ಇರುವ ಪುಟ್ಟ ಬಸ್ ಸ್ಟ್ಯಾಂಡಿನಲ್ಲಿ ಕಾಲಿಡಲೂ ಜಾಗವಿಲ್ಲದಂತೆ ಯಾತ್ರಾರ್ಥಿಗಳು, ಅವರ ಬಸ್ಸುಗಳು ! ಬಸ್ಸುಗಳಿಂದ ಹೊರಬಿದ್ದು ಕೇದಾರಕ್ಕೆ ಹೊರಡುವ ಯಾತ್ರಿಕರು ಇಲ್ಲಿ ಕೆಲವು ಅತ್ಯವಶ್ಯಕ ವಸ್ತುಗಳನ್ನು ಕೊಳ್ಳಬೇಕಾಗುತ್ತದೆ. ಗೌರೀಕುಂಡದಲ್ಲಿರುವ ನಿಸರ್ಗದತ್ತವಾದ ಎರಡು ಬಿಸಿನೀರ ಬುಗ್ಗೆಗಳಲ್ಲಿ ಸ್ನಾನ ಮಾಡಲು ಗಂಡಸರಿಗೂ, ಹೆಂಗಸರಿಗೂ ಬೇರೆ ಬೇರೆ ವ್ಯವಸ್ಥೆಯಿದೆ. ಆದರೆ ಮುಂಜಾನೆಯಷ್ಟೇ ನಾವು ರುದ್ರಪ್ರಯಾಗದಲ್ಲಿ ಮಿಂದು ಬಂದಿದ್ದೆವಾದ್ದರಿಂದ ಗೌರೀಕುಂಡದಲ್ಲಿ ಊಟ ಮುಗಿಸಿ ಸಂಜೆ ಹೊತ್ತಿಗೆ ಕೇದಾರನಾಥವನ್ನು ತಲುಪುವುದು ನಮ್ಮ ಕಾರ್ಯಕ್ರಮವಾಗಿತ್ತು.

ಹದಿನಾಲ್ಕು ಕಿಲೋ ಮೀಟರುಗಳ ಹಿಮ ಮುಚ್ಚಿದ ಹಾದಿಯನ್ನು ಕ್ರಮಿಸುವ ಪರಿ ನಿಜಕ್ಕೂ ರೋಮಾಂಚಕಾರಿ. ನಾವು ಈ

ದೂರವನ್ನು ನಡೆದೇ ಕ್ರಮಿಸಲು ನಿಶ್ಚಯಿಸಿದ್ದರಿಂದ 'ಡಂಡಾ' ಗಳನ್ನು ಕೊಂಡೆವು. ಕ್ರಿಕೆಟಿಗರ ವಿಕೆಟ್‌ನಂತೆ ಮೊನೆಯಲ್ಲಿ ಚೂಪಾದ ಕಬ್ಬಿಣದ ಮೊಳೆ (ಕವಚ) ಯಿರುವ ಈ 'ಡಂಡಾ' ಊರಿಕೊಂಡು ಹಿಮದ ಕೊರಕಲುಗಳಿಂದ ಬಚಾವಾಗುತ್ತ ಏರು ಹಾದಿಯನ್ನೇರಲು ಸಿದ್ಧವಾದೆವು. ಕೇದಾರನಾಥವನ್ನು ನಡೆದು ತಲುಪಲಾಗದವರು 'ಕಂಡಿ', 'ಕಾಂಡಿ' ಅಥವಾ 'ಕುದುರೆ'ಯನ್ನು ಅವಲಂಬಿಸುವುದು ಅನಿವಾರ್ಯ. ಟೀ ಸೊಪ್ಪು ಕೊಯ್ಯಲು ಬಳಸುವ ಬೆನ್ನ ಬುಟ್ಟಿಯಂತಿರುವ 'ಕಂಡಿ' ಯಲ್ಲಿ ಕುಳಿತವರನ್ನು ಕೂಲಿಯೊಬ್ಬ ಬೆನ್ನ ಮೇಲೆ ಹೊತ್ತೊಯ್ಯುತ್ತಾನೆ. ಪುಣ್ಯ ಪ್ರಾಪ್ತಿಗಾಗಿ ಕೇದಾರನಾಥನ ಬಳಿಗೆ ಹೋಗುವ ಭಕ್ತನಿಗೆ ಹೀಗೆ ಮತ್ತೊಬ್ಬ ಮನುಷ್ಯನ ಬೆನ್ನು ಹತ್ತಿ ಸಾಗುವುದು ನಿಜಕ್ಕೂ ಪಾಪಪ್ರಜ್ಞೆ ಮೂಡಿಸದೆ ಇರದು.

'ಕಾಂಡಿ' ಒಂದು ರೀತಿಯ ಪಲ್ಲಕ್ಕಿ. ಅದಕ್ಕೆ ಆವರಣವಿರುವುದಿಲ್ಲ. ಕಾಲು ಚಾಚಿ ಕೂಡಬಹುದಾದ ಯಾತ್ರಿಕನನ್ನು ನಾಲ್ಕು ಜನ ಹೊತ್ತೊಯ್ಯುತ್ತಾರೆ. ಮೂರನೆಯ ಸಾಧನವೆಂದರೆ ಕುದುರೆ ಹತ್ತಿ ಸಾಗುವುದು. 'ಕಂಡಿ' ಗೆ ನೂರು, ಕುದುರೆಗೆ ನೂರೈವತ್ತು ಮತ್ತು ಕಾಂಡಿಗೆ ಮುನ್ನೂರು ರೂಪಾಯಿ ಯೆಂಬುದಾಗಿ ಸರ್ಕಾರ ಗೊತ್ತು ಮಾಡಿದೆ. ಆದರೆ ಗೊತ್ತು ಮಾಡಿದ ಹಣಕ್ಕೆ ಎರಡರಷ್ಟು ವಸೂಲಿ ಮಾಡಿದರೆ ಯಾರೂ ಅಚ್ಚರಿ ಪಡಬೇಕಾಗಿಲ್ಲ. ಯಾತ್ರಿಕರು ಹತ್ತುವುದಕ್ಕೂ, ಇಳಿಯುವುದಕ್ಕೂ ಪ್ರತ್ಯೇಕ ಹಣ ನೀಡಬೇಕಾಗುತ್ತದೆ. ಇದೆಲ್ಲಾ ಉಳ್ಳವರ ನಿಲುಕಿನ ಸವಲತ್ತುಗಳು ಅಂದುಕೊಂಡೆ. ಆದರೆ ಮರುಕ್ಷಣವೇ, ನಡೆದು ತಲುಪುವುದರಲ್ಲಿನ ಸಂತಸ ಈ ಪರತಂತ್ರ ಜೀವಿಗಳಿಗೆಲ್ಲಿಯದು ಅನ್ನಿಸಿತು. ನಮ್ಮೊಡನಿದ್ದವರೆಲ್ಲ ಕುದುರೆ, ಪಲ್ಲಕ್ಕಿಗಳನ್ನೇರಿದರು. ನಾವಿಬ್ಬರು ಮಾತ್ರ ನಡೆದೇ ಹೊರಟೆವು.

ಗೌರಿಕುಂಡ ಬಿಟ್ಟಾಗ ಮಧ್ಯಾಹ್ನ ಹನ್ನೆರಡರ ನಳನಳಿಸುವ ಬಿಸಿಲಿತ್ತು. ಸಂಜೆ ಐದರೊಳಗಾಗಿ ನಾವು ಕೇದಾರನಾಥ ತಲುಪಬಹುದೆಂದುಕೊಂಡಿದ್ದೆವು. ಆದರೆ ನಾವು ತಿಳಿದಷ್ಟು ಸುಲಭವಾಗಿರಲಿಲ್ಲ ದಾರಿ. ಬಹಳ ಕಡಿದಾದ ಮಾರ್ಗ. ಸದಾ ರಸ್ತೆಯ ಎಡಬದಿಗೇ ಹೋಗಬೇಕು. ಎದುರಿನಿಂದ ಇಳಿದು ಬರುವ ಹಿಂದಿನಿಂದ ಏರಿಬರುವ ಕುದುರೆ, ಪಲ್ಲಕ್ಕಿಗಳಿಗೆ ಹಾಯದೇ ಹುಶಾರಾಗಿ ಸಾಗಬೇಕು. ಅಕಸ್ಮಾತ್ ಆಯ ತಪ್ಪಿದರೆ ಪ್ರಪಾತಕ್ಕೆ ಬೀಳುವ ಅಪಾಯ. ಈ ಮಾರ್ಗದಲ್ಲಿ ಒಂದು ಗಮನೀಯ ಮತ್ತು ಹುಮ್ಮಸ್ಸು ನೀಡುವ ಸಂಗತಿಯೆಂದರೆ 'ಜೈ ಬೋಲೋ ಕೇದಾರನಾಥ್'' ಘೋಷಣೆ ! ಇಳಿದುಬರುವ ಯಾತ್ರಿಕರು ಘೋಷ ಮಾಡಿದ ಕೂಡಲೆ ಅದಕ್ಕೆ ನಾವು ಪ್ರತ್ಯುತ್ತರ ಹೇಳುತ್ತಿದ್ದೆವು. ಭಕ್ತಿ ಶ್ರದ್ಧೆಗಳಿಗಷ್ಟೇ ಸಂಕೇತವಾಗಿರದ ಈ ಘೋಷಣೆ ಮಾರ್ಗಾಯಾಸ, ದಣಿವು ಮರೆಸಿ ಹುಮ್ಮಸ್ಸು ತುಂಬುವಂತಹುದೂ ಆಗಿತ್ತು.

ಗೌರಿಕುಂಡದಿಂದ ಕೇದಾರದ ನಡುವಿನ ಸುಮಾರು ಏಳೆಂಟು ಕಿಲೋ ಮೀಟರುಗಳ ಹಾದಿಯನ್ನು ಕ್ರಮಿಸುವಾಗ ನನಗೆ ಮಲೆನಾಡಿನ ನೆನಪಾಗುತ್ತಿತ್ತು. ಅದೇ ದಟ್ಟ ಹಸಿರು ಕಾಡು, ಮುಗಿಲೆತ್ತರದ ಮರಗಳು, ಆ ತಗ್ಗು ದಿಣ್ಣೆಯ ನೆಲ...! ಅದರಲ್ಲೂ ನಡೆದು ಹೊರಟವರ ಕಣ್ಣಿಗೆ ಅಲ್ಲಲ್ಲಿ ಕಾಣಸಿಗುವ ಪುಟ್ಟ ಪುಟ್ಟ ಝರಿ ತೊರೆಗಳು ಎಂಥವರಿಗೂ ಮುದ ನೀಡುತ್ತವೆ.

ದಾರಿಯುದ್ದಕ್ಕೂ ಬೈರಾಗಿಗಳು, ಸಾಧುಗಳು ಕೈಚಾಚಿ ನಿಲ್ಲುತ್ತಾರೆ. ಭಿಕ್ಷೆ ಕೊಟ್ಟರೆ ಆಶೀರ್ವದಿಸುತ್ತಾರೆ. ಕೊಡದೆ ನಡೆದಿರೋ, ಶಪಿಸುತ್ತಾರೆ. ಎರಡೂ ಸತ್ಯವಾಗಲ್ಲ ಎಂದು ನಂಬಿದವರ ಹೆಜ್ಜೆಗಳು ದೃಢವಾಗಿರುತ್ತವೆ. ಈ ದೀರ್ಘ ಪಯಣದ ಮತ್ತೊಂದು ವಿಶೇ

ಪವೆಂದರೆ, ಕಾಲ್ನಡಿಗೆಯಲ್ಲಿ ಹೊರಟ ನಿಮ್ಮನ್ನು ಕುದುರೆಯವರು ಮತ್ತು ಕಂಡಿಯವರು ಬಹಳ ದೂರದ ತನಕ ಹಿಂಬಾಲಿಸುತ್ತಾರೆ. ಹೊರಡುವಾಗಿನ ಹುಮ್ಮಸ್ಸು ದಾರಿಯಲ್ಲಿ ಮುಗಿದುಹೋಗಿ, ಸುಸ್ತಾಗಿ ನೀವು ಉಸ್ಸಂತ ಕುಳಿತರೆ ನಿಮ್ಮನ್ನು ಕರೆದೊಯ್ಯುವ ಜವಾಬ್ದಾರಿ ಅವರದು. ಸಾಕಷ್ಟು ದೂರ ನೀವು ನಡೆದೇಹೋದಿರೆನ್ನಿ. ಅವರು ನಿರಾಶರಾಗಿ ಹಿಂತಿರುಗುತ್ತಾರೆ. ದಾರಿಯಲ್ಲಿನ ಸಣ್ಣ ತಂಗುದಾಣಗಳಲ್ಲಿ ಅಂಗಡಿಗಳಿವೆ. ಚಹ, ಕಾಫಿ, ತಿಂಡಿ ಒದಗಿಸುವ ದುಕಾನುಗಳೂ ಇವೆ.

ನಾವು ಹೋದಾಗ 'ರಾಮಪಾರಾ' ದಿಂದ ರಸ್ತೆ ಹಿಮಾವೃತವಾಗಿತ್ತು. ಈ ರಾಮಾಪಾರ ಸಮುದ್ರ ಮಟ್ಟಕ್ಕಿಂತ ಸುಮಾರು ಒಂಬತ್ತು ಸಾವಿರ ಅಡಿ ಎತ್ತರದಲ್ಲಿದೆ. ಇದೂ ಒಂದು ರೀತಿಯ ತಂಗುದಾಣವೇ ! ಇಲ್ಲಿ ಆಸ್ಪತ್ರೆಯಿದೆ. ಕುದುರೆಗಳಿಗೆ ಕೊಂಚ ವಿಶ್ರಾಂತಿ ನೀಡಿ ಹಾದಿ ಸಾಗಿಸಬಹುದು. ವರ್ಷದ ಆರು ತಿಂಗಳು ಮಾತ್ರ ಇಲ್ಲಿ ಜನಸಂಚಾರ, ಚಟುವಟಿಕೆ. ದೂರದ ಊರುಗಳಿಂದ ಬಂದ ಕೆಲವರು ಇಲ್ಲಿ ಅಂಗಡಿಗಳನ್ನಿಟ್ಟುಕೊಂಡು ಕಾಸು ಮಾಡಿಕೊಳ್ಳುತ್ತಾರೆ.

ರಾಮಪಾರದ ತನಕ ಅನಾಯಾಸವಾಗಿ ಹತ್ತಿಬಂದ ನಮಗೆ ಮುಂದಿನ ಹಾದಿ ಸರಳವಲ್ಲವೆಂಬುದು ಖಚಿತವಾಯಿತು. ಅಲ್ಲಿಂದ ಮುಂದಿನ ಎಂಟು ಕಿಲೋಮೀಟರುಗಳ ಹಾದಿ ಸಂಪೂರ್ಣವಾಗಿ ಹಿಮಾವೃತವಾಗಿತ್ತು

ಹಿಮದ ಮೇಲೆಯೇ ಹೆಜ್ಜೆಯೂರಬೇಕು. ಆಳೆತ್ತರದ ಹಿಮಬಂಡೆಗಳನ್ನು ಕಡಿದು ರಸ್ತೆ ಮಾಡುತ್ತಿದ್ದರು. ಕೆಲವೆಡೆ ಇನ್ನೂ ದಾರಿಯಾಗಿರಲಿಲ್ಲ. ಕೈಲಿದ್ದ ಕೋಲನ್ನು ಬಿಗಿಯಾಗಿ ನೆಲಕ್ಕೂರಿ ಹತ್ತಬೇಕು. ಕಾಲು ಜಾರಿ ಬೀಳುವ ಅನುಭವವೂ ಆಯಿತು. ಕಳೆದ ವರ್ಷ ಕಾಶ್ಮೀರದ ಗುಲ್‌ಮಾರ್ಗ್‌ನಲ್ಲಿ ಕೆಲವು ಅಡಿಗಳಷ್ಟುದ್ದ ಹಿಮದ ಮೇಲೆ



ಲವ್ ಮಾಡೀ ಮಾಡಿ ಸಾಕಾಯ್ತು, ಇನ್ನಾದ್ರೂ ಮದ್ವೆಯಾಗೋಣ ರಾಜಾ ?

ಜಾರಿ ಸ್ಲೇಜಿನಲ್ಲಿ ಹೋಗಲು ಐವತ್ತು ರೂಪಾಯಿ ಕೊಟ್ಟಿದ್ದೆ. ಈಗ ಈ ಹಿಮಪರ್ವತಗಳಲ್ಲಿ ಕಿಲೋಮೀಟರು ಗಟ್ಟಲೆ ಜರ್ರನೆ ಜಾರಿ ಹೋಗುವ ಪುಕ್ಕಟೆ ಅವಕಾಶ!

ರಾಮಪಾರಾದಲ್ಲಿ ಇದ್ದಕ್ಕಿದ್ದಂತೆ ಜೋರು ಗಾಳಿಯೆದ್ದು, ಮಳೆಯಾಗತೊಡಗಿತು. ನೆತ್ತಿಯ ಮೇಲೆ ಬಿದ್ದ ಹನಿಗಳು ಮೂಳೆಗಳೊಳಗಿನಿಂದ ನಡುಕ ಹುಟ್ಟಿಸುತ್ತಿದ್ದವು. ಹೊರಡುವಾಗ ಗೌರಿಕುಂಡದಲ್ಲಿ ನಳನಳಿಸುವ ಬಿಸಿಲಿದ್ದುದರಿಂದ ದಾರಿಯಲ್ಲಿ ಮಳೆ ಬಾರದೆಂದು ನಂಬಿ 'ಬರ್‌ಸಾತೀ' (ಪ್ಲಾಸ್ಟಿಕ್ ರೈನ್‌ಕೋಟ್) ಕೊಂಡಿರಲಿಲ್ಲ. ತಾತ್ಕಾಲಿಕ ಉಪಯೋಗಕ್ಕೆ ಬರುವ ಈ ಬರ್‌ಸಾತೀಗೆ ಗೌರಿಕುಂಡದಲ್ಲಿ ನಾಲ್ಕೇ ರೂಪಾಯಿ. ಆದರೆ ರಾಮಪಾರಾದಲ್ಲಿ ಅದಕ್ಕೆ ಎಂಟು ರೂಪಾಯಿ ತೆರಬೇಕಾಯಿತು. ಕೊಳ್ಳುವಷ್ಟರಲ್ಲಿ ಪೂರ್ತಿ ನೆಂದು ತೊಪ್ಪೆಯಾಗಿದ್ದೂ ಆಯಿತು.

ರಾಮಪಾರಾದಿಂದ ಕೇದಾರದವರೆಗಿನ ಹಾದಿಯಲ್ಲೆಲ್ಲೂ ಒಂದೇ ಒಂದು ಗಿಡವಾ

ಗಲೀ, ಪಸಿಯಾಗಲೀ ಕಾಣಸಿಗದು. ಎಲ್ಲಿಂದೆಲ್ಲಿಗೆ ನೋಡಿದರೂ ಒಂದೇ ಅಖಂಡ ಹಿಮರಾಶಿ. ಹಿಮಾಚ್ಛಾದಿತ ಹಾದಿಯಲ್ಲಿ ನಡೆಯುವುದಂತೂ ಅತ್ಯಂತ ಪ್ರಯಾಸಕರ. ನನ್ನೊಡನಿದ್ದ ಮಿತ್ರರು ಮುಂಜಾಗ್ರತೆ ವಹಿಸಿ ಉಣ್ಣೆಯ ಬಟ್ಟೆ ತೊಟ್ಟು ಪೂ ಧರಿಸಿದ್ದರು. ನಾನು ಮಾಮೂಲು ಬಟ್ಟೆ ಧರಿಸಿದ್ದೇ ಅಲ್ಲದೆ ಚಪ್ಪಲಿ ಮೆಟ್ಟಿಕೊಂಡು ಹೋಗಿದ್ದೆ. ನನ್ನನ್ನು ನಡೆಸಿಕೊಂಡು ಹೋಗುವುದೇ ನನ್ನ ಮಿತ್ರರಿಗೆ ಕಷ್ಟವಾಯಿತು.

ಕೇದಾರ ಸಮೀಪವಾದಂತೆಲ್ಲ ದಾರಿ ಮೊದಲಿನಷ್ಟು ಕಡಿದಾಗಿಲ್ಲವೆನ್ನಿಸಿತು. ಆದರೆ ಹತ್ತಿ ಹೋಗುವುದು ತೀರ ಕಷ್ಟದಾಯಕ. ಎಲ್ಲಿಂದಲೋ ಎದ್ದುಬರುವ ಆಯಾಸ ಮೈಯೆಲ್ಲ ವ್ಯಾಪಿಸುತ್ತಿತ್ತು. ಅಂಥ ಎತ್ತರದಲ್ಲಿ ಉಷ್ಣಾಂಶ ತೀರ ಕಡಿಮೆ. ಹೆಜ್ಜೆಗೊಮ್ಮೆ ಕುಳಿತುಕೊಳ್ಳಬೇಕೆನಿಸುತ್ತಿತ್ತು. ಮಳೆಯೂ ನಿರಂತರವಾಗಿ ನೆಲಕ್ಕಿಳಿಯುತ್ತಿತ್ತು. ಗಂಟೆ ಐದಾದರೂ ಬೆಳಕು ಸಮರ್ಥವಾಗಿತ್ತು. ಆದರೆ ಮಳೆ ನಮ್ಮ ಕಂಗಳ ಮುಂದೆ ಪರದೆಗಳನ್ನಿಳಿಬಿಟ್ಟಿತ್ತು. ಕಡೆಗೂ ಅತ್ಯಂತ ಪ್ರಯಾಸ ಪಟ್ಟು ನಾವು ಕೇದಾರ ತಲುಪಿದಾಗ ರಾತ್ರಿಯ ಏಳೂವರೆ

ತೊಟ್ಟ ಬಟ್ಟೆ, ತಂದಿದ್ದ ಬಟ್ಟೆ ಎಲ್ಲವೂ ಒದ್ದೆ ಒದ್ದೆ. ನಾನು ಸಾಕಷ್ಟು ಬಳಲಿದ್ದೆ. ದಾಮೋದರ ಶಾಸ್ತ್ರಿಗಳ ಮನೆ ತಲುಪಿದ ಕೂಡಲೆ ಮಲಗುವ ವ್ಯವಸ್ಥೆ ಮಾಡುವಂತೆ ವಿನಂತಿ ಮಾಡಿಕೊಂಡೆ.

ಕೇದಾರನಾಥದಲ್ಲಿ ಧರ್ಮಶಾಲೆಗಳಿವೆ. ಸರಕಾರಿ ವಸತಿಗೃಹಗಳಿವೆ. ನಮ್ಮ ಮಾರ್ಗದರ್ಶಿ ನಮಗಾಗಿ ದಾಮೋದರ ಶಾಸ್ತ್ರಿಗಳೆಂಬುವವರ ಮನೆಯಲ್ಲಿ ಇಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದ. ಅಲ್ಲಿ ಹಾಸಲು ಮತ್ತು ಹೊದೆಯಲು ಬಾಡಿಗೆ ಕೊಟ್ಟು ತೆಗೆದುಕೊಳ್ಳಬೇಕಿತ್ತು. ಸಮುದ್ರ ಮಟ್ಟದಿಂದ ೧೧,೭೫೩ ಅಡಿ ಎತ್ತರದಲ್ಲಿರುವ ಕೇದಾರನಾಥ ದಿಲ್ಲಿಯಿಂದ ೪೪೭ ಕಿಲೋಮೀಟರುಗಳ ದೂರದಲ್ಲಿದೆ.

ನನ್ನ ಒದ್ದೆ ಬಟ್ಟೆಗಳನ್ನೇ ಬದಲಾಯಿಸಿ ರಜಾಯಿ ಹೊದ್ದು ಮಲಗಿದೆ. ಮಿತ್ರರಿಂದ ನನ್ನ ಸ್ಥಿತಿ ನೋಡಲಾಗಲಿಲ್ಲ. ನನಗಿಂತ ಕೇವಲ ಐದು ವರ್ಷ ಕಿರಿಯರಾಗಿದ್ದರೂ ಅವರ ಉತ್ಸಾಹ, ಶ್ರದ್ಧೆಗಳು ಅಪಾರವಾಗಿದ್ದವು. ನನ್ನ ಕೈಕಾಲುಗಳಲ್ಲಿ ರಕ್ತ ಸಂಚಾರ ನಿಂತು ಮರಗಟ್ಟಿ ಹೋದ ಅನುಭವ. ಮಿತ್ರರು ತುಂಬ ಹೆದರಿದರು. ಎಲ್ಲಿಂದಲೋ ಕೈಗೆ ಧರಿಸುವ ಚೀಲಗಳನ್ನು ತಂದರು. ಮೈಗೆಲ್ಲ ಅಮೃತಾಂಜನ ತಿಕ್ಕಿದರು. ತಾವು ತಂದಿದ್ದ ಮಾತ್ರೆ ತಿನ್ನಿಸಿ ಸುಡುಸುಡುವ ಕಾಫಿ ಕುಡಿಸಿದರು. ಆದರೆ ನನ್ನ ಮರಗಟ್ಟಿದ ತುಟಿಗಳಿಗೆ ಕಾಫಿಯ ಬಿಸಿ ತಾಕಲಿಲ್ಲ. ಪಾನಕದಂತೆ ಕುಡಿದೆ. ಎಂಟು ಗಂಟೆ ಹೊತ್ತಿಗೆ ದೇವಾಲಯ ಮುಚ್ಚುವ ವಿಷಯ ತಿಳಿದು ಅವರು ದೇವರ ದರ್ಶನಕ್ಕೆ ಹೋದರು. ನನಗೆ ಯಾವುದೂ ಬೇಕಾಗಿರಲಿಲ್ಲ. ರಾತ್ರಿಯೆಲ್ಲ ನಾನು ಕನವರಿಸುತ್ತಿದ್ದೆನೆಂದು ಮಿತ್ರರು ಹೇಳಿದರು.

ಆದರೆ ಮರುದಿನ ಬೆಳಿಗ್ಗೆ ಐದು ಗಂಟೆಗೆ ಎದ್ದಾಗ ನನ್ನಲ್ಲಿ ಹೊಸ ಚೈತನ್ಯವಿತ್ತು. ಹಿಂದಿನ ದಿನದ ಮೈಕೈ ನೋವಿರಲಿಲ್ಲ. ಸ್ನೇಹಿತರು ಹೇಗಾದರೂ ಮಾಡಿ ನನ್ನನ್ನು ಕಾಂಡಿಯಲ್ಲೋ, ಕುದುರೆಯ ಮೇಲೋ ಕರೆದೊಯ್ಯುವ ವಿಚಾರದಲ್ಲಿದ್ದರು. ಆದರೆ ನನ್ನಲ್ಲಿ ಉತ್ಸಾಹದ ಚಿಲುಮೆಯೆದ್ದಿತ್ತು. ಐದು ಗಂಟೆ ಹೊತ್ತಿಗಾಗಲೇ ದೊಡ್ಡ ಬೆಳಕು. ಕೇದಾರ ತಲುಪಿದ ಆನಂದ ನನ್ನಲ್ಲಿ ಅಪಾರವಾಗಿತ್ತು. ಕೇದಾರನ ಭವ್ಯ ದರುಶನಕ್ಕಾಗಿ ನೂರಾರು ಜನ ಭಕ್ತರು ಆ ಹಿಮದ ರಾಶಿಯಲ್ಲಿ ಕುಳಿತಿದ್ದರು.

ನಮಗೇನೂ ದೇವರನ್ನು ನೋಡಲೇಬೇಕೆಂಬ ಇಚ್ಛೆಯಿರಲಿಲ್ಲ. ಆದ್ದರಿಂದ ಶಂಕರಾ

ಚಾರ್ಯರ ಸಮಾಧಿ ನೋಡಲು ಹೋದೆವು. ಉತ್ತರ ಭಾರತದಲ್ಲೆಲ್ಲೂ ಕೇಳಿ ಬರದ ಮಂತ್ರೋಚ್ಚಾರಣೆ ಅನತಿ ದೂರದಿಂದಲೇ ಕೇಳಿಬಂತು. ಬಹುಶಃ ಮುದ್ರಿತ ಧ್ವನಿಸುರುಳಿಯಿರಬೇಕು. ಅಲ್ಲಿನ ಅರ್ಚಕರು ದಕ್ಷಿಣದವರೆಂದು ನಂತರ ತಿಳಿದುಬಂತು.

ಇಲ್ಲಿಯ ಪ್ರಕೃತಿ ಭವ್ಯ, ಸುಂದರ, ಅಗಾಧ ! ಆದರೆ ಜೀವನ ಅಷ್ಟೇ ಕ್ಲಿಷ್ಟ, ಪ್ರಯಾಸಕರ. ಒಂದು ತುಂಡು ಸೌದೆ ಕೂಡ ಒಳೆಂಟು ಮೈಲು ದೂರದಿಂದ ಹೊತ್ತು ತರಬೇಕು. ಹಸಿ ಹುಲ್ಲು ಸಹ ಬೆಳೆಯದ ನೆಲ. ಗಟ್ಟಿಗೊಂಡ ಹಿಮ ಕರಗಿದರೆ ಅದೇ ನೀರು. ಅಲ್ಲಿಯ ಬದುಕಿನ ಕ್ಲಿಷ್ಟತೆಯನ್ನು ಕುರಿತು ಯೋಚಿಸುತ್ತಿದ್ದಾಗಲೇ ಎಲ್ಲಿಂದಲೋ ಸರಿದುಬಂದ ಹೂಬಿಸಿಲು ಆಗಲೇ ಕೇದಾರದ ಶಿಖರಗಳ ಮೇಲೆ ಬೀಳತೊಡಗಿತ್ತು. ಶಿಖರದ ತುದಿಯ ಮಂಜಿಗೆ ಎಳೆಬಿಸಿಲು ಮುತ್ತಿಕ್ಕುವ ಪರಿ ನಿಜಕ್ಕೂ ಅಪೂರ್ವವಾದದ್ದು. ಕೆಮೆರಾ ಕಣ್ಣಿಗೆ ಅದೆಲ್ಲ ಸೌಂದರ್ಯವನ್ನು ಗಬಗಬನೆ ಸೆರೆಹಿಡಿಯುವ ಆಸೆ. ಆದರೆ ಚಳಿಯಲ್ಲಿ ನಿಂತ ನನ್ನ ಕೈಗಳು ಇನ್ನಿಲ್ಲದಷ್ಟು ನಡುಗುತ್ತಿದ್ದವು ಹಾಗೂ ಶಂಕರರ ಸಮಾಧಿಯ ಮುಂದೆ ಫೋಟೋ ತೆಗೆದೆ.

ಗೌರಿಕುಂಡಕ್ಕೆ ಮಧ್ಯಾಹ್ನ ಹನ್ನೆರಡು ಗಂಟೆಯೊಳಗಾಗಿ ತಲುಪಬೇಕೆಂಬ ಕರಾರಿತ್ತು. ಮಂದಿರದ ಮುಂದಿರುವ ಅನೇಕ ಢಾಬಾಗಳ ಪೈಕಿ ಒಂದರಲ್ಲಿ ಉಪಹಾರ ಮುಗಿಸಿ, ಕಾಫಿ ಕುಡಿದು ಹೊರಟೆವು. ಬಸ್ಸಿನಲ್ಲಿ ನಮ್ಮೊಂದಿಗೆ ಬಂದವರ್ಯಾರೂ ಕಾಣಸಿಗಲಿಲ್ಲ. ನಡೆದುಬಂದವರು ನಾವಿಬ್ಬರೇ. ಅವರೆಲ್ಲ ಯೋಗ್ಯತಾನುಸಾರ ನರವಾಹನರಾಗಿಯೋ, ಅಶ್ವಾರೂಢರಾಗಿಯೋ ಕೇದಾರ ತಲುಪಿ ಅಲ್ಲಿ ಜಾಗ ಹುಡುಕಿಕೊಂಡಿದ್ದರು. ಅಲ್ಲದೆ ಅವರೆಲ್ಲ ಯಾತ್ರಾರ್ಥಿಗಳೂ, ಪುಣ್ಯ ಪಿಪಾಸುಗಳೂ ಆಗಿದ್ದುದರಿಂದ ಅವೆಲ್ಲ 'ವಿಧಿ' ಗಳನ್ನು ಪೂರೈಸಬೇಕಿತ್ತು. ನಮ್ಮ ಜೊತೆಯಲ್ಲೇ ಮತ್ತೊಂದು ಬಸ್ಸಿನಲ್ಲಿ ಬಂದಿದ್ದ ಉಡುಪಿಯ ಬ್ಯಾಂಕ್ ಅಧಿಕಾರಿಯೊಬ್ಬರ ಪಾಡು ಹೇಳತೀರದಾಗಿತ್ತು. ತಮ್ಮ ತಂದೆ ಹಾಗೂ ಮಡದಿಯೊಂದಿಗೆ ಬಂದಿದ್ದ ಅವರು, ಅವರಿಬ್ಬರನ್ನು ಗೌರಿಕುಂಡದಲ್ಲೇ ಬಿಟ್ಟು, ಒಬ್ಬರೇ ಕೇದಾರಕ್ಕೆ ಹತ್ತಿಬರುವ ಸಾಹಸ ಮಾಡಿದ್ದರು. ಆದರೆ ದಾರಿಯಲ್ಲಿ ಸುಸ್ತಾಗಿ, ಹತ್ತಲಾಗದೇ ಕುದುರೆಯೊಂದನ್ನೇರಿ ಬಂದಿದ್ದರು. ಹೊರಡುವಾಗ ತಂದಿದ್ದ ಹಣವೆಲ್ಲ ಕುದುರೆಗೆ ತೆತ್ತು ರಾತ್ರಿ ರಜಾಯಿಗೂ ಹಣವಿಲ್ಲದೆ ನಮ್ಮೊಂದಿಗೇ ಮುದುರಿ ಮಲಗಬೇಕಾಯಿತು. ಕಡೆಗೆ ಗೌರಿಕುಂಡದಲ್ಲಿ ಹಣ ಕೊಡುವುದಾಗಿ ಹೇಳಿ

ಚಾಟೋಕ್ತಿ

ರಾಜನಿಂದ ಮರಣ ದಂಡನೆಗೆ ಒಳಗಾದವನೊಬ್ಬ ತನ್ನ ಚತುರ ಮಾತುಗಳಿಂದ ರಾಜನನ್ನು ಚೇತೋಹಾರಿಯಾಗಿ ಮಾಡಿ, ಅಪಾಯದಿಂದ ಹೇಗ ಪಾರಾದ ಎಂಬುದನ್ನು ದ್ವಿರುಕ್ತಿ ವಾಕ್ಯ ವೈಚಿತ್ರ್ಯದಿಂದ ಒಬ್ಬಕವಿ ಚಿತ್ರಿಸಿದ್ದಾನೆ.

ಹೇ ರಾಜನ್- ಭಟ್ಟಿ ಸತ್ತ, ಭಾರವಿ ಸತ್ತ, ಭಿಕ್ಷು ಸತ್ತ, ಭೀಮಸೇನನೆಂಬುವನೂ ಸತ್ತ. ಈಗ ನನ್ನ ಸರದಿ. ಭುಕ್ಕುಂಡ- ಭ, ಭಾ, ಭಿ, ಭೀ, ಭು ಆಯಿತು- ಮುಂದಲ ಭೂಪತಿ (ನೀನು). ಹೀಗೆ 'ಭ'ಕಾರವಲ್ಲದರ ನಾಶ ಎಂದು ಹೇಳಿದ. ಆಗ ರಾಜನು ಹೆದರು ಅವನ ಪ್ರಾಣವನ್ನು ಉಳಿಸಿದ.

ಭಟ್ಟಿರ್ನಷ್ಟಃ ಭಾರವಿಯೋಽಪಿನಷ್ಟಃ
ಭಿಕ್ಷುರ್ನಷ್ಟಃ ಭೀಮಸೇನೋಽಪಿ ನಷ್ಟಃ
ಭುಕುಂಡೋಽಹಂ ಭೂಪತಿಸ್ತ್ವಂ ಹಿ ರಾಜನ್
ಭಭ್ಬಾವಲ್ಯಾಮಂತಕ ಸ ಸನ್ನಿಷ್ಟಃ

-ಪ್ರಿ



ಅವರು ಕಂಡಿಯೊಂದರಲ್ಲಿ ಕುಳಿತು ಹೊರಟರು.

ಇಳಿಯುವ ಹಾದಿ ಅಂಥ ಆಯಾಸಕರದಲ್ಲ. ಏರುವಾಗಿನ ಶ್ರಮ, ಏದುಸಿರು, ಆಯಾಸ ಈಗ ಇರುವುದಿಲ್ಲ. ಆದರೆ ಅದೇನೂ ಸುಖಕರವಾದ ನಡಿಗೆಯಲ್ಲ. ಹಿಂತಿರುಗುವಾಗ ಮಳೆಯ ಕಾಟವಿರಲಿಲ್ಲ. ವಿಶಾಲವಾದ ದೂರದ ಹಾದಿ ಬಿಟ್ಟು ಕಿರಿದಾದ ಅಡ್ಡದಾರಿಯಲ್ಲಿಳಿದರೆ ಹಾದಿ ಕೊಂಚ ಸಣ್ಣದಾಗುತ್ತಿತ್ತು. ಆದರೆ ಅಲ್ಲಿ ಕಾಲು ಜಾರುವ ಭಯ. ಸಾಲದೆಂಬಂತೆ ಅಕ್ಕಪಕ್ಕದ ಪೊದೆಗಳಲ್ಲಿ ಎಂಥದೋ ತುರಿಕೆಯುಂಟು ಮಾಡುವ ಗಿಡಗಳು. ಹಿಂದಿನ ದಿನ ಏರುವಾಗ ನಾವಿಬ್ಬರೂ ಕೆಲವು ದೃಶ್ಯಗಳ ಫೋಟೋ ತೆಗೆಯಬೇಕೆಂದುಕೊಂಡಿದ್ದೆವು. ಆದರೆ ಮರಳುವ ಹಾದಿಯಲ್ಲಿ ಆ ದೃಶ್ಯಗಳೇ ಮಾಯವಾಗಿಹೋಗಿದ್ದವು. ಹಿಮದ ಮಾಯೆ ಎಲ್ಲವನ್ನೂ ಬದಲಿಸಿತ್ತು.

ಏಳು ಗಂಟೆಗಳ ಕಾಲ ಏರಿಹೋದ ಹಾದಿಯನ್ನು ನಾವು ಆರು ಗಂಟೆಗಳ ಅವಧಿಯಲ್ಲಿ ಇಳಿದು ಬಂದಿದ್ದೆವು. ಹನ್ನೆರಡರ ಹೊತ್ತಿಗೆ ಗೌರಿಕುಂಡಕ್ಕೆ ತಲುಪಿದ್ದೆವು. ಅಲ್ಲಿನ ಹೊಂಡಗಳಲ್ಲಿ ಬಿಸಿ ನೀರ ಸ್ನಾನ ಮಾಡಿದಾಗ ಆಯಾಸವೆಲ್ಲ ಮಾಯವಾಗಿ ಹಿತವೆನಿಸಿತು. ನೀರಿಗಿಳಿದರೆ ಮತ್ತೆ ಮೇಲಕ್ಕೇಳುವ ಮನಸ್ಸೇ ಆಗದು. ಆದರೆ ಹೊರಗೆ ದಡದ ಮೇಲಿನ ಬಟ್ಟೆ-ಬರೆ ಕಳುವಾದಾವೆಂಬ ಭಯ. ಕಡೆಗೂ ಮಿಂದು ಹೊರಬಂದೆ. ಸಮಯಕ್ಕೆ ಸರಿಯಾಗಿ ನಾವೇನೋ ಬಂದಿದ್ದೆವು. ಆದರೆ ನಮ್ಮ ಬಸ್ಸಿನ ಇತರೆ ಪ್ರಯಾಣಿಕರು ಕೇದಾರದಿಂದ ಹಿಂತಿರುಗಿ ಬಂದು ಮತ್ತೆ ನಾವು ಗೌರಿಕುಂಡದಿಂದ ಹೊರಡುವ ಹೊತ್ತಿಗೆ ಸಂಜೆ ನಾಲ್ಕಾಗಿತ್ತು. ಅಂದು ರಾತ್ರಿ ನಾವು ರಾಮಪುರವೆಂಬ ಚಿಕ್ಕ ಊರು ತಲುಪಿದೆವು. ಹಳ್ಳಿಯಂತಿದ್ದರೂ ತಂಗಲು ಸಾಕಷ್ಟು ವ್ಯವಸ್ಥೆ ಮಾಡಲಾಗಿತ್ತು.

ಕೆಲ ವರ್ಷಗಳ ಹಿಂದೆ ಬದರೀನಾಥಕ್ಕೆ ಬಸ್ಸಿರಲಿಲ್ಲ. ಕಾಲ್ನಡಿಗೆಯಲ್ಲೇ ಹೊರಟು ಊಖೀ ಮಠ, ತುಂಗನಾಥ ಮಾರ್ಗವಾಗಿ ಜೋಶೀಮಠ ತಲುಪುತ್ತಿದ್ದರು. ಆದರೆ ಈಗ ಬಸ್ಸಿನಲ್ಲಿ ಹೋಗುವವರು ಗೌರಿಕುಂಡದಿಂದ ಮತ್ತೆ ರುದ್ರಪ್ರಯಾಗಕ್ಕೆ ಹಿಂತಿರುಗಬೇಕು.

ಇಲ್ಲಿಂದ ಅಲಕನಂದೆಯ ಗುಂಟ ಸಾಗಿ ಬದರೀನಾಥಕ್ಕೆ ಹೋಗಬೇಕು. ಬೆಳಿಗ್ಗೆ ಹೊರಟ ನಾವು ಗೋಪೇಶ್ವರ ಎಂಬಲ್ಲಿ ತಿಂಡಿಗೆ ನಿಂತೆವಾದರೂ, ಅಲ್ಲಿನ ನೇರಳೆಹಣ್ಣು ಗಾತ್ರದ ನೊಣಗಳನ್ನು ಕಂಡು ಅಸಹ್ಯವಾಗಿ ಬರೀ ಚಹ ಕುಡಿದು ಮೇಲೆದ್ದವು.

ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಒಂದು ನೆಲೆಗೊಂಡಿರುವ ಜ್ಯೋತಿರ್ಮಠವೇ ಕಾಲಕ್ರಮದಲ್ಲಿ ಅಪಭ್ರಂಶಗೊಂಡು ಜೋಶಿಮಠವಾಗಿರಬೇಕು. ಇದು ಸಮುದ್ರ ಮಟ್ಟದಿಂದ ೬೧೫೦ ಅಡಿ ಎತ್ತರದಲ್ಲಿದ್ದು ಸಾಕಷ್ಟು ಬೆಳೆದ ಊರು. ಮೊದಲು ಬೌದ್ಧ ಪಂಥದವರ ಹಿಡಿತದಲ್ಲಿದ್ದ ಈ ಕೇಂದ್ರ ಶಂಕರರ ಪ್ರಭಾವದಿಂದಾಗಿ ವೈದಿಕರ ಪ್ರಾಬಲ್ಯಕ್ಕೊಳಗಾಯಿತೆನ್ನಲಾಗಿದೆ. ಆರು ತಿಂಗಳ ಕಾಲ ಹಿಮದಲ್ಲಿ ಬದರಿನಾಥ ಮುಚ್ಚಿಹೋದಾಗ ಅಲ್ಲಿನ ಉತ್ಸವ ಮೂರ್ತಿಯನ್ನು ತಂದು ಇಲ್ಲಿ ಪೂಜಿಸುತ್ತಾರೆ. ಇಲ್ಲಿಗೆ ತಲುಪುವ ಚಿಕ್ಕ ಕಡಿದಾದ ರಸ್ತೆಯಲ್ಲಿ ಏಕಮುಖ ಸಂಚಾರ ಮಾತ್ರ ಸಾಧ್ಯ. ಪರ್ವತ ಪ್ರಾಂತ್ಯದ ಕೇಂದ್ರದಂತಿರುವ ಈ ಊರಲ್ಲಿ ಅನೇಕ ಧರ್ಮಶಾಲೆ, ವಸತಿಗೃಹ, ಸಂಸ್ಕೃತ ಪಾಠಶಾಲೆಗಳಿವೆ. ಇಲ್ಲಿಂದ ಮುಂದೆ ಬದರೀನಾಥಕ್ಕೆ ನಲವತ್ತು ಕಿಲೋಮೀಟರುಗಳ ಹಾದಿ. ಇಡೀ ರಸ್ತೆ ಭಾರತೀಯ ಸೈನ್ಯದ ಹಿಡಿತದಲ್ಲಿದ್ದು ಯಾವ ವಾಹನವೂ ಪೂರ್ವಾನುಮತಿಯಿಲ್ಲದೆ ಬದರಿಯೆಡೆಗೆ ಓಡುವಂತಿಲ್ಲ. ನಿತ್ಯ ಮಧ್ಯಾಹ್ನ ಎರಡರ ನಂತರ ಬದರಿನಾಥ-ಜೋಶಿಮಠದ ಮಧ್ಯೆ ವಾಹನ ಸಂಚಾರ ಶುರುವಾಗುತ್ತದೆ. ಮಧ್ಯದಲ್ಲಿ ಸಿಗುವುದು ಪಾಂಡುಕೇಶ್ವರ. ಒಂದೇ ವಾಹನ ಸಾಗಬಲ್ಲ ಕಿರಿದಾದ ಹಾದಿ. ಆಕಸ್ಮಾತ್ ಅಪಘಾತವಾದರೆ, ಹಿಮಬಂಡೆ ಬಿದ್ದು ರಸ್ತೆ ಮುಚ್ಚಿಹೋದರೆ ತಕ್ಷಣ ಅದನ್ನು ಸರಿಪಡಿಸಲು ಕ್ರೇನ್ ಹಾಗೂ ಬುಲ್‌ಡೋಜರುಗಳು ಸಿದ್ಧವಾಗಿರುತ್ತವೆ. ಸೈನಿಕರ ಕಾವಲಂತೂ ನಿರಂತರ.

ಆಹ್ವಾನ

ಹುಡುಗೀ
ನನ್ನ ಹೃದಯದ
ನಾಲ್ಕೂ ಕೋಣೆಗಳು
ಖಾಲಿಯಿವೆ;
ಡಿಪಾಸಿಟ್ ಮಾತಿಲ್ಲ
ಬಾಡಿಗೆ ಬೇಡವೇ ಬೇಡ
ಬೇಗ ತಂಗು ಬಾ!

ಪ್ರಕಾಶ.ಎಸ್.ಮನ್ನಂಗಿ

ಪಾಂಡುಕೇಶ್ವರದಲ್ಲಿ ಅರ್ಧ ಗಂಟೆ ನಿಂತಿದ್ದು ಅಲ್ಲಿ ಪಾಂಡವರವೆಂದು ಕರೆಯಲ್ಪಡುವ ಗುಡಿಗಳನ್ನು ನೋಡಿದೆವು. ಮುಂದೆ ಬಸ್ಸು ಏರುದಾರಿಯಲ್ಲಿ ತೆವಳತೊಡಗಿತು. ಎದುರಿನಲ್ಲಿ ನರ ನಾರಾಯಣ ಶಿಖರಗಳು ಕಣ್ಣಿಗೆ ಗೋಚರಿಸುತ್ತವೆ. ಭೂತಾಕಾರದ ನೀರ್ಬಂಡೆಗಳು, ಅವುಗಳಿಂದ ಉದ್ಭವಿಸಿ ಜಾರುವ ನೀರಧಾರೆ. ಅಲ್ಲಲ್ಲಿ ನೀರಬುಗ್ಗೆಗಳು. ಪಕ್ಕದಲ್ಲೊಂದು ಧೋ... ಅನ್ನುವ ಪ್ರಪಾತ. ಈ ಬದಿಗೊಂದು ಅನಂತಾಕಾಶದೆತ್ತರಕ್ಕೆದ್ದು ನಿಂತ ಪರ್ವತ ! ಎಂಥ ರೋಮಾಂಚಕ ಪ್ರಯಾಣ. ನೆನೆದರೆ ಈಗಲೂ ದಿಗಿಲೆನಿಸುತ್ತದೆ. ಚೀಣದ ಗಡಿಗೆ ಕೇವಲ ನಲವತ್ತು ಮೈಲು ದೂರದಲ್ಲಿ ಜೋಶಿಮಠವಿದೆ. ಹಾಗಾಗಿ ಈ ರಸ್ತೆಗೆ ಎಲ್ಲಿಲ್ಲದ ಪ್ರಾಮುಖ್ಯತೆ.

'ಜೈ ಬದರೀ ವಿಶಾಲ್' ಎಂಬ ಯಾತ್ರಿಕರ ಘೋಷಣೆ ಹಿಮದ ಒಡಲಿನಿಂದ ಮೂಡಿಬ

ರುತ್ತಿದ್ದರೆ ಬಸ್ಸು ನಿಧಾನವಾಗಿ ಬದರಿನಾಥವನ್ನು ತಲುಪಿತ್ತು. ಸಮುದ್ರ ಮಟ್ಟದಿಂದ ಹತ್ತೂವರೆ ಸಾವಿರ ಅಡಿ ಎತ್ತರದಲ್ಲಿರುವ ಬದರಿನಾಥ ಹೆಚ್ಚು ಯಾತ್ರಿಕರನ್ನು ಆಕರ್ಷಿಸುತ್ತದೆ. ಏಕೆಂದರೆ ಇಲ್ಲಿಯ ತನಕ ಬಸ್ಸುಗಳು ಬರುತ್ತವೆ. ಕೇದಾರಕ್ಕಿಂತ ಕಡಿಮೆ ಎತ್ತರದಲ್ಲಿದೆ. ಇಲ್ಲಿನ 'ಸತ್ಸಂಗ ಭವನ'ದಲ್ಲಿ ನಾವಿಳಿದುಕೊಂಡಿದ್ದೆವು. ಉಳಿಯಲು ಹಣ ಕೊಡಬೇಕಿರಲಿಲ್ಲವಾದರೂ ಹಾಸುವ, ಹೊದೆಯುವ ರಜಾಯಿಗಳಿಗೆ ಬಾಡಿಗೆ ಕೊಟ್ಟೆವು. ಇತರ ಗಿರಿಧಾಮಗಳಂತೆ ಈ ಊರೂ ಕಣಿವೆಗಳ ನಡುವೆ ದೊರೆತ ಒಂದು ಸಮತಟ್ಟಾದ ಪ್ರದೇಶದಲ್ಲಿ ಹರಡಿಕೊಂಡಿದೆ.

ಒಂದು ತುಂಡು ಸೌದೆಯೂ ಸಲೀಸಾಗಿ ದೊರೆಯದ ಈ ಹಿಮದ ನಾಡಿನ ಅತಿ ದೊಡ್ಡ ಅಚ್ಚರಿಯೆಂದರೆ ಕಾದು ಚಿಮ್ಮುವ ಬಿಸಿ ನೀರ ನಿಸರ್ಗದತ್ತ ಬುಗ್ಗೆಗಳು. ವೈಜ್ಞಾನಿಕರು ಇವುಗಳ ವಿಶ್ಲೇಷಣೆಗೆ ನಿಂತರೆ, ಭಗವದ್ಭಕ್ತರು ಅದೆಲ್ಲವನ್ನೂ ಪವಾಡದ ಅಡಿಯಲ್ಲೇ ಜಮ ಕಟ್ಟುತ್ತಾರೆ. ಒಂದಿಷ್ಟು ಅಕ್ಕಿ ಅರಿವೆಯಲ್ಲಿ ಕಟ್ಟಿ ಇಳಿಬಿಟ್ಟರೆ ಕೊಂಚ ಹೊತ್ತಿಗೆ ಅನ್ನ ಸಿದ್ಧವಾಗಬಹುದಾದಷ್ಟು ಬಿಸಿಯಾದ ಈ ನೀರನ್ನು ಸ್ನಾನ ಮಾಡಬಲ್ಲಹದಕ್ಕೆ ತಂದು ಪುರುಷರಿಗೂ, ಸ್ತ್ರೀಯರಿಗೂ ಪ್ರತ್ಯೇಕ ಕೊಳಗಳನ್ನು ನಿರ್ಮಿಸಲಾಗಿದೆ. ಒಮ್ಮೆ ಶುರುವಾದರೆ ಎಷ್ಟೊತ್ತಿಗೂ ಮುಗಿಯದ ಹಿತವಾದ ಸ್ನಾನ. ನಾನಂತೂ ಆ ದಟ್ಟ ಜಂಗುಳಿಯಲ್ಲಿ ಹದಿನೈದು ನಿಮಿಷ ಮಿಂದೆ. ಆ ಹಿತ ಮತ್ತು ಸುಖ ವಿವರಿಸಲು ಅಸಾಧ್ಯ.

ಸಂಜೆ ಏಳರ ಹೊತ್ತಿಗೆ ನಾವು ಗುಡಿಯೊ

ಸೇಬು ಸಿಗದ ಸಿಮ್ಲಾ !

ಸಿಮ್ಲಾ ಎಂದ ತಕ್ಷಣ ಥಟ್ಟನೆ ನೆನಪಿನ ಪರದೆಯ ಮೇಲೆ ಸೇಬು ಮೂಡುತ್ತದೆ. ಆಶ್ಚರ್ಯವೆಂದರೆ ನಾವು ಭೇಟಿ ನೀಡಿದ ಸಂದರ್ಭದಲ್ಲಿ ನೋಡಲಿಕ್ಕೆ ಒಂದು ಸೇಬು ಸಹ ಸಿಕ್ಕಲಿಲ್ಲ ! ಅಲ್ಲಿ ಸೇಬು ಸಿಗುವುದು ಸೀಸನ್‌ನಲ್ಲಿ ಮಾತ್ರವಂತೆ. ಸೇಬಿನ ಗಿಡ ನೋಡಿ ತೃಪ್ತಿಪಡಬೇಕಾಯ್ತು.

ಒಂದು ಕಾಲದಲ್ಲಿ ಬ್ರಿಟೀಶರಿಗೆ ಬೇಸಿಗೆಯ ರಾಜಧಾನಿಯಾಗಿದ್ದ ಸಿಮ್ಲಾದ ಮತ್ತೊಂದು ವಿಶೇಷವೆಂದರೆ ಇಲ್ಲಿ ರಿಕ್ಷಾ, ಸ್ಕೂಟರು, ಕಾರು ಇತ್ಯಾದಿ ವಾಹನಗಳೇ ಇಲ್ಲದಿರುವುದು. ಅಂತೆಯೇ ಈ ನಗರದ ರಾಜಬೀದಿಗಳಲ್ಲಿ ವಾಹನಗಳ ಗಜಿಬಿಜಿ ಇಲ್ಲದೆ ನಿರಾತಂಕವಾಗಿ ಸಂಚರಿಸಬಹುದು. ಮೈತುಂಬ ಬೆವರಿಳಿಸುವ ಸೆಖೆಯೂ ಇಲ್ಲದ, ಮೈ ನಡುಗಿಸುವ ಚಳಿಯೂ ಇಲ್ಲದ ಸಿಮ್ಲಾದ ವಾತಾವರಣ ತುಂಬ ಹಿತಕರ. ಇನ್ನಷ್ಟು ದಿನ ಇರಬೇಕೆಂಬ ಆಮಿಷ ಒಡ್ಡುವ ಆಹ್ಲಾದಕರ ಹವೆ. ಆದರೆ ಜೇಬು ಮಾತ್ರ ತ್ವರಿತವಾಗಿ ಭಾರ ಇಳಿಸುತ್ತ ಸಾಗುತ್ತದೆ. ಅಷ್ಟೊಂದು ದುಬಾರಿ ನಗರ ಸಿಮ್ಲಾ. ಯಾತ್ರಾ ಸ್ಥಳಗಳಿಗೆ ಹೋಲಿಸಿದರೆ ಗಿರಿಧಾಮಗಳ ಜೀವನ ವೆಚ್ಚ ಅತಿ ಹೆಚ್ಚು.

ಪರ್ವತದ ದೇಹ ಕೆತ್ತಿ ನಿರ್ಮಿಸಿದ ಈ ಊರಿನ ಬೀದಿಗಳಲ್ಲಿ ನಡೆದಾಡಲು ಸಾಕಷ್ಟು ಸಾಮರ್ಥ್ಯ ಬೇಕು. ವಾಹನಗಳನ್ನು ತನ್ನೊಳಗೆ ಹರಿದಾಡಿಸಲು ಪರವಾನಿಗೆ ನೀಡಲು ಖಂಡಿತ ಒಪ್ಪದ ಈ ನಗರದ ಭೌಗೋಲಿಕ ರಚನೆ ಸಿಮ್ಲಾ ಪ್ರವೇಶಿಸುವ ಎಲ್ಲವೂ ಮನುಷ್ಯನ ಹೆಗಲೇರಿ ಬರಬೇಕೆಂಬ ಕಟ್ಟಪ್ಪಣೆ ವಿಧಿಸಿದೆ ! ಉದ್ದುದ್ದ ಮರದ ತುಂಡು, ಹಲಗೆ, ನಾಟ, ಗ್ಯಾಸ್ ಸಿಲಿಂಡರ್ ಎಲ್ಲವೂ ಶ್ರಮಜೀವಿಗಳ ಮೇಲೆಯೇ ಸವಾರಿ ಮಾಡಲಿಚ್ಛಿಸುತ್ತವೆ.

ಸಿಮ್ಲಾ ಹಿಮವಂತನ ಆಶ್ರಯದಲ್ಲಿದ್ದರೂ ಇಲ್ಲಿ ನೀರಿನ ಅಭಾವ ಹೇಳತೀರದು. ನೀರಿನ ಕೊರತೆ ಎಷ್ಟೆಂದರೆ ಶೌಚ, ಮುಖಮಾರ್ಜನ, ಸ್ನಾನ ಎಲ್ಲದಕ್ಕೂ ಅಭಾವದ ಬಿಸಿ ತಾಗುತ್ತದೆ.

ಸಿಮ್ಲಾದಲ್ಲಿ ಇದ್ದಷ್ಟು ದಿನ ಕಾಶ್ಮೀರ ನೆನಪು ಉತ್ತರಿಸಿ ಬರುವುದೇನೋ ನಿಜ. ಆದರೆ ಕಾಶ್ಮೀರದ ಸೌಂದರ್ಯವೇ ಬೇರೆ ರೀತಿಯದು.



ಳಕ್ಕೆ ನಡೆದೆವು. ಅದೇ ಹೊತ್ತಿಗೆ ಪ್ರಧಾನ ಅರ್ಚಕ 'ರಾವುತ' ರ ಆಗಮನವಾಯಿತು. ಅವರ ಮುಂದೆ ಬಂಗಾರದ ದಂಡ ಹಿಡಿದ ಸೇವಕ ಬಂದ. ರಾಜಕುಮಾರರಂತೆ ಕಾಣುತ್ತಿದ್ದ ರಾವುತರು ಮಾಮೂಲು ಪುರೋಹಿತರಂತೆ 'ಮುಂಡು' ಉಟ್ಟು ಪೂಜೆಗೆ ಬರಲಿಲ್ಲ. ಕೋಟು ಪರಾಯಿ ತೊಟ್ಟೇ ಪೂಜೆ ! ದೇವತಾ ವಿಗ್ರಹಗಳಿಗೂ ಮೈತುಂಬ ಬಟ್ಟೆ.

ಇಲ್ಲಿ ಮೂರೂ ಪಂಗಡದ ಬ್ರಾಹ್ಮಣರಿಗೆ ಸೇರಿದ ಮಠಗಳಿವೆ. ಅಲಕನಂದಾ ನದಿಯ 'ಬ್ರಹ್ಮಕಪಾಲ' ವೆಂಬಲ್ಲಿ ಪಿಂಡ ಪ್ರದಾನ ಮಾಡುವುದು ಯಾತ್ರಾರ್ಥಿಗಳ ಪರಿಪಾಠ. ಇಲ್ಲಿ ಯಥಾಪ್ರಕಾರ 'ಪಂಡಾ' ಗಳ ಹಣ ಸುಲಿಗೆ ನಡೆಯುತ್ತದೆ. ಒಂದು ಮಂತ್ರವೂ ಸರಿಯಾಗಿ ಬಾರದ, ಅಮರಕೋಶವನ್ನೇ ತಪ್ಪುತಪ್ಪಾಗಿ ಹೇಳಿ ಹಣ ಕೀಳುವ ಪಂಡಾಗಳ ನಡುವೆ ಅಪವಾದಕ್ಕೊಬ್ಬರಿಬ್ಬರು ಒಳ್ಳೆ ಪುರೋಹಿತರೂ ಇದ್ದಾರೆ. ಪರಿಸರವಾದರೂ ಅಷ್ಟೆ. ಕೇದಾರದಷ್ಟು ಪರಿಶುಭ್ರವಲ್ಲ. ಇದಕ್ಕೆ ಯಾತ್ರಾರ್ಥಿಗಳ ಕೊಡುಗೆಯೂ ಯಥೇಚ್ಛವಾಗಿದೆ.

ಆದರೆ ಬದರಿನಾಥದ ಸೌಂದರ್ಯ, ನಿಗೂಢತೆ ಮತ್ತು ಪ್ರಸನ್ನತೆಯೆಲ್ಲ ಸಾಂದ್ರಗೊಂಡಿರುವುದು ಗುಡಿಯಾಚೆಯ ಹಿಮಶಿಖರಗಳಲ್ಲಿ. ಅಲ್ಲಿ ಜಂಗುಳಿಯಿಲ್ಲ, ಯಾತ್ರಿಕರಿಲ್ಲ. ಪಂಡಾಗಳಿಲ್ಲ. ಭುವಿಯಿಂದ ನಭದತನಕ ಎದ್ದುನಿಂತ ಹಿಮಶಿಖರಗಳು ಮತ್ತು ಪ್ರಚಂಡ ಮೌನ. ಅಲ್ಲಿ ನೆಮ್ಮದಿ ರಾಜ್ಯವಾಳುತ್ತದೆ. ಆದರೆ ಜಗದ ಜಂಜಡ ಹೊತ್ತ ಜೀವಿಗಳಿಗೆ ಅಲ್ಲಿಗೆ ಹೋಗುವ ವ್ಯವಧಾನವೆಲ್ಲಿಯದು ?

ಬದರಿನಾಥ ದರ್ಶನ ಮುಗಿಸಿ ನಮ್ಮ ವಾಹನ ಹಿಂತಿರುಗುವ ಹಾದಿ ಹಿಡಿಯಿತು. ಬೆಟ್ಟಗಳ ಇಳುಕಲಿನಲ್ಲಿ ಅಲಕನಂದಾ ಧಾರೆಯೊಂದಿಗೇ ಇಳಿದುಬಂದ ಪರಿ ನಿಜಕ್ಕೂ ಅಚ್ಚರಿದಾಯಕ. ಜೋಶಿಮಠದಲ್ಲಿಳಿದು ಶಂಕರಮಠ ನೋಡಿದೆವು. ಇಲ್ಲಿ ಸ್ಪಟಿಕ ಲಿಂಗ ದರ್ಶನವಾಯಿತು. ಮುಂದೆ ನಮ್ಮ ವಾಹನ ಪೀಪಲ್ ಕೋಟ್ ತಲುಪಿದಾಗ ಏಳು ಗಂಟೆಯಾಗಿತ್ತು. ಯಾತ್ರೆಯ ಬಹುಭಾಗ ಮುಗಿದಿತ್ತು. ನಾವು ಹರಿದ್ವಾರದ ಮೂಲಕ ದೆಹಲಿಯ ಸೆಖೆ, ರಾಜಕೀಯ ಮತ್ತು ಸಮತಟ್ಟಾದ ನೆಲದತ್ತ ಸರಿದುಬರ ತೊಡಗಿದೆವು.

*

ಎದೆಯಂಗಳದಲ್ಲಿ



ನೀನು
ನನ್ನೆದೆಯ ನಿಷ್ಪಂದ ಅಂಗಳಕೆ
ಹನಿ
ಹನಿಸಿ...
ನಚ್ಚನೆಯ ಬೆಚ್ಚನೆಯ
ಭಾವ ಮೂಲಕ್ಕೆ ಬೇರೊಡೆದು
ಜಡೆಗಟ್ಟ ಹೆಣೆದ ಗಟ್ಟಬಂಧ
ಹೊರಚೆಲ್ಲಿದ್ದು ನೂರು ಹಸಿ ಹಸಿ ನಗುಗಳ
.. ..
ಕಾತರ ಕುದಿದು, ಕೆನೆಗಟ್ಟ
ಕೆಣಕುವಾಗ
ಅದುರುವ ತುಟಿ ಅಂದುಕೊಳ್ಳುತ್ತದೆ
'ಇವನವ್ವ ಕಣ್ಣಿಗೆ ಕಾಡಿಗೆಯ ಬಿಟ್ಟು
ಮಿಂಚ ಸವರಿದ್ದಳೇನೋ?!'
ದಾಸವಾಳದ ಹಾಗೆ ಸೊಂಪುಕ್ಕಿಸಿ
ನಗುವಾಗೀತ
ಎಳೆಗಂದಿಯ ಕೊರಳ ತಬ್ಬಿದ-ತೃಪ್ತ
ಮಡಿಲಲ್ಲಿ ಮುತ್ತ ಸುರಿದು
ನಿತ್ಯ ಸೀಮಂತ ನಡೆಸಿ
ಹಸಿರುಟ್ಟ ವಾಸಂತಿಯ
ಒಜ್ಜೆ ಹೆಜ್ಜೆಗೆ ಗೆಜ್ಜೆ ಶೃಜಣವಾದವ
.. ..
ಬಟ್ಟ ಬಯಲಲ್ಲಿ ಮೆಲ್ಲನೆ ಮಿಡಿಯುವ
ಮೃದಂಗ
ನಿನ್ನ ಸಂಗ
ನೆನಪು - ಶ್ರಾವಣದ ನೆಳಲು ಬೆಳಕು
ನನ್ನ ನಿರಂತರ ಮೌನಕ್ಕೆ
ಮಾತು ತಂದವ ನೀನು
ನನ್ನ ಕನಸಿನ ಕಾಲುದಾರಿ.

-ವಿನಯಾ ನಾಯಕ

ಋತುಬಂಧ - ಹೊಸ ಸಂಶೋಧನೆಗಳು

ಡಾ. ನಾ.ಸೋಮೇಶ್ವರ

ಒಂದು ಹೆಣ್ಣಿನ ಜೀವನದಲ್ಲಿ ಮೂರು ಪ್ರಮುಖ ಘಟ್ಟಗಳಿರುತ್ತವೆ. ಮೊದಲನೆಯದು ಬಾಲ್ಯ. ಹುಟ್ಟಿನಿಂದ ಹದಿಹರೆಯದ ಆರಂಭದ ವರೆಗಿನ ನೆಮ್ಮದಿಯ ಕಾಲ. ಎರಡನೇಯದು ಯೌವನ. ಹೆಣ್ಣು ಋತುಮತಿಯಾದ ದಿವಸ ದಿಂದ ಸುಮಾರು 46-47 ವರ್ಷಗಳ ನಡುವಿನ ಅವಧಿ. ಈ ಕಾಲದಲ್ಲಿ ತಿಂಗಳಿಗೊಮ್ಮೆ ಕಾಣಿಸಿ ಕೊಳ್ಳುವ ಋತು ಚಕ್ರ, ಹೆಣ್ಣಿಗೆ ಪ್ರಕೃತಿ ನೀಡಿದ ಒಂದು ಶಾಪ ಎಂದು ಕೆಲವರಿಗೆ ಅನಿಸಬಹುದು. ಪ್ರತಿ ತಿಂಗಳು 3-4 ದಿನಗಳನ್ನು ಮುಜುಗರ ದಲ್ಲಿ ಕಳೆಯಬೇಕಾದ ಅನಿವಾರ್ಯತೆ. ಆದರೆ ಇದೇ ಅವಧಿಯಲ್ಲಿ ಆಕೆ ಮದುವೆಯಾಗಿ ಮಕ್ಕ ಳನ್ನು ಪಡೆದು ಸಂಸಾರ ಸೌಖ್ಯವನ್ನು ಅನುಭವಿ ಸುವ ಕಾರಣ ನಿಜಕ್ಕೂ ಇದೊಂದು ಆನಂದ ದಾಯಕ ಕಾಲ. ಈ ಎರಡೂ ಅವಧಿಗಳ ನಂತರ ಬರುತ್ತದೆ ಮೂರನೆಯ ಘಟ್ಟ ಋತುಬಂಧ! ಹೆಸರೇ ಸೂಚಿಸುವಂತೆ ಋತುಚಕ್ರ ನಿಂತು ಮುಜುಗರದ ದಿನಗಳಿಗೆ ಶಾಶ್ವತ ವಿರಾಮ. ಆದರೆ ಇದು ಬಾಲ್ಯದಂತೆ ನೆಮ್ಮದಿಪೂರ್ಣ ವಲ್ಲ; ಯೌವನದಂತೆ ಆನಂದದಾಯಕವಲ್ಲ; ತನ್ನದೇ ಆದ ವಿಶಿಷ್ಟ ಸಮಸ್ಯೆಗಳಿಂದ, ಕೆಲವರಿಗೆ ಸಾಕಷ್ಟು ಸತಾಯಿಸುವ ಕಾಲ.

ದುಸ್ತರ:

ಪ್ರತಿ ತಿಂಗಳು ಆಗುತ್ತಿದ್ದ ಋತುಚಕ್ರ ತಟ್ಟನೆ ನಿಂತಾಗ, ಹೆಣ್ಣಿಗೆ ಏನನ್ನೋ ಕಳೆದುಕೊಂಡಂ ತಹ ಅನುಭವ. ಬಹಳಷ್ಟು ಜನರಿಗೆ (ಸುಮಾರು 3/4 ಮಹಿಳೆಯರಿಗೆ) ಋತುಬಂಧ ಒಮ್ಮೆಲೆ ಕಾಣಿಸಿಕೊಳ್ಳದೆ, ನಿಧಾನವಾಗಿ ವಿವಿಧ ಅವ ಧಿಯ ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳಬಹುದು. ಆಗ ಅವರ ಬಾಳು ದುಸ್ತರ. ಮಾನಸಿಕ ಏರುಪೇ ರುಗಳೊಂದಿಗೆ ದೈಹಿಕ ನೋವುಗಳು. ಚರ್ಮ ಒರಟಾದಂತೆ, ಇದ್ದಕ್ಕಿದ್ದ ಹಾಗೆ ಮೈ ಬಿಸಿಯಾ ದಂತೆ ಇಲ್ಲವೆ ತಣ್ಣಗಾದಂತೆ, ಸೂಜಿ ಚುಚ್ಚಿ ದಂತೆ, ವಿಪರೀತ ಸುಸ್ತು, ಮಾತು ಮಾತಿಗೂ ಸಿಡುಕುವಿಕೆ, ಕಾರಣವಿಲ್ಲದೆ ಅಥವಾ ಸಣ್ಣ ಪುಟ್ಟ ವಿಷಯಗಳನ್ನೆಲ್ಲ ರಣರಂಪವಾಗಿಸುವ ಗುಣ, ಏನೋ ಒಂದು ರೀತಿಯ ಜಿಗುಪ್ಸೆ, ಖಿನ್ನತೆ ...... ಲೈಂಗಿಕ ಕಾಮನೆಯಲ್ಲಿ ತೀವ್ರ ಇಳಿತ ಹೀಗೆ ಹಲವಾರು ಲಕ್ಷಣಗಳು.

ಈ ಸಹಜ ಏರಿಳಿತಗಳನ್ನು ಅರಿತು ಸಹಾನು ಭೂತಿ ತೋರದೆ ಸೊಸೆ ದೂರುತ್ತಾಳೆ ಅತ್ತೆ ಕೆಟ್ಟವಳೆಂದು. ಮಗರಾಯನು ತಪ್ಪು ತಿಳಿಯ ಬಹುದು. ಪತಿದೇವರಿಗೆ ಒಂದು ಸಮಸ್ಯೆಯಾಗ ಬಹುದು. ಈ ಕಾರಣದಿಂದ ಸಂಸಾರ ಒಡೆಯ ಲೂಬಹುದು.

ಮೂಳೆ ಟೊಳ್ಳಾಗುವಿಕೆ:

ಆರೋಗ್ಯದ ದೃಷ್ಟಿಯಿಂದ, ಈ ಋತುಬಂ ಧದ ಅವಧಿಯಲ್ಲಿ ಕಂಡುಬರುವ ಪ್ರಮುಖ

ಸಮಸ್ಯೆ ಮೂಳೆ ಟೊಳ್ಳಾಗುವಿಕೆ; ಮೂಳೆ ತನ್ನ ಸಹಜ ಸ್ವಭಾವವಾದ ಗಡಸುತನವನ್ನು ಕಳೆದು ಕೊಂಡು ಗೆದ್ದಲು ಹಿಡಿದ ಮರದಂತೆ ಒಳಗೊಳಗೆ ಟೊಳ್ಳಾಗುತ್ತದೆ. ಸಣ್ಣ ಪುಟ್ಟ ಆಘಾತಗಳನ್ನೂ ಸಹಿಸದು. ಬಚ್ಚಲಿನಲ್ಲಿ ಜಾರಿ ಬಿದ್ದದ್ದೆ ನೆಪ. ಸೊಂಟ ಮೂಳೆ ಲಟಕ್ ಎಂದು ಮುರಿಯುತ್ತದೆ. ಹೀಗೆ ಇಂಗ್ಲಂಡ್ ಮತ್ತು ವೇಲ್ಸ್‌ನಲ್ಲಿ ಪ್ರತಿವರ್ಷ ಸುಮಾರು 38,000 ಮಹಿಳೆಯರು ಸೊಂಟ ಮೂಳೆಯನ್ನು ಮುರಿದುಕೊಳ್ಳುತ್ತಿದ್ದಾರೆ!

ಕಾರಣ:

ಹೆಣ್ಣು, ಹೆಣ್ಣಾಗಿರುವುದಕ್ಕೆ ಮುಖ್ಯ ಕಾರಣ ಈಸ್ಟ್ರೊಜೆನ್ ಮತ್ತು ಪ್ರೊಜೆಸ್ಟೆರಾನ್ ಎಂಬ ಹಾರ್ಮೋನುಗಳೆಂದು ಕರೆಸಿಕೊಳ್ಳುವ ರಾಸಾಯನಿಕ ವಸ್ತುಗಳು. ಇವುಗಳದ್ದೆ ಋತುಚಕ್ರ, ಬಸಿರು, ಬಾಣಂತನಗಳ ಯಜಮಾನಿಕೆ! ಅಷ್ಟೆ ಅಲ್ಲ; ಋತುಬಂಧವೇರ್ಪಡಲೂ ಇವೇ ಕಾರಣ. ಯೌವ್ವನದಲ್ಲಿ ಇರುವ ಮಟ್ಟಕ್ಕಿಂತ ಏರುಪೇರಾಗುತ್ತದೆ! ವೃದ್ಧಾಪ್ಯವನ್ನು ಸಮೀಪಿಸುತ್ತಿದ್ದಂತೆ. ಈ ಏರು ಪೇರೇ ಮೂಳೆ ಪೊಳ್ಳಾಗುವುದಕ್ಕೂ ಒಂದು ಮುಖ್ಯ ಕಾರಣ.

ಇದನ್ನು ಅರಿತ ವಿಜ್ಞಾನಿಗಳು, ಈ ಹಾರ್ಮೋನುಗಳ ಏರಿಳಿತವನ್ನು ಯೌವನದಲ್ಲಿರುವಂತೆ ಏಕೆ ಸರಿದೂಗಿಸಬಾರದು? ಹಾಗೆ ಮಾಡಿದರೆ ಈ ಅನಾವಶ್ಯ ಲಕ್ಷಣಗಳೆಲ್ಲ ಕಡಿಮೆಯಾಗಬಹುದಲ್ಲವೆ? ಎಂದು ಆಲೋಚಿಸಿ, ಕೃತಕವಾಗಿ ಹಾರ್ಮೋನುಗಳನ್ನು ನೀಡುವ ಮೂಲಕ ಹಾರ್ಮೋನು ಸರಿದೂಗಿಸುವ ಚಿಕಿತ್ಸೆಯನ್ನಾರಂಭಿಸಿದರು. ಸಾಕಷ್ಟು ಯಶಸ್ಸನ್ನೂ ಪಡೆದರು.

ಕ್ಯಾನ್ಸರ್:

70ರ ದಶಕದ ಮಧ್ಯದಲ್ಲಿ ಕೆಲವು ಸಂಶೋಧನೆಗಳು ನಡೆದವು. ಹಾರ್ಮೋನುಗಳನ್ನು ಸರಿದೂಗಿಸುವ ಪ್ರಯತ್ನದಲ್ಲಿ ಈಸ್ಟ್ರೋಜೆನ್‌ನನ್ನು ಮಾತ್ರ ಬಳಸಿದರು. ಸ್ವಲ್ಪ ಕಾಲದ ನಂತರ, ಬರೀ ಈಸ್ಟ್ರೋಜೆನ್‌ನನ್ನು ಬಳಸಿದರೆ, ಅದು ಗರ್ಭಕೋಶ ಕ್ಯಾನ್ಸರಿಗೆ ಎಡೆ ಮಾಡಿಕೊಡಬಹುದು ಎನ್ನುವ ಸಂಶಯ ಬಂದಿತು. ಈ ದುಷ್ಪರಿಣಾಮವನ್ನು ತಡೆಗಟ್ಟಲು, ಈಸ್ಟ್ರೋಜಿನ್ ಜೊತೆ ಪ್ರೊಜೆಸ್ಟರಾನ್‌ನನ್ನು ಮಿತವಾಗಿ ಬೆರೆಸಿ ಕೊಡಬೇಕು ಎನ್ನುವ ನಿರ್ಣಯಕ್ಕೆ ಬಂದರು. ಅದರಂತೆ ಪ್ರಯೋಗಗಳನ್ನು ನಡೆಸಿದಾಗ ಕ್ಯಾನ್ಸರಿನ ಭೀತಿ ತೊಲಗಿ ನೆಮ್ಮದಿಯಿಂದ ಉಸಿರಾಡುವಂತಾಯಿತು.

ಮತ್ತೊಂದು ಸಮಸ್ಯೆ ಬಂದಿತು. ಇದು ಔಷಧವನ್ನು ಬಳಸುವ ಸೂಕ್ತ ಮಾರ್ಗದ ಬಗ್ಗೆ. ಸಾಮಾನ್ಯವಾಗಿ ಯಾವುದೇ ಔಷಧವಾಗಲಿ ರೋಗಹಾರಕ ಗುಣಗಳೊಂದಿಗೆ, ಪಾರ್ಶ್ವ ಪರಿಣಾಮಗಳನ್ನು ಹೊಂದಿರುತ್ತದೆ. ಇವುಗಳನ್ನು ಸಾಧ್ಯವಾದಷ್ಟರ ಮಟ್ಟಿಗೆ ಕಡಿಮೆ ಮಾಡಬೇಕೆನ್ನುವುದು ವೈದ್ಯರ ಉದ್ದೇಶವಾಗಿರುವುದರಿಂದ, ಅದಕ್ಕೆ ನೆರವಾಗುವ ವಿವಿಧ ಮಾರ್ಗಗಳನ್ನು ಹುಡುಕುತ್ತಾರೆ.

ಈಸ್ಟ್ರೋಜನ್ ಹಾರ್ಮೋನನ್ನು ಗುಳಿಗೆಗಳ ರೂಪದಲ್ಲಿ ನುಂಗಿದಾಗ ಅದು ಜೀರ್ಣವಾಗಿ ರಕ್ತದಲ್ಲಿ ಬೆರೆಯುವ ಮೊದಲು ಪಿತ್ತ ಜನಕಾಂಗವನ್ನು ಪ್ರವೇಶಿಸುತ್ತದೆ. ಇಲ್ಲಿಂದ ಹಾದು ಹೋಗಬೇಕಾದರೆ ಸಾಕಷ್ಟು ಕೀಟಲೆ ಮಾಡುತ್ತದೆ. ರಕ್ತದಲ್ಲಿ ಕೊಬ್ಬಿನಂಶವನ್ನು, ರಕ್ತ ಹೆಪ್ಪುಗಟ್ಟಿಸುವುದನ್ನು, ರೆನಿನ್ ಎಂಬ ವಸ್ತುವಿನ ಉತ್ಪಾದನೆಯನ್ನು ಹೀಗೆ ಕೆಲವು ಮುಖ್ಯವಾದ ಅಂಶಗಳ ಸಮತೋಲನೆಯನ್ನು ಅಸ್ತವ್ಯಸ್ತಗೊಳಿಸುವ ಕಿಣ್ವಗಳನ್ನು ಉತ್ಪಾದಿಸುತ್ತದೆ!

ಅಲ್ಲದೆ ಈಸ್ಟ್ರೋಜೆನ್ ಗುಳಿಗೆಗಳು, ಕರುಳಲ್ಲಿ ಒಂದೇ ಸಮನಾಗಿ ಎಲ್ಲರಲ್ಲೂ ಹೀರಿಕೊಳ್ಳಲ್ಪಡುವುದಿಲ್ಲ; ಆದ್ದರಿಂದ ರಕ್ತದಲ್ಲಿ ಹಾರ್ಮೋನು ಅವಶ್ಯಕಮಟ್ಟದಲ್ಲಿರಲು ಅಸಾಧ್ಯವಾಗುತ್ತದೆ. ಜೊತೆಗೆ ಜಠರದಲ್ಲಿ ತೊಂದರೆಗಳು; ಕೆಲವರಿಗಂತೂ ಇದು ಒಗ್ಗುವುದೇ ಇಲ್ಲ.

ಇವೆಲ್ಲ ನಮಗೆ ಅನವಶ್ಯಕ. ಬಾಣಲೆಯಿಂದ

ಬೆಂಕಿಗೆ ಹಾರಿದ ಹಾಗೆ! ಆದ್ದರಿಂದ ವಿಜ್ಞಾನಿಗಳು ಜಠರ ಮತ್ತು ಪಿತ್ತ ಜನಕಾಂಗದ ಮೂಲಕ ಹಾದು ಹೋಗದೆ, ನೇರವಾಗಿ ರಕ್ತದಲ್ಲಿ ಬೆರೆಯಲು ನೆರವಾಗುವಂತಹ ಸೂಕ್ತ ಮಾರ್ಗವನ್ನು ಹುಡುಕತೊಡಗಿದರು.

ಚರ್ಮದಡಿಯಲ್ಲಿ:

ದಕ್ಷಿಣ ಲಂಡನ್ನಿನ ಡಲ್‌ವಿಚ್ ಆಸ್ಪತ್ರೆಯ ವೈದ್ಯರು- ಈಸ್ಟ್ರೋಜೆನ್‌ನನ್ನು ಸಾಂದ್ರೀಕರಿಸಿ ಪುಟ್ಟ ಪುಟ್ಟ ತೆಳು ಬಿಲ್ಲೆಗಳ ರೂಪದಲ್ಲಿ ಉದರದ ಚರ್ಮದಡಿಯಲ್ಲಿ ಹುದುಗಿಸಿದರೆ ಹೇಗೆ ಎಂದು ತರ್ಕಿಸಿದರು. ಅಂತಹ ಒಂದು ಬಿಲ್ಲೆಯನ್ನು ಸೃಜಿಸಿ ಹುದುಗಿಸಿದಾಗ, ಅದು ನೇರವಾಗಿ ರಕ್ತದಲ್ಲಿ ಈಸ್ಟ್ರೋಜೆನ್‌ನನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬಿಡುಗಡೆ ಮಾಡತೊಡಗಿತ್ತು. ಈ ಬಿಲ್ಲೆಯ ಆಯುಸ್ಸು ಆರು ತಿಂಗಳು. ನಂತರ ಮತ್ತೊಂದು ಬಿಲ್ಲೆಯನ್ನು ಹುದುಗಿಸಬೇಕಾಗುತ್ತದೆ.

ಈ ವಿಧಾನದ ಮೂಲಕ ಬಿಡುಗಡೆಯಾಗುವ ಈಸ್ಟ್ರೋಜೆನ್ ಗುಳಿಗೆ ರೂಪದ ಈಸ್ಟ್ರೋಜೆನ್‌ನಷ್ಟೇ ಪರಿಣಾಮಕಾರಿ. ಆದರೆ ಈಸ್ಟ್ರೋಜೆನ್ ಗರ್ಭಕೋಶ ಕ್ಯಾನ್ಸರನ್ನುಂಟು ಮಾಡದಿರಲು ಪ್ರೊಜೆಸ್ಟೆರಾನ್‌ನನ್ನು ಗುಳಿಗೆಗಳ ಮೂಲಕ ಸೇವಿಸಬೇಕಾಗುತ್ತದೆ.

ಅನಾನುಕೂಲ:

ಪ್ರೊಜೆಸ್ಟೆರಾನ್ ಗರ್ಭಕೋಶ ಕ್ಯಾನ್ಸರನ್ನು ತಡೆಗಟ್ಟುತ್ತದೆ. ನಿಜ. ಆದರೆ ಈಸ್ಟ್ರೋಜೆನ್ ಒಂದು ಬಹಳ ಮುಖ್ಯವಾದ ಗುಣವನ್ನು ಅದು ನಾಶಪಡಿಸುತ್ತದೆ. ಅದುವೇ ಹೃದಯ ಮತ್ತು ರಕ್ತನಾಳಗಳಿಗೆ ಈಸ್ಟ್ರೋಜೆನ್‌ನಿಂದ ದೊರೆಯುವ ನೆರವು; ಈಸ್ಟ್ರೋಜೆನ್ ಕರೋನರಿ ರಕ್ತನಾಳಗಳ ತೊಂದರೆಗಳನ್ನು 50 % - 70 % ರಷ್ಟು ತಡೆಯುತ್ತದೆ. (ಹೃದಯಕ್ಕೆ ರಕ್ತವನ್ನು ಸರಬರಾಜು ಮಾಡುವ ಈ ರಕ್ತನಾಳದಲ್ಲಿ ಅಡೆತಡೆಗಳಾದರೆ ಹೃದಯಾಘಾತವಾಗಬಹುದು). ಪಾರ್ಶ್ವವಾಯುವನ್ನು 50 %ರಷ್ಟು ತಡೆಯುತ್ತದೆ. ಈ ಹಾರ್ಮೋನು ಸಕ್ರಿಯವಾಗಿರುವ ಕಾರಣ ವಯಸ್ಸಿನ ಮಹಿಳೆಯರಲ್ಲಿ ಹೃದಯಾಘಾತ ತೀರ ಅಪರೂಪ! ಈಸ್ಟ್ರೋಜೆನ್‌ನ ಈ ಎಲ್ಲ ಗುಣಗಳನ್ನು ತಡೆಯುತ್ತದೆ ಪ್ರೊಜೆಸ್ಟನ್.

ಈಸ್ಟ್ರೋಜೆನ್‌ನ ಈ ಅತ್ಯುಪಯುಕ್ತ ಲಕ್ಷಣಗಳನ್ನು ಗಮನಿಸಿದ ವಿಜ್ಞಾನಿಗಳು, ಇದನ್ನು ಮೂಳೆ ಟೊಳ್ಳಾಗುವುದನ್ನು ತಡೆಯುವುದಕ್ಕೆ ಉಪಯೋಗಿಸುವ ಬದಲು, ಹೃದಯಾಘಾತವನ್ನು ತಡೆಯಲೇಕೆ ಉಪಯೋಗಿಸಬಾರದು ಎಂದು ಪ್ರಶ್ನಿಸುತ್ತಿದ್ದಾರೆ. ಏಕೆಂದರೆ ಸೊಂಟ ಮೂಳೆ ಮುರಿಯುವುದಕ್ಕಿಂತ ಎರಡು ಪಟ್ಟು ಹೆಚ್ಚು ಹೃದಯಾಘಾತಗಳಾಗುತ್ತವೆ ಮತ್ತು ಅದಕ್ಕಿಂತ ಹತ್ತು ಪಟ್ಟು ಅನಾಹುತಕಾರಿ!

ಹೃದಯ ಮತ್ತು ರಕ್ತನಾಳಗಳಿಗೆ ಈಸ್ಟ್ರೋಜೆನ್ ತೊಡಿಸುವ ಕವಚವನ್ನು ನುಚ್ಚುನೂರು ಮಾಡುವ ಪ್ರೊಜೆಸ್ಟರಾನ್‌ನನ್ನು ಗುಳಿಗೆಗಳ ರೂಪದಲ್ಲಿ, ಕೊಡುವುದು ಬೇಡ; ಬದಲಾಗಿ ಇದನ್ನು ಗರ್ಭಕೋಶಕ್ಕೆ ಮಾತ್ರ ಏಕೆ ಲೇಪಿಸಬಾರದು ಎಂದು ಓರ್ವ ಬ್ರಿಟಿಶ್ ವಿಜ್ಞಾನಿ ಸಲಹೆಯಿತ್ತಿದ್ದಾರೆ. ಹೀಗೆ ಮಾಡುವುದರಿಂದ ಗರ್ಭಕೋಶ ಕ್ಯಾನ್ಸರನ್ನು ತಡೆಗಟ್ಟಬಹುದು; ಹೃದಯವನ್ನು ರಕ್ಷಿಸಬಹುದು; ಆದರೆ ಈ ದಿಶೆಯಲ್ಲಿ ಇನ್ನು ಪ್ರಯೋಗಗಳು ಆರಂಭವಾಗಬೇಕಿದೆ.

ಸ್ಪ್ರೇ:

ಡಲ್‌ವಿಚ್ ವಿಜ್ಞಾನಿಗಳು ಈಸ್ಟ್ರೋಜೆನ್ ಬಿಲ್ಲೆಗಳನ್ನು ಚರ್ಮದಡಿಯಲ್ಲಿ ಹುದುಗಿಸುವ ಮಾರ್ಗವನ್ನು ಅನುಸರಿಸಿದರೆ ಕೆಲವರು ನಾಲಿಗೆಯಡಿ ಕರಗುವ ಗುಳಿಗೆಗಳನ್ನು ರೂಪಿಸಿದರು. ಗುಳಿಗೆಯನ್ನು ನಾಲಿಗೆಯಡಿ ಇಟ್ಟುಕೊಂಡಾಗ, ಔಷಧ ಅಲ್ಲಿರುವ ದಟ್ಟವಾದ ರಕ್ತ ನಾಳಗಳ ಜಾಲದ ಮೂಲಕ ಬೇಗ ಹೀರಿಕೊಳ್ಳಲ್ಪಡುತ್ತದೆ. ಜಠರವನ್ನು, ಪಿತ್ತಜನಕಾಂಗವನ್ನು ಪ್ರವೇಶಿಸದು; ಮತ್ತೆ ಕೆಲವರು ಮೂಗಿನೊಳಗೆ ಸಿಂಪಡಿಸಬಹುದಾದಂತಹ ಈಸ್ಟ್ರೋಜೆನ್ ಸೂತ್ರವನ್ನು ರೂಪಿಸಿದರು.

ಇಂತಹ ಹಲವು ಪ್ರಯತ್ನಗಳಲ್ಲಿ ಗಮನೀ

ಬುವಾದದ್ದು ಮತ್ತು ಭರವಸೆ ಹೊಂದಬಹುದಾದಂತಹ ವಿಧಾನವೆಂದರೆ ಸ್ಟಿಕರ್!

ಈಸ್ಟ್ರೋಜೆನ್‌ನನ್ನು ಸ್ಟಿಕರ್‌ಗಳಿಗೆ ಬಳಿದು ಚರ್ಮಕ್ಕೆ ಅಂಟಿಸಿದರಾಯಿತು! 24 ಗಂಟೆಗಳ ಅವಧಿಯಲ್ಲಿ 25, 50 ಮತ್ತು 100 ಮೈಕ್ರೋಗ್ರಾಂನಷ್ಟು ಈಸ್ಟ್ರೋಜೆನ್‌ನನ್ನು ರಕ್ತದೊಳಗೆ ಸುಮಾರು 3-4 ದಿವಸ ಬಿಡುಗಡೆ ಮಾಡುವ ಸ್ಟಿಕರ್‌ಗಳನ್ನು ರೂಪಿಸಿ, ಇಂದು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಆದರೆ ಇವರೂ ಸಹ ಪ್ರೊಜೆಸ್ಟರಾನ್ ಗುಳಿಗೆಗಳನ್ನು ನುಂಗಲೇಬೇಕು.

ಎರಡನೇ ತಲೆಮಾರು:

ಪ್ರೊಜೆಸ್ಟರಾನ್‌ನನ್ನು ಗುಳಿಗೆಗಳ ಮೂಲಕ ನೀಡುವುದರ ಬದಲು, ಅದನ್ನೂ ಸ್ಟಿಕರ್‌ಗಳ ಮೂಲಕವೇ ಏಕೆ ನೀಡಬಾರದು ಎಂದು ದಕ್ಷಿಣ ಲಂಡನ್ನಿನ ಕಿಂಗ್ಸ್ ಕಾಲೇಜ್ ಆಸ್ಪತ್ರೆಯ ವೈದ್ಯ ವಿಜ್ಞಾನಿಗಳು ಯೋಚಿಸಿ ಎರಡನೇ ತಲೆಮಾರಿನ ಸ್ಟಿಕರ್‌ಗಳನ್ನು ರೂಪಿಸಿದರು.

ಇದರಲ್ಲಿ ಎರಡೂ ಹಾರ್ಮೋನುಗಳಿರುತ್ತವೆ. 94 ಮಹಿಳೆಯರು ಈ ಸ್ಟಿಕರ್‌ಗಳನ್ನು ಪರೀಕ್ಷಾರ್ಥವಾಗಿ ಬಳಸಿದರು. ಆಗ ಅವರು ವಯಸ್ಸಿನ ಮಹಿಳೆಯರಂತೆ ತಿಂಗಳಿಗೊಮ್ಮೆ ರಕ್ತಸ್ರಾವ[illegible] ಹೊಂದಲಾರಂಭಿಸಿದರು; ಸ್ರಾವ ಅಲ್ಪಪ್ರಮಾಣದಲ್ಲಿತ್ತು. ಇಲ್ಲಿ ಮುಖ್ಯವಾದ ಅಂಶವೆಂದರೆ ಗುಳಿಗೆಗಳ 1/4 ಭಾಗದಷ್ಟು ಪ್ರೊಜೆಸ್ಟರನ್‌ನ್ನು ಮಾತ್ರ ಬಳಸಲಾಗಿತ್ತು. ಆದರೆ ಮೂಳೆ ಟೊಳ್ಳಾಗುವುದನ್ನು ತಡೆಯುವ ಗುಣಮಟ್ಟದಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ!

ಈ ಸ್ಟಿಕರ್ ಸಹ ಸಂಪೂರ್ಣ ಸುರಕ್ಷಿತವೇನಲ್ಲ. ಸ್ಟಿಕರ್‌ನ್ನು ಅಂಟಿಸಿದ ಕಡೆ, ಚರ್ಮದಲ್ಲಿ ಕೆಲವರಿಗೆ ಅಲರ್ಜಿ ಲಕ್ಷಣಗಳು ಕಂಡುಬಂದಿವೆ. ಈ ವಿಧಾನವನ್ನು ಬಹು ಕಾಲ ಉಪಯೋಗಿಸಿದರೆ ಏನಾದರೂ ತೊಂದರೆಗಳಾಗಬಹುದೆ ಎಂದು ಖಚಿತವಾಗಿ ಕಿಂಗ್ಸ್ ಕಾಲೇಜ್ ವೈದ್ಯರಿಗೆ ತಿಳಿಯದ ಕಾರಣ ಸ್ತನಾರ್ಬುದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅಲ್ಲದೆ ವೃದ್ಧಾಪ್ಯದಲ್ಲೂ ಮೂರು ದಿನಗಳ ಮುಜುಗರವನ್ನು ಅನುಭವಿಸಲು ಬಹಳಷ್ಟು ಮಹಿಳೆಯರು ಸಿದ್ಧವಾಗಿರುವುದಿಲ್ಲ. ಈ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವೇ ಎಂದು ಅಧ್ಯಯನಗಳು ಕಿಂಗ್ಸ್ ಕಾಲೇಜಿನಲ್ಲಿ 900 ಮಹಿಳೆಯರ ಮೇಲೆ ಆರಂಭವಾಗಿದೆ.

ಆರ್ಗಾಡ್-14:

ಈ ರಕ್ತ ಸ್ರಾವವನ್ನು ನಿವಾರಿಸಲು ಲಂಡನ್ನಿನ ಗಯ್ಸ್ ಆಸ್ಪತ್ರೆಯ ವಿಜ್ಞಾನಿಗಳು ORGOD-14 ಎನ್ನುವ ಒಂದು ನೂತನ ಸಂಯೋಜಿತ ಸ್ಟೀರಾಯ್ಡ್‌ನನ್ನು ರೂಪಿಸಿ ಪರೀಕ್ಷೆಗೆ ಒಳಪಡಿಸಿದ್ದಾರೆ.

ಇದು ಈಸ್ಟ್ರೋಜೆನ್‌ನಂತೆ ಋತುಬಂಧದ ಕಿರಿಕಿರಿಗಳನ್ನು ನಿವಾರಿಸುತ್ತದೆ; ಮೂಳೆ ಟೊಳ್ಳಾಗುವುದನ್ನು ತಡೆಗಟ್ಟುತ್ತದೆ; ಗರ್ಭಕೋಶ ಕ್ಯಾನ್ಸರನ್ನುಂಟುಮಾಡದು; ಹಾಗಾಗಿ ಪ್ರೊಜೆಸ್ಟರಾನ್‌ನನ್ನು ಬಳಸಬೇಕಿಲ್ಲ; ಅಂದ ಮೇಲೆ ಹೃದಯ ಮತ್ತು ರಕ್ತನಾಳಗಳೂ ಸುರಕ್ಷಿತ! ಪ್ರೊಜೆಸ್ಟರಾನ್ ಇಲ್ಲದ ಕಾರಣ ಮಾಸಿಕ ರಕ್ತ ಸ್ರಾವದ ಪ್ರಶ್ನೆಯೇ ಬಾರದು!

ಹಾಗಾಗಿ, ಇಂದು ಸರಳ ಸುಲಭ ಹಾಗು ಸುರಕ್ಷಿತ ಹಾರ್ಮೋನು ಸಮತೋಲನಾ ಚಿಕಿತ್ಸೆಯನ್ನು ನೀಡುವ ಸಾಧ್ಯತೆ ಇದೆ. ಆದರೆ ಈ ಚಿಕಿತ್ಸೆಯನ್ನು ಆರಂಭಿಸಲು, ಯಾವಾಗ ಋತುಬಂಧದಲ್ಲಿರುವ ಮಹಿಳೆಯರಲ್ಲಿ ಮೂಳೆ ಟೊಳ್ಳಾಗಲು ಆರಂಭವಾಗುತ್ತದೆ ಎಂಬುದನ್ನು ನಿಖರವಾಗಿ ತಿಳಿಯಬೇಕು. ಆದರೆ ಅಂತಹ ಸರಳ ವಿಧಾನ ನಮಗಿನ್ನೂ ತಿಳಿದಿಲ್ಲ. ಸರಾಸರಿಗಿಂತ ಬೇಗ ಋತುಬಂಧವನ್ನು ಹೊಂದುವರಲ್ಲಿ, ಧೂಮಪಾನ ಮದ್ಯಪಾನವನ್ನು ಮಾಡುವರಲ್ಲಿ ಮೂಳೆ ಟೊಳ್ಳಾಗುವುದು ಸ್ವಲ್ಪ ಬೇಗ ಆರಂಭವಾಗುತ್ತದೆ. ಆದರೆ ಚಿಕಿತ್ಸೆಯನ್ನು ಆರಂಭಿಸಲು ನಿಖರತೆ ಅವಶ್ಯ.

ಇಂತಹ ಒಂದು ವಿಧಾನವನ್ನು ರೂಪಿಸಿದರೆ, ಕೆಲವರಿಗೆ ನರಕ ಸದೃಶವಾಗಬಹುದಾದ ಋತುಬಂಧದ ಘಟ್ಟ ನೆಮ್ಮದಿ ಪೂರ್ಣವಾಗಬಹುದು●

ಸಂಧಾನ ಪ್ರತಿಭಟನೆ

ಕೆ.ಟಿ. ಪಾಂಡುರಂಗಿ

ಜೀವನದಲ್ಲಿ ತನ್ನ ಅವಶ್ಯಕತೆ ಅನುಕೂಲ, ಇಚ್ಛೆಗಳಂತೆ ಕಾರ್ಯಗಳು ನಡೆಯಬೇಕೆಂದು ಎಲ್ಲರೂ ಅಪೇಕ್ಷಿಸುವದು ಸಹಜ. ಬೇರೆಯವರ ಅವಶ್ಯಕತೆ, ಅನುಕೂಲ ಮತ್ತು ಇಚ್ಛೆಗಳೊದನೆ ಸಂಘರ್ಷವಿಲ್ಲದಿರುವ ವಿಷಯಗಳಲ್ಲಿ ಅವರವರ ಇಚ್ಛೆಯಂತೆ ಕಾರ್ಯಗಳಾಗಲು ಯಾವ ತೊಂದರೆಯೂ ಬರುವದಿಲ್ಲ. ಆದರೆ ಸ್ಪಷ್ಟವಾಗಿ ಒಬ್ಬರ ವ್ಯಾಪ್ತಿಗೆ ಸೇರಿದ ವಿಷಯಗಳು ಜೀವನದಲ್ಲಿ ಬಹಳ ಕಡಿಮೆ. ಓರ್ವ ವ್ಯಕ್ತಿಯು ಎಷ್ಟು ಒಬ್ಬಂಟಿಗನಾಗಿ ಇರಬೇಕೆಂದು ಅಪೇಕ್ಷಿಸಿದರೂ ಜೀವನದಲ್ಲಿ ಅದು ಸಾಧ್ಯವಾಗುವದಿಲ್ಲ. ಇನ್ನೊಬ್ಬರೊಡನೆ ಸ್ವಲ್ಪವಾದರೂ ಸಂಬಂಧ ಬಾರದ ವಿಷಯಗಳೇ ದುರ್ಲಭ. ಆದ್ದರಿಂದ ಅನೇಕ ವಿಷಯಗಳಲ್ಲಿ ಬೇರೆಯವರೊಡನೆ ಹೊಂದಿಸಿಕೊಳ್ಳುವದು, ಸಂಘರ್ಷವನ್ನು ತಪ್ಪಿಸಿಕೊಳ್ಳುವದು ಜೀವನದ ಒಂದು ಅವಿಭಾಜ್ಯ ಅಂಗ. ಇಂಥ ಹೊಂದಾಣಿಕೆ ಕುಟುಂಬ ಸಮಾಜ, ವೃತ್ತಿಯ ಕಾರ್ಯಕ್ಷೇತ್ರ ಹೀಗೆ ಬಹಿರಂಗದಲ್ಲಿ ಆಗುವದು ಮಾತ್ರವಲ್ಲದೆ ಅನೇಕ ವಿಷಯಗಳಲ್ಲಿ ನಮ್ಮ ಮನಸ್ಸಿನಲ್ಲಿಯೂ ಆಗಬೇಕಾಗುತ್ತದೆ. ಬಹಿರಂಗದಲ್ಲಿ ಸಂಘರ್ಷವನ್ನು ತಪ್ಪಿಸಿ ಹೊಂದಾಣಿಕೆ ಮಾಡಿಕೊಳ್ಳುವದು ಎಷ್ಟು ಅಗತ್ಯವೋ ಅದಕ್ಕಿಂತ ಹೆಚ್ಚಾಗಿ ಅಂತರಂಗದಲ್ಲಿಯ ಸಂಘರ್ಷವನ್ನು ಹೊಂದಿಸಿ ಕೊಳ್ಳುವದು ಅಗತ್ಯ. ಸಂಘರ್ಷವನ್ನು ತಪ್ಪಿಸಲು ಉಪಾಯಗಳನ್ನು ಕಂಡುಹಿಡಿಯುವ ಪ್ರಯತ್ನವೇ ಸಂಧಾನ ಮನೋಧರ್ಮ. ಇಂಥ ಉಪಾಯಗಳ ಆಲೋಚನೆ ಮಾಡದೇ ಸಂಘರ್ಷ ಆದರೆ ಆಗಲಿ ಎನ್ನುವದೇ ಪ್ರತಿಭಟನೆಯ ಮನೋಧರ್ಮ ಅಥವಾ ಆಕ್ರಮಣದ ಮನೋಧರ್ಮ.

ಸಂಧಾನಕ್ಕೆ ಪ್ರತಿಕೂಲವಾದ ಅಂಶಗಳೆಂದರೆ ಪ್ರತಿಷ್ಠೆಯ ಮನೋಭಾವ ಮತ್ತು ಸಂಧಾನದಿಂದ ಮುಂದೆ ಪ್ರತಿಕೂಲ ಪರಿಣಾಮ ಆಗಬಹುದೆಂಬ ಭಯ.

ಅನೇಕ ಸಂದರ್ಭಗಳಲ್ಲಿ ಕೇವಲ ಪ್ರತಿಷ್ಠೆಯ ಕಾರಣಕ್ಕಾಗಿ ಸಂಧಾನಗಳು ಮುರಿದು ಬೀಳುವವು. ಕೆಲವು ಸಂದರ್ಭಗಳಲ್ಲಿ ಇಂದು ಮಾಡಿಕೊಂಡ ಸಂಧಾನದಿಂದ ಮುಂದೆ ವಿಪರೀತ ಪರಿಣಾಮ ಉಂಟಾಗುವುದಾದರೆ ಅಂಥ ಸಂಧಾನಗಳನ್ನು ಕೈ ಬಿಡಬೇಕಾಗುವುದು. ಯಾವುದೇ ಸಂಧಾನವು ಸಫಲವಾಗಬೇಕಾದರೆ ಪ್ರತಿಷ್ಠೆಯನ್ನು ಬಿಡಬೇಕು. ಎಲ್ಲವೂ ತನ್ನಂತೆಯೇ ಆಗಬೇಕೆಂಬ ಆಕ್ರಮಣ ಮನೋಧರ್ಮ ಬಿಡಬೇಕು. ಮುಂದೆ ಆಗಬಹುದೆಂದು ತೋರುವ ವಿಪರೀತ ಪರಿಣಾಮಗಳು ಕಾಲ್ಪನಿಕವೇ, ವಾಸ್ತವವೇ ಎಂಬುದನ್ನು ಆಲೋಚಿಸಬೇಕು. ಕಾಲ್ಪನಿಕವಾಗಿದ್ದರೆ ಅವುಗಳ ಭಯ ಬಿಟ್ಟು ಬಿಡಬೇಕು. ಸಂಧಾನ ಮಾಡಿಕೊಂಡರೆ ಮುಂದಿನ ಪರಿಣಾಮಗಳನ್ನು ಎದುರಿಸಲು ಅನುಕೂಲ ಹೆಚ್ಚಾಗುತ್ತಿದ್ದರೆ ಸಂಧಾನವನ್ನು ಬಿಡಬಾರದು. ಆಕ್ರಮಣ ಅಥವಾ ಪ್ರತಿಭಟನೆ ತತ್ಕಾಲದಲ್ಲಿ ಫಲಕೊಟ್ಟರೂ ಕಾಲಕ್ರಮದಲ್ಲಿ ಅದರ ಪ್ರತಿಕ್ರಿಯೆ ಆಗಿಯೇ ಆಗುವುದು. ಆದ್ದರಿಂದ ಜೀವನದಲ್ಲಿ ಸಾಧ್ಯವಾದಷ್ಟು ಪ್ರತಿಭಟನೆಯ ಅಥವಾ ಆಕ್ರಮಣದ ಮಾರ್ಗವನ್ನು ಬಿಟ್ಟು ಸಂಧಾನದ ಮಾರ್ಗವನ್ನೇ ಅನುಸರಿಸಬೇಕು.

ಆಂತರಿಕ ಸಂಘರ್ಷಗಳ ರೀತಿ ಬೇರೆಯಾಗಿರುತ್ತದೆ. ನಮ್ಮ ನಂಬಿಕೆಗಳು, ಅಭ್ಯಾಸಗಳು ಆದರ್ಶಗಳು ಮತ್ತು ಸುತ್ತಲಿನ ಪರಿಸ್ಥಿತಿ ಪರಸ್ಪರ ವಿರುದ್ಧವಾದಾಗ ಮಾನಸಿಕ ಸಂಘರ್ಷವುಂಟಾಗುತ್ತದೆ. ನಮ್ಮ ನಂಬಿಕೆ, ನಮ್ಮ ವೈಚಾರಿಕತೆ ಇವುಗಳಲ್ಲಿಯೂ ಸಂಘರ್ಷವು ಆಗಾಗ ಉಂಟಾಗುತ್ತದೆ. ಇವು ಗಳಲ್ಲಿಯೂ ಸಮನ್ವಯವನ್ನು ಸಾಧಿಸಿಕೊಂಡರೆ ವ್ಯಕ್ತಿತ್ವವು ಒಡೆಯುವುದಿಲ್ಲ. ಕುಸಿಯುವುದಿಲ್ಲ. ದಾಂಭಿಕತನಕ್ಕೆ ಅವಕಾಶವಾಗುವುದಿಲ್ಲ. ದಾಂಭಿಕತನದಿಂದ ಎರಡನ್ನೂ ಉಳಿಸಿಕೊಳ್ಳುವುದಕ್ಕಿಂತ ವಿವೇಕದಿಂದ ಸಮನ್ವಯ ಮಾಡಿಕೊಳ್ಳುವುದು ಉತ್ತಮ.

ಜೀವನದಲ್ಲಿ ಪ್ರೇಮ-ಕಾಮದ ಸ್ಥಾನ

ಬಿ.ಪಿ. ಶಿವಾನಂದರಾವ್

ಜೀವನದಲ್ಲಿ ವ್ಯಕ್ತಿಗೆ ಪ್ರೇಮ ಮುಖ್ಯವೋ, ಕಾಮ ಮುಖ್ಯವೋ, ಎಂಬ ಪ್ರಶ್ನೆಯು ಗಾಳಿ-ನೀರಿನಲ್ಲಿ ಯಾವುದು ಬದುಕಲು ಮುಖ್ಯ ಎಂಬಷ್ಟೇ ತೊಡಕಿನದಾಗಬಹುದು. ಪ್ರಾಚೀನ ಋಷಿ-ಮುನಿಗಳು ಇವುಗಳ ಬಗ್ಗೆ ಪುರಾಣ ಗ್ರಂಥಗಳಲ್ಲಿ ಸಾಕಷ್ಟು ವಿಶ್ಲೇಷಿಸಿದ್ದಾರೆ. 'ಧರ್ಮ ಪ್ರಧಾನಂ, ಅರ್ಥಂ ಧರ್ಮಾಂಕುರಪ ಫಲಂ, ಆದರ್ಶ ರಸಮದುಕಾಮಂ' ಎಂಬುದಾಗಿ ಮಹಾಕವಿ ಪಂಪನು ವ್ಯಾಖ್ಯಾನಿಸುತ್ತಾನೆ. ವ್ಯಕ್ತಿಗೆ ಬದುಕಿನಲ್ಲಿ ಧರ್ಮವೇ ಪ್ರಧಾನ ಗುಣವಾಗಿದ್ದು, ಧರ್ಮದಿಂದ ಗಳಿಸುವ ಧನವು, ಅದಕ್ಕೆ ರಸಾಮೃತವಾಗಿ 'ಕಾಮ'ವು ಸೇರಿಕೊಂಡಾಗ ಜೀವನಕ್ಕೆ ಅರ್ಥ-ಸೌಂದರ್ಯ-ಮೌಲ್ಯಗಳು ಹುಟ್ಟುತ್ತವೆಂದು ಪ್ರಕಟಿಸುತ್ತಾನೆ. - ಪ್ರೇಮವು 'ಪ್ರೀತಿ'ಯ ಅಂಕುರದಿಂದಲೇ ಹುಟ್ಟುತ್ತದೆ. ಪ್ರೀತಿಯನ್ನು ಯಾವನೊಬ್ಬ ವ್ಯಕ್ತಿಯು. ತನ್ನ ಪರಿಸರದಲ್ಲಿ ಇತರ ವ್ಯಕ್ತಿ ಪ್ರಾಣಿ ಇತ್ಯಾದಿ ಜೀವಕೋಟಿಗಳಲ್ಲಿ ವ್ಯಕ್ತಗೊಳಿಸಲು ಆತನಲ್ಲಿ ಅವುಗಳೊಡನೆ ವಿಶ್ವಾಸ-ಅನುಕಂಪ- ಸಹನೆ ದಯಾಭಾವ-ಶ್ರದ್ಧೆ-ಕರುಣೆಗಳಂತಹ ಗುಣಗಳು ಮೂಲಭೂತವಾಗಿ ಹುಟ್ಟಿ ಬರಬೇಕಾಗುತ್ತದೆ.

ಒಬ್ಬ ವ್ಯಕ್ತಿಯು 'ಮಾನಸಿಕ ಭ್ರಮೆ' - ಎನ್ನುವಂತಹ ರೀತಿಯಲ್ಲಿ ಇನ್ನೊಬ್ಬನ ಬಗೆಗೆ ಪ್ರಕಟಿಸುವಾಗ, ಆ ಇನ್ನೊಬ್ಬನ ಬಗೆಗೆ ಆವನ ರೂಪ-ಗುಣ-ಪ್ರತಿಭೆ-ನಡವಳಿಕೆ-ಮಾತು-ಧನ ಹೀಗೆ ಯಾವುದೋ ವಸ್ತುವಿನ ಅತ್ಯಂತ ಆಕರ್ಷಣೆಯಿಂದಾಗಿ ತನ್ನ ಮನಸ್ಸನ್ನು ಆತನಲ್ಲಿ ಹರಿಬಿಡುತ್ತಾನೆ. ತನಗೆ ಆತನ ಸಖ್ಯವು ಸಹ್ಯವೆಂತಲೂ, ಅವಶ್ಯಕವೆಂತಲೂ, ಆತನ ಕುರಿತಾಗಿ ತನ್ನ ಆರ್ದ್ರ ಹೃದಯದ ಭಾವವನ್ನು 'ಪ್ರೀತಿ'ಯ ಮೂಲಕ ಪ್ರಕಟಿಸಲುದ್ಯುಕ್ತನಾಗುತ್ತಾನೆ. ತಾಯಿ-ಮಗುವಿನ, ಗಂಡ-ಹೆಂಡತಿಯ, ಸ್ನೇಹಿತ, ಅಧಿಕಾರಿ, ಮಾಲಿಕ, ಸೇವಕ ಹೀಗೆ ಯಾವ ವ್ಯಕ್ತಿಯ ಬಗೆಗಾಗಲಿ ವಿಶ್ವಾಸವೂ, ನಂಬಿಕೆಯೂ ಪ್ರೀತಿಯ ನೆಲೆಯಲ್ಲಿ ಧಾತುಪೀಠವಾಗಿರುತ್ತವೆ. ಪ್ರೀತಿಯು ಪರಿಪಕ್ವವಾದ ವಿಶಾಲಾರ್ಥದಲ್ಲಿ ಅಂತಿಮವಾಗಿ ವ್ಯಕ್ತಗೊಳ್ಳುವುದೇ 'ಪ್ರೇಮ' ಎನಿಸಿಕೊಳ್ಳುತ್ತದೆ; ಮೊಗ್ಗು ಅರಳಿ ನಲಿಯುವ ಹೂವಿನಂತೆ. ಜೀವ ಜಗತ್ತಿನ ಎಲ್ಲ ವಸ್ತು-ವ್ಯಕ್ತಿಗಳ ಅಸ್ತಿತ್ವಕ್ಕೂ ಈ 'ಪ್ರೀತಿ'ಯು ಕಾರಣಶಕ್ತಿಯಾಗಿದೆ. ಇದು ವಿವಿಧ ಸ್ತರಗಳಲ್ಲಿ, ವಿವಿಧ ರೂಪಗಳಲ್ಲಿ ನಿತ್ಯ ಸತ್ಯವಾಗಿ, ಜೀವವಾಹಿನಿಯಾಗಿ ನಿಂತು ಸಕಲ ಮಾನವ-ಪ್ರಾಣಿ-ಕ್ರಿಮಿ-ಕೀಟಗಳನ್ನು ಬದುಕಿಸುತ್ತ ಮುನ್ನಡೆಸುತ್ತಿದೆ. ಇನ್ನು ಪ್ರೇಮವೆಂದರೆ ಕೇವಲ ಲೈಂಗಿಕ ಭೋಗಾಸಕ್ತಿಯ ಸೀಮಿತ ಉದ್ದೇಶಕ್ಕಾಗಿ ಹುಟ್ಟುವ ದೈಹಿಕ ಕ್ರಿಯೆಯಲ್ಲ; ಅದು ಬಾಹ್ಯದಲ್ಲಿ, ಅಂತರಂಗದಲ್ಲಿ ಭಾವನಾತ್ಮಕವಾದ, ಅನಂತವೂ, ವಿಶಾಲ ವ್ಯಾಪ್ತಿಯೂ, ಬದುಕಲ್ಲಿ

ಹುಟ್ಟಿನಿಂದ- ಸಾವಿನವರೆಗೂ ಪ್ರಾಣವಾಯುವಿನಂತೆ ಹುಟ್ಟಿ ಹರಿಯುತ್ತಿರಬೇಕು. ಹಾಗಾದಾಗಲೇ ಮಾನವೀಯತೆಯ ನೆರಳಿನಲ್ಲಿ ಈ ಜೀವನವು ಅರ್ಥವಂತಿಕೆಯನ್ನು, ಆಸಕ್ತಿಯನ್ನು, ಮಾಧುರ್ಯವನ್ನು, ಅಸ್ತಿತ್ವಕ್ಕಾಗಿ ಹಾತೊರೆಯುವ ಚಿರಂತನ ಶಕ್ತಿಯಾಗಿ ಸದಾ ಪೋಷಿಸುತ್ತದೆ. ಇನ್ನು 'ಕಾಮ'-ವು ಸಕಲ ಜೀವರಾಶಿಯಲ್ಲೂ ಸದಾ ಸುಪ್ತ ಚೇತನವಾಗಿ ಅಡಗಿರುತ್ತದೆ. ಇದು ತನ್ನ ಅಸ್ತಿತ್ವವನ್ನು ಸಮಯ ಸಿಕ್ಕಾಗ ವ್ಯಕ್ತಿಯಲ್ಲಿ ಲೈಂಗಿಕ ಕ್ರಿಯೆಗಳ ಮೂಲಕ ಪ್ರಕಟಗೊಂಡು ತೃಪ್ತಗೊಳ್ಳುತ್ತದೆಂದು ಫ್ರಾಯ್ಡ್‌ನ ಸಿದ್ಧಾಂತವು ತಿಳಿಸುತ್ತದೆ. ಕಾಮವೆಂದರೆ 'ಬಯಕೆ', 'ವಿಷಯಾಭಿಲಾಷೆ' ಎಂದು ಅರ್ಥವಿದೆ. ಕೇವಲ ಲೈಂಗಿಕ ಚಟುವಟಿಕೆ, ದೈಹಿಕ ಭೋಗಾಪೇಕ್ಷೆಯೊಂದೇ ಕಾಮವಲ್ಲ ಎಂದು ಸನಾತನ ಧರ್ಮ ಭೋಧಿಸುತ್ತದೆ. ನಾಲ್ಕು ಪುರುಷಾರ್ಥಗಳಲ್ಲಿ ಒಂದಾದ ಕಾಮವು ಹುಟ್ಟಿನಿಂದಲೇ ವ್ಯಕ್ತಿಯಲ್ಲಿ ವ್ಯಕ್ತಗೊಳ್ಳುತ್ತದೆ ಯಾದರೂ ತಾರುಣ್ಯದಲ್ಲಿ ಪ್ರಬಲವಾಗಿರುತ್ತದೆ. ಬಯಕೆಯು ಯಥಾರ್ಥವಾಗಿ ವಸ್ತು, ವ್ಯಕ್ತಿ, ಆಹಾರ-ಧನ-ಸಂಪತ್ತು-ಅಧಿಕಾರ ಹೀಗೆ ಯಾವುದೇ ರೂಪದಲ್ಲೂ ಬಯಸುವುದೇ ಆಗಿದೆ.

ಕಾಮವು ಹರೆಯದಲ್ಲಿ (ತಾರುಣ್ಯ) ಹೆಚ್ಚೆಚ್ಚು ಪ್ರಕಟಗೊಳ್ಳಲು ವ್ಯಕ್ತಿ-ಪ್ರಾಣಿಯ ದೇಹದಲ್ಲಿ ಉಂಟಾಗುವ ದೈಹಿಕ ಬದಲಾವಣೆಯು ಕಾರಣವಾಗಿದೆ. ಆಗ ಆಸೆಯು ಸುಖಾಪೇಕ್ಷೆಯಿಂದ ಪಕ್ವಗೊಂಡು ಬಲಿಯುತ್ತದೆ. 'ಸೃಷ್ಟಿ'- ಮೂಲ ಚೇತನವೇ 'ಕಾಮ'ದಲ್ಲಿ ಅಡಗಿದೆ ಎಂದು ವಿಜ್ಞಾನವು ಸೂಚಿಸುತ್ತದೆ. ಜೀವ ಶಾಸ್ತ್ರಜ್ಞರು ಇದೇ ನಿಸರ್ಗನಿಯಮ ಎನ್ನುತ್ತಾರೆ. ಆದರೂ ಕಾಮದ ಹುಟ್ಟು ಜೀವಿಗಳಲ್ಲಿ ಪ್ರೇಮದಿಂದಲೇ ಪ್ರಾಪ್ತವಾಗುತ್ತದೆ. ತನ್ನ ಪರಿಸರದ ನಿರ್ಬಂಧತೆ, ಆರ್ಥಿಕ ಸ್ಥಿತಿ, ನಂಬುಗೆ, ಧರ್ಮಾಚರಣೆಗಳು, ಆಚಾರ-ವಿಚಾರಗಳು, ಸಾಮಾಜಿಕ ಕಟ್ಟುಪಾಡುಗಳ ಅಂಕಿತದಲ್ಲೇ ವಕ್ತಿ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಸದಾ ಹೆಣಗುತ್ತಾನೆ. ದುಡಿಯುತ್ತಾನೆ. ಸಂಗ್ರಹಿಸಿ, ಭೋಗಿಸುತ್ತಾನೆ. 'ನಿಸರ್ಗದ ಅತ್ಯಧಿಕ ಧೀಶಕ್ತಿಯು, ಮಾನವನ ದೈಹಿಕ ಹಾಗೂ ಮಾನಸಿಕ ದೌರ್ಬಲ್ಯಗಳು, ಸುತ್ತಣ ಸಮಾಜದ ಕಟ್ಟುಪಾಡುಗಳ ನಿರ್ಬಂಧತೆ, ಇವು ವ್ಯಕ್ತಿಯು ತನ್ನ ಕುಟುಂಬ ಹಾಗೂ ಸಮಾಜದಲ್ಲಿನ ಪರಸ್ಪರ ಸಂಬಂಧಗಳನ್ನು ಹೊಂದಿಸಿಕೊಳ್ಳುತ್ತದೆ' ಎಂದು ಸಿಗ್ಮಂಡ್ ಫ್ರಾಯ್ಡ್‌ನ ಸಿದ್ಧಾಂತವು ಪ್ರಕಟಿಸುತ್ತದೆ. ಯಾವುದು ಮೌಲಿಕವೋ ಅದು ಹೊಸದಲ್ಲ. ಮತ್ತು ಯಾವುದು ಹೊಸತೋ ಅದು ಮೌಲಿಕವಾಗಿರುವುದಿಲ್ಲವೆಂದು ಡೇನಿಯಲ್ ವೆಬ್‌ಸ್ಟರ್‌ನು ಹೇಳಿದ್ದಾನೆ. ಖ್ಯಾತ ಕವಿ, ವಿಮರ್ಶಕ ಕೋಲ್‌ರಿಜ್‌ನು, 'ನಮ್ಮೆಲ್ಲ ಭಾವನೆಗಳು, ಎಲ್ಲ ಭಾವೋದ್ರೇಕಗಳು, ಎಲ್ಲ ಪರಮಾನಂದವು, ಯಾವುದು ನಶ್ವರ ಬಾಳ್ವೆಯ ಚೌಪಟ್ಟಿನಲ್ಲಿ ನಮ್ಮನ್ನು ಅಲುಗಾಡಿಸುತ್ತಿವೆಯೋ, ಇವೆಲ್ಲವೂ ಆ ಅನಂತ 'ಪ್ರೇಮ'-ದ ನಿರ್ವಹಕಗಳೇ, ಮತ್ತು ಇವೇ ಆ ಪವಿತ್ರ ಪ್ರೇಮದ ಜ್ವಾಲೆಗೆ ಆಹಾರವಸ್ತು ನೀಡುತ್ತವೆ' ಎನ್ನುತ್ತ ಪ್ರೇಮವನ್ನು ಅಮರತ್ವಕ್ಕೆ ಏರಿಸಿದ್ದಾನೆ.

ಅಂತೂ 'ಸುಖ' ಅನುಭವಿಸಬೇಕೆಂಬ ಫಲಾಪೇಕ್ಷೆಯಿಂದಲೇ ಆತನ ಬಯಕೆಗಳು ಆತನ ಕ್ರಿಯೆ-ಚಿಂತನೆಗಳಲ್ಲಿ ಪ್ರಚೋದಿಸುತ್ತ ಹೋಗುತ್ತವೆ. ಇದು ಮೇಲ್ನೋಟಕ್ಕೆ ಸ್ವಾಭಾವಿಕ ಕ್ರಿಯೆ ಎನಿಸಿದರೂ ವಾಸ್ತವದಲ್ಲಿ ವ್ಯಕ್ತಿ ಅನೇಕಬಾರಿ ತನ್ನಾಸೆಗಳನ್ನು (ಕಾಮನೆ) ತನ್ನದೇ ಅಸಾಮರ್ಥ್ಯಕ್ಕಾಗಿ ಹತ್ತಿಕ್ಕಬೇಕಾಗುತ್ತದೆ. 'Love is the essence of life'\- ಎಂಬುದು ದಿಟ ಎನಿಸುತ್ತದೆ. ಪ್ರೇಮವು ಕಾಮದ ಹೊರತಾಗಿಲ್ಲ. ಪ್ರೀತಿ, ಅನುರಾಗ, ದಯೆ, ವಿಶ್ವಾಸ, ಮೋಹ, ಕರುಣೆಗಳಂತಹ ಗುಣಶೀಲತೆಯಲ್ಲಿ ವ್ಯಕ್ತಿ ಎಂಥಹ ದುರ್ಭರ ಪ್ರಸಂಗದಲ್ಲಿಯೂ ಈ ಬುದುಕಿಗೆ ಒಂದು ಅರ್ಥವಿದೆ. ಮೌಲ್ಯವಿದೆ, ಸಂತೃಪ್ತಿಯಿದೆ, ಸುಖವಿದೆ ಎಂದು ನಂಬಲಿಕ್ಕೂ ನಂಬಿ ಬಾಳಲಿಕ್ಕೂ ಆತನಲ್ಲಿ ಮೂಲತಃ ಅನುಭವ-ಚಿಂತ

ನೆ-ಸಹನೆಯಂತಹ ಸಂಸ್ಕಾರಗುಣಗಳು ತೀರಾ ಅವಶ್ಯ ಬೇಕಾಗುತ್ತವೆ. ಜಿಪುಣನಾದವನು ಹಣವೊಂದನ್ನು ಬಿಟ್ಟರೆ ಬೇರೆ ಯಾವುದರಲ್ಲೂ ಪ್ರೇಮವನ್ನೇ ಕಾಣದಾದಾಗ ಆತನ ಬದುಕಿಗೆ ಆದರ್ಶ-ಅರ್ಥವಂತಿಕೆ-ಮೌಲ್ಯವುಂಟೆಂದು ಹೇಳಲಾಗುವುದಿಲ್ಲ.

ಹೀಗೆ ಬದುಕಿನಲ್ಲಿ ಪ್ರೇಮ-ಕಾಮವು ದೇಹಾತ್ಮಗಳಂತೆ ಮನುಷ್ಯರಲ್ಲಿ ಜೀವಿಸಿದ್ದರೂ, ನಿರ್ದಿಷ್ಟ ವಯಸ್ಸಿನಲ್ಲಿ ಪ್ರಬಲಗೊಂಡಿದ್ದ ಕಾಮಶಕ್ತಿಯು, ವಯಸ್ಸಾದಂತೆ ಆ ಸೃಷ್ಟಿಯ ಪ್ರಕ್ರಿಯೆಯಾದ ಕಾಮಶಕ್ತಿಯು ಅಡಗಿ ಹೋಗುವುದು ನಿಸರ್ಗದ ಲೀಲೆ ಎನ್ನಬೇಕು. ಹೆಚ್ಚೆಚ್ಚು ಜ್ಞಾನ ಸಂಪಾದನೆ, ಜೀವನಾನುಭವಗಳ ದರ್ಶನ, ತಾತ್ವಿಕ ಚಿಂತನ- ಮಂಥನ, ಸದಾ ಸತ್ಕ್ರಿಯೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡವನಿಗೆ ; ಅವನು ಜ್ಞಾನಿ, ವಿಜ್ಞಾನಿ, ವಕೀಲ, ಲೇಖಕ, ವೈದ್ಯ, ತಂತ್ರಜ್ಞ, ಶಿಕ್ಷಕ, ಸಂತ, ಯಾರೇ ಬುದ್ಧಿಜೀವಿ ಆಗಿರಲಿ - ಅಂಥಹವರಲ್ಲಿ ಧರ್ಮಪ್ರಜ್ಞೆಯು ಸದಾ ಜಾಗ್ರತವಾಗಿರುವುದರಿಂದ, ಬುದ್ಧಿಮತ್ತೆಯ ಜನರು ಪ್ರೇಮವನ್ನು ಕಾಮವನ್ನು ಸಮಾನ ಪ್ರೀತ್ಯಾಸ್ಥೆಯ ಸ್ಥಿತಿಯಲ್ಲಿ ಸ್ವೀಕರಿಸಿ ಸಮರ್ಥವಾಗಿ ನಡೆಸಿಕೊಳ್ಳುತ್ತಾರೆ. ಹಾಲ್ನೀರಿನಷ್ಟು ಸೂಕ್ಷ್ಮ ಸಂಬಂಧದ್ದು. 'ಪ್ರೇಮ-ಕಾಮ'ದ ಈ ಎರಡು ಸ್ಥಿತಿಗಳನ್ನು ವ್ಯಕ್ತಿ ನಿಯಂತ್ರಿಸಿ, ಸದ್ವರ್ತನೆಯಿಂದ ಬಳಸಿಕೊಳ್ಳದಿದ್ದಲ್ಲಿ ಇವೇ ಅವನ 'ಶತ್ರು'-ವಾಗಿ ಆತನ ಜೀವನವನ್ನು ನರಕಸದೃಶವನ್ನಾಗಿ ಮಾಡಬಲ್ಲದು. ●

ಪ್ರಾಣಿ ಬೇಟೆಯ

ಪ್ರಾಚೀನತೆ

ಹಸಿವಿನ ಮುಂದೆ ಎಂಥ ಧಾರ್ಮಿಕ, ಸಾಮಾಜಿಕ ಕಟ್ಟುಪಾಡುಗಳೂ ಸಡಿಲವಾಗುತ್ತವೆ. ಅಂಥದರಲ್ಲಿ, ಕಾಡುಗಳಲ್ಲೇ ಬದುಕು ಕಳೆದ ಆದಿಮಾನವ ವಿಪರೀತ ಹಸಿದಾಗ ಎದುರಿಗೆ ಸರಿದಾಡಿದ ಪ್ರಾಣಿಯೊಂದರ ಮಾಂಸಕ್ಕಾಗಿ ಚಡಪಡಿಸಿದ್ದು ಸಹಜವಲ್ಲವೆ ?

ನರೇಂದ್ರ ರೈ.ದೇರ್ಲ

ಪ್ರಾಣಿ ಪಕ್ಷಿಗಳನ್ನೂ, ಜಲಚರಗಳನ್ನೂ ವಿವಿಧ ಪರಿಕರ ಮತ್ತು ತಂತ್ರಗಳಿಂದ ಹೊಡೆದು ಕೊಲ್ಲುವುದಕ್ಕೆ 'ಬೇಟೆ' ಎಂದು ಹೆಸರು. ಶಿಷ್ಟ ಸಾಹಿತ್ಯದಲ್ಲಿ ಇದಕ್ಕೆ ಮೃಗಯೆ, ಆಚ್ಛೋದನ, ಮೃಗವ್ಯ, ಆಚ್ಛೋಟನ, ಆಖೇಟಕ, ಪಾಪರ್ಧಿ, ಶಿಕಾರಿ ಮುಂತಾದ ಹೆಸರಿವೆ. ಬೇಟೆ ನಡೆಯುವ ಪರಿಸರ ಮತ್ತು ಅದಕ್ಕೆ ಒಳಗಾಗುವ ಪ್ರಾಣಿಗಳನ್ನು ಆಧಾರವಾಗಿಟ್ಟುಕೊಂಡು ಮೃಗಯೆಯನ್ನು ಹಲವು ವಿಧಗಳಾಗಿ ವಿಂಗಡಿಸಬಹುದು. ಕಾಡಿನಲ್ಲಿ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುವುದಕ್ಕೆ 'ಕಾಡುಬೇಟೆ' ಎಂದೂ, ನೀರಿನಲ್ಲಿರುವ ಮೀನು, ಏಡಿ, ಆಮೆ ಮೊದಲಾದವುಗಳನ್ನು ಬೇಟೆಯಾಡುವುದಕ್ಕೆ 'ಮೀನು ಬೇಟೆ' ಅಥವಾ 'ನೀರಬೇಟೆ' ಎಂದೂ ಹೆಸರು - ಇವೆರಡೂ ಬೇಟೆಯ ಪ್ರಮುಖ ವಿಧಗಳು. ಪ್ರಾಚೀನ ಕಾಲದಲ್ಲಿ ಪ್ರಪಂಚದ ಕೆಲವು ಕಡೆ ಮಾನವ ಬೇಟೆಯೂ ಅಸ್ತಿತ್ವದಲ್ಲಿತ್ತೆಂದು ತಿಳಿಯಬಹುದು (ಪ್ರಾಚೀನ ಕಾಲದಲ್ಲಿ ಜಗತ್ತಿನ ಬೇರೆ ಬೇರೆ ಜನಾಂಗದವರಲ್ಲಿ 'ಮಾನವ ತಲೆ ಬುರುಡೆ' ಬೇಟೆಯು ಆಚರಣೆಯಲ್ಲಿದ್ದುದು ಕಂಡು ಬರುತ್ತದೆ. ಜೀವನದಲ್ಲಿ ಎಲ್ಲ ಅಂಶಗಳು ಮಾನವನ ತಲೆಬುರುಡೆಯಲ್ಲಿದೆ ಎಂಬ ನಂಬಿಕೆಯೇ ಈ ಪದ್ಧತಿಯ ಬೆಳವಣಿಗೆಗೆ ಕಾರಣವಾಗಿದೆ. ಏಷ್ಯಾದ ಪ್ರಾಚೀನ ಮಾನವ ತಲೆ ಬುರುಡೆ ಬೇಟೆಯ ಬಗ್ಗೆ ಹೆರೋಡಾಟಸ್ ವಿವರಿಸಿದ್ದಾನೆ. ಯುರೋಪಿನ ಬಾಲ್ಕನ್ ದ್ವೀಪದಲ್ಲಿ ಈ ಪದ್ಧತಿ ಇಪ್ಪತ್ತನೆಯ ಶತಮಾನದವರೆಗೂ ಬಳಕೆಯಲ್ಲಿತ್ತು. ಅಲ್ಲಿ ತಲೆಬುರುಡೆ ಬೇಟೆಯಾಡಿದವರಿಗೆ ಸಾಮಾಜಿಕವಾಗಿ ಗೌರವವಿತ್ತು. ಲೋಥ ಮತ್ತು ರೇಂಗ್ಮ ಜನಾಂಗದವರು 1880ರಲ್ಲಿ ತಲೆಬುರುಡೆ ಬೇಟೆಯನ್ನು ನಿಲ್ಲಿಸಿದರು. ಆದರೂ 1963 ಮತ್ತು 1969ರಲ್ಲಿ ಇಂಥ

ಘಟನೆಗಳು ನಡೆದಿವೆ.) ಬೇಟೆಯಾಡಿ ಪ್ರಾಣಿ-ಪಕ್ಷಿ-ಮೀನು ಇತ್ಯಾದಿಗಳನ್ನು ಕೊಲ್ಲುವವನಿಗೆ 'ಬೇಟೆಗಾರ' ಅಥವಾ 'ಮೃಗಯು' ಎಂದು ಹೆಸರು. ಬೇಟೆಯನ್ನೇ ಜೀವನಾವಶ್ಯಕ ವೃತ್ತಿಯನ್ನಾಗಿಸಿಕೊಂಡ ಜನಾಂಗವೊಂದಿದೆ. ಅವರಿಗೆ 'ಬೇಡರು' ಎಂಬ ಹೆಸರಿದೆ.

ಬೇಟೆಯಾಡುವ ಪ್ರವೃತ್ತಿ ಪ್ರಾಚೀನ ಕಾಲದಿಂದಲೇ ಅಸ್ತಿತ್ವದಲ್ಲಿತ್ತೆಂಬುದನ್ನು ಹಲವು ಆಧಾರಗಳಿಂದ ತಿಳಿಯಬಹುದು. ಆಹಾರ, ಸ್ವಯಂ ರಕ್ಷಣೆ, ಪ್ರಕೃತಿಯ ಸಮತೋಲನ, ಮನೋರಂಜನೆ, ಲಾಭದಾಯಕ ಉದ್ಯಮ-ಹೀಗೆ ಹಲವಾರು ಕಾರಣಗಳಿಂದ ಬೇಟೆ ಮಾನವ ಇತಿಹಾಸದ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿದೆ. ಮಾನವನ ಅಸ್ತಿತ್ವವನ್ನು ಎಲ್ಲಿ ಮತ್ತು ಯಾವಾಗ ಗುರುತಿಸಬಹುದೋ ಅಲ್ಲೇ ಬೇಟೆಯನ್ನೂ ಗುರುತಿಸಬಹುದಾಗಿದೆ. ಇದನ್ನು ಪ್ರಾಕ್ತನ ಅಧ್ಯಯನದಿಂದ ನಿರ್ಧರಿಸಬಹುದು.

ಪ್ರಕೃತಿಯಲ್ಲಿ ಜೀವಿಗಳ ದೈಹಿಕ ಬೆಳವಣಿಗೆಯಲ್ಲಿ ಆಹಾರ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪ್ರಾಚೀನ ಕಾಲದಲ್ಲಿ ಜೀವನ ನಿರ್ವಹಣೆಗೆ ಇಂದಿನಂತೆ ಆಹಾರದ ಹಲವು ಪರಿಕರಗಳು ಇರಲಿಲ್ಲ. ಅಂದು ಆಹಾರಕ್ಕೋಸ್ಕರ ಪ್ರಾಣಿ ಬೇಟೆ ಸಾರ್ವತ್ರಿಕವಾಗಿತ್ತು. ಇದನ್ನು ಪ್ರಾಚೀನ ಮಾನವನ ಉದ್ಯೋಗಗಳ ಶಾಸ್ತ್ರೀಯ ಅಧ್ಯಯನದಿಂದ ತಿಳಿಯಬಹುದು. ಪುರಾತನ ಕಾಲದಿಂದ ಇಲ್ಲಿಯವರೆಗೆ ಇರುವ ಮಾನವನ ಉದ್ಯೋಗವನ್ನು ಅಧ್ಯಯನ ಮಾಡಿ ನೋಡಿದರೆ ಮಾನವನ ಪ್ರಗತಿಯು ಅನಾಗರಿಕ ಸ್ಥಿತಿಯಿಂದ ಆಧುನಿಕ ಸ್ಥಿತಿಗೆ ಕ್ರಮಕ್ರಮವಾಗಿಯೂ ನಿಧಾನವಾಗಿಯೂ ಆಗಿರುವುದು ತಿಳಿದುಬರುತ್ತದೆ. ಮೊಟ್ಟಮೊದಲಿಗೆ ಮಾನವನು ಬೇಟೆಯಾಡುವ ಮೂಲಕ ಆಹಾರ ಸಂಗ್ರಹ ಮಾಡುವ ಸ್ಥಿತಿಯಲ್ಲಿದ್ದನು.

ಪ್ರಕೃತಿಯಲ್ಲಿ ಮಾಂಸವನ್ನು ಆಹಾರವನ್ನಾಗಿ ಉಪಯೋಗಿಸುವ ಜೀವಜಂತುಗಳು ಪರಸ್ಪರ ಒಂದನ್ನೊಂದು ತಿಂದು ಬದುಕುತ್ತವೆ. ಅವು ಚಕ್ರಾಕಾರದ ಆಹಾರಗೋಪುರವನ್ನು ಕಟ್ಟಿಕೊಂಡಿವೆ. ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ತಿನ್ನುವುದು, ಆ ಮೀನುಗಳನ್ನು ಅದಕ್ಕಿಂತ ಬಲಶಾಲಿ ಮೀನುಗಳು ಕಬಳಿಸುವುದು - ಈ ತಂತ್ರ ನಿಸರ್ಗದಲ್ಲಿ ಸಾಮಾನ್ಯ. ಈ ವಿಧಾನ ಪ್ರಾಣಿಗಳ ಹುಟ್ಟಿನೊಂದಿಗೆ ಬೆಳೆದು ಬಂದಿದೆ. ಆಹಾರಕ್ಕಾಗಿ ನಡೆಯುವ ಈ ಮೇಲಿನ ಕ್ರಿಯೆಯನ್ನು ಒಟ್ಟಾಗಿ 'ಪ್ರಕೃತಿಯ ಸಮತೋಲನ' ಎನ್ನಬಹುದು.

ಪ್ರಾಣಿಗಳು ಆಹಾರ ಸಂಪಾದಿಸುವ ಈ ಮೇಲಿನ ಉಪಾಯ ಅಥವಾ ವಿಧಾನವನ್ನು ಪ್ರಾಚೀನ ಮಾನವನೂ ಕರಗತ ಮಾಡಿಕೊಂಡಿರಬೇಕು. ಕೃಷಿಯು ಆದಿಮಾನವನ ಸಂಶೋಧನೆಗೆ ದೂರವಾಗಿದ್ದುದರಿಂದ ಆತ ಜೀವನೋಪಾಯಕ್ಕಾಗಿ ಈ ರೀತಿಯ ತಂತ್ರವನ್ನೇ ಅನುಸರಿಸಿರಬಹುದು. ಇದು ಅಂದಿನ ಪರಿಸರದಲ್ಲಿ ಸುಲಭವೂ ಆಗಿದ್ದಿರಬಹುದು. ಪ್ರಾಚೀನ ಕಾಲದಲ್ಲಿ ಮಾಂಸವನ್ನು ಸೇವಿಸಬಾರದೆಂಬ ಅಥವಾ ಆಹಾರ ಸೇವನೆಯಲ್ಲಿ ಯಾವುದೇ ನಿರ್ದಿಷ್ಟವಾದ ಕಟ್ಟುಪಾಡುಗಳು ಇದ್ದಂತೆ ಕಂಡುಬರುವುದಿಲ್ಲ. ಆಹಾರದ ಅನಿವಾರ್ಯತೆಯ ಎದುರು ಯಾವುದೇ ಧಾರ್ಮಿಕ, ಸಾಮಾಜಿಕ ನಿಯಂತ್ರಣ ಶಕ್ತಿಗಳು ಅಂದಿನ ಅನಾಗರಿಕ ಪ್ರಪಂಚದಲ್ಲಿ ಇದ್ದಿರಲಿಕ್ಕಿಲ್ಲ. ಕಾಲಕ್ರಮೇಣ ಕೃಷಿಯನ್ನು ಕಲಿತು ಮಾನವ ಸಂಸ್ಕೃತಿ ಮೇಲ್ತರಗತಿಯನ್ನು ಏರಿತು. ಸಸ್ಯಾಹಾರದ ಉತ್ಪಾದನೆ ಈ ಹಂತದಲ್ಲಿ ಹೆಚ್ಚಾಗಿ ಬೇಟೆಯು ತನ್ನ ಮೂಲ ಉದ್ದೇಶ ಅನಿವಾರ್ಯತೆಯಿಂದ ದೂರವಾಯಿತು.

ಪ್ರಾಚೀನ ಕಾಲದಲ್ಲಿ ಜೀವನಕ್ಕೋಸ್ಕರ ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡು ಬದುಕುತ್ತಿದ್ದ ಜನರನ್ನು ಹಲವು ಗುಂಪುಗಳಾಗಿ ವಿಂಗಡಿಸಬಹುದು. ಶಿಲಾಯುಗದಲ್ಲಿ ಕಂಡು ಬರುವ ಬೇಟೆಗಾರರನ್ನು ಕೀಳುತರಗತಿಯ ಬೇಟೆಗಾರರೆಂದು ಗುರುತಿಸಬಹುದು. ಈ ಹಂತದ ಬೇಟೆಗಾರರಿಗೆ 'ಕಿರಾತ'ರೆಂಬ ಹೆಸರಿದೆ. ಈ ಬೇಟೆ

ಗಾರರು ಪ್ರಪಂಚದ ಅಹಿತಕರವಾದ ಭೂಭಾಗಗಳಲ್ಲಿ ವಾಸಿಸುತ್ತಿದ್ದರೆಂದು ತಿಳಿಯಬಹುದು. ಇವರು ಪರ್ವತಗಳ ಗಹನವಾದ ದರಿ-ಕೊಳ್ಳಗಳಲ್ಲಿಯೂ ದಟ್ಟಡವಿಗಳಲ್ಲಿಯೂ ವಾಸವಾಗಿದ್ದರು. ಅವರಿಗೆ ನಿಶ್ಚಿತವಾದ ಮನೆಗಳಿರಲಿಲ್ಲ. ಸಿರಿವಂತ-ಬಡವರೆಂಬ ಭೇದವಿರಲಿಲ್ಲ, ನಾಯಕನಿರಲಿಲ್ಲ. ಅವರು ಗುಂಪು ಗುಂಪಾಗಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಿದ್ದರು. ಇವರ ದೈನಂದಿನ ಆಹಾರ ವ್ಯವಸ್ಥೆಯು ಹೀಗಿದೆ. ಬೇಟೆಯಾಡಿದ ಪಶುಪಕ್ಷಿಗಳ ಮಾಂಸದೊಂದಿಗೆ ನಿಸರ್ಗದಲ್ಲಿ ಸಹಜವಾಗಿ ದೊರೆಯುವ ಶಾಖಾಹಾರವನ್ನು ಕೂಡ ಇವರು ಸೇವಿಸುತ್ತಿದ್ದರು. ಬೇಟೆ ವಿಫಲವಾದಾಗ ಇರುವೆಗಳ ತತ್ತಿ, ಹುಳ, ಕಪ್ಪೆ, ಜೇನು, ಗೆಡ್ಡೆ-ಗೆಣಸು ಮೊದಲಾದವುಗಳನ್ನು ಸೇವಿಸುತ್ತಿದ್ದರು. ಈ ಹಂತದ ಬೇಟೆಗಾರರ ಜೀವನ ತೀರ ಅನಾಗರಿಕವಾದುದೆಂದು ಪ್ರಾಕ್ತನ ಸಂಶೋಧನೆಗಳು ತಿಳಿಸುತ್ತವೆ.

ಲೋಹಯುಗದ ಬೇಟೆಗಾರರನ್ನು ಎರಡನೆಯ ಹಂತದ ಬೇಟೆಗಾರರೆನ್ನಬಹುದು. ಇವರು ಮೇಲ್ತರಗತಿಯ ಬೇಟೆಗಾರರು. ಸುಧಾರಿಸಿದ ರೀತಿಯ ಪರಿಕರ-ವಿಧಾನಗಳಿಂದ ಬೇಟೆಯಾಡುತ್ತಿದ್ದ ಇವರು ಮೊದಲ ಬಾರಿಗೆ ಕಲ್ಲಿನ ಬದಲಾಗಿ ಲೋಹದ ಆಯುಧಗಳನ್ನು ಬೇಟೆಯಲ್ಲಿ ಬಳಸಿದರು. ಈ ಹಂತದಲ್ಲಿ ಮನುಷ್ಯನು ಉಳಿದ ಪ್ರಾಣಿಗಳಿಗಿಂತ ಭಿನ್ನವಾಗಿ ಪ್ರಗತಿ ಹೊಂದುತ್ತ ತನ್ನ ಬುದ್ಧಿ ಮತ್ತೆಯಿಂದ ಉಳಿದ ಪ್ರಾಣಿಗಳಿಗಿಂತ ಬುದ್ಧಿವಂತನಾಗಿ ಶಿಲಾಯುಗದಿಂದ ಲೋಹಯುಗಕ್ಕೆ ಕಾಲಿಟ್ಟನು. ಇವರು ಬೇಟೆಯಾಡಲು ಕಬ್ಬಿಣದ ಗುದ್ದಲಿ, ಕೊಡಲಿ, ಈಟಿ, ಖಡ್ಗಗಳನ್ನು ಉಪಯೋಗಿಸಲು ಆರಂಭಿಸಿದರು. ದೊರೆತ ಮಾಂಸವನ್ನು ಅರೆಬರೆ ಬೇಯಿಸಿ ತಿನ್ನುವುದು ರುಚಿಗೂ ಜೀರ್ಣಕ್ಕೂ ಒಳ್ಳೆಯದು ಎಂದು ಅರಿತುಕೊಂಡನು.

ಜಾಲಗಾರರು ಅಥವಾ ಮೀನುಬೇಟೆಗಾರರನ್ನೂ ಮೂರನೆಯ ಹಂತದ ಬೇಟೆಗಾರರೆಂದು ಗುರುತಿಸಬಹುದು. ಈ ಹಂತದಲ್ಲಿ ಪ್ರಾಣಿಗಳ ಬೇಟೆಯನ್ನು ಪ್ರಧಾನವಾಗಿ ಪರಿಗಣಿಸದೆ ಮೀನುಬೇಟೆಯನ್ನು ಮುಖ್ಯವಾಗಿ ಗುರುತಿಸಲಾಗಿದೆ. ಬೇಟೆಯಲ್ಲಿ ಇವರು ಎರಡನೆಯ ಹಂತದ ಜನರಿಗಿಂತ ಹೆಚ್ಚಿನ ಪ್ರೌಢಿಮೆಯನ್ನು ಹೊಂದಿದ್ದರು. ಅಮೇರಿಕದ ವಾಯುವ್ಯ ಭಾಗ, ಏಶಿಯಾದ ಸಮುದ್ರ ದಡದಲ್ಲಿರುವ ಮೀನುಗಾರರು ಈ ಗುಂಪಿನಲ್ಲಿ ಸೇರುತ್ತಾರೆ. ಆಧುನಿಕ ರೀತಿಯ ಸಲಕರಣೆಗಳನ್ನು ತಯಾರಿಸಿ ಇವರು ಬೇಟೆಯಲ್ಲಿ ಬಳಸುತ್ತಿದ್ದರು.

ಮಾನವ ಇತಿಹಾಸದಲ್ಲಿ ಬೇಟೆಯ ಪ್ರಾಚೀನತೆಯನ್ನು ಹಲವಾರು ಆಧಾರಗಳಿಂದ ನಿರ್ಧರಿಸಬಹುದು.

1. ಪ್ರಪಂಚದ ನಾಗರಿಕತೆಯ ಪ್ರಾಗೈತಿಹಾಸದ ಕಾಲದ ಅನೇಕ ಆಯುಧಗಳು ಉಪಕರಣಗಳು ಎಲುಬುಗಳು ದೊರಕಿವೆ. ಇಂಥ ಎಲುಬುಗಳು ಅರ್ಧಮರ್ಧ ಸುಟ್ಟಂತಹವೂ, ಒಡೆಯದಂತಹವೂ, ಮನುಷ್ಯರ ಹಲ್ಲುಗಳಿಂದ ಕಡಿದಂತಹವುಗಳೂ ಆಗಿವೆ. ಫ್ರಾನ್ಸ್ ದೇಶದ ಸೋಲಾತ್ರೆ ಎಂಬುದೊಂದು ಸ್ಥಳದಲ್ಲಿ ಪುರಾತನ ಕ್ರೋಮ್ಯಾಗ್ನನ್' ಎಂಬ ಜನರು ಆಡಿದಂತಹ ಬೇಟೆಯ ದಾಖಲೆಗಳು ಸಿಗುತ್ತವೆ. ಅದೊಂದೇ ಸ್ಥಳದಲ್ಲಿ ಒಂದು ಲಕ್ಷ ಪ್ರಾಣಿಗಳ ಎಲುಬು ಸಿಗುತ್ತವೆ. ಈ ರೀತಿಯ ಆಧಾರಗಳಿಂದ ಪ್ರಾಕ್ತನ ವಿದ್ವಾಂಸರು ಆದಿ ಮಾನವ ಬೇಟೆಗಾರನೆಂಬ ತೀರ್ಮಾನಕ್ಕೆ ಬಂದಿದ್ದಾರೆ.

2. ಪ್ರಸ್ತುತ ಜಗತ್ತಿನ ಯಾವುದೇ ಭಾಗದಲ್ಲಿಯೂ ಮನುಷ್ಯ ಮಾಂಸದ ಸೇವನೆಯನ್ನು ಬಿಟ್ಟುಕೊಟ್ಟಿಲ್ಲ. ಕೆಲವೊಂದು ಕಾರಣಗಳಿಂದ ಪ್ರಪಂಚದಲ್ಲಿಂದು ಕಡಿಮೆ ಸಂಖ್ಯೆಯಲ್ಲಿ ಶಾಖಾಹಾರಿಗಳಿರಬಹುದು. ಆರೋಗ್ಯ, ಸಾಮಾಜಿಕ, ಧಾರ್ಮಿಕ ಮುಂತಾದ ಕಾರಣಗಳಿಂದ ಇವರು ಶಾಖಾಹಾರಿಗಳಾಗಿದ್ದಿರಬಹುದು.

3. ಮನುಷ್ಯನ ದೈಹಿಕ ರಚನೆ ಅವನ ಆಹಾರ ಪದ್ಧತಿಯನ್ನು ವಿವರಿಸುತ್ತದೆ. ಮಾಂಸಾಹಾರವನ್ನು ಸೇವಿಸುವವರ ಹಲ್ಲು ಅಥವಾ ಶಾಖಾಹಾರ ಮತ್ತು ಮಾಂಸಾಹಾರದ ಸಂಮಿಶ್ರಣ

ವನ್ನು ಸೇವಿಸುವರ ಹಲ್ಲು ಮೇಲ್ತರಗತಿಯ ಮಂಗನ ಹಲ್ಲಿನ ಲಕ್ಷಣವನ್ನು ಹೊಂದಿರುತ್ತದೆ. ಮಾನವ ಮಾಂಸಾಹಾರಿ ಎಂಬುದಕ್ಕೆ ಇದೊಂದು ವೈಜ್ಞಾನಿಕ ಕಾರಣವಾಗಿದೆ.

4. ಚಿಕ್ಕಮಕ್ಕಳು ಆಡುವ ಆಟಗಳಲ್ಲಿ ಬೇಟೆಯಲ್ಲಿರುವ ಕೆಲವೊಂದು ಕೌಶಲಗಳಿರುತ್ತವೆ. ಹರಿದಾಡುವ ಚಿಕ್ಕಕೀಟಗಳನ್ನು, ಪ್ರಾಣಿಗಳನ್ನು ಬೇಟೆಯಾಡುವುದು ಚಿಕ್ಕಮಕ್ಕಳಲ್ಲಿ ಸಹಜವಾಗಿಯೇ ಕಂಡುಬರುತ್ತದೆ. ಜೇಡ, ಹಲ್ಲಿ, ಹಾವುಗಳು ಬೇಟೆಯಾಡುವುದನ್ನು ನೋಡಿ ಕುತೂಹಲಕಾರಿಯಾದ ಮಕ್ಕಳು ಕೀಟ, ಪತಂಗ, ಪಕ್ಷಿಗಳನ್ನು ಬೆನ್ನಟ್ಟುವ ರೀತಿ ಪ್ರಾಣಿ ಬೇಟೆಯನ್ನು ಹೋಲುತ್ತದೆ.

5. ಬೇಟೆಯ ಪ್ರವೃತ್ತಿ ಬೇರೆ ಬೇರೆ ದೇಶದ ಭಾಷೆಯ ಸಾಹಿತ್ಯದಲ್ಲೂ ಹಾಸುಹೊಕ್ಕಾಗಿ ಪ್ರಾಚೀನಕಾಲದಿಂದ ಇಂದಿನವರೆಗೆ ತಲೆದೋರುತ್ತಾ ಬಂದಿದೆ. ಆಹಾರ, ಸ್ವಯಂರಕ್ಷಣೆ, ವಿನೋದದ ಮಾಧ್ಯಮವಾದ ಬೇಟೆ ಕಾಲಕ್ರಮದಲ್ಲಿ ರಾಜರ-ಸಾಮಂತರ ಆಶ್ರಯದಲ್ಲಿ ಬೆಳೆದು ರಾಜಾಶ್ರಯದ ಕಾವ್ಯದಲ್ಲೂ ಸ್ಥಾನಪಡೆದಿದೆ. ಬೇರೆ ಬೇರೆ ಕಾಲಘಟ್ಟದಲ್ಲಿ ರಾಜರ ಆಡಳಿತಾವಧಿಯಲ್ಲಿ ಬೇಟೆ ಹೇಗಿತ್ತೆಂಬುದನ್ನು ಆಯಾಕಾಲದ ಸಾಹಿತ್ಯದಿಂದ ತಿಳಿಯಬಹುದು. ಬೇಟೆಯ ಉದ್ದೇಶ-ವಿಧಿ-ವಿಧಾನಗಳು ಹೇಗೆ ವಿಕಸನ ಹಾಗೂ ಬೆಳವಣಿಗೆಯನ್ನು ಹೊಂದಿವೆ ಎಂಬುದನ್ನು ಇಂಥ ಗ್ರಂಥಗಳಿಂದ ತಿಳಿಯಬಹುದು.

6. ಬೇಟೆಯ ತಂತ್ರಗಳಲ್ಲಿ ಒಂದೆನ್ನಲಾದ ಪ್ರಾಚೀನ ಗುಹಾಚಿತ್ರಗಳು ಆದಿಮಾನವನ ಬೇಟೆಯ ನೈಪುಣ್ಯತೆಯನ್ನು ತಿಳಿಸುತ್ತವೆ.

7. ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಿ ಬೇಟೆಯ ಉಲ್ಲೇಖವಿದೆ.

8. ಭಾಷಾವಿಜ್ಞಾನದ ದೃಷ್ಟಿಯಿಂದಲೂ ಮಾನವ ಮಾಂಸಾಹಾರಿ ಎಂದು ನಿರ್ಧರಿಸಲು ಸಾಧ್ಯವಿದೆ. ಮಧ್ಯ ಆಫ್ರಿಕಾದಲ್ಲಿ ಆಹಾರಕ್ಕೆ 'ಥಾ' (THA) ಎಂಬರ್ಥವಿದೆ. ಇದೇ ಪರಿಸರದಲ್ಲಿ 'ಥಾ' ಎನ್ನುವ ಪದಕ್ಕೆ ದನಕರು-ಪಶುಗಳೆಂಬ ಅರ್ಥವಿದೆ. ಇದೇ ಪ್ರದೇಶದಲ್ಲಿ 'ಥು' ಎಂದರೆ 'ಮಾಂಸ' ಎಂದರ್ಥ. ಆಫ್ರಿಕಾದ ಕೆಲವು ಕಡೆ ಪಶು ಮತ್ತು ಮಾಂಸ ಎಂಬುದಕ್ಕೆ ಒಂದೇ ಪದವಿದೆ. ಅಲ್ಲಿಯ ಜನರು ಮೀನುಗಳಿಗೆ ನೀರಮಾಂಸ ಎಂದು ಕರೆಯುತ್ತಾರೆ. ಈ ಸಂಬಂಧದಿಂದಾಗಿ ಮಾಂಸ-ಪ್ರಾಣಿ ಎಂಬ ಶಬ್ದಗಳಿಂದ ದ್ಯೋತಕವಾಗುವ ಅರ್ಥ ಆಹಾರ ಆಗಿರಬಹುದೆಂದು ನಿರ್ಧರಿಸಲು ಸಾಧ್ಯವಿದೆ. ಭಾಷಾ ವಿಜ್ಞಾನದ ದೃಷ್ಟಿಯಿಂದ ಮಾನವ ಮಾಂಸಾಹಾರಿ ಎಂಬ ಈ ಮೇಲಿನ ನಿರ್ಧಾರ ಎಲ್ಲ ಕಾಲಕ್ಕೂ ಎಲ್ಲ ದೇಶಕ್ಕೂ ಸತ್ಯವಾಗಲಾರದು. ●

ಭಗವಂತನ ತರುವಾಯ ನಾವು ಋಣಿಯಾಗಿರಬೇಕಾದದ್ದು ಸ್ತ್ರೀಯರಿಗೆ. ಕಾರಣ- ಒಂದು ಜನ್ಮ ಕೊಟ್ಟದ್ದಕ್ಕಾಗಿ, ಎರಡು ಬದಕನ್ನು ಹಸನುಗೊಳಿಸಿದ್ದಕ್ಕೆ.

-ಬೋವಿ

ಪ್ರೀತಿಸಲು ಬುದ್ಧಿವಂತಿಕೆ-ಅನುಭವ-ವಾದನಗಳ ಅಗತ್ಯವಿಲ್ಲ. ಯೌವನದಲ್ಲಿ ಅದೊಂದು ತಿರುತಿರೆ.

-ಬ್ರಿಸೋ ಲೆಸ್ಸಿಂಗ್

ನಮ್ಮಲ್ಲಿ ತಪ್ಪುಗಳು ಇಲ್ಲದಿರುವಾಗ ಬೇರೆಯವರ ಬಗ್ಗೆ ಫಿರ್ಯಾದು ಮಾಡಿದಾಗ ನಮಗೆ ಸಂತೋಷ ಉಂಟಾಗುವುದಿಲ್ಲ-ನಮ್ಮಲ್ಲಿ ಲೋಪಗಳು, ತಪ್ಪುಗಳು ರಾಶಿಯಾಗಿದ್ದಾಗ ಮಾತ್ರ ಇತರರ ಬಗ್ಗೆ ಹೇಳಿ ಸಂತೋಷಪಡುತ್ತೇವೆ.

-ಫಿನ್‌ಲೋವ್

(ಸಂಗ್ರಹ) ಪಿ. ಶ್ರೀಕಾಂತ್


ದೇವರ ಸೇವೆಯಲ್ಲಿ ವಿವಿಧ ವಾದ್ಯಗಳು

ಎಸ್. ರೋಹಿಣಿ ಶರ್ಮಾ

ಅತಿ ಪ್ರಾಚೀನ ಕಾಲದಿಂದಲೂ ಮಾನವ ಪೂಜೆಗಾಗಿ, ಪ್ರಾರ್ಥನೆಗಾಗಿ ದೇವರ ಮೂರ್ತಿಗಳನ್ನು, ಇತರ ಆರಾಧ್ಯ ವಸ್ತುಗಳನ್ನು ಸ್ಥಾಪಿಸಿ ರಕ್ಷಿಸುವುದಕ್ಕಾಗಿ ವಿಶಿಷ್ಟವಾದ ಶೈಲಿಯಿಂದ ಕಟ್ಟಡ ನಿರ್ಮಿಸಿ "ದೇವಾಲಯ" ಅಥವಾ "ದೇವಸ್ಥಾನ" ಎಂಬ ಅಂಕಿತದಿಂದ ಧಾರ್ಮಿಕ ಕ್ರಿಯಾ ವಿಧಿಗಳನ್ನು ಅನೂಚಾನವಾಗಿ ನಡೆಸಿಕೊಂಡೇ ಬಂದಿದ್ದಾನೆ.

ಭಾರತವೊಂದೇ ಐದುನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಾದ್ಯಗಳನ್ನು ಸೃಷ್ಟಿಸಿದೆ. ಅವುಗಳಲ್ಲಿ ದೇವಸ್ಥಾನಗಳಲ್ಲಿ ಪ್ರಾಚೀನ ಕಾಲದಿಂದಲೂ ಉಪಯೋಗಿಸುವ ವಾದ್ಯಗಳದ್ದೇ ಒಂದು ವಿಶಿಷ್ಟ ಪ್ರಕಾರ.

ದೇವಾಲಯಗಳ ಉತ್ಸವಗಳಲ್ಲಿ ಶೋಭಿಸುವ ಈ ಸೇವಾವಾದ್ಯಗಳನ್ನು ಬಾರಿಸುವುದು ಕೆಲವರಿಗೆ ಕುಲಕಸುಬು. ಈಗೀಗ ಮ್ಯೂಸಿಯಂಗಳಲ್ಲಿ ಮಾತ್ರ ಕಂಡುಬರುತ್ತಿರುವ ಈ ವಾದ್ಯಗಳ ವಿಸ್ತೃತ ಪರಿಚಯ ಇಲ್ಲಿದೆ.



ಚಿತ್ರ; ರವಿರಾಜ ಹಾಲಂಬಿ







ಅಂತೆಯೇ ಅತ್ಮಾನಂದವೋ, ಅತಿ ಭಕ್ತಿಯೋ ಅಥವಾ ಅತಿ ಸಂಭ್ರಮ- ಸಂತೋಷವೋ ಆದಾಗ ಮಾನವ ಅಂಥವನ್ನು ಅಭಿವ್ಯಕ್ತಿಸದೇ ಸುಮ್ಮನಿರುವಂತಿಲ್ಲ; ಸುಮ್ಮನಿರಬಾರದೂ ಕೂಡ. ಒಮ್ಮೆ ಬರಿದೆ ಕೂಗಬಹುದು, ಮತ್ತೊಮ್ಮೆ ಶರೀರದ ವಿವಿಧ ಅಂಗಗಳ ಸಹಾಯದಿಂದ ಅಭಿವ್ಯಕ್ತಿಸಬಹುದು. ಮಗದೊಮ್ಮೆ ಆಧುನಿಕ ಸಲಕರಣೆಗಳ ಮೂಲಕವೇ ಹೊರಹೊಮ್ಮಿಸಬಹುದು. ಆದರೆ ದೇವಾಲಯಗಳಲ್ಲಿ ಭಕ್ತಿಯ ದ್ಯೋತಕವಾಗಿ ಬಂದ ಪರಂಪರೆ ಅಥವಾ ಪದ್ಧತಿ ಎಂದರೆ ದೇವಾಲಯಗಳಲ್ಲಿರುವ ವಿವಿಧ ರೀತಿಯ ವಾದ್ಯಗಳು, ನಾನಾ ರೀತಿಯ ಡೋಲು-ಡಮರುಗಳು ಮುಂತಾದವುಗಳೇ.

ಸಂಗೀತ ವಾದ್ಯಗಳ ಉಗಮ

ಆದಿ ಮಾನವ ಶತ್ರುವಿನ ಆಗಮನ ಮತ್ತು ಅಪಾಯಗಳ ಮುನ್ಸೂಚನೆ ಕೊಡಲು ಬಿಲ್ಲಿನ ಹೆದೆಯನ್ನು ಎಳೆದು ಧನುಷ್ಟಂಕಾರ ಮಾಡಿದಾಗ ಉಂಟಾದ ನಾದದಿಂದ ತಂತಿ ವಾದ್ಯದ ಆವಿಷ್ಕಾರವಾದರೆ, ಸ್ವೇಚ್ಛೆಯಾಗಿ ಕಾಡಿನಲ್ಲಿ ಅಲೆದಾಡುತ್ತಿದ್ದ ಮಾನವನಿಗೆ ಗಾಳಿ ಬೀಸಿದಾಗ ಬಿದಿರ ಮೆಳೆಯಿಂದ ಉಂಟಾದ ಸುನಾದ ಕೊಳಲಿನ ಹುಟ್ಟಿಗೆ ಪ್ರಕೃತಿ ಅಪರೋಕ್ಷವಾಗಿ ಸಹಕರಿಸಿ ಅದರ ಉದಯಕ್ಕೆ ನಾಂದಿ ಹಾಡಿತು. ಅಂತೆಯೇ ಗುಹೆಯ ಮುಂದೆ ಕೂಗಿದಾಗ ಉಂಟಾದ ಪ್ರತಿಧ್ವನಿ ಅಚ್ಚರಿಯುಂಟುಮಾಡಿ ಲಯ ಅಥವಾ ತಾಡನ ವಾದ್ಯದ ಸೃಷ್ಟಿಗೆ ಪ್ರಚೋದನೆ ದೊರೆತು ಭೇರಿ ಅಥವಾ ತಮಟೆ ಸೃಷ್ಟಿಯಾಯಿತೆಂದು ಪ್ರಾಗೈತಿಹಾಸಕಾರರು ನುಡಿಯುತ್ತಾರೆ.


ಹೇಗೇ ಇರಲಿ, ತಾಡನ ವಾದ್ಯ, ಮರುದ್ವಾದ್ಯ, ತಂತಿ ವಾದ್ಯಗಳೆಂದು ಮೂರು ವಿಧವಾಗಿ ವಿಂಗಡಿಸಬಹುದು. ವೇದ ಪುರಾಣಗಳ ಕಾಲದಿಂದ ಹಿಡಿದು ಕಾಳಿದಾಸ, ಬಾಣ ಮುಂತಾದ ಮಹಾ ಕವಿಗಳು ತಮ್ಮ ಕಾವ್ಯದಲ್ಲಿ ಗಾನ ವಾದ್ಯಗಳ ಹೆಸರನ್ನು ಉಲ್ಲೇಖಿಸಲು ಮರೆತಿಲ್ಲ. ಹರಪ್ಪಾ-ಮಹೆಂಜದಾರೋ ಅವಶೇಷಗಳಲ್ಲೂ ಕೊಳಲು-ತಂತಿ ವಾದ್ಯಗಳು ದೊರೆತಿವೆ. ಪ್ರಾಚ್ಯ ವಸ್ತು ಪ್ರದರ್ಶನಾಲಯ, ದೇವಸ್ಥಾನದ ಸ್ತಂಭ-ಶಿಲಾಫಲಕ-ಪ್ರಾಚೀನ ನಾಣ್ಯಗಳಲ್ಲಿ ಅಚ್ಚಾಗಿರುವ ವಾದ್ಯಗಳ ಪಡಿ ಅಚ್ಚಿನಿಂದಾಗಿ ಭಾರತವೊಂದೇ ಐದು ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಾದ್ಯಗಳನ್ನು ಸೃಷ್ಟಿಸಿದೆ ಎಂದು ತಿಳಿದು ಬರುತ್ತದೆ. ಹೆಚ್ಚು ಬಳಕೆಯಲ್ಲಿರುವ ವಾದ್ಯಗಳು, ಸಂಗೀತ ಕಛೇರಿಯ ವಾದ್ಯಗಳೆಂದು ಪುನಃ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಹೆಚ್ಚು ಬಳಕೆಯಲ್ಲಿರುವ ವಾದ್ಯಗಳ ಸಾಲಿಗೆ ಜನಪದ ಸಂಗೀತದಲ್ಲಿ ಉಪಯೋಗಿಸುವ ವಾದ್ಯಗಳು, ರಣವಾದ್ಯಗಳು, ದೇವಸ್ಥಾನದಲ್ಲಿ ಉಪಯೋಗಿಸುವ ಸೇವಾವಾದ್ಯಗಳು ಎಂಬುದಾಗಿ ಮರು ವಿಂಗಡನೆ ಮಾಡಬಹುದು.


ದೇವಸ್ಥಾನದ ಸೇವಾ ವಾದ್ಯಗಳು

ಭೂರಿ, ತುತ್ತೂರಿ, ಕೊಂಬು, ಶಂಖ, ಶುದ್ಧ ಮದ್ದಳೆ, ಡಮರು, ಡೋಲು, ನಗಾರಿ, ನಾಗಸ್ವರ, ಜಾಗಟೆ, ಜಾಲರಿ, ಪಂಚಮುಖ ವಾದ್ಯಗಳು ಸೇವಾ ವಾದ್ಯಗಳು.

ಉತ್ಸವ, ಆಯಸೋತ್ಸವ, ರಥೋತ್ಸವ ಮುಂತಾದ ವಿಶೇಷ ಸಂದರ್ಭದಲ್ಲಿ ದೇವರನ್ನು ರಥ ಬೀದಿಗಳಲ್ಲಿ ಸುತ್ತಿಸಿ ಕೊನೆಗೆ ಯಥಾಸ್ಥಾನದಲ್ಲಿ ಸ್ಥಾಪಿಸಿ ಮಂಗಲ ಹಾಡುವ ಮುನ್ನ "ಅಷ್ಟಾಂಗ ಸೇವಾ" ಕಾರ್ಯ ನಡೆಯುವುದು "ಅಷ್ಟಾಂಗ ಸೇವಾ" ಕಾರ್ಯದಲ್ಲಿ ಸೇವಾ ವಾದ್ಯಗಳನ್ನೆಲ್ಲಾ ಒಟ್ಟುಗೂಡಿಸಿ ಸೇವೆ ನಡೆಸುತ್ತಾರೆ ಮತ್ತೆ ಕೆಲವು ಸುಪ್ರಸಿದ್ಧ ದೇವಸ್ಥಾನಗಳಲ್ಲಿ ಪ್ರತಿದಿನ ಸೇವಾ ವಾದ್ಯಗಳ ಸೇವೆ ಆಗಲೇಬೇಕು. ನಗಾರಿ, ಜಾಗಟೆ ಮುಂತಾದವುಗಳನ್ನು ಸೇವಾರ್ಥಿಗಳು ಸ್ವಇಚ್ಛೆಯಿಂದ ಸೇವೆ ಸಲ್ಲಿಸುವವರೂ ಇದ್ದಾರೆ. ಮತ್ತೆ ಕೆಲವು ವಂಶ ಪಾರಂಪರ್ಯವಾಗಿ ನಡೆಸಿಕೊಂಡು ಬಂದ ಕೆಲ ಕುಲ ಕಸುಬಿನವರು ಪ್ರತಿದಿನ ಬೆಳಗ್ಗೆ ದೇವಸ್ಥಾನದಲ್ಲೇ ತಮ್ಮ ಅಭ್ಯಾಸ ನಡೆಸಿ ಸೇವೆ ಪೂರೈಸುತ್ತಾರೆ.

ಕ್ರಮವಾಗಿ ದೇವಸ್ಥಾನದ ಸೇವಾ ವಾದ್ಯಗಳನ್ನು ವಿವರಿಸುತ್ತಾ ಹೋದರೆ ಅವರ ಅಳ-ಅರಿವು ಅಚ್ಚರಿ ಮೂಡುವಷ್ಟು ಸಮೃದ್ಧವಾಗಿದೆ.





ಇದೊಂದು ನಗಾರಿ


ಇದು ಒಂದು ದೊಡ್ಡ ಆಕಾರದ ಚರ್ಮ ವಾದ್ಯ, ತಾಮ್ರ ಅಥವಾ ಹಿತ್ತಾಳೆಯ ರೇಕುಗಳನ್ನು ಮೊಳೆಗಳಿಂದ ಜೋಡಿಸಿ ಬೋಗಣಿ ಆಕಾರವಾಗಿ ತಯಾರಿಸುತ್ತಾರೆ. ಈ ಪಾತ್ರೆಯ ಮೇಲ್ಭಾಗಕ್ಕೆ ಹದ ಮಾಡಿದ ಕುರಿ-ಆಡು ಅಥವಾ ಎಮ್ಮೆಯ ಚರ್ಮವಾದರೂ ಆದೀತು. ಅದರ ಚರ್ಮವನ್ನು ಬಾಯಿಗೆ ಬಿಗಿದು ಜೋಡಿಸುತ್ತಾರೆ. ಪಾತ್ರೆಯ ಅಳತೆಗೆ ತಕ್ಕ ಹಾಗೆ ಲೋಹದ ಬಳೆಗಳನ್ನು ಜೋಡಿಸುವರು. ಒಳಗೆ ವಿಶಾಲವಾದ ಆವರಣ ಏರ್ಪಡುವುದರಿಂದ ನಗಾರಿ ಬಾರಿಸುವ ಕಡ್ಡಿಗಳಿಂದ ಬಡಿದಾಗ ಗಂಭೀರವಾದ ಧ್ವನಿ ಉಂಟಾಗುತ್ತದೆ. ನಗಾರಿ ಕಡ್ಡಿ ಕೆಲವು ನೇರವಾಗಿದ್ದರೆ ಇನ್ನು ಕೆಲವು ಕಮಾನಾಗಿ ಬಾಗಿರುತ್ತದೆ.


ಹಿಂದೆ ರಾಜನ ಆಸ್ಥಾನ, ಮಠಾಧೀಶರ ಸಂಸ್ಥಾನ, ದೇವಸ್ಥಾನಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿತ್ತು. ಕೋಟೆಯ ಎತ್ತರದ ಬುರುಜಿನ ಮೇಲೆ ನಿಂತ ನಗಾರಿಯವನು ವೈರಿಗಳು ಬರುವ ಸೂಚನೆಯನ್ನು ನಗಾರಿ ಬಾರಿಸುವುದರ ಮೂಲಕ ಮುನ್ಸೂಚಿಸಿ ಸೈನಿಕರಿಗೆ ಸ್ಫೂರ್ತಿ ತುಂಬುತ್ತಿದ್ದಂತೆ. ಗೆದ್ದು ಬಂದ ರಾಜರು ವಿಜಯೋತ್ಸವ ಆಚರಿಸುವಾಗ ಸಂಭ್ರಮದ ಸಂಕೇತವಾಗಿ ಬಳಸುತ್ತಿದ್ದರು. ದೇವರ ಉತ್ಸವಗಳಲ್ಲಿ ಮಂಗಳ ವಾದ್ಯವೂ ಹೌದು. ಗೌರವ, ಘನತೆಗಳ ಸಂಕೇತವೂ ಕೂಡ. ಮಠಾಧಿಪತಿಗಳ ದೇವರ ಪೂಜೆ ಮುಂಚೆ ಈ ವಾದ್ಯ ಬಾರಿಸಲ್ಪಡುತ್ತದೆ. ಕೆಲವು ದೇವಸ್ಥಾನಗಳಲ್ಲಿ ಉತ್ಸವದ ಮುಂದೆ ಜೋಡಿ ಎತ್ತಿನ ಮೇಲೆ ನಗಾರಿ ಬಾರಿಸುತ್ತಾ ಹೋಗುತ್ತಾರೆ. ಇದು ದೇವರು ಬಂದಿತೆನ್ನುವುದಕ್ಕೆ ಮುನ್ಸೂಚನೆ. ನಗಾರಿ ಬಡಿಯುವುದೂ ಒಂದು ಕಲೆ. ಜೋಡಿ ನಗಾರಿಯೂ ಇರುತ್ತದೆ. ಅಂಥ ನಗಾರಿಯಲ್ಲಿ ಒಂದು "ಕಣೆ ಕಣೆ" ದನಿ ನೀಡಿದರೆ ಇನ್ನೊಂದು ಗಂಭೀರ ಧ್ವನಿ ಕೊಡುತ್ತದೆ. ಲಯ ಬದ್ಧವಾಗಿ ಬಡಿದಾಗಲೇ ಅದರ ಸೊಗಸು. ರಣರಂಗದ ನಗಾರಿಕೆ ಭೇರಿ-ದುಂದುಭಿಯೆಂದು ಕರೆಯುತ್ತಾರೆ. ಹೀಗೆ ನಗಾರಿ ರಾಜಕೀಯ ಧಾರ್ಮಿಕಗಳೆರಡು ಸಂಬಂಧಗಳನ್ನು ಹೊಂದಿದ ಘನ ವಾದ್ಯವಾಗಿದೆ.

ಕೊಂಬು

ಜಾತ್ರೆ, ಉತ್ಸವಗಳಲ್ಲಿ ಮೊದಲ ಸ್ಥಾನ ಕೊಂಬು ಕಹಳೆಗೆ, ಜಿಂಕೆ, ಎತ್ತಿನ ಅಥವಾ ಕೋಣನ ಕೊಂಬಿನಿಂದ ಮಾಡಿದ ಅತಿ ಪ್ರಾಚೀನವಾದ ಸುಷಿರ ವಾದ್ಯ. ಗ್ರಾಮಾಂತರ ಪ್ರದೇಶದಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ

ಇರುವ ದೂರವನ್ನು "ಇಷ್ಟು ಕೊಂಬಿನ ಕೂಗು" ಎಂದೇ ಗುರುತಿಸುತ್ತಾರೆ. ಕೊಂಬಿನ ಕೂಗು ಬಹಳ ದೂರದವರೆಗೂ ಪಸರಿಸುತ್ತರೆ ಎಂದರ್ಥ. ಕೋಡಿನಿಂದ ತಯಾರಾಗುವುದರಿಂದ "ಶೃಂಗಿ" ಎಂದೂ ಕರೆಯುವರು. ಉತ್ಸವ, ಮೆರವಣಿಗೆಯಲ್ಲಿ ಮುನ್ಸೂಚನೆಯ ಸಂಕೇತವಾಗಿ ಕೊಂಬನ್ನು ಈಗಲೂ ಬಳಸುತ್ತಾರೆ. ಮೊದಲು ಪ್ರಾಣಿಯ ಕೊಂಬಿನಿಂದ ತಯಾರಾದ ಕೊಂಬನ್ನು ದೇವಸ್ಥಾನಗಳಲ್ಲಿ ಬಳಸುತ್ತಿರಲಿಲ್ಲ. ಆದರೆ ಕ್ರಮೇಣ ಲೋಹದಿಂದ ತಯಾರಾದ ಕೊಂಬುಗಳು ಬಂದ ಮೇಲೆ ದೇವಸ್ಥಾನಗಳಲ್ಲಿ ಅದಕ್ಕೂ ಒಂದು ಸ್ಥಾನಮಾನ ದೊರಕಿತು. ಅರ್ಧ ಚಂದ್ರಾ





ಕೃತಿ (S) (ಆಕಾರ)ಯಲ್ಲಿದ್ದು ಆರು ಅಡಿ ಉದ್ದದವರೆಗೂ ಕೊಂಬಿನ ಅಳತೆಗಳಿರುತ್ತವೆ. "ಭೂರಿ" " ಶ್ರೀಚರಣ"ಗಳೆಂದೂ ಕರೆಯುವ ಕೊಂಬು ದೇವಸ್ಥಾನ, ಗುರುಪೀಠಕ್ಕೆ ಮೀಸಲು. "ಎಕ್ಕಲಂ" ಎನ್ನುವ ಉದ್ದವಾದ ಕೊಂಬನ್ನು ದೇವರ ಮೆರವಣಿಗೆಯಲ್ಲಿ ಉಪಯೋಗಿಸುತ್ತಾರೆ. ಹರಿ ದಾಸರ್ು ಉಪಯೋಗಿಸುವ ಕೊಂಬಿಗೆ ಶ್ರೀಚರಣ. ಈಶ್ವರನ ವಾದ್ಯವೆಂದು ಪರಿಗಣಿಸಲ್ಪಡುವ ಈ ವಾದ್ಯ ಊದಲು ಶಕ್ತಿಬೇಕು. ಉದ್ಯೋಗಿ ಕಲೆಯೂ ಆಗಿದ್ದು ವಂಶಪಾರಂಪರೆಯಾಗಿ ನಿರ್ದಿಷ್ಟ ಜನಾಂಗದವರು ಮಾತ್ರ ನುಡಿಸುತ್ತಾರೆ.

ಶಂಖ

ಶಂಖಚೂಡನೆಂಬ ರಾಕ್ಷಸನನ್ನು ಶಿವನು ಕೊಂದು ಅವನ ಎಲುಬುಗಳನ್ನು ಸಮುದ್ರಕ್ಕೆಸೆದಾಗ ಆ ಎಲುಬುಗಳಿಂದ ಶಂಖ ಉತ್ಪನ್ನವಾಯಿತೆಂದು ಒಂದು ಕಥೆ ಇದೆ. ಶಂಖ ಕ್ರಿ.ಪೂ. ಮೂರನೇ ಶತಮಾನಕ್ಕೆ ಮೊದಲೆ ಬಳಕೆಯಲ್ಲಿದ್ದ ಮಂಗಳವಾದ್ಯ. ಶಂಖದಿಂದ ನೀರು ಬಿದ್ದಾಗಲೇ ದೇವರ ತೀರ್ಥವಾಗುವುದು. ಶ್ರೀ ವಿಷ್ಣುವಿನ ಪೂಜೆಗೆ ಶಂಖ ಹಾಗೂ ತುಳಸಿ ಎರಡೂ ಇರಲೇಬೇಕು. ಎಡಮುರಿ- ಬಲಮುರಿ ಎಂದು ಎರಡು ವಿಧ. ದೇವರ ಪೂಜೆ ಮಾಡುವಾಗ ಶಂಖ ಊದಿದರೆ ಮಂಗಲದಾಯಕ ಹಾಗೂ ಸಕಲ ಪಾಪ ಪರಿಹಾರವೆಂಬ ನಂಬುಗೆಯಿದೆ. ಮಹಾಭಾರತದಲ್ಲಿ ಶ್ರೀಕೃಷ್ಣ ಪಾಂಚಜನ್ಯವೆಂಬ ಶಂಖ ಊದಿ ಕೌರವ ಸೇನೆಯನ್ನು ತಲ್ಲಣಗೊಳಿಸಿದ ಎಂದು ಮಹಾಭಾರತದಲ್ಲಿ ವರ್ಣನೆಯಿದೆ. ಅಂದ ಹಾಗೆ ಯುದ್ಧ ವಾದ್ಯವೂ ಹೌದೆಂತಾಯಿತು. ಶಂಖ ಆರೋಗ್ಯದಾಯಕವಾಗಿರುವುದರಿಂದ ಸಣ್ಣ ಸಣ್ಣ ಶಂಖವನ್ನೂ ಮಾಲೆಯಾಗಿ ಧರಿಸಿ ಅದರ ನೀರು ಮೈ ಮೇಲೆ ಬೀಳುತ್ತಿರಬೇಕೆಂದು ಆಭರಣದಂತೆ ಬಳಸುತ್ತಾರೆ. ಶಂಖ ಭಸ್ಮವೆಂಬ ಆಯುರ್ವೇದದ ಚೂರ್ಣ ಮಹೌಷಧಿಯಾಗಿದೆ. ಶಂಖ ಊದುವುದಕ್ಕೂ ಶಕ್ತಿಬೇಕು. ಬುದ್ಧಿವಂತಿಕೆಯೂ ಇರಬೇಕು. ಊದುವ ಶಂಖದ ರಂಧ್ರದ ಸುತ್ತ ಚಿನ್ನ ಬೆಳ್ಳಿಗಳಿಂದ ಸುತ್ತ ಮುಚ್ಚಳಿಕೆ ಹಾಕಿ ಅಲಂಕರಿಸುತ್ತಾರೆ. ಪವಿತ್ರ ಕರ್ಮ ಕಾರ್ಯಗಳಲ್ಲಿ ಶುಭ ವಾದ್ಯವಾಗಿ ಬಳಸುತ್ತಾರೆ. ಶಂಖ-ಚಕ್ರಗಳು ಮಹಾ ವಿಷ್ಣುವಿನ ಲಾಂಛನಗಳು. ರಾಮೇಶ್ವರದಲ್ಲಿ ಉತ್ತಮ ಶಂಖಗಳು ದೊರೆಯುತ್ತವೆ. ಇತ್ತೀಚೆಗೆ ಶಂಖದ ಮೇಲೆ ಚಿತ್ರ-ಚಿತ್ತಾರವನ್ನು ಬರೆದು ಉಡುಗೊರೆಯಾಗಿ ಕೊಡುವ ಸಾಧನವಾಗಿ ಬೆಳೆಯುತ್ತಿದೆ.

ನಾಗಸ್ವರ

ಭಾರತದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೂ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿರುವ ಸುಷಿರ ವಾದ್ಯ. ಶುಭ ಸಮಾರಂಭ, ದೇವಸ್ಥಾನಗಳಲ್ಲಿ ಮಂಗಲ ವಾದ್ಯವಾಗಿ ಪರಿಗಣಿಸಿದ್ದಾರೆ. ಶುಭ ಸಮಾರಂಭಕ್ಕೆ ನಾಗಸ್ವ

ರವಿಲ್ಲದಿದ್ದರೆ ಕಳೆಯೇ ಕಟ್ಟದು. ಇದನ್ನು ಕರೀಮರ ಮತ್ತು ಲೋಹದಿಂದ ತಯಾರಿಸುತ್ತಾರೆ. ಸುಮಾರು ಎರಡೂವರೆ ಅಡಿ ಉದ್ದವಿದ್ದು ಮೇಲಿನ ಕೊನೆ ಚೂಪಾಗಿದ್ದು ಕೆಳಗಿನ ಕೊನೆ ಬರುಬರುತ್ತಾ ಅಗಲವಾಗುತ್ತಾ ಕೊಳವೆಯ ರೂಪದಲ್ಲಿರುತ್ತದೆ. ಈ ಕೆಳಗಿನ ಅಗಲ ಭಾಗದ ತುದಿಗೆ ಗಂಟೆಯಾಕಾರದ ಲೋಹದ ಬಳೆ ಜೋಡಿಸಿ, ಚೂಪಿನ ಕೊನೆಯಲ್ಲಿ ಪೀಪಿ ಜೋಡಿಸುತ್ತಾರೆ. ಈ ವಾದನದಲ್ಲಿ ಒಟ್ಟು ಹನ್ನೆರಡು ತೂತುಗಳಿದ್ದು ಏಳು ರಂಧ್ರಗಳನ್ನು ಮಾತ್ರ ನುಡಿಸಲು ಬಳಸುತ್ತಾರೆ. ದಕ್ಷಿಣ ಭಾರತದ ಎಲ್ಲಾ ದೇವಸ್ಥಾನಗಳಲ್ಲೂ ನಾಗಸ್ವರ ವಾದಕರು ಇದ್ದೇ ಇರುತ್ತಾರೆ. ಅಂಥ ಕಡೆ ಈ ಮಂಗಲ ವಾದ್ಯವು ನಾದಗೈದ ಹೊರತು ಪೂಜಾವಿಧಿ ಪ್ರಾರಂಭವಾಗದು.

ತಮಿಳರು ನಾಗಸ್ವರ ವಾದ್ಯ ಗೋಷ್ಠಿಗೆ "ಪೆರಿಯೆ ಮೇಳ"ವೆಂದೂ, ನಾಗಸ್ವರಕ್ಕೆ "ನಾಯನಂ" ಎಂದು ಕರೆಯುತ್ತಾರೆ. ಕನ್ನಡ ನಾಡಿನಲ್ಲಿ ಕೆಲವು ಕಡೆ "ವಾಲಗ" ಎಂದೂ ಕರೆಯುತ್ತಾರೆ.

ಕರ್ನಾಟಕ ರಾಜ್ಯದಲ್ಲಿ "ಶೊರವೆ" ವಂಶಸ್ಥರು ನಾಗಸ್ವರ ವಾದಕರು. "ನಾಗಸ್ವರ" ವಾದನ ವಂಶ ಪಾರಂಪರಿಯಾಗಿ ಅವರಿಗೆ ಕರಗತವಾಗಿರುತ್ತದೆ. ದೇವಸ್ಥಾನ, ಗುರುಮಠ, ಅರಮನೆಯಲ್ಲಿ ಅವರಿಗೆ ಸ್ಥಾನಮಾನ. ಅವರ ಜೀವನೋಪಾಯ ಹಾಗೂ ಕಲೆಯ ಬೆಳವಣಿಗೆಗೂ ಆಸ್ತಿ-ಪಾಸ್ತಿಗಳನ್ನು ಕೊಡುತ್ತಿದ್ದರಲ್ಲದೆ ಮಾಸಾಶನ, ವರ್ಷಾಶನಗಳು ಸಲ್ಲುತ್ತಿದ್ದವು. ಬಹು ದೂರದವರೆಗೂ ಇದರ ನಾದವನ್ನು ಸುಶ್ರಾವ್ಯವಾಗಿ ಸ್ಪಷ್ಟವಾಗಿ ಆಲೈಸಬಹುದಾಗಿದೆ.

ಡಮರು

ಡಮರು ಶಿವನ ಪವಿತ್ರ ವಾದ್ಯಗಳಲ್ಲೊಂದು. ದೊಡ್ಡ ಮರದ ತುಂಡನ್ನು ಡಮರಿಗೆ ಬೇಕಾಗುವಷ್ಟು ಅಳತೆಯಲ್ಲಿ ಕೊಯ್ದು ಎರಡು ತೋಡಿನ ಮುಖದ ಮಧ್ಯ ಭಾಗದಲ್ಲಿ ಸಣ್ಣ ಆತೆಯಲ್ಲಿ ಕೆತ್ತುತ್ತಾರೆ. ಎರಡು ಮುಖಗಳನ್ನು ಆಡಿನ ಚರ್ಮದಿಂದ ಮುಚ್ಚಿ ನೂಲಿನ ದಾರದಿಂದ ಬಿಗಿಯಾಗಿ ಬಿಗಿಯುತ್ತಾರೆ. ಮಧ್ಯ ಭಾಗದಲ್ಲಿ (ಸಣ್ಣ ನಡುವಿರುವ ಜಾಗ) ದಾರ ಬಿಗಿದು ಆ ದಾರದ ತುದಿಯಲ್ಲಿ ದಪ್ಪಗಂಟು ಹಾಕಿ ಡಮರನ್ನು ಹಿಡಿದು ಅಲ್ಲಾಡಿಸಿದಾಗ ಆ ಗಂಟು ಎರಡು ಮುಚ್ಚಳಿಕೆ ಮೇಲೂ ಬಡಿದು "ಡಗ, ಡಗ" ಎಂದು ಶಬ್ದ ಮಾಡುತ್ತದೆ. ಅದೇ ಆಕಾರದ ಸಣ್ಣ ಡಮರಿಗೆ ಬುಡ ಬುಡಿಕೆ ಎಂದು ಹೆಸರು.

ಡೋಲು

ಮರವನ್ನು ಕೊರೆದು, ಅದರ ಎರಡು ಮುಖಗಳಿಗೂ ಲೋಹದ ಬಳೆ ಕೂಡಿಸಿ ಕುರಿಯ ಚರ್ಮವನ್ನು ಮುಚ್ಚಿ ನೂಲಿನ ಹಗ್ಗದಿಂದ ಚರ್ಮವನ್ನು ಬಳೆಗಳಿಗೆ ಬಿಗಿದು ಜೋಡಿಸುತ್ತಾರೆ. ಎಡ ಮುಖವನ್ನು ಕೋಲಿನಿಂದ ಚರ್ಮಕ್ಕೆ ಉಜ್ಜುವುದು ಬಲಮುಖಕ್ಕೆ ಕೋಲಿನಿಂದ ಬಡಿದಾಗ ಕರ್ಕಶ ನಾದ ಉಂಟಾಗುತ್ತದೆ. ಮಾರಮ್ಮನ ಆಗಮನದ ಸೂಚನೆಗಾಗಿ ಆಸಾದಿಗಳು ಬಳಸುತ್ತಾರೆ.

ಶುದ್ಧ ಮದ್ದಳೆ

ಮದ್ದಳೆ ಶ್ರುತ್ಯಾತ್ಮಕ ವಾದ್ಯ. ಬ್ರಹ್ಮದೇವನಿಂದ ಸೃಷ್ಟಿಸಲ್ಪಟ್ಟಿತೆಂದು ನಂಬಿಕೆ ಇದೆ. "ನಂದಿಯು ಚಂದದಿ ಮದ್ದಳೆ ಹಾಕಲು ಆಡಿದನೋ ರಂಗ ಕಾಳಿಂಗನ ಫಣೆಯಲಿ" ಎಂದು ಪುರಂದರದಾಸರು ಹಾಡಿ ನಂದಿ ಮದ್ದಳೆ ವಾದಕನಾಗಿದ್ದನೆಂದು ಸ್ಪಷ್ಟಪಡಿಸುತ್ತಾರೆ. ಹಿಂದೆ ಹಾಡುಗಾರಿಕೆ ಹಾಗೂ ಪಕ್ಕ ವಾದ್ಯಗಳ ಜೊತೆ ಮದ್ದಳೆಯೂ ರಾಜಿಸುತ್ತಿತ್ತು. ಸುಮಾರು ಎರಡು ಅಡಿ ಅಳತೆಗಳುಳ್ಳ ಮದ್ದಳೆ ಅಳಲೇಕಾಯಿ, ಗೋಧಿಯ ಕಾಳು, ಗೋಪುಚ್ಛಗಳ ಹೋಲಿಕೆಯಲ್ಲಿ ಮೂರು ರೀತಿಯಲ್ಲಿರುತ್ತದೆ. ಚರ್ಮವಾದ್ಯಗಳಂತೆ ರೂಪಗೊಂಡಿದ್ದರೂ ಶ್ರುತಿಗೆ ಸರಿಹೊಂದಿಸಲು ಚರ್ಮದ ಪಟ್ಟಿ ಕೆಳಗೆ ಗಟ್ಟಿಗಳು ಇರುತ್ತವೆ. ಎರಡೂ ಕೈಗಳಿಂದಲೂ ನುಡಿಸಬಲ್ಲ ವಾದ್ಯ ಮದ್ದಳೆ. ದೇವಸ್ಥಾನಗಳಲ್ಲಿ ಭಜನೆಯ ವೇಳೆ, ತಾಳ ಮದ್ದಳೆ ನಡೆಸುವಾಗ ಈ ವಾದ್ಯ ಉಪಯೋಗಕ್ಕೆ ಬರುತ್ತದೆ.

ಇಡಕ್ಕ

ಡಮರುವಿನಂತೆಯೇ ಇದರ ರಚನೆ ಇರುತ್ತದೆ. ಇದರಲ್ಲಿ ಚರ್ಮದ ಹೊದಿಕೆಗಳು ಡಮರಿನಷ್ಟು ಬಿಗಿಯಾಗಿ ಕಟ್ಟಲ್ಪಟ್ಟಿರುವುದಿಲ್ಲ. ತಮಿ

ಳುನಾಡಿನ ಕೆಲವು ದೇವಸ್ಥಾನಗಳಲ್ಲಿ ಈ ವಾದ್ಯ ಇದ್ದೇ ಇರುತ್ತದೆ.

ಪಂಚಮುಖ ವಾದ್ಯ

ಇದರ ಹೆಸರೇ ಸೂಚಿಸುವಂತೆ ದೊಡ್ಡ ಲೋಹದ ಮಡಕೆಗೆ ಮೇಲ್ಗಡೆ ಐದು ಬಾಯಿಗಳಿದ್ದು ಅದನ್ನು ಹಸುವಿನ ಚರ್ಮದಿಂದ ಮುಚ್ಚಳಿಕೆ ಮಾಡಿ ಮುಚ್ಚಿರುತ್ತಾರೆ. ಮಧ್ಯದ ಮುಚ್ಚಳಿಕೆ ಉಳಿದದ್ದಕ್ಕಿಂತ ದೊಡ್ಡದಿರುತ್ತದೆ. ಮಧ್ಯದ ಮುಚ್ಚಳಿಕೆ ಆಧಾರ ಶೃತಿ ಉಳಿದವು ಮಂದರ ಸ್ಥಾಯಿಯಾಗಿದ್ದು ಈ ಐದು ಮುಖಗಳಿಂದಲೂ ಹೊರಡುವ ಸ್ವರಗಳು ಪರಸ್ಪರ ಪೂರಕವಾಗಿಯೇ ಇರುತ್ತದೆ. ಈ ವಾದ್ಯ ಬಹಳ ದೊಡ್ಡದಾಗಿರುವುದರಿಂದ ಬೇಕೆನಿಸಿದಲ್ಲಿ ಸುಲಭವಾಗಿ ತಗೆದುಕೊಂಡು ಹೋಗಲು ಬರುವುದಿಲ್ಲ. ಆದ್ದರಿಂದ ನಾಲ್ಕು ಚಕ್ರಗಳುಳ್ಳ ಗಾಡಿ ಮಾಡಿ ಸೇವೆಯ ವೇಳೆ ಗಾಡಿಯನ್ನು ಎಳೆ ತಂದು ನಿಲ್ಲಿಸಿ ಬಾರಿಸುತ್ತಾರೆ. ಪಂಚ ಮುಖ ವಾದ್ಯ ನಟರಾಜನ ಪ್ರಿಯವಾದ ವಾದ್ಯಗಳಲ್ಲೊಂದು. ಈ ವಾದ್ಯದ ಚಿತ್ರ ಶಿಲ್ಪವನ್ನು ಮೈಸೂರಿನ ಹೊನ್ನಹೊಳೆಯ ಅರ್ಕೇಶ್ವರ ಸ್ವಾಮಿ ದೇವಸ್ಥಾನದಲ್ಲೂ, ತಿರುವಾವೂರಿನ ಒಂದು ದೇವಸ್ಥಾನದಲ್ಲಿ ನೋಡಬಹುದು. ಹಂಪೆಯಲ್ಲೂ ಕೂಡ ಮೂರು ಮುಖದ ಚರ್ಮವಾದ್ಯ ನುಡಿಸುತ್ತಿರುವ ನಟರಾಜನ ವಿಗ್ರಹ ನೋಡಬಹುದಾಗಿದೆ.

ಜಾಗಟೆ ಹಾಗೂ ತಾಳ

ಪ್ರತಿಯೊಂದು ದೇವಸ್ಥಾನ ಹಾಗೂ ಮನೆಗಳಲ್ಲಿ ಜಾಗಟೆ, ತಾಳ ಇದ್ದೇ ಇರುತ್ತದೆ. ಇದು ಪೂರ್ಣ ಚಂದ್ರಾಕಾರದಿಂದ ಕೂಡಿದ ಕಂಚಿನ ವಾದ್ಯ. ದಾಸಯ್ಯಗಳು ತಿರುಪತಿ ವೆಂಕಟರಮಣ ನಾಮ ಸ್ಮರಣೆ ಮಾಡುತ್ತಾ ಬರುವಾಗ ಈ ವಾದ್ಯವನ್ನು ಕೋಲಿನಿಂದ ಬಾರಿಸುತ್ತಾ ಶಂಖ ಊದಿ ತಮ್ಮ ಇರುವನ್ನು ಸೂಚಿಸುತ್ತಾರೆ. ಅಂಚಿನಲ್ಲಿ ಎರಡು ತೂತುಗಳಿದ್ದು, ಹೆಬ್ಬೆರಳು ಸಿಕ್ಕಿಸಿಕೊಳ್ಳಲು ಅನುಕೂಲವಾಗುವಂತೆ ಈ ರಂಧ್ರಗಳನ್ನು ದಾರದಿಂದ ಕಟ್ಟಿರುತ್ತದೆ. ದೇವರ ಮಹಾಮಂಗಳಾರತಿ ಸಮಯಕ್ಕೆ ಶಂಖನಾದದೊಂದಿಗೆ ಜಾಗಟೆಯ ನಾದವೂ ಮೇಳೈಸಬೇಕು.

ಕಂಚು ತಾಳ

ಸಮ ಅಳತೆಯ ಎರಡು ಕಂಚಿನ ಬಿಲ್ಲೆಗಳಿಂದಾದ ವಾದ್ಯ. ಇದನ್ನು "ಜಾಲರಾ" ಎಂದೂ ಕರೆಯುವರು. ಎರಡು ಬಿಲ್ಲೆಗಳ ಹೊರ ಮೈಯ ಕೇಂದ್ರ ಉಬ್ಬಿದ್ದು ಮಧ್ಯದಲ್ಲಿ ರಂಧ್ರವಿರುತ್ತದೆ. ಎರಡು ಬಿಲ್ಲೆಗಳನ್ನು ಜೋಡಿಸಿ ಒಂದು ಹತ್ತಿಯ ದಾರ ಪೋಣಿಸಿ ಎರಡು ತುದಿಗೂ ಗಂಟು ಹಾಕುತ್ತಾರೆ. ಪರಸ್ಪರ ಎರಡನ್ನು ತಟ್ಟಿದಾಗ ಶಬ್ದ ಹೊರಡುತ್ತದೆ. ತೆಳುವಾದ ರೇಕುಗಳಿಂದ ತಯಾರಾದ ತಾಳ ಬಿಲ್ಲೆಗೆ "ಬೃಹತ್ತಾಳ" ಎನ್ನುವರು. ಅನೇಕ ದೇವಸ್ಥಾನಗಳಲ್ಲಿ ಭಜನೆಯ ವೇಳೆ ತಾಳವನ್ನು ತಾಳ ನಿರ್ಣಯಕ್ಕಾಗಿ ಬಳಸುತ್ತಾರೆ.

ಅನಾದಿಯಿಂದಲೂ ದೈವ ಭಕ್ತಿಯ ಆರಾಧಕರಾಗಿಯೇ ಬಂದ ಭಾರತೀಯರು ದೈವ ಭಕ್ತಿಯ ದ್ಯೋತಕವಾಗಿ ಅನೇಕ ಕಲೆಗಳಿಗೂ ಆಶ್ರಯದಾತರು. ಧರ್ಮೋಪಾಸನೆಯ ಜೊತೆ ಕಲೋಪಾಸನೆಯೂ ಬೆಳೆದು ಕೆಲವೊಂದು ವಾದ್ಯ ಸಾಮಗ್ರಿಗಳು ಇಂಥಿಂಥ ಕಲೆಗೇ ಮೀಸಲೆಂದು ವರ್ಗೀಕರಿಸಲ್ಪಟ್ಟವು. ಅಂತೆಯೇ ಈ ಮೇಲೆ ತಿಳಿಸಿದ ದೇವಸ್ಥಾನದ ವಾದ್ಯಗಳೂ ಕೂಡ ಇಂದೂ ದೈವ ಭಕ್ತಿಯ ದ್ಯೋತಕವಾಗಿ ಉಳಿದು ಬೆಳೆದು ಬಂದಿವೆ.


(ಧರ್ಮಸ್ಥಳ ಕ್ಷೇತ್ರ ಪ್ರಕಟಿಸುವ 'ಮಂಜುವಾಣಿ'ಯಿಂದ) *

"ಸಲಹೆ"

ಆ ಮಹಿಳೆಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಇಬ್ಬರೇ ಇಬ್ಬರು ಮಾತ್ರ ಹಾಜರಾದರು. ಒಬ್ಬ ಆಕೆ ಪತಿ, ಮತ್ತೊಬ್ಬ ಆಕೆ ಬಾಯ್ ಫ್ರೆಂಡ್. ಪತ್ನಿಯ ನಿಧನದಿಂದಾಗಿ ಶೋಕತಪ್ತನಾಗಿ, ವಿಪರೀತವಾಗಿ ಗೋಳಿಡುತ್ತಿದ್ದ ಪತಿಯ ಬಳಿ ಬಂದ ಫ್ರೆಂಡ್ ಸಮಾಧಾನಗೊಳಿಸಿದ "ಏನೋ!...... ನಡೆದದ್ದು ನಡೆದುಹೋಯಿತು. ಸತ್ತವರು ಮತ್ತೆ ಬರುತ್ತಾರೆಯೇ? ನಿನ್ನ ಆಪ್ತಮಿತ್ರನಾಗಿ ಸದಾ ನಿನ್ನ ಜೊತೆಯಲ್ಲೇ ಇರುವೆ. ಚಿಂತಿಸಬೇಡ ಬೇಗ ಮತ್ತೊಂದು ಮದುವೆ ಮಾಡ್ಕೋ!!" ಸಲಹೆ ಕೊಟ್ಟು ಹೊರಟೇ ಬಿಟ್ಟ. ಜಿ.ವಿ.ಪ್ರಭು

ಚೆಸ್ ಮಾಸ್ಟರ್

ಎಚ್.ಆರ್. ಚಂದ್ರವದನರಾವ್



ಇಪ್ಪತ್ತೈದು ವರ್ಷಗಳ ಹಿಂದೆ ಕಲ್ಕತ್ತಾದಲ್ಲಿ ನಾನು ಎಂ.ಎಸ್‌ಸಿ ಓದುತ್ತಿದ್ದಾಗ ನನ್ನ ಸಹಪಾಠಿಯಾಗಿದ್ದ ಮೋಹನ್ ದೇವ್ ಇಂಗ್ಲೆಂಡ್ ಅಮೇರಿಕಾಗಳಲ್ಲಿ ರೊಬೋಟಿಕ್ಸ್ ಇಂಜಿನಿಯರಿಂಗ್‌ನಲ್ಲಿ ವಿಶೇಷ ತರಪೇತಿ ಪಡೆದು ಹತ್ತಾರು ಕಂಪನಿಗಳಲ್ಲಿ ಕೆಲಸ ಮಾಡಿ ಎರಡು ವರ್ಷಗಳ ಕೆಳಗೆ ಬೆಂಗಳೂರಿಗೆ ಬಂದು ನಗರದಿಂದಾಚೆ ಕನಕಪುರ ರಸ್ತೆಯಲ್ಲಿ ಒಂದು ಫಾರಂ ತೆಗೆದುಕೊಂಡು, ಅದರಲ್ಲಿ ಒಂದು ಮನೆ, ಅದಕ್ಕೆ ಸೇರಿದ ಹಾಗೆ ಒಂದು ಪ್ರಯೋಗಾಲಯ, ಒಂದು ಯಂತ್ರಾಗಾರ ಕಟ್ಟಿಸಿ ಕೆಲಸ ಮಾಡುತ್ತಿದ್ದಾನೆಂದು ಗೊತ್ತಾದ ಮೇಲೆ ಅವನನ್ನು ನಾಲ್ಕಾರು ಸಲ ಮಾತನಾಡಿಸಿಕೊಂಡು ಬಂದಿದ್ದೆ. ಅವನೊಡನೆ ನನ್ನ ಕಡೆಯ ಭೇಟಿಯ ಬಗ್ಗೆಯೇ ಈ ಕಥೆ ''ಅಂದರೆ ಯಂತ್ರವೂ ಯೋಚಿಸಬಲ್ಲದು ಇದು ತಾನೇ ನಿನ್ನ ನಂಬಿಕೆ?'' ಈ ನನ್ನ ಪ್ರಶ್ನೆಗೆ ತಕ್ಷಣವೇ ಉತ್ತರ ಸಿಕ್ಕಲಿಲ್ಲ. ಮೋಹನ್ ಪೈಪಿಗೆ ಹೊಗೆಸೊಪ್ಪನ್ನು ತುಂಬುತ್ತಾ, ಯಾವುದೋ ಯೋಚನೆಯಲ್ಲೇ ಮುಳುಗಿದ್ದ. ಈಚೀಚೆಗೆ ನಾನು ಏನು ಕೇಳಿದರೂ ಅವನಿಂದ ಕೂಡಲೇ ಉತ್ತರ ಬರುತ್ತಿರಲಿಲ್ಲ. ಹಾಗೆಂದರೆ ನನ್ನ ಬಗ್ಗೆ ಅಸಡ್ಡೆ ಎಂದಲ್ಲ. ಅವನನ್ನು ಏನೋ ಗಹನವಾದ ವಿಷಯ ಕಾಡು

ತ್ತಿತ್ತು.

ಸ್ವಲ್ಪ ಹೊತ್ತಿನ ನಂತರ ಅವನು ಹೇಳಿದ-

'' 'ಯಂತ್ರ' ಅಂದರೆ ಏನು? ವಿಶ್ವಕೋಶ ಹೀಗೆ ಹೇಳುತ್ತದೆ. 'ಶಕ್ತಿಯನ್ನು ಒದಗಿಸಿದಾಗ ನಮ್ಮ ಇಷ್ಟದಂತೆ ಫಲ ಕೊಡುವ ಸಾಧನವೇ 'ಯಂತ್ರ'. ಮಾನವನೂ ಒಂದು 'ಯಂತ್ರ' ಆದರೆ, ಅವನು 'ಯೋಚಿಸಬಲ್ಲ' ಇದನ್ನು ನೀನು ಒಪ್ಪುತ್ತೀಯಾ ತಾನೇ?''

''ನಿನ್ನದು ಏನೋ ಬಳಸು ಮಾತು. ನೇರವಾಗಿ, ಉತ್ತರ ಕೊಡಲು ಇಷ್ಟವಿಲ್ಲದಿದ್ದರೆ, 'ಇಷ್ಟವಿಲ್ಲ' ಅಂತ ಹೇಳಬೇಕು. 'ನಾನು' 'ಯಂತ್ರ' ಅಂದಾಗ ಮಾನವನನ್ನು ಅದರಲ್ಲಿ ಸೇರಿಸಿಲ್ಲ ಅಂತ ನಿನಗೆ ಗೊತ್ತು. ಮಾನವನಿಂದ ನಿರ್ಮಿತಗೊಂಡು, ಅವನು ತನ್ನ ಹಿಡಿತದಲ್ಲಿಟ್ಟುಕೊಂಡಿರುವ 'ಸಾಧನ'ದ ಬಗ್ಗೆ ನಾನು ಹೇಳುತ್ತಿರುವುದು.

ಕಿಟಕಿಯ ಮೂಲಕ ಹೊರಗೆ ಆವರಿಸಿರುವ ಕತ್ತಲನ್ನೇ ನೋಡುತ್ತಾ, ನಕ್ಕು ಅವನೆಂದ-

''ನಿನ್ನ ಪ್ರಶ್ನೆಗೆ ನೇರವಾಗಿ ಉತ್ತರ ಹೇಳುವುದನ್ನು ತಪ್ಪಿಸುವ ಅಭಿಪ್ರಾಯ ನನ್ನದಲ್ಲ. ಕ್ಷಮಿಸು. ವಿಶ್ವಕೋಶದಲ್ಲಿ ಯಂತ್ರ ಎಂದರೆ ಏನು ಎಂದು ಬರೆದಿರುವ ಬಗ್ಗೆ ಚರ್ಚೆ ಮಾಡಬೇಕು ಎನ್ನಿಸುತ್ತದೆ ..... ಇರಲಿ, ನಿನ್ನ ಪ್ರಶ್ನೆಗೆ ನೇರವಾದ ಸರಳ ಉತ್ತರ 'ಯಂತ್ರ', ತಾನು ಮಾಡುವ ಕೆಲಸದ ಬಗ್ಗೆ ಆಲೋಚಿಸಬಲ್ಲದು.''

''ಮಿದುಳು ಇಲ್ಲದೆ, ಯಂತ್ರ ಹೇಗೆ ಆಲೋಚಿಸಬಲ್ಲದು?'' ನಾನು ಕೇಳಿದೆ. ಈ ನನ್ನ ಪ್ರಶ್ನೆಗೆ ನಿಧಾನವಾಗಿ ಉತ್ತರ ಹೇಳುವ ಬದಲು ಮೋಹನ ಕ್ಷಣವೇ ನನಗೊಂದು ಪ್ರಶ್ನೆ ಹಾಕಿದ-

''ಸಸ್ಯವಾದರೂ ಹೇಗೆ ಆಲೋಚಿಸಬಲ್ಲದು? ಅದಕ್ಕೇನಾದರೂ 'ಮಿದುಳು' ಇವೆಯೇ?''

''ಅದು ಬಿಡು. ಸಸ್ಯಕ್ಕೆ ಜೀವವಿದೆ. 'ಮುಟ್ಟಿದರೆ ಮುನಿ' ಗಿಡವನ್ನು ಮುಟ್ಟಿದಾಗ ಅದರ ಎಲೆಗಳು ಮುಚ್ಚಿಕೊಳ್ಳುವವು; ಕೀಟಾಹಾರಿ ಸಸ್ಯಗಳು ಕೀಟಗಳನ್ನು ಆಕರ್ಷಿಸಿ ಅವನ್ನು ಹಿಡಿದು, ಕೊಂದು, ಅರಗಿಸಿಕೊಳ್ಳುವವು. ಮಧುವಿಗೆ ಬಂದ ಕೀಟಗಳ ಮೇಲೆ ಕೇಸರಗಳು ಬಾಗಿ ಪರಾಗರೇಣುವನ್ನು ಸುರಿಸುವವು, ಇವೆಲ್ಲಾ ಎಲ್ಲರಿಗೂ ಗೊತ್ತಿರುವ ಹಳೆಯ ಮಾತು.''

''ಆದರೆ, ನಾನೀಗ ಹೇಳುವುದು ನಾನೇ ತೋಟದಲ್ಲಿ ಕೈಗೊಂಡ ಪ್ರಯೋಗದಿಂದ ತಿಳಿದು ಬಂದ ವಿಷಯ. ತೋಟದಲ್ಲಿ ನಾನೊಂದು ಬಳ್ಳಿ ಬೆಳೆಸಿದೆ. ಅದು ಇನ್ನೂ ಚಿಕ್ಕಗಿಡವಾಗಿದ್ದಾಗ, ಅದರಿಂದ ಒಂದು ಗಜ ದೂರದಲ್ಲಿ ಒಂದು ಕೋಲು ನೆಟ್ಟೆ, ಹಬ್ಬಿಕೊಳ್ಳಲು. ಬಳ್ಳಿ ಕೋಲಿನ ಕಡೆಗೇ ಬೆಳೆದು ಬಂತು. ಇನ್ನೇನು ಅದು ಕೋಲನ್ನು ತಬ್ಬಿಕೊಳ್ಳುತ್ತದೆ ಅನ್ನುವಾಗ ಕೋಲನ್ನು ಕಿತ್ತು ಬೇರೆ ದಿಕ್ಕಿನಲ್ಲಿ ನೆಟ್ಟೆ. ಬಳ್ಳಿ ಈಗ ಆ ಕಡೆ ಬೆಳೆಯಲು ಪ್ರಾರಂಭಿಸಿತು. ಹೀಗೆ, ಎರಡು, ಮೂರು ಸಾರಿ ಮಾಡಿದ ಮೇಲೆ ಬಳ್ಳಿ 'ಧೈರ್ಯ ಗೆಟ್ಟು' ಕೋಲನ್ನು ಹತ್ತುವ ಪ್ರಯತ್ನ ಬಿಟ್ಟು ಸ್ವಲ್ಪ ದೂರದಲ್ಲೇ ಇದ್ದ ಗಿಡದ ಕಡೆಗೆ ಬೆಳೆದು, ಅದನ್ನು ಹತ್ತಿತು.

''ಇವೆಲ್ಲಾ ಹೇಳುತ್ತಿರುವುದು ಏಕೆ?''

''ಗೊತ್ತಾಗಲಿಲ್ಲವೇ? ಗಿಡ, ಮರಗಳಿಗೆ ಒಳ ಮನಸ್ಸಿದೆ (conciousness). ಅವೂ 'ಯೋಚಿಸ'ಬಲ್ಲವು.

''ಹಾಗದಿಂತಾನೇ ಇಟ್ಟುಕೊಳ್ಳೋಣ. ಆದರೆ ನಾವು ಮಾತನಾಡುತ್ತಿರುವುದು ಸಸ್ಯದ ಬಗ್ಗೆಯಲ್ಲ, ಯಂತ್ರಗಳ ಬಗ್ಗೆ. ಯಂತ್ರಗಳನ್ನಾದರೂ ಏತರಿಂದ ಮಾಡಿರುತ್ತಾರೆ? ಭಾಗಶಃ ಒಣ ಮರದಿಂದ, ಲೋಹಗಳಿಂದ. ಆಲೋಚನಾ ಶಕ್ತಿ ಲೋಹಕ್ಕೆ, ಒಣ ಮರಕ್ಕೆ ಇರಲು ಹೇಗೆ ಸಾಧ್ಯ?''

''ಹೇಗೆ? ಸ್ಫಟಿಕೀಕರಣ ಹೇಗೆ ನಡೆಯುತ್ತದೆ? ಯೋಧರು ಲೈನ್ ಫಾರ್ಮೇರ್ಷ ಮಾಡುವಾಗ, ಪಕ್ಷಿಗಳು ಗುಂಪಿನಲ್ಲಿ ಹಾರುವಾಗ, ಅವುಗಳ ಕ್ರಿಯೆಯನ್ನು ವಿವೇಚನಾ ಶಕ್ತಿಯಿಂದ ನಡೆಯಿತು. ಅನ್ನುತ್ತೀಯಾ: ಆದರೆ ದ್ರಾವಣ

ಹೆಪ್ಪು ಕಟ್ಟಿದಾಗ ಹರಳುಗಳು ಸೀಮಿತ ಆಕಾರದಲ್ಲಿ, ಕ್ರಮದಲ್ಲಿ ನಿಲ್ಲುವುದೇಕೆ? ಕರಾರುವಾಕ್ಕಾಗಿ ಅವು ಮಾಡುವ ಕಾರ್ಯವನ್ನು ಏನನ್ನಬೇಕು?''

ನಾವು ಹೀಗೆ ಮಾತನಾಡುತ್ತಿರುವಾಗ, ನಮ್ಮ ಪಕ್ಕದ ಕೊಠಡಿಯಲ್ಲಿ ಯಾರೋ ಓಡಾಡಿದ ಹಾಗೆ, ಮೇಜಿನ ಮೇಲೆ ಕೈಯಿಂದ ಗುದ್ದಿದ ಹಾಗೆ ಶಬ್ದ ಕೇಳಿಸಿತು. ಆ ಕೊಠಡಿ ನನ್ನ ಗೆಳೆಯನ ಯಂತ್ರಾಗಾರ. ಯಂತ್ರಾಗಾರಕ್ಕೆ ನಾವು ಯಾರೂ ಹೋಗುವುದಕ್ಕೆ ಅಪ್ಪಣೆ ಇರಲಿಲ್ಲ. ನನ್ನ ಗೆಳೆಯ ಸ್ವಲ್ಪ ಮಟ್ಟಿಗೆ ಮನಸ್ಸಿನ ಶಾಂತಿಯನ್ನು ಕಳೆದು ಕೊಂಡವನಂತೆ ಎದ್ದು ಕಾರ್ಯಾಗಾರಕ್ಕೆ ಹೋದ. ಅಲ್ಲಿ ಯಾರು ಇದ್ದಾರೆ, ಏನು ನಡೆಯುತ್ತಿದೆ, ಎಂದು ತಿಳಿಯಲು ಇಷ್ಟಪಟ್ಟೆ. ಗಲಿಬಿಲಿ ಶಬ್ದ ಅಸ್ಪಷ್ಟ ಮಾತು, ಕೈಕೈ ಮಿಲಾಯಿಸಿ ಜಗಳವಾಡುವ ಸಪ್ಪಳ. ಮೂರನೆಯವರೊಬ್ಬರು ಪಕ್ಕದ ಕೊಠಡಿಯಲ್ಲಿರಬಹುದೆಂದು ನಾನು ಯೋಚಿಸಿಯೇ ಇರಲಿಲ್ಲ. ಹಾಗೇ ಬಾಗಿಲ ಬಳಿ ನಿಂತು ಕೇಳಿಕೊಂಡೆ. 'ಹಾಳಾಗು' ಎಂದು ಯಾರೋ ನುಡಿದರು. ನಂತರ ಎಲ್ಲವೂ ನಿಶ್ಶಬ್ದ.

ಸ್ವಲ್ಪ ಹೊತ್ತಿನಲ್ಲಿ ಮೋಹನ್ ವಾಪಸ್ಸಾದ. ''ಕ್ಷಮಿಸು, ನಿನ್ನನ್ನು ಬಿಟ್ಟು ಹೊರಟು ಹೋದೆ. ನೋಡು, ಯಂತ್ರಾಗಾರದಲ್ಲಿ ಒಂದು ಯಂತ್ರ (ರೊಬೋಟ್-ಯಂತ್ರಮಾನವ) ಏಕೋ ತಾಳ್ಮೆಗೆಟ್ಟು ಹುಚ್ಚನಂತೆ ವರ್ತಿಸಿತು'' ಎಂದು ಹೇಳಿ ತನ್ನ ಕೆನ್ನೆಯ ಮೇಲೆ ರಕ್ತ ಬರುವಂತೆ ಗೀರಿದ ನಾಲ್ಕು ಗೆರೆಗಳನ್ನು ತೋರಿಸಿದ.

''ಅದರ ಉಗುರನ್ನು ಕತ್ತರಿಸಿ ಹಾಕಬೇಕಾಗಿತ್ತು.'' ಎಂದೆ ನಾನು. ಆದರೆ ಆತ ನನ್ನ ಮಾತಿಗೆ ಗಮನ ಕೊಡಲಿಲ್ಲ. ಏನೂ ಆಗಲಿಲ್ಲವೆಂಬಂತೆ ತನ್ನ ಮಾತನ್ನು ಮುಂದುವರಿಸಿದ ಮೋಹನ್.

'ಪ್ರತಿಯೊಂದು ಅಣುವಿಗೂ, ಅರಿಯುವ, ತಿಳಿದುಕೊಳ್ಳಬಲ್ಲ ಶಕ್ತಿ ಇದೆ. ಪ್ರತಿಯೊಂದು ಅಣುವೂ, ನನ್ನ ಅಭಿಪ್ರಾಯದಲ್ಲಿ ಜೀವಂತ. ಜೀವವಿಲ್ಲದ, ಜಡವಸ್ತು ಅನ್ನುವುದು ಯಾವುದೂ ಇಲ್ಲ. ಎಲ್ಲಕ್ಕೂ ಅಂತರ್ಶಕ್ತಿ ಇದೆ. ಎಲ್ಲವೂ ತಮ್ಮ ಸುತ್ತಲ ವಾತಾವರಣಕ್ಕೆ ತಕ್ಕಂತೆ ವರ್ತಿಸುತ್ತದೆ. ಜೈವಿಕ ಕಾರ್ಯ ನಡೆಯುವಾಗ ಒಬ್ಬ ಮನುಷ್ಯ ಜೀವಂತವಾಗಿರಬೇಡವೇ? ಹಾಗೆಯೇ, ಒಂದು ಯಂತ್ರ ಚಾಲನೆಯಲ್ಲಿರುವಾಗ ಅದಕ್ಕೆ 'ಜೀವ'ವಿರುತ್ತದೆ. ಯಂತ್ರಶಿಲ್ಪಿಯಾದ ನಾನು ಈ ಸತ್ಯವನ್ನು ಕಂಡುಕೊಂಡಿದ್ದೇನೆ.

ಮೋಹನ್ ದೇವ್ ಮಾತಿಲ್ಲದೇ ಸ್ವಲ್ಪ ಹೊತ್ತು ಹಾಗೆಯೇ ಕಿಟಕಿಯಾಚೆ ನೋಡುತ್ತಿದ್ದ. ಅವನನ್ನೊಬ್ಬನನ್ನೇ ಬಿಟ್ಟು ಹೊರಟು ಹೋಗುವುದಕ್ಕೆ ನನಗೇಕೋ ಕಳವಳ. ಆದರೂ, ''ಗುಡ್‌ನೈಟ್, ನಿನ್ನ ಯಂತ್ರದ ಕೈಗೆ ರಬ್ಬರ್ ಗ್ಲೌಸ್ ಹಾಕಿದರೆ ವಾಸಿ ಅನ್ನಿಸುತ್ತದೆ'' ಎಂದು ಹೇಳಿ ನಾನು ಹೊರಟೆ.

ತುಂತುರು ಮಳೆ, ಕಗ್ಗತ್ತಲು. ಮನೆಯಿಂದ ಮುಖ್ಯ ರಸ್ತೆಗೆ ಬರಲು ಇದ್ದ ಕಾಲುದಾರಿ ಅಷ್ಟೇನೂ ಚೆನ್ನಾಗಿರಲಿಲ್ಲ. ದೂರದಲ್ಲಿ ದಾರಿದೀಪಗಳು ಮಿನುಗುಟ್ಟುತ್ತಿದ್ದವು. ಸ್ವಲ್ಪ ದೂರ ಸ್ಕೂಟರ್ ಮೇಲೆ ಬಂದ ಮೇಲೆ ಮೋಹನ್ ದೇವ್ ಮನೆ ಕಡೆಗೆ ನೋಡಿದೆ. ಒಂದೇ ಒಂದು ಕೊಠಡಿಯಲ್ಲಿ ಬೆಳಕಿರುವುದು ಕಾಣಿಸುತ್ತಿತ್ತು. ಅದೇ ಅವನ ಯಂತ್ರಾಲಯ. ಅವನ ಯಂತ್ರದ ಬಗ್ಗೆ ನನಗೆ ಹೇಳಲಾರದ ಏನೋ ಹೆದರಿಕೆ. ಮೋಹನ್‌ಗೆ ಈ ಬಗ್ಗೆ ಎಚ್ಚರಿಸಿದ್ದರೂ, ಅದರಿಂದ ಅವನಿಗೆ ಕೆಡುಕಿದೆ ಅನ್ನಿಸಿತು. 'ಪ್ರಜ್ಞೆ', (consciousness) ಛಂದೋಬದ್ಧತೆಯ (Rhythm) ಶಿತುವೆಂದು ಅವನು ನನಗೆ ಹೇಳಿದ ಮಾತುಗಳು ಪುನಃ ಪುನಃ ಜ್ಞಾಪಕಕ್ಕೆ ಬಂತು. ಈ ಮಾತುಗಳ ಪರಿಪೂರ್ಣ ಅರ್ಥವನ್ನು ತಿಳಿದುಕೊಳ್ಳುವ ಮನಸ್ಸಾಗಿ ಅವನ ಮನೆಗೆ ವಾಪಸ್ಸಾದೆ. ಮುಂಬಾಗಿಲಿನ ಕೈ ಹಿಡಿಯನ್ನು ತಿರುಗಿಸಿದಾಗ, ಅದು ಸರಾಗವಾಗಿ ತಿರುಗಿ ಬಾಗಿಲು ತೆರೆದುಕೊಂಡಿತು. ಮೋಹನ್ ಅಲ್ಲಿರಲಿಲ್ಲ.

ದೀಪ ಆರಿಸಿದ್ದರಿಂದ ಕತ್ತಲು. ಕತ್ತಲಲ್ಲೇ ತಡುವುತ್ತಾ ಯಂತ್ರಾಗಾರಕ್ಕೆ ಹೋಗಿ ಬಾಗಿಲನ್ನು ನಾಲ್ಕಾರು ಬಾರಿ ಬಡಿದೆ. ಹೊರಗಿನ ಮಳೆ, ಗಾಳಿ ಶಬ್ದದಿಂದ ಮೋಹನ್‌ಗೆ ನಾನು ಬಾಗಿಲು ತಟ್ಟಿದ್ದು ಕೇಳಿಸಲಿಲ್ಲ.

ಬಾಗಿಲನ್ನು ಬಲವಾಗಿ ನೂಕಿದೆ. ಬಾಗಿಲು ತೆರೆಯಿತು. ಒಳಗೆ ಮೋಹನ್ ಇರುವುದು ಮೇಣದ ಬತ್ತಿಯ ಬೆಳಕಿನಲ್ಲಿ ಕಾಣಿಸಿತು. ಅವನ ಮುಖ ತೆರೆದ ಬಾಗಿಲ ಕಡೆಗೇ ಇದ್ದರೂ ನನ್ನ ಆಗಮನ ಅವನ ಗಮನಕ್ಕೆ ಬರಲೇ ಇಲ್ಲ. ಅವನು ಪೂರ್ಣವಾಗಿ ಚೆಸ್ ಆಟದಲ್ಲಿ ಮಗ್ನನಾಗಿದ್ದ. ಅವನ ಜೊತೆ ಆಡುತ್ತಿರುವವರು ಯಾರೆಂದು ನನಗೆ ಗೊತ್ತಾಗಲಿಲ್ಲ. ಆಟಗಾರನ ಹಿಂಭಾಗ ಮಾತ್ರ ಕಾಣಿಸುತ್ತಿತ್ತು. ಸುಮಾರು ಐದು ಅಡಿ ಎತ್ತರದ ಮನುಷ್ಯ ಅವನಿರಬಹುದು ಅನ್ನಿಸಿತು. ಅಗಲವಾದ ಭುಜ, ಚಿಕ್ಕ ಕತ್ತು, ಕೂದಲು ತುಂಬಿದ ತಲೆ, ಬಿಗಿಯಾಗಿ ಹಾಕಿಕೊಂಡ ಬಟ್ಟೆ. ಗೋರಿಲ್ಲಾನಂತಿದ್ದ ಅವನು ತನ್ನ ಎಡಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡು, ತನ್ನ ಉದ್ದನೆಯ ಬಲಗೈಯಲ್ಲಿ ಕಾಯನ್ನು ನಡೆಸುತ್ತಿದ್ದ. ನಾನು ಬಂದಿರುವುದು ಗೊತ್ತಾಗಬಾರದೆಂದು ಗೋಡೆಯ ಮರೆಯಲ್ಲಿ ಅವಿತುಕೊಂಡು ಇವರ ಆಟವನ್ನು ನೋಡುತ್ತಿದ್ದೆ. ಆಟ ಬಿರುಸಾಗಿ ಸಾಗಿತ್ತು. ಮೋಹನ್ ಹೆಚ್ಚು ಯೋಚಿಸದೆ ಕಾಯನ್ನು ನಡೆಸುತ್ತಿದ್ದ. ಅಂದರೆ, ಅವನದೇ ಮೇಲುಗೈ. ಎದುರಾಳಿ ನಿಧಾನವಾಗಿ ಕಾಯನ್ನು ಜರುಗಿಸುತ್ತಿದ್ದ. ಅವನ ಕೈಗಳ ಚಲನೆ ನಾಟಕೀಯವಾಗಿತ್ತು. ನೋಡುತ್ತಾ ನೋಡುತ್ತಾ ನನಗನ್ನಿಸಿತು ಮೋಹನನ ಎದುರಾಳಿ ಸೋಲುವ ಸ್ಥಿತಿಯಲ್ಲಿದ್ದಾನೆ. ಅವನನ್ನೇ ದೃಷ್ಟಿಸಿ ಐದಾರು ನಿಮಿಷ ನೋಡಿದೆ ಗೊತ್ತಾಯಿತು. ಮೋಹನನ ಎದುರಾಳಿ ಆಟಗಾರ ಒಬ್ಬ ಮನುಷ್ಯನಲ್ಲ. ಅದು ಒಂದು ರೋಬೋಟ್. ಚೆಸ್ ಆಡಬಲ್ಲ ಯಂತ್ರ-ಮಾನವ.


ಮೋಹನನ ಎದುರಾಳಿ ಭುಜ ಕುಣಿಸುವುದು, ಮುಷ್ಟಿಯನ್ನು ಬಿಗಿ ಹಿಡಿದು ಮೇಜನ್ನು ಕುಟ್ಟುವುದು ಕಂಡು ನನಗೆ ಆಶ್ಚರ್ಯವಾಯಿತು. ಮೋಹನನಿಗೆ ಎದುರಾಳಿ ವರ್ತನೆ ಕಂಡು ಸ್ವಲ್ಪ ಗಾಬರಿಯಾಗಿರಬೇಕು. ಅವನು ಕುರ್ಚಿಯನ್ನು ಹಿಂದಕ್ಕೆ ಎಳೆದುಕೊಂಡು ಕುಳಿತ. ಕಾಯಿ ನಡೆಸುವುದು ಅವನ ಸರದಿ. ಒಂದು ಕಾಯನ್ನು ನಡೆಸಿ 'ಚೆಕ್' ಎಂದು ಹೇಳಿ ಕುರ್ಚಿಯಿಂದ ಎದ್ದು ನಿಂತ. ಧನುರ್ವಾಯು ಹಿಡಿದವರ ಹಾಗೆ ಎದುರಾಳಿಯ ಕೈಕಾಲುಗಳು ಅದರಲು ಶುರುವಾಯಿತು. ಸರಕ್ಕನೆ ಅದು ಎದ್ದು ನಿಂತು ತನ್ನ ಎರಡು ಕೈಗಳಿಂದ ಮೋಹನದೇವ್‌ನ ಕುತ್ತಿಗೆ ಹಿಡಿಯಿತು. ಮೋಹನ್ ಅದರ ಹಿಡಿತವನ್ನು ಬಿಡಿಸಿಕೊಳ್ಳಲು ಹೋರಾಡಿದ. ಸ್ನೇಹಿತನ ಸಹಾಯಕ್ಕೆಂದು ನಾನು ಒಳಕ್ಕೆ ನುಗ್ಗಿದೆ. ಒಳಕ್ಕೆ ಹೋದ ಕೂಡಲೇ ಮಿಂಚು ಹೊಳೆದ ಹಾಗೆ ಬೆಳಕು ಬಂದು ನಾನು ಕೆಳಕ್ಕೆ ಬಿದ್ದು ಬಿಟ್ಟೆ. ಚೇತರಿಕೊಂಡು ಎದ್ದು ನಾನು ನೋಡುವಾಗ ಮೋಹನನ ಕಣ್ಣು ಗುಡ್ಡೆ ಹೊರಕ್ಕೆ ಚಾಚಿತ್ತು, ಬಾಯಿಯಿಂದ ನಾಲಗೆ ಹೊರಕ್ಕೆ ಚಾಚಿತ್ತು, ಕುತ್ತಿಗೆಯ ಮೇಲೆ ಬಲವಾಗಿ ಅದುಮಿದ ಘಾಯ ಕಾಣಿಸುತ್ತಿತ್ತು. ಎದುರಾಳಿ ಅಲ್ಲೇ ನಿಂತಿದ್ದ. ಕೂಡಲೇ ನಾನು ಹೊರಕ್ಕೆ ಓಡಿ ಮೋಹನನ ಜವಾನ ಹರಿನಾಥನನ್ನು ಕೂಗಿ ಎಲ್ಲವನ್ನೂ ಹೇಳಿದೆ. ಅವನು ಯಂತ್ರಾಗಾರಕ್ಕೆ ಹೋಗಿ ಯಂತ್ರಮಾನವನ ಚಟುವಟಿಕೆಗಳು ನಿಲ್ಲುವ ಹಾಗೆ ಮಾಡಿದ. ಮನಸ್ಸಿನ ಶಾಂತಿಯನ್ನು ಕಳೆದುಕೊಂಡ ನನ್ನನ್ನು, ಮೋಹನದೇವನನ್ನೂ ಆಸ್ಪತ್ರೆಗೆ ತಂದರು. ಆಕಸ್ಮಿಕಕ್ಕೆ ಒಳಗಾಗಿ ಮೋಹನ್ ಸತ್ತು ಹೋದನೆಂದು ಹರಿನಾಥ ಎಲ್ಲರಿಗೂ ಹೇಳಿದ. 'ಶಾಕ್' ನಿಂದ ಬಳಲಿದ್ದ ನಾನು ನಾಲ್ಕಾರು ದಿನ ಆಸ್ಪತ್ರೆಯಲ್ಲಿ ವಿಶ್ರಾಂತಿ ತೆಗೆದುಕೊಂಡು ಹೊರಬಂದೆ.

''ಯಜಮಾನನನ್ನು ಕೊಂದ ಆ 'ಚೆಸ್ ಪ್ಲೇಯರ್'ನನ್ನು ಏನು ಮಾಡಿದೆ'' ಎಂದು ಹರಿನಾಥನನ್ನು ನಾನು ಕೇಳಿದೆ. ಅದಕ್ಕೆ ಅವನಿಂದ ಏನೂ ಉತ್ತರ ಬರಲಿಲ್ಲ.

(ಇಂಗ್ಲಿಷ್ ಕಥೆಯೊಂದರ ಆಧಾರ) *

ಅರವತ್ತಕ್ಕೆ ಅರಳು ಮರುಳು ಬರಬೇಕಾಗಿಲ್ಲ

ಪ್ರೊ. ಕೆ. ಆರ್. ಉಡುಪ



ಅರವತ್ತು ದಾಟಿದ ನಂತರವೂ ಯೌವ್ವನದ ಹುರುಪಿನಿಂದ ಕಾರ್ಯ ಸಮರ್ಥರಾಗಿರಲು ಸಾಧ್ಯವೆ ? ಈ ಪ್ರಶ್ನೆಗೆ ವೈದ್ಯ ವಿಜ್ಞಾನ ವಿಸ್ಮಯಕಾರಿ ಉತ್ತರಗಳನ್ನು ನೀಡಿದೆ.

ಸಾಮಾನ್ಯವಾಗಿ 50-55ರ ವಯಸ್ಸು ಹತ್ತಿರ ಬಂದಾಗ ಬಹು ಮಂದಿ ದೇಹ ಮನಸ್ಸುಗಳಲ್ಲಿ ಕುಗ್ಗತೊಡಗುತ್ತಾರೆ. ಅದಕ್ಕೆ ಸರಿಯಾಗಿ ಸರ್ಕಾರಿ ಸೇವೆಯಲ್ಲಿರುವವರಿಗೆ ನಿವೃತ್ತಿ ವಯಸ್ಸು ಸಮೀಪಿಸುತ್ತ ಬರುತ್ತದೆ. ಮಹಿಳೆಯರಿಗೆ ಮಾಸಿಕ ಸ್ರಾವ ನಿಂತಿರುತ್ತದೆ.

ಇಂತಹ ಜೀವಮಾನದ ಉತ್ತರಭಾಗದಲ್ಲಿ ಸಾಂಸಾರಿಕ ಜವಾಬ್ದಾರಿಯೂ ಹೆಚ್ಚಿರುವುದು ಸ್ವಾಭಾವಿಕ. ಮಗನ ಉಚ್ಚ ಶಿಕ್ಷಣ, ಮಗಳ ಮದುವೆ, ಹೊಸ ಮನೆ, ಹೊಸ ವ್ಯವಹಾರಗಳ ಯೋಚನೆ, ಮುಂತಾದುವೆಲ್ಲ ಕಾಡತೊಡಗುತ್ತವೆ. ಇದರಿಂದಾಗಿ ಈ ವಯಸ್ಸಿನಲ್ಲಿ ಮಾನಸಿಕ ಒತ್ತಡದ ಕಾಯಿಲೆಗಳೂ ತಲೆದೋರುತ್ತವೆ. ಅರೆತಲೆ ನೋವು, ಹೆಚ್ಚಿನ ರಕ್ತದೊತ್ತಡ, ಮಧುಮೇಹ, ಸ್ಥೂಲದೇಹ, ಹೃದಯ ದೌರ್ಬಲ್ಯ, ಮುಂತಾದುವೆಲ್ಲ ಕಂಡುಬರುತ್ತವೆ. ವೃದ್ಧಾಪ್ಯ ಲಕ್ಷಣಗಳಾದ ಹಲ್ಲುಸಡಿಲಾಗುವುದು, ತಲೆಗೂದಲು ಬೆಳ್ಳಗಾಗುವುದು, ಅಥವಾ ಬೋಳಾಗುವುದು, ಮೈಮುಖಗಳ ಚರ್ಮ ಸುಕ್ಕುಗಟ್ಟುವುದು, ದೃಷ್ಟಿಮಾಂದ್ಯ, ಜ್ಞಾಪಕ ಶಕ್ತಿಯ ಕುಗ್ಗುವಿಕೆ, ಮುಂತಾದುವು ಸಹ ತೋರಿಬರುತ್ತವೆ. ನಿರಾಶಾವಾದದ ಗಾಳಿಯೂ ಸೋಂಕುತ್ತದೆ.

ಆಗ, ಬಹು ಮಂದಿಗೆ ಅರಳು ಮರುಳೂ ಮೂಡಲಾರಂಭಿಸುತ್ತದೆ. ಮರವೆಯ ಕಾಟ, ಶೀಘ್ರ ಕೋಪ, ಭಯ, ಸಂಶಯ, ವೈರಾಗ್ಯ, ನರದೌರ್ಬಲ್ಯ, ನಿದ್ರೆಯತೊಂದರೆ, ಮುಂತಾದವೆಲ್ಲ ಕಾಡತೊಡಗುತ್ತವೆ. ಮಹಿಳೆಯರಿಗಂತೂ ತನ್ನ ಯೌವನದ ಕಾಲ ಮುಗಿಯಿತು, ತನ್ನಿಂದ ಗಂಡನಿಗೂ, ಮಕ್ಕಳಿಗೂ ಪ್ರಯೋಜನವಿಲ್ಲ- ಎಂಬ ಕೀಳರಿಮೆ ಬೆಳೆಯತೊಡಗುತ್ತದೆ. ಅದರಿಂದ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳುವುದು ಸ್ವಾಭಾವಿಕ.

ಹೀಗೆ, ಅರ್ವತ್ತರ ವಯಸ್ಸಿಗೆ ಅರಳು-ಮರುಳು ಬರುವುದು ಅನಿವಾರ್ಯ- ಎಂಬ ಮನೋಭಾವ ಹೆಚ್ಚಿನವರಲ್ಲಿ ತಲೆದೋರಿರುವುದನ್ನು ಕಾಣುತ್ತೇವೆ.

ಇದು ವೈಜ್ಞಾನಿಕವಾಗಿ ಸರಿಯೇ? ಮುಪ್ಪಿನ ಅವಲಕ್ಷಣಗಳನ್ನು ಮುಂದೂಡ ಬರುವುದೇ? ಅರ್ವತ್ತರ ವಯಸ್ಸು ದಾಟಿದರೂ ಯುವ ಹುರುಪಿನಿಂದ ಕಾರ್ಯಸಮರ್ಥರಾಗಿರಲು ಸಾಧ್ಯವೇ? ಈ ಪ್ರಶ್ನೆಗಳನ್ನು ವೈದ್ಯ ವಿಜ್ಞಾನ ದೃಷ್ಟಿಯಿಂದ ಪರಿಶೀಲಿಸಿದಾಗ ಹಲವು ವಿಸ್ಮಯಕಾರೀ ಸಂತಸದ ವಿಚಾರಗಳು ತಿಳಿದುಬಂದಿವೆ.

ಹಿರಿಯರ ಸಾಧನೆ:

ಪ್ರಪಂಚದ ಮಹಾವಿಜ್ಞಾನಿಗಳು, ತತ್ವಜ್ಞಾನಿಗಳು, ಮಹಾಕವಿಗಳು, ಪ್ರಮುಖ ರಾಜಕೀಯ ಧುರೀಣರು, ಮಹಾ ಆಡಳಿತಾಧಿಕಾರಿಗಳು - ಮೊದಲಾದವರು ತಮ್ಮ ಅತಿ ದೊಡ್ಡ ಸಾಧನೆಗಳಿಂದ ಪ್ರಪಂಚದ ಇಂದಿನ ಅದ್ಭುತ ಪ್ರಗತಿಯನ್ನು ಸಾಧಿಸಿದ್ದು ತಮ್ಮ ಅರ್ವತ್ತರ ನಂತರದ ಅಪರ ವಯಸ್ಸಿನಲ್ಲಿಯೇ! ಪ್ರತಿಭೆ ಮತ್ತು ಪ್ರಪಂಚಾನುಭವ, ಪರಿಪಕ್ವವಾದನಂತರವೇ! ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರೆ ಉತ್ತಮವಲ್ಲವೇ?

ಇದಲ್ಲದೆ, ಇನ್ನೊಂದಂಶವನ್ನೂ ತಿಳಿದುಕೊಂಡಿರುವುದುತ್ತಮ. ದೇಹಾರೋಗ್ಯ ಕೆಟ್ಟು ಪದೇ ಪದೇ ಕಾಯಿಲೆ ಬೀಳುವವರು ನಲ್ವತ್ತರ ನಡುವಯಸ್ಸಿನಲ್ಲೇ ಮುದುಕರಾಗುತ್ತಾರೆ. ಇನ್ನು ಕೆಲವರು ಅರ್ವತ್ತು ದಾಟಿದರೂ ದೇಹಾರೋಗ್ಯ ಕಾಪಾಡಿಕೊಂಡು ಯುವಕರಂತೆಯೇ ಕಾರ್ಯಪ್ರವೃತ್ತರಾಗಿರುತ್ತಾರೆ. ಹೀಗೆ ದೇಹದ ಅನಾರೋಗ್ಯಕ್ಕೂ ವೃದ್ಧಾಪ್ಯಕ್ಕೂ ಸಂಬಂಧವಿದೆ ಎಂಬುದನ್ನು ಅರಿತುಕೊಳ್ಳಬಹುದು.

ಆದಕಾರಣ ಮೊದಲಿನಿಂದಲೇ ಆರೋಗ್ಯಶೀಲ ಬದುಕಿನ ಮೂಲತತ್ವಗಳನ್ನು ಮಾನವ ಅರಿತಿರಬೇಕು. ಅದಕ್ಕನುಗುಣವಾಗಿ ಜೀವನ ವಿಧಾನ ರೂಪಿಸಿಕೊಂಡು ಬರಬೇಕು. ಆಗ ಮಾನವನಿಗೆ ಕಾಯಿಲೆಬರುವ ಸಂಭವ ಕಡಿಮೆ. ಅಂತಹ ಆರೋಗ್ಯಭಾಗ್ಯ ಉಳ್ಳಾತ ವಯಸ್ಸೇರಿದರೂ ವೃದ್ಧಾಪ್ಯದ ಅನಾಹುತಗಳಿಗೆ ಗುರಿಯಾಗುವುದಿಲ್ಲ. 'ಮಾನವನ ವಯಸ್ಸು ಅವನು ಭಾವಿಸಿಕೊಂಡಂತಿದೆ' (Man is as old as he feels) ಎಂಬ ಮಾತು ತುಂಬ ಅರ್ಥಗರ್ಭಿತ.

ರೋಗಚಿಕಿತ್ಸೆಗಿಂತ ರೋಗನಿರೋಧ ಉತ್ತಮ:

ರೋಗ ಬಂದು ಚಿಕಿತ್ಸೆಯಿಂದ ಗುಣವಾದರೂ ಅದು ಕೆಲಮಟ್ಟಿಗೆ ಮಾನವನ ಶಕ್ತಿಯನ್ನು ಕುಗ್ಗಿಸುತ್ತದೆ. ಅಪಘಾತದಿಂದ ಕಾಲಿ

ಗೇಟು ಬಿದ್ದ ಮೇಲೆ ಸಮರ್ಥ ಚಿಕಿತ್ಸೆಯಿಂದ ಅದು ಗುಣವಾದರೂ ಆ ಕಾಲಿನ ಶಕ್ತಿ ಮೊದಲಿನಷ್ಟು ಇರುವುದಿಲ್ಲ. ಒಮ್ಮೆ ಹೃದಯಾಘಾತವಾಗಿ ಸಕಾಲದ ಚಿಕಿತ್ಸೆಯಿಂದ ವಾಸಿಯಾದರೂ ಆತನ ಹೃದಯ ಶಕ್ತಿ ಮೊದಲಿನಂತಿರುವುದಿಲ್ಲ. ಹಾಗೆ, ಆದಷ್ಟು ಮಟ್ಟಿಗೆ ರೋಗಬಾರದಿದ್ದರೆ ಮಾನವನ ಶಕ್ತಿ ಸಾಮರ್ಥ್ಯ ವಯಸ್ಸೇರಿದರೂ ಕುಂದದಿರುತ್ತದೆ. ವೈದ್ಯರಾಜನಿಂದ ದೂರವಿದ್ದರೆ ಯಮರಾಜನಿಂದಲೂ ದೂರವಿರಬಹುದು' ಎಂಬ ಮಾತಿನಲ್ಲಿ ಸತ್ಯಾಂಶ ಇದೆ.

ಮಾನವ ದೇಹದಲ್ಲಿ ನಿಸರ್ಗದತ್ತವಾದ ರೋಗ ಪ್ರತಿರೋಧಕ ಶಕ್ತಿ ಇರುತ್ತದೆ. ಚರ್ಮಕ್ಕೇನಾದರೂ ನುಸಿ, ಹುಳ ಕಚ್ಚಿದಾಗ ಚರ್ಮ ಕೆಂಪಗಾಗಿ, ದಪ್ಪಗಾಗಿ ಆ ಭಾಗಕ್ಕೆ ಬೇಲಿ ಹಾಕಿದಂತಾಗುತ್ತದೆ. ಶರೀರಕ್ಕೆ ಸೋಂಕು ತಾಗಿದಾಗ ಮೈ ಬಿಸಿಯಾಗಿ ಜ್ವರ ಏರಿ, ಕ್ರಮೇಣ ಬೆವತು ಸೋಂಕು ಹೊರದೂಡಲ್ಪಡುತ್ತದೆ. ಆಹಾರದಲ್ಲಿ ವೈಷಮ್ಯವಿದ್ದರೆ ವಾಂತಿ, ಭೇದಿಯ ಮೂಲಕ ನಂಜು ಹೊರಹಾಕಲ್ಪಡುತ್ತದೆ. ಹೀಗೆ ನಿಸರ್ಗದತ್ತ ರೋಗಪ್ರತಿರೋಧಕ ಶಕ್ತಿ ಶರೀರದಲ್ಲಿ ಸದಾ ಜಾಗೃತವಾಗಿರುತ್ತದೆ. ಆದರೆ ಆ ಶಕ್ತಿ ನಾನಾತರದ ದುರಭ್ಯಾಸಗಳಿಂದ, ಶಿಸ್ತು ರಹಿತ ದುಂದು ಜೀವನದಿಂದ ಮತ್ತು ಪದೇ ಪದೇ ಕಾಯಿಲೆ ಬೀಳುವುದರಿಂದ ಕುಗ್ಗತೊಡಗುತ್ತದೆ. ಹೊಸ ಹೊಸ ಮಾತ್ರೆ, ಇಂಜೆಕ್ಷನ್, ಗುಳಿಗೆಗಳನ್ನು ಬಹಳವಾಗಿ ಸೇವಿಸುವುದರಿಂದ ನಿಸರ್ಗದತ್ತ ರೋಗನಿರೋಧಕ ಶಕ್ತಿ ಇಲ್ಲದಂತಾಗುವುದೂ ಇದೆ. ಇಂಥವರಿಗೆ ವಯಸ್ಸೇರುತ್ತ ಬಂದಾಗ ವೃದ್ಧಾಪ್ಯದ ಕುಂದು ಕೊರತೆಗಳು ಅವಶ್ಯ ಕಾಡತೊಡಗುತ್ತದೆ.

ಇದಕ್ಕೆ ಬದಲಾಗಿ, ನೈಸರ್ಗಿಕ ರೋಗ ಪ್ರತಿರೋಧಕ ಶಕ್ತಿಯನ್ನು ಶಿಸ್ತಿನ ಜೀವನದಿಂದ ಕಾಪಾಡಿಕೊಂಡು ಬಂದು , ಸಮಸ್ತ ಯೋಗಾಭ್ಯಾಸಾದಿಗಳಿಂದ ಅದನ್ನು ಉದ್ದೀಪನಗೊಳಿಸಿಕೊಂಡಿದ್ದರೆ ರೋಗ ಬರುವುದೇ ಇಲ್ಲ: ಒಂದು ವೇಳೆ ಬಂದರೂ ಹಿತ್ತಲಮದ್ದಿನಿಂದ ಸುಲಭವಾಗಿ ಗುಣವಾಗುತ್ತದೆ. ಹಾಗೆ, ರೋಗ ರಹಿತ ಆರೋಗ್ಯ ಭಾಗ್ಯವಂತನಿಗೆ ವಯಸ್ಸೇರುತ್ತ ಬಂದರೂ ದೇಹ ಮನಸ್ಸುಗಳ ಶಕ್ತಿ ಕುಗ್ಗದೇ

ಏಕೆ ಸಿಡುಕು ?

ನಾ ನಕ್ಕಾಗ
ನೀ ಏಕೆ ಸಿಡುಕುವೆ?
ಓ ಗೆಳತಿ
ನಾ ನಕ್ಕಿದ್ದು ನಿನ್ನ ನೋಡಿ ಅಲ್ಲ
ನಿನ್ನ ಕಣ್ಣ ಕನ್ನಡಿಯಲ್ಲಿಯ
ನನ್ನನ್ನೇ .... ನೋಡಿ

ಎಂ.ನಿಂಗಣ್ಣ

ಸೂರ್ಯ-ಚಂದ್ರ ಎಷ್ಟು ಪ್ರಖರ?

ಚಂದ್ರ ಗ್ರಹಣವನ್ನು ನೋಡಿದರೆ ಕಣ್ಣಿಗೆ ಯಾವ ಅಪಾಯವೂ ಇಲ್ಲ. ಏಕೆಂದರೆ ಪೌರ್ಣಮಿಯ ದಿನ ಪೂರ್ಣ ಚಂದಿರನನ್ನು ನೋಡಿದರೂ ಸಹ ಅದರ ಪ್ರಕಾಶ ಎಷ್ಟು ಕಮ್ಮಿ ಇರುತ್ತದೆಂದರೆ, ಅದು ಕಣ್ಣಿಗೆ ಯಾವ ತೊಂದರೆಯನ್ನೂ ಉಂಟು ಮಾಡಲಾರದು.

ಆದರೆ ಸೂರ್ಯ ಚಂದಿರನಷ್ಟು ಸೌಮ್ಯ ಅಲ್ಲ. ಸೂರ್ಯ ಗ್ರಹಣ ಇರಲಿ ಅಥವಾ ಇಲ್ಲದಿರಲಿ ಸೂರ್ಯನನ್ನು ಬರಿಗಣ್ಣಿನಿಂದ ನೋಡುವುದು ಅಪಾಯಕರ. ಇದರಿಂದ ಕಣ್ಣು ಸಂಪೂರ್ಣ ಕುರುಡಾಗುವ ಅಪಾಯವಿದೆ. ಸೂರ್ಯ ರಶ್ಮಿ ಕಣ್ಣಿನ ಸೂಕ್ಷ್ಮ ಪರದೆಯ ಮೇಲೆ ಬಿದ್ದು ಕೇಂದ್ರೀಕೃತವಾದರೆ ಅದನ್ನು ಸುಟ್ಟು ಕುರುಡುಂಟು ಮಾಡುವುದು. ಗ್ರಹಣ ಕಾಲದಲ್ಲೂ ದೃಷ್ಟಿಯನ್ನೂ ಕಳೆಯುವಷ್ಟು ಶಕ್ತಿ ಸೂರ್ಯನಿಗಿದೆ. ಸೂರ್ಯ ಗ್ರಹಣ ನೋಡಬೇಕಾದರೆ ಒಂದು ಚಿಕ್ಕ ಟೆಲಿಸ್ಕೋಪಿನಿಂದ ಅದರ ಬಿಂಬವನ್ನು ಒಂದು ಬಿಳಿ ಹಾಳೆಯ ಮೇಲೆ ಬೀಳುವಂತೆ ಮಾಡಿನೋಡುವುದು ಕ್ಷೇಮಕರ.

ಚಂದಿರ

ಇರುತ್ತದೆ.

ಮುಪ್ಪನ್ನು ಮುಂದೂಡುವುದು ಹೇಗೆ?:

ಸಾಮಾನ್ಯ ಮಾನವನ ದೇಹದೊಳಗಿನ ಅನಂತ ಜೀವಕೋಶಗಳು ವಯಸ್ಸಾಗುತ್ತ ಹೋದಂತೆ ವಿಶೇಷವಾಗಿ ಸವೆದು ಸಾಯತೊಡಗುತ್ತವೆ. ಅವು ಮೊದಲಿನಂತೆ ಪುನಃ ಸೃಷ್ಟಿಯಾಗುವುದಿಲ್ಲ. ಮುಖ್ಯವಾಗಿ ಮಿದುಳಿನ ನರಮಂಡಲದ ಜೀವಕಣಗಳ ವಿನಾಶದಿಂದಾಗಿ ಮುಪ್ಪಿನ ಸೂಚಕಗಳಾದ ಶಿಥಿಲವಾದ ಇಂದ್ರಿಯ ಶಕ್ತಿ ಕುಂದುತ್ತಿರುವ ಜ್ಞಾಪಕ ಶಕ್ತಿ, ಹಿಡಿತಕ್ಕೆ ಬಾರದ ಶರೀರದ ಅಂಗಾಂಗಗಳು - ಮುಂತಾದುವೆಲ್ಲ ತೋರಿಬರುತ್ತವೆ. ವಯಸ್ಸೇರುತ್ತ ಬಂದಂತೆ ರೋಗಪ್ರತಿರೋಧಕ ಶಕ್ತಿ ಕುಂದುತ್ತ ಬಂದು ಕಾಯಿಲೆ ತಾಗಿದಾಗ ಶರೀರ ಮತ್ತಷ್ಟು ಶಿಥಿಲವಾಗುತ್ತದೆ.

ಇದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ತೋರಬಹುದು. ಒಬ್ಬ 40ರ ವಯಸ್ಸಿನಲ್ಲಿ ಮುದುಕನಂತಾದರೆ ಮತ್ತೊಬ್ಬ ಎಂಬತ್ತಾಕ್ಕಾಗಬಹುದು. ಅವರವರ ಆನುವಂಶಿಕತೆ, ಪರಿಸರ, ದೇಹಾರೋಗ್ಯ, ಆಹಾರ ವಿಹಾರ ವಿಧಾನ - ಮುಂತಾದುವು ಈ ವ್ಯತ್ಯಾಸಗಳ ಕಾರಣವಾಗಿರುತ್ತವೆ.

ಆದರೆ ಹಿಂದೆ ಹೇಳಿದಂತೆ ಯೋಗಾಸನ, ಪ್ರಾಣಾಯಾಮ, ಧ್ಯಾನಾಭ್ಯಾಸಾದಿಗಳನ್ನೊಳಗೊಂಡ ಸಮಗ್ರ ಯೋಗಾಭ್ಯಾಸವನ್ನು ನಿಯತ ರೀತಿಯಲ್ಲಿ ನಡೆಸಿಕೊಂಡು ಬಂದರೆ ಮಾನವನ ರೋಗ ಪ್ರತಿರೋಧಕ ಶಕ್ತಿ ಕುಂದುವುದಿಲ್ಲ. ದೇಹ ಮನಸ್ಸುಗಳ ಸಾಮರ್ಥ್ಯ ಕುಗ್ಗುವುದಿಲ್ಲ. ವಯಸ್ಸೇರಿದರೂ ಕಣ್ಣು ಕಿವಿ, ನಾಲಗೆ ಮುಂತಾದ ಇಂದ್ರಿಯಗಳ ಶಕ್ತಿ ಇಳಿಯುವುದಿಲ್ಲ. ಮೇಧಾಶಕ್ತಿ, ಸ್ಮರಣಶಕ್ತಿಗಳು ವಿಶೇಷವಾಗಿ ಕುಂದುತ್ತ ಬರುವುದಿಲ್ಲ. ವೃದ್ಧಾಪ್ಯದ ಬಾಹ್ಯಚಿನ್ಹೆಗಳಾದ ಹಲ್ಲುಗಳ ಶಿಥಿಲತೆ, ಚರ್ಮ ಸುಕ್ಕುಗಟ್ಟುವುದು, ಕೂದಲುದುರುವುದು, ಜೀವನದಲ್ಲಿ ನಿರಾಶಾ ಮನೋಭಾವ ಇವೆಲ್ಲ ತಡೆಗಟ್ಟಲ್ಪಡುತ್ತವೆ. ಅಥವಾ ಮುಂದೂಲ್ಪಡುತ್ತವೆ. ಅಷ್ಟೇ ಅಲ್ಲದೆ, ಕಾಮಾಸಕ್ತಿ, ಕಾಮಶಕ್ತಿಗಳೂ ಕುಂದದಿರುತ್ತವೆ.

ಈ ವಿಚಾರದಲ್ಲಿ ವೈಜ್ಞಾನಿಕ ಅಧ್ಯಯನ ನಡೆಸಿದಾಗ ದೇಹದೊಳಗಿನ ನರವ್ಯೂಹಗಳಲ್ಲಿರುವ ಜೀವಕಣಗಳ ಸವೆತ, ಸಾವುಗಳು ಯೋಗಾಭ್ಯಾಸದಿಂದಾಗಿ ತಡೆಗಟ್ಟಲ್ಪಡುತ್ತವೆ: ಮಾತ್ರವಲ್ಲದೆ ದೇಹಾರೋಗ್ಯ ಉತ್ತಮ ಮಟ್ಟದಲ್ಲಿರುವಾಗ ಆ ಮಾನಸಿಕ ಧೈರ್ಯವೂ ಮುಪ್ಪನ್ನು ಮುಂದೂಡಲು ಸಹಾಯಕವಾಗುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಇವೆಲ್ಲ ಕಾರಣಗಳಿಂದಾಗಿ ಆರೋಗ್ಯಭಾಗ್ಯ ಕಾಪಾಡಿಕೊಂಡು ಬಂದವರು 'ಅರವತ್ತರ ಅರಳು-ಮರುಳಿಗೆ' ಭಯಪಡಬೇಕಾಗಿಲ್ಲ - ಎಂದು ಧಾರಾಳವಾಗಿ ಹೇಳಬಹುದು. ●

(ಆಧಾರ: ಇದೇ ಲೇಖಕರ 'ದೀರ್ಘಾಯುಷ್ಯದ ರಹಸ್ಯ' ಪುಸ್ತಕ)

ಹರಿದ ಗೋಣಿಯಲ್ಲೊಬ್ಬ ಕಳವೆಯ ತುಂಬಿ
ಇರುಳೆಲ್ಲಾ ನಡೆದನು ಸುಂಕಕಂಜಿ
ಕಳವೆಯೆಲ್ಲಾ ಹೋಗಿ ಬರಿ ಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ

- ದೇವರದಾಸಿಮಯ್ಯ

ಅಂಗೈಯ ಔಷಧಿ: ಕಾಳಜೀರಿಗೆ

• ಪ. ರಾಮಕೃಷ್ಣ ಶಾಸ್ತ್ರಿ.

ಕಾಳಜೀರಿಗೆ ಅಮೂಲ್ಯವಾದ ವನಸ್ಪತಿಗಳಲ್ಲಿ ಒಂದು. ಅದರ ರುಚಿ ಶುದ್ಧ ಕಹಿಯಾದರೂ ಅದರಲ್ಲಿರುವ ವಿಶಿಷ್ಟ ಗುಣಗಳು ಅದನ್ನೊಂದು ಅಮೂಲ್ಯ ವನಸ್ಪತಿಗಳ ಸಾಲಿಗೆ ಸೇರಿಸಿವೆ. ಮಳೆಗಾಲದಲ್ಲಿ ತಾನಾಗಿ ಹುಟ್ಟಿ ಬೆಳೆದು 'ಸಿಹಿ ಫಲ' ವನ್ನು ಕೊಡಬಲ್ಲ ಕಾಳಜೀರಿಗೆಯನ್ನು ಈಗ ಕೃಷಿ ಮಾಡಿ ಬೆಳೆಸುತ್ತಿರುವುದು ಅದೊಂದು ಶ್ರೇಷ್ಠ ಔಷಧಿ ಎಂಬುದಕ್ಕಾಗಿ. ಆಯುರ್ವೇದದಲ್ಲಿ ವನಜೀರಕ ಎಂಬ ಹೆಸರಿರುವ ಇದನ್ನು ವೈಜ್ಞಾನಿಕವಾಗಿ 'ವೆರ್ನೋನಿಯಂ ಆಂಥೆಲ್‌ಮಿಂಟಿಕ್' ಎಂದು ಕರೆಯಲಾಗಿದೆ. ಈ ಹೆಸರು ಲ್ಯಾಟಿನ್ ಮೂಲದ್ದು.

ಹಲವಾರು ಪ್ರದೇಶಗಳಲ್ಲಿ ಈಗಲೂ ಬಾಣಂತಿಯರಿಗೆ ನಂಜುನಿರೋಧಕ ಔಷಧಿಯಾಗಿ ಮೂರು ದಿನಗಳ ಕಾಲ ಕಾಳಜೀರಿಗೆಯ ಕಷಾಯವನ್ನು ಕುಡಿಸಿ ಅದರಿಂದ ಇನ್ನಿತರ ಸಾಮಗ್ರಿಗಳೊಂದಿಗೆ ತಯಾರಿಸಿದ ಲೇಹ್ಯವನ್ನು ತಿನ್ನಿಸುವುದು ಪದ್ಧತಿಯಾಗಿದೆ. ಜಾಗತಿಕ ವೈದ್ಯಕೀಯ ಸಮ್ಮೇಳನಗಳಲ್ಲಿ ಕಾಳಜೀರಿಗೆಯ ಉತ್ಕೃಷ್ಟ ಔಷಧಿಯ ಗುಣಗಳನ್ನು ವಿಮರ್ಶಿಸುತ್ತಾ ಹೀಗೆ ಬಾಣಂತಿಯರಿಗೆ ಹೆರಿಗೆಯಾಗುತ್ತಲೇ ಅದರ ಕಷಾಯವನ್ನು ಕುಡಿಸುವುದು ಅಲೋಪಥಿ ಔಷಧವಾದ ಎರ್ಗಟ್ ಮಿಶ್ರಣದಷ್ಟೇ ಪರಿಣಾಮಕಾರಿಯೆಂದು ವೈದ್ಯರು ಹೊಗಳಿದ್ದಾರೆ.

ಮಳೆ ನೀರಿಗೆ ಮೊಳೆತು ನಿಂತು
ಯಾರ ಶಿಫಾರಸ್ಸು ಇಲ್ಲದೆ ಬೆಳೆಯುವ
ಕಾಳಜೀರಿಗೆಗೆ ಅಮೂಲ್ಯ ಗುಣಗಳಿವೆ !

ನವಜಾತ ಶಿಶುಗಳಿಗೂ ಮೊದಲ ಮೂರು ದಿನಗಳವರೆಗೆ ಆಹಾರದ ಬದಲು ಕಾಳಜೀರಿಗೆಯ ಕಷಾಯಕ್ಕೆ ಬೆಲ್ಲ ಬೆರೆಸಿ

ಕುಡಿಸುವುದರಿಂದ ಅನೇಕ ಬಾಲಾರಿಷ್ಟ ಗಳೂ ನಿವಾರಣೆಯಾಗುತ್ತವೆ.

ಬಾಣಲೆಯಲ್ಲಿ ಕಾಳಜೀರಿಗೆಯನ್ನು ಹುರಿದು, ನೀರಿನಲ್ಲಿ ಕಷಾಯವಿರಿಸಿ, ಆ ನೀರು ಆರಿ ಹತ್ತನೆಯ ಒಂದು ಪಾಲಿಗಿಳಿದ ಬಳಿಕ ಲಭಿಸುವ ಅರ್ಕದಿಂದ ಬಾಣಂತಿಯರ ಜ್ವರ ನಿವಾರಣೆಯಾಗಿ ಗರ್ಭಾಶಯ ಸಂಕು ಚಿತ ಕಾರ್ಯ ತ್ವರಿತವಾಗಿ ನಡೆಯುತ್ತದೆ. ಅಜೀರ್ಣ, ಅಗ್ನಿಮಾಂದ್ಯ, ಸಂಧಿವಾತ, ಕಫ, ಕೆಮ್ಮು ಇದನ್ನೆಲ್ಲ ನಿವಾರಿಸುವ ಈ ಕಷಾಯ ಶೋಧವೂ ಹೌದು. ಇದರಿಂದಾಗಿ ಇನ್ನಿತರ ತೊಂದರೆಗಳು ಬರುವ ಸಂಭವವಿಲ್ಲ. ಜಂತುಹುಳದ ಬಾಧೆಯಿಂದ ಉಂಟಾಗುವ ಭೇದಿಗೂ ಈ ಕಷಾಯ ರಾಮಬಾಣ.

ಹೊಟ್ಟೆಯೊಳಗಿನ ಜಂತುಹುಳುಗಳು ನಿವಾರಣೆಯಾಗಿ ಮಲದೊಂದಿಗೆ ಅವು ಹೊರಬೀಳಬೇಕಾದರೆ ತಲಾ ಐದು ಗ್ರಾಂ ಹುರಿದ ಕಾಳುಜೀರಿಗೆ, ವಾಯುವಿಡಂಗ ಮತ್ತು ಬೆಲ್ಲಗಳನ್ನು ಉಂಡೆ ಮಾಡಿ ತಿಂದರೆ ಸಾಕು. ಇದರ ಕಷಾಯಕ್ಕೆ ಕಲ್ಲುಸಕ್ಕರೆ ಬೆರೆಸಿ ಸಣ್ಣ ಮಕ್ಕಳಿಗೆ ಕುಡಿಸಿದರೆ ಜಂತುಹುಳು ಮಾತ್ರವಲ್ಲ, ಕೆಮ್ಮು ಜ್ವರಗಳಿದ್ದರೂ ನಿವಾ ರಣೆಯಾಗುತ್ತವೆ. ಕಲ್ಲುಸಕ್ಕರೆ ಬದಲು ಜೇನು ಸೇರಿಸಿದರೆ ಕೆಮ್ಮಿಗಂತೂ ಸಿದ್ಧೌಷಧ. ಹೆಚ್ಚು ಪ್ರಮಾಣದಲ್ಲಿ ದೊಡ್ಡವರೂ ಕಾಳ ಜೀರಿಗೆ ಕಷಾಯ ಕುಡಿದರ ಜಂತುಗಳನ್ನು ನಿವಾರಿಸಬಹುದೆಂದು ಆಯುರ್ವೇದಾ ಚಾರ್ಯ ಸುಶ್ರುತ ಬರೆದಿದ್ದಾನೆ.

ಹುರಿದು ಹುಡಿ ಮಾಡಿದ ಕಾಳಜೀರಿಗೆ ಯನ್ನು ಜೇನಿನಲ್ಲಿ ಕಲಸಿ ನೆಕ್ಕಿದರೆ ಕಫ ಮಾತ್ರವಲ್ಲ ಮಲೇರಿಯಾ ರೋಗವೂ ಗುಣ ವಾಗುತ್ತದೆ. ಮಲೇರಿಯಾಕ್ಕ ಇದರ ಕಷಾ ಯವೂ ಔಷಧಿಯೇ. ಹುರಿದ ಅಕ್ಕಿ ಮತ್ತು ಕಾಳಜೀರಿಗೆಯನ್ನು ಒಟ್ಟಾಗಿ ತಯಾರಿಸಿದ ಅರ್ಕ ಅತಿ ಬೇಧಿಯನ್ನು ತಡೆಯುತ್ತದೆ.

ತುರಿಕೆ, ಒಣಕಜ್ಜಿ ಇನ್ನಿತರ ಚರ್ಮವ್ಯಾ ಧಿಗಳ ನಿವಾರಣೆಯಲ್ಲಿ ಕಾಳಜೀರಿಗೆಯ ಬಳಕೆ ಅಧಿಕ ಫಲದಾಯಕ. ಗೋಮೂತ್ರ ದಲ್ಲಿ ಅದನ್ನು ನುಣ್ಣಗೆ ಅರೆದು ಗಂಧದಂತೆ ಮೈಗೆ ಲೇಪಿಸಿಕೊಂಡು ಒಂದು ಘಂಟೆಯ ಬಳಿಕ ಸ್ನಾನ ಮಾಡಬೇಕು. ಕಜ್ಜಿ ಒಣಗು ತ್ತವೆ, ತುರಿಕೆ ನೀಗುತ್ತದೆ. ತಲೆಯಲ್ಲಿ ಹೇನು ಗಳ ಬಾಧೆ ವಿಪರೀತವಿದ್ದರೆ ಲಿಂಬೆಯ ರಸ ದಲ್ಲಿ ಕಾಳಜೀರಿಗೆಯನ್ನು ಅರೆದು ತಲೆಗೆ ಲೇಪಿಸಿಕೊಳ್ಳಬೇಕು. ಬಳಿಕ ಸ್ನಾನ ಮಾಡ ಬೇಕು. ತತ್ತಿಗಳ ಸಹಿತವಾಗಿ ಹೇನು ನಾಶ ವಾಗುತ್ತದೆ.

ಕಾಳಜೀರಿಗೆಯನ್ನು ಬಿಳಿ ತೊನ್ನು ರೋಗ ನಿವಾರಣೆಗೂ ಮುಖ್ಯವಾಗಿದೆ. ಅದರೊಡನೆ ನೆಲ್ಲಿ, ಅಳಲೆ, ಶಾಂತಿ, ಅರದಾಳ, ಬಾವಂಚಿ ಎಂಬ ಮನೆ ಮದ್ದುಗಳನ್ನು ಸಮತೂಕದಲ್ಲಿ ಸೇರಿಸಿ ಗೋಮೂತ್ರದಲ್ಲಿ ನಯವಾಗಿ ಅರೆದು ಮೈಗೆ ಲೇಪನ ಮಾಡಬೇಕು. ಕರಿಯ ಎಳ್ಳು ಹಾಗೂ ಕಾಳಜೀರಿಗೆಗಳಿಂದ ತಯಾರಿಸಿದ ಕಷಾಯವನ್ನು ದಿನದಲ್ಲಿ ಎರಡು ಸಲ ಸೇವಿಸಬೇಕು. ಈ ಚಿಕಿತ್ಸೆ ಯಿಂದ ಬೇಗನೆ ತೊನ್ನು ರೋಗ ವಾಸಿಯಾ ಗುತ್ತದೆ.

ಶರೀರದಲ್ಲಿ ನಂಜು ಜಾಸ್ತಿ ಇದ್ದರೆ ಗಾಯಗಳು ಬೇಗನೆ ಮಾಯುವುದಿಲ್ಲ. ತುರಿ ಕಜ್ಜಿ, ಹುಣ್ಣುಗಳೂ ಆಗುತ್ತವೆ. ಕಾಳಜೀರಿಗೆ, ಕಾಸರ್ಕನ ಮರದ ಅರಶಿಣ, ಚಾ ಹುಡಿ ಹಾಗೂ ಗೇರುಬೀಜದ ತೊಗಟೆಗಳನ್ನು ಒಟ್ಟಾಗಿ ಸೇರಿಸಿ ಬಿಸಿ ಮಾಡಿದ ಎಣ್ಣೆ ಪೆನಿಸಿಲಿನ್‌ಗಿಂತಲೂ ಶೀಘ್ರ ನಂಜು ನಿರೋ ಧಕವಾಗಿ ಇದನ್ನೆಲ್ಲ ಗುಣಪಡಿಸುವುದು.

ಕಜ್ಜಿಗಳು ಮಾಯವಾಗಲು ಕಾಳಜೀರಿಗೆ ಗಿಡದ ಎಲೆಗಳನ್ನು ನುಣ್ಣಗೆ ಅರೆದು ಮೈಗೆ ಲೇಪಿಸಿಕೊಂಡರೂ ಗುಣಕಾರಿ.

ಸುಲಭವಾಗಿ ಬೆಳೆಯಬಲ್ಲ ಇದರ ಗಿಡ ಮನೆಯ ಮುಂದೆ ಇದ್ದರೆ ಅಂಗೈಯಲ್ಲಿ ಔಷಧಾಲಯವಿದ್ದಂತೆ.

ಪುರುಷಾರ್ಥ ಪ್ರಸ್ತುತವೆಷ್ಟು?

ಎಂ.ವಿ. ಶರ್ಮಾ, ತದ್ವಲಸೆ

**ಬದುಕಿನ ಒಳಿತು ಕೆಡಕುಗಳನ್ನರಿತು.
ಎಚ್ಚರಿಕೆಯಿಂದ ಸಾಗಿದರೆ ಅದೇ ಸುಖಮಯ ಜೀವನ.
ಎಡವಿದರೇನುಂಟು.... ಬರೀ ವೇದನೆ ! ಪುರುಷಾರ್ಥಗಳನ್ನರಿತು
ನಡೆದವನು ನಿಜಕ್ಕೂ ಜಾಣ.**

ನಮ್ಮ ಬದುಕೇ ನಮ್ಮ ಭಾವನೆಗಳಿಗೆ ಅಡಿಗಲ್ಲು. ನಮ್ಮ ಬದುಕು ಎಷ್ಟು ಬೆಳೆಯುತ್ತದೆಯೋ ನಮ್ಮ ಭಾವನೆಗಳೂ ಅಷ್ಟು ದೊಡ್ಡದಾಗುವದು ಸಹಜ. ಎಷ್ಟು ಎಷ್ಟು ನಮ್ಮ ಜೀವನ ಹಿರಿದೋ ಅಷ್ಟು ಅಷ್ಟು ನಮ್ಮ ಭಾವನೆಗಳು ವಿಸ್ತಾರ. ಬದುಕೇ ಎಲ್ಲಕ್ಕೂ ಮೂಲ. ಅದೇ ಎಲ್ಲಕ್ಕೂ ಹಿರಿದು. ಪ್ರತಿಯೊಂದು ಜೀವಾಳವೂ ಭಾವದಿಂದಲೇ ವಿಕಾಸವನ್ನು ವಿನಾಶವನ್ನು ಹೊಂದುತ್ತದೆ.

ಬದುಕು ಹಿರಿದಾಗಲು ವಿಸ್ತಾರವಾಗಲು ಯಾವುದು ಅವಶ್ಯ? ನಮ್ಮೆಲ್ಲ ಶಕ್ತಿಗಳು. ಎಚ್ಚರದಿಂದ ಪ್ರತಿಯೊಂದನ್ನು ಯೋಚಿಸಿ ಮುಂದುವರಿಯುವ ಜೀವ ಯಾವ ಭಾವನೆಯಿಂದ ಬದುಕು ಸುಖಮಯವಾದೀತೆಂದು ತಿಳಿಯುತ್ತದೆ. ಅನುಭವದಲ್ಲಿ ಯಾವುದು ಒಳಿತು ಯಾವುದು ಕೆಟ್ಟದು ಎಂಬುದನ್ನು ತಿಳಿಯುತ್ತದೆ. ಅದಕ್ಕೆ ನಮ್ಮ ಪೂರ್ವಿಕರು ಪುರುಷಾರ್ಥಗಳೆಂದು ಕರೆದರು.

ಧರ್ಮ

ಮನುಷ್ಯ ಹುಲಿಯಂತೆ ತೋಳದಂತೆ ಒಂಟಿಯಾಗಂತೂ ಬದುಕಲಾರ. ಆತ ಸಂಘಜೀವಿ. ಸಮಾಜ ಜೀವಿ. ವ್ಯಕ್ತಿ ವ್ಯಕ್ತಿಯೆಂದು ವ್ಯಕ್ತನಾಗುವದೇ, ವ್ಯಕ್ತಿತ್ವವನ್ನು ಪಡೆಯುವುದೇ ಸಮಾಜದಲ್ಲಿ ಸಾಮಾಜಿಕತೆಯಲ್ಲಿ ಹೀಗೆ ಕೂಡಿ ಬಾಳಬೇಕಾದರೆ ಈ ಸಂಘ ಜೀವನಕ್ಕೆ ನಮಗೆ ಒಂದು ಧರ್ಮ ಬೇಕು. ವ್ಯಕ್ತಿ ವ್ಯಕ್ತಿಯೊಂದಿಗೆ, ವ್ಯಕ್ತಿ ಸಮಾಜದೊಂದಿಗೆ, ವ್ಯಕ್ತಿ ಕುಟುಂಬದೊಡನೆ ಮತ್ತು ವ್ಯಕ್ತಿ ದೇವರೊಡನೆ ಕಟ್ಟಿಕೊಂಡು ಇಟ್ಟುಕೊಂಡ ಬಾಂಧವ್ಯಗಳ ಕಟ್ಟುಪಾಡೇ ಧರ್ಮ. ಇವೆಲ್ಲ ಬಾಂಧವ್ಯಗಳನ್ನು ಚೆನ್ನಾಗಿ ಹೊಂದಿಸಿಕೊಂಡು ಬಾಳಬೇಕಾದರೆ ಅದಕ್ಕೆ ಧರ್ಮ ಅವಶ್ಯ. ಅದಕ್ಕೆ ಧರ್ಮ ಪ್ರಥಮ ಪುರುಷಾರ್ಥ. ಉಳಿದ ಎಲ್ಲ ಪುರುಷಾರ್ಥ ಪರಮಾರ್ಥಗಳನ್ನು ಈ ಧರ್ಮಕ್ಕೆ ಅವಿರೋಧವಾಗಿ ಅನುಸಾರವಾಗಿ ಸಾಧಿಸುವದು. ನಮ್ಮನ್ನು ನಾವು ತಿಳಿದುಕೊಂಡು ನಡೆಯುವದು ಅಧ್ಯಾತ್ಮ. ಈ ವಿಶ್ವವನ್ನು ತಿಳಿದುಕೊಂಡು ನಡೆಯುವುದು ವಿಜ್ಞಾನ. ನಮ್ಮಂದ ಇತರರನ್ನು ತಿಳಿದು ಕೂಡಿ ನಡೆಯುವದು ಧರ್ಮ. ಯಾವುದು ನಮ್ಮನ್ನು ಧಾರಣ ಮಾಡುತ್ತದೆಯೋ, ಯಾವುದನ್ನು ನಾವು ಧಾರಣ ಮಾಡುತ್ತೇವೆಯೋ ಅದು ಧರ್ಮ. ಧರ್ಮ ಇರುವದು ಜೀವನಕ್ಕಾಗಿ. ಜೀವನ ಇರುವುದು ಧರ್ಮದಿಂದ. ಇಂಥ ಧರ್ಮಕ್ಕೆ ಆಧಾರ ಸತ್ಯ. ಸತ್ಯಕ್ಕೂ ಮೀರಿ ಧರ್ಮವಿಲ್ಲ. ಗಂಡು-ಹೆಣ್ಣು ಸತ್ಯ. ಗಂಡ- ಹೆಂಡತಿ ಧರ್ಮ. ಜನ ಜಂಗುಳಿ ಸತ್ಯ. ಆದರೆ ಕುಟುಂಬ ಸಮಾಜ ಧರ್ಮ. ಇದ್ದುದನ್ನು ಇದ್ದಂತೆ ತಿಳಿಯುವುದು

ಸತ್ಯ. ಆದರೆ ಇದ್ದದ್ದು ಇದ್ದಂತೆ ಧರ್ಮವಾಗಬಾರದು. ಸತ್ಯವು ಪ್ರಿಯವೂ ಶ್ರೇಯವೂ ಆದಾಗಲೇ ಆದರೇನೆ ಅದು ಧರ್ಮ. "ಋತೇ ಸತ್ಯಂ ಪ್ರತಿಷ್ಠಿತಂ" ಸತ್ಯಕ್ಕೆ ಋತದ ಪ್ರತಿಷ್ಠೆ ಪರಿಸಿಂಚನ ಅಗತ್ಯ. ಋತವೇ ಧರ್ಮ. ಸತ್ಯಕ್ಕೆ ಬಲವಂತ ಆಗ್ರಹ, ಹಠ, ಜಿದ್ದು ಅವಶ್ಯವಿಲ್ಲ. "ಸತ್ಯಂ ವದ, ಧರ್ಮಂ ಚರ' ' ಎಂದರು. ಹೊರತು ಸತ್ಯಂ ಚರ ಅಲ್ಲ! ಲೋಕಕ್ಕೆ ಹಿತವನ್ನು ಉಂಟು ಮಾಡಬಲ್ಲ ಸತ್ಯವನ್ನೇ ಆಚರಿಸಬೇಕು. ಡಾಕ್ಟರು ಸಾಯಲು ಬಿದ್ದ ರೋಗಿಗೆ 'ನೀನೀಗ ಸತ್ತು ಬೀಳ್ತೀಯಾ' ಎಂದು ಹೇಳಿದರೆ ಅದು ಸತ್ಯವಾದರೂ ಪಾಪ. ನಮ್ಮ ಸಭ್ಯತೆ ಶಿಷ್ಟಾಚಾರ ಸಂಸ್ಕೃತಿ ಇವೆಲ್ಲ ಸತ್ಯದ ಉಗ್ರತೆ ಕಡಿಮೆ ಮಾಡಿ ಅದನ್ನು ನಯಗೊಳಿಸಿ ಧರ್ಮವನ್ನಾಗಿ ಪಳಗಿಸುವ ವಿನ್ಯಾಸಗಳು. ಆದರೂ ಸತ್ಯದ ನೆಲೆ ಇಲ್ಲದೆ ಧರ್ಮಕ್ಕೆ ಬೆಲೆ ಇಲ್ಲ. ಏಕೆಂದರೆ ಸತ್ಯ ಜಗತ್ತಿನ ಜೀವನದ ತತ್ವಸತ್ವ.

ಅರ್ಥ:

ಸತ್ಯ ಧರ್ಮಕ್ಕೆ ಆಧಾರ. ಧರ್ಮ ಅರ್ಥಕ್ಕೆ ಆಶ್ರಯ. ಮನುಷ್ಯನಿಗೆ ಬೇಕಾದುದು ಅರ್ಥ. ಅದು ದೊರೆತರಾಯಿತಲ್ಲ ಎನ್ನುವವರುಂಟು. ಅರ್ಥವನ್ನು ದೊರಕಿಸಲು ಯಾವುದು ಬೇಕು, ಯಾವುದು ಬೇಕಿಲ್ಲ? ಮನಸ್ಸು ಬಹುಮುಖವಾಗಿ ಓದುವದರಿಂದ ಅನರ್ಥವಾಗಿ ಬಿಡಬಹುದು. ಅದನ್ನು ಯಾವುದಾದರೊಂದು ಉದ್ದೇಶದ ಕಡೆಗೆ ಹರಿಯಗೊಟ್ಟರೆ ಅರ್ಥ ಉಂಟಾಗಬಹುದು. ಆ ಅರ್ಥವನ್ನು ಪಡೆಯುವ ತನಕ ಮನಸ್ಸು ತಳಮಳಿತವಾಗಿಯೇ ಇರುತ್ತದೆ. ಆದರೂ ಅರ್ಥದ ಅನ್ವೇಷಣದಲ್ಲಿ ಅನೇಕ ಜ್ಞಾನಗಳು ಉಂಟಾಗಿ ಅವುಗಳಿಂದಲೂ ವಿಶೇಷವಾದ ಅರಿವು ಸಿಕ್ಕು ಸಾರ್ಥಕತೆ ಸಿಗಬಹುದು. ಅರ್ಥಾನ್ವೇಷಣ ಹಲವು ರೀತಿಯಲ್ಲಾಗಬಹುದು. ಗಣಿತಜ್ಞನಿಗೆ ಗಣಿತದಿಂದ ಅರ್ಥ ದೊರೆಯಬಹುದು. ಎಡಿಸನ್‌ಗೆ ತನ್ನ ಪರಿಶೋಧನೆಗಳಿಂದ ಹೆಚ್ಚಿನ ಅರ್ಥ ದೊರೆತಿರಬಹುದು. ಮನಸ್ಸು ಅರ್ಥವನ್ನು ಗಳಿಸಿದಲ್ಲಿ ಆಹ್ಲಾದಕರವಾಗಬಹುದು. ಅರ್ಥವನ್ನು ಹೊಂದುವ ತನಕವೂ ಮನುಷ್ಯನಿಗೆ ತಾಳ್ಮೆಯಿಲ್ಲ ಸಂತೋಷವಿಲ್ಲ. ಅರ್ಥವಾಗದೇ ಹೋದರೆ ದುಃಖ, ಅರ್ಥವಾಯಿತೆಂದರೆ ಆನಂದ. ಆದರೆ ಅರ್ಥ ಒದಗಿ ಬಂದರೂ ಬದುಕು ಏನೆಂಬ ಪ್ರಶ್ನೆ ಉಳಿಯುತ್ತದೆ. ಬದುಕುವದು ಧರ್ಮಕ್ಕಾಗಿ, ಬದುಕುವದು ಅರ್ಥಕ್ಕಾಗಿ ಎಂಬುದರಿಂದಷ್ಟೇ ಮುಗಿಯುವದಿಲ್ಲ. ಈ ಅರ್ಥಕ್ಕೆ ತಕ್ಕ ಅಭಿವ್ಯಕ್ತಿಯು ಮುಖ್ಯ. ಈ ಅಭಿವ್ಯಕ್ತಿಯ ಬಯಕೆಯೂ ಪ್ರಾಮುಖ್ಯವಾದುದು. ಬಯಕೆಯ ಪರ್ಯಾಯ ಶಬ್ದವೇ ಕಾಮ.

ಕಾಮ:

ಕಾಮಕ್ಕೂ ಭಾವವೇ ಮುಖ್ಯ. ಯನ್ನೇ ಭಾವನಾ ಯಾದ್ರುಶೀ ಸಿದ್ಧಿಃ ಭವತಿ ತಾದೃಶಿ ಆಯಾ ಕಾಮಕ್ಕೆ ಒಂದು ಅವಲಂಬನೆ ಒಂದು ನಿಮಿತ್ತ. ಮೊದಲಿಗೂ ಕೊನೆಗೂ ನಿಮ್ಮ ಕಾಮನೆಯು ನಿಮಗೆ ಫಲವನ್ನು ಸಿದ್ಧಿಯನ್ನು ಕೊಡುತ್ತದೆ. ಕಾಮ ಮನುಷ್ಯನ ವ್ಯಕ್ತಿತ್ವಕ್ಕೆ ಮೇರುದಂಡದಂತಿರುತ್ತದೆ. ಸೌಂದರ್ಯಾನುಭೂತಿಗೆ ಸಾರ್ಥಕವಾಗುವ ಮೂಲಭೂತ ತತ್ವವೆಂದರೆ ಕಾಮವೇ. ಕಾಮದಿಂದ ಜೀವನಕಲೆ ಹುಟ್ಟುತ್ತದೆ. ಸ್ವಶಕ್ತಿ ಮತ್ತು ಪರಾಶಕ್ತಿಗೆ ಕೂಡಿಸುವ ಇದೊಂದು ಸುಂದರ ಮಾಧ್ಯಮ. ಈ ಮಾಧ್ಯಮ ಎಷ್ಟು ದುರ್ಬಲವಿರುತ್ತದೆಯೋ ಅಷ್ಟು ಮನುಷ್ಯನ ಕ್ರಿಯಾಶಕ್ತಿಯು ದುರ್ಬಲವಿರುತ್ತದೆ. ದುರ್ಬಲ ಕ್ರಿಯಾಶಕ್ತಿ ನಿಷ್ಕ್ರಿಯತೆಗೆ ಕಾರಣವಾಗುತ್ತದೆ. ನಿಷ್ಕ್ರಿಯತೆ ವಿನಾಶಕ್ಕೆ. ಆದರೆ ಅತಿ ಕಾಮ ಅಥವಾ ವಿಕೃತ ಕಾಮದಿಂದ ವ್ಯಕ್ತಿತ್ವ ಹಾಳಾಗುತ್ತದೆ. ಅನ್ನ ಬೇಯಿಸುವಷ್ಟು ಬೆಂಕಿ ಬೇಕು. ಹೊತ್ತಿಸುವಷ್ಟಲ್ಲ! ಮನಸ್ಸು ಅರಳುವದಕ್ಕೆ ಭಾವನೆಗಳು ಆನಂದಮಯವಾಗುವದಕ್ಕೆ ಕಾಮ ಬೇಕು. ಕಾಮವಿಲ್ಲದಿದ್ದರೆ ಶಾಂತಿಯಿಲ್ಲ. ಬಾಂಧವ್ಯಗಳು ಬೆಳೆಯುವದಕ್ಕೆ ಕಾಮ ಕ್ರಿಯಾಶೀಲವಾಗಿರಬೇಕು.

ಮೋಕ್ಷ:

ಧರ್ಮ-ಅರ್ಥ-ಕಾಮಗಳು ಸಾಧಿಸಿದ ಮೇಲೆ ಈ ಬದುಕಿನ ಪುರುಷಾರ್ಥವೇನು? ಈ ಮೂರು ಮುಗಿದ ಮೇಲೆ ಇನ್ನೇನು ಉಳಿದಿದೆ? ಅದೇ ಮೋಕ್ಷ ಅಥವಾ ಮುಕ್ತಿ. ಮುಕ್ತಿಯಲ್ಲಿ ಏನಿದೆ ಆಕರ್ಷಣೆ? ಇದು ಇವೆಲ್ಲಕ್ಕಿಂತಲೂ ಶ್ರೇಷ್ಠವಾದುದೇ. ಅದನ್ನು ಪಡೆಯದಿದ್ದಲ್ಲಿ ಹಾನಿ

ಯಾಗುವದಾದರೂ ಏಸು...ಈ ಪ್ರಶ್ನೆಗಳು ಸಹಜವಾಗಿ ತಲೆದೋರುತ್ತವೆ.

ಮೋಕ್ಷ ಅಥವಾ ಮುಕ್ತಿಯೆಂದರೆ ಬಿಡುಗಡೆ. ಯಾವುದರಿಂದ ಬಿಡುಗಡೆ? ಅಧ್ಯಾತ್ಮವಾದಿಗಳು ಹೇಳುವಂತೆ ಜನ್ಮ ಮರಣದಿಂದ ಮುಕ್ತಿ. ಆದರೆ ಸೂಕ್ಷ್ಮವಾಗಿ ನೋಡಿದರೆ ಜನ್ಮದಲ್ಲಿ ಮೃತ್ಯು ಮತ್ತು ಮೃತ್ಯುವಿನಲ್ಲಿಯೇ ಜನ್ಮ ಸೇರಿಕೊಂಡಿರುತ್ತದೆ. ಅಂದ ಮೇಲೆ ಮುಕ್ತಿ ಅಷ್ಟು ಸುಲಭದ್ದಲ್ಲವೆಂದಾಯಿತು.. ಪ್ರವೃತ್ತರು ನಿವೃತ್ತರು ಇಬ್ಬರಿಗೂ ಮುಕ್ತಿ ಶತಃಸಿದ್ಧವಾದದ್ದು.

ಜೀವದ ಭಾವಪೂರ್ಣ ತೇಜಸ್ಸು ತೋರಿಸುವದಕ್ಕೆ ಜೀವನ ಎಷ್ಟು ಅವಕಾಶ ಮಾಡಿಕೊಡುತ್ತದೆಯೋ ಬೇರೆ ಯಾವುದೂ ಮಾಡಿಕೊಡುವದಿಲ್ಲ. ಇಂಥ ಅವಕಾಶ ಈ ತರಹದ ಜೀವನದಲ್ಲಿ ಸಹಜತೆಯೊಂದು ಇದ್ದೇ ಇರುತ್ತದೆ. ಈ ಸಹಜತೆ ವಿಶ್ವದ ಅಣುರೇಣುಗಳಲ್ಲಿ ಕಂಡು ಬರುತ್ತದೆ. ಪ್ರಕೃತಿಯಲ್ಲಿ ಹರಡಿಕೊಂಡಿರುವ ಸೃಷ್ಟಿ ಸೌಂದರ್ಯವನ್ನು ನೋಡಿದರೆ ಈ ಸಹಜತೆಯ ಕಲ್ಪನೆ ನಮಗಾಗುತ್ತದೆ. ಯಾರಾದರೂ ಗಮನಿಸಬೇಕು. ಪ್ರಚಾರ ಮಾಡಬೇಕು. ಹಿರಿಮೆ ಹೊಗಳಬೇಕು. ಎಂಬ ದುರ್ಬಲ ಮನೋಭಾವ ಸೃಷ್ಟಿಯಲ್ಲಿ ಕಾಣುವುದಿಲ್ಲ. ಅವು "ಸ್ವಾಂತಃ ಸುಖಾಯ" ಸಹಜವಾಗಿ ಹುಟ್ಟಿರುತ್ತವೆ. ಅವುಗಳ ಜೀವನ ಎಷ್ಟು ಸಹಜವಾಗಿರುತ್ತದೆಯೋ ಅಷ್ಟೇ ಸಹಜವಾಗಿ ಅವುಗಳ ಮರಣವೂ ಇರುತ್ತದೆ. ಇದು ಸಹಜತೆಯ ಬಿಡುಗಡೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಬಿಡುಗಡೆ ಎಂದರೆ ರಾಗಾತ್ಮಕ ಮನೋಭಾವನೆಗಳ ಆಸಕ್ತಿ ಧರ್ಮವನ್ನು ತ್ಯಜಿಸುವದು.

ಮುಕ್ತಿ-ಜಾಗೃತ, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಗಳನ್ನು ಮೀರಿದ ಸ್ಥಿತಿ. ಇದರಲ್ಲಿ ಹೊರಗಡೆಯ ಭಾವವಿಲ್ಲ. ಹೊರಗಡೆಯ ಭಾವದಿಂದ ಮನುಷ್ಯ ಕಲ್ಲಾಗುತ್ತಾನೆ. ಆದರೆ ಮುಕ್ತಿಯ ಭಾವದಿಂದ ಕರಗುತ್ತಾನೆ. ಕರಗಿ ಹರಿಯುತ್ತಾನೆ. ಗಂಗೆಯಾಗುತ್ತಾನೆ. ಗಂಗೆ ಭಗೀರಥನ ಪೂರ್ವಜರನ್ನು ಉದ್ಧರಿಸುವದಕ್ಕಾಗಿ ಕೆಳಗೆ ಬಂದಳು. ಭಗೀರಥನ ಯಾವ ಪೂರ್ವಜರಿಗಾಗಿ? ಸತ್ತಿರುವ ಪೂರ್ವಜರಿಗಾಗಿ. ಸತ್ತವರು ಮುಕ್ತರಾಗಿದ್ದಿಲ್ಲವಂತೆ. ಅಂದರೆ ಸತ್ತ ಮಾತ್ರಕ್ಕೆ ಮುಕ್ತಿ ಇಲ್ಲವೆಂದಾಯಿತು. ಅಂತೆಯೇ ಇವರಿಗೆ ಮುಕ್ತಿ ಕೊಡಿಸುವದಕ್ಕಾಗಿ ಶಿವನ ಪತ್ನಿ ಕರಗಿ ಕೆಳಗೆ ಬಂದಳಂತೆ. ಕರಗಿ ಕೆಳಗೆ ಬಂದ ಮೇಲೆಯೇ ಅವಳು ಪತ್ನಿ ಗಂಗೆಯಿಂದ ತಾಯಿ ಗಂಗೆಯಾದಳು. ಹೌದು ತಾಯಿತನ ಬರಬೇಕಾದರೆ ಕರಗಲೇ ಬೇಕು. ಹೀಗೆ ಕರಗುವಿಕೆಯು ಮುಕ್ತಿಗೆ ಕಾರಣವಾಗುತ್ತದೆ. ಸ್ವಮುಕ್ತಿ ಮತ್ತು ಪರಮುಕ್ತಿಗೆ ಕರಗುವದು ಅನಿವಾರ್ಯ.

ಎಲ್ಲಾ ಜೀವಾತ್ಮಗಳಲ್ಲಿ ತನ್ನದೇ 'ಒಂದು ಚೈತನ್ಯ ನಿರ್ಮಿಸುವ ನಿರಂತರತೆಯಿರುತ್ತದೆ. ಈ ನಿರಂತರತೆ ಅವುಗಳ ಸ್ವಭಾವವಾಗಿರುತ್ತದೆ. ಸ್ವಾಭಾವಿಕವಾಗಿ ನಿರಂತರ ಚೈತನ್ಯದ ಬಿಡುಗಡೆಯ ಪ್ರವೃತ್ತಿಯೇ ಮುಕ್ತಿ. ನಮ್ಮಲ್ಲಿ ಸೇರಿಕೊಂಡಿರುವ ನಮ್ಮ ಚೈತನ್ಯವನ್ನು ಈ ಜಗತ್ತಿನಲ್ಲಿ ಬಿಟ್ಟರೆ ಮಾತ್ರ ನಾವು ಮುಕ್ತರಾಗುತ್ತೇವೆ. ಇಲ್ಲವಾದಲ್ಲಿ ಮುಕ್ತರಾಗುವದು ಅಸಾಧ್ಯ. ಹೊತ್ತಿಸಿದ ದೀಪ ಬೆಳಕು ಚಲ್ಲಿದರೆ ಅಂದರೆ ತನ್ನಲ್ಲಿ ಸೇರಿರುವ ಬೆಳಕನ್ನು ಬಂಧನದಿಂದ ಬಿಟ್ಟರೆ ಮಾತ್ರ ಅದು ದೀಪ ಅನ್ನಿಸಿಕೊಳ್ಳುತ್ತದೆ. ಮತ್ತು ಅದರ ಜೀವನದ ಪುರುಷಾರ್ಥ ಈಡೇರುತ್ತದೆ.

ಈ ಭಾವಾತ್ಮಕವಾದ ಪ್ರಪಂಚದಲ್ಲಿ ನಿರಂತರ ನಡೆಯುವುದೇ ಒಂದು ಕ್ರಿಯೆ. ಅದೇ ಬಿಡುಗಡೆ ಕ್ರಿಯೆ. ಮೂಲ ರೂಪದಿಂದ ಹೊರಗಡೆ ಬಂದು ತನ್ನ ಹೊರಗಡೆಯ ಚೈತನ್ಯವನ್ನು ಬಿಟ್ಟು ಮತ್ತೆ ಮೂಲದಲ್ಲಿ ಸೇರಿ ಮೂಲವಾಗುವ ಆಸೆಯೇ ಮುಕ್ತಿಯ ಆಸೆ.

ಧರ್ಮ-ಅರ್ಥ-ಕಾಮ ಇಲ್ಲಿ ಹೆಜ್ಜೆ ಹೆಜ್ಜೆಗೂ ಇನ್‌ವಾಲ್‌ಮೆಂಟ್ ಇರುತ್ತದೆ. ಈ ಇನ್‌ವಾಲ್‌ಮೆಂಟ್‌ನಿಂದ ಮನುಷ್ಯನ ವ್ಯವಹಾರ ಜಗತ್ತಿನ ವಿಸ್ತಾರವಾಗುತ್ತದೆ. ಕಾರ್ಯ ಕಲಾಪಗಳ ಕ್ಷಿತಿಜದ ವಿಸ್ತಾರ ಹೆಚ್ಚುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಶಕ್ತಿಯ ಮೇರೆಗೆ ತನ್ನ ಕ್ಷಿತಿಜವನ್ನು ಹಿಗ್ಗಿಸುತ್ತ ಹೋಗುತ್ತಾನೆ. ಹೀಗೆ ಹಿಗ್ಗಿಸುವದರಿಂದಲೇ ಮನುಷ್ಯನ ಸತ್ವ ಗೊತ್ತಾಗುತ್ತದೆ.

ಆದರೆ ಇತ್ತೀಚೆಗೆ ಮನುಷ್ಯ ಹೆಚ್ಚು ಹೆಚ್ಚು ವೈಯಕ್ತಿಕವಾಗುತ್ತಿದ್ದಾನೆ. ನಾನ್ ಇನ್‌ವಾಲ್‌ಮೆಂಟ್ ಆಗಿದ್ದಾರೆ. ನಗರ ಪ್ರದೇಶದಲ್ಲಂತೂ ಇದು ಇನ್ನೂ ಹೆಚ್ಚು.

ಗಂಡ ಹೆಂಡತಿ ಇಬ್ಬರೇ ಇದ್ದಲ್ಲಿ ಆಕಸ್ಮಿ

ಕವಾಗಿ ಒಬ್ಬರು ತೀರಿಕೊಂಡರೆನ್ನಿ. ನೆರೆಹೊರೆಯವರೆಲ್ಲ ಮುಖ ಮರೆಸಿಕೊಂಡು ಬಿಡುತ್ತಾರೆ. ಸ್ಮಶಾನಕ್ಕೆ ಶವ ಸಾಗಿಸುವದಕ್ಕೆ ನೆರವಾಗಲು ಕೂಡಾ ಒಬ್ಬರೂ ಬರುವದಿಲ್ಲ. ಇದೊಂದು ರೀತಿಯಾದರೆ 'ಸಂಸ್ಕಾರ' ಕಾದಂಬರಿಯಲ್ಲಿರುವಂತೆ ನಾರಣಪ್ಪನ ಶವ ಸಂಸ್ಕಾರಕ್ಕೆ ಶಾಸ್ತ್ರಾಧಾರ ಸಿಗುತ್ತಿಲ್ಲವೆಂದು ಒದ್ದಾಡುವ ಕುರುಡ ಪರಂಪರಾವಾದಿಗಳ ಪಂಗಡದವರು. ಸಹಜವಾಗಿ ಪ್ರಾಕೃತಿಕವಾಗಿ ಜೀವಿಸುವ ಚಂದ್ರಿಯಂಥ ವ್ಯಕ್ತಿಗಳು ಸಮಾಜದಿಂದ ಬರುಬರುತ್ತಾ ಮಾಯವಾಗುತ್ತಿದ್ದಾರೆ. ಚಂದ್ರಿಯ ಧರ್ಮ ತ್ಯಾಗದ ತಳಹದಿಯ ಮೇಲೆ ನಿಂತಿರುವ ಧರ್ಮ. ಅವಳಿಗೆ ಯಾವ ಶಾಸ್ತ್ರವೂ ಬೇಕಿಲ್ಲ. ಅವಳು ತಿಳಿದದ್ದು ಯಾವ ಗಂಡಸಿನ ಸಂಗಡ ಮಲಗಿದ್ದಳೋ ಅವನು ಸತ್ತು ಹೋದಮೇಲೆ ಅವನ ಸಂಸ್ಕಾರವಾಗಲೇ ಬೇಕೆಂಬ ನೈತಿಕ ತಿಳಿವಳಿಕೆ ಅವಳದು, ಶಾಸ್ತ್ರಾಧಾರದ ಚಿಂತೆ ಪ್ರಾಣೇಶಾಚಾರ್ಯರದು ಮತ್ತು ಅವರ ಗುಂಪಿನವರದು. ನಾರಣಪ್ಪನ ಸಂಸ್ಕಾರ ಈ ಮೂಢನಂಬಿಕೆಯವರಿಂದ ಸಾಧ್ಯವಾಗದೆಂದು ಗೊತ್ತಾದ ಮೇಲೆ ಬಂಡಿಯಲ್ಲಿ ಶವವನ್ನು ಸಾಗಿಸಿ ಅದನ್ನು ಸುಟ್ಟು ಬರುವ ವ್ಯವಸ್ಥೆ ಅವಳು ಮಾಡುತ್ತಾಳೆ. ಕೊಳೆಯುವ ಶವಕ್ಕೆ ಬೇಕಾಗಿರುವದು ಬೆಂಕಿ. ಶಾಸ್ತ್ರವಲ್ಲವೆಂದು ಚಂದ್ರಿ ತೋರಿಸಿ ಕೊಡುತ್ತಾಳೆ. ಚಂದ್ರಿಯ ಜಾಗೃತ ಪ್ರಜ್ಞೆ ಮೆಚ್ಚುವಂತಹದು. ಚಂದ್ರಿಯಂಥವಳ ಸಾಮಾನ್ಯ ಜಾಗೃತ ಪ್ರಜ್ಞೆ ಸಮಾಜದಲ್ಲಿದ್ದರೆ ಸಮಾಜದ ಸ್ವಾಸ್ಥ್ಯ ಉಳಿಯುತ್ತದೆ. ಇಲ್ಲವಾದಲ್ಲಿ ಸಮಾಜದ ತಲೆಯ ಮೇಲೆ ಹದ್ದು ಹಾರಾಡುತ್ತದೆ. ಶವ ಕೊಳೆಯುತ್ತದೆ.

ಇಂದು ಲಂಚ ತಿಂದರೆ, ಬಲಾತ್ಕಾರವಾದರೆ, ಹತ್ಯೆಯಾದರೆ, ದಿವಾಯಿತಿಯಾದರೆ ಕಣ್ಮುಂದೆ ಅನ್ಯಾಯ ನಡೆದರೆ ಸಹಿಸಿ, ನಮಗೇಕೆ ಬೇಕು ಎಂದು ಅನಾಸಕ್ತಿಯಿಂದ ಕೂಡುತ್ತೇವೆ. ಸೀತಾಪಹರಣವನ್ನು ಸಹಿಸದೆ ಅಪಹರಣ ಮಾಡುವವನ ಮಾರ್ಗದಲ್ಲಿ ಅಡ್ಡಿಯಾಗಿ ತನ್ನ ಪ್ರಾಣವನ್ನು ಬಲಿದಾನ ಮಾಡಿದ ಜಟಾಯು ಪಕ್ಷಿಗಿಂತ ನಮ್ಮ ಜೀವನ ಕಡಿಮೆಯಾಗಬಾರದು.

ರುದ್ರಭೂಮಿಯಲ್ಲಿ ಭಸ್ಮವನ್ನು ಬಳಿದುಕೊಂಡು ವೈರಾಗಿಯಂತಿದ್ದ ನಿರ್ಲಿಪ್ತನಾದ ಶಿವನು ನೀಲಕಂಠನಾಗುತ್ತಿರಲಿಲ್ಲ. ಗಂಗೆಯನ್ನು ಜಡೆಯಲ್ಲಿ ಧರಿಸುತ್ತಿರಲಿಲ್ಲ. ದಕ್ಷಯಜ್ಞವನ್ನು ನಾಶಗೊಳಿಸುವುದಕ್ಕೆ ರುದ್ರನಾಗಿ ಬರುತ್ತಿರಲಿಲ್ಲ. ಆದರೆ ಇಷ್ಟೆಲ್ಲವನ್ನು ಮಾಡಿದರೂ ಅವನು ಯಾವ ಪಾಶದಲ್ಲಿರಲಿಲ್ಲ. ಶಿವನ ಈ ನಿರ್ಲಿಪ್ತ ಕಾರ್ಯಕಲಾಪಗಳೇ ಅವನನ್ನು ಸತ್ಯಂ ಶಿವಂ ಸುಂದರನನ್ನಾಗಿಸಿತು. ಭಗವಂತನು ಈ ಭೂಮಿಯ ಮೇಲೆ ಬಂದು ಅವತರಿಸಿ ಆಸಕ್ತ ಅನಾಸಕ್ತಿಯ ಭಾವದಿಂದ ಕೆಲಸ ಮಾಡಿ ಹೋಗುತ್ತಾನೆ.

ಧರ್ಮ-ಅರ್ಥ-ಕಾಮಗಳು ನಿರ್ಲಿಪ್ತ ನಿರ್ವಿಕಾರದಿಂದ ನಿರಂತರ ಕಾರ್ಯ ಪ್ರವೃತ್ತವಾಗಿ ಮೋಕ್ಷದೆಡೆಗೆ ಮನಸ್ಸು ತುಡಿಯಬೇಕು. ಬರಿಯ ಭೋಗೋತ್ಸಾಹದಿಂದಲ್ಲ. ಕರ್ತವ್ಯ ಬುದ್ಧಿಯ ತ್ರಿಕರಣ ಶುದ್ಧಿಯ ಪ್ರವೃತ್ತಿಯಿಂದಲೇ ಮುಕ್ತಿ ಅಥವಾ ಮೋಕ್ಷಸಾಧ್ಯ.

*

ವಾಚಿನಲ್ಲಿ ಜ್ಯೂಯೆಲ್ಸ್ ಏಕಿರುತ್ತವೆ?

ರಿಸ್ಟ್ ವಾಚಿನ ಮೇಲೆ ಸಾಮಾನ್ಯವಾಗಿ 17 ಜ್ಯೂಯೆಲ್ಸ್ ಅಂತ ಬರೆದಿರುವುದನ್ನು ನೀವೆಲ್ಲ ಗಮನಿಸಿರಬಹುದು. ಹಾಗೆಂದರೇನು ಗೊತ್ತೆ?

ಜೀಗದ ಕೈ ಕೊಡುವ ಅಥವಾ ತನ್ನಷ್ಟಕ್ಕೆ ತಾನೇ ವೈಂಡ್ ಆಗುವ ಆಟೋಮ್ಯಾಟಿಕ್ ರಿಸ್ಟ್ ವಾಚಿನಲ್ಲಿ ನೂರಕ್ಕೆ ಮೇಲ್ಪಟ್ಟು ಬಿಡಿ ಭಾಗಗಳಿರುತ್ತವೆ. ಈ ಗಡಿಯಾರದ ಗುಣಮಟ್ಟ ಹಾಗೂ ಬಾಳಿಕೆ ಈ ಭಾಗಗಳು ಯಾವ ಅಡಚಣೆ ಇಲ್ಲದೆ ಕೆಲಸ ಮಾಡುವುದರ ಮೇಲೇ ನಿರ್ಧಾರವಾಗುತ್ತದೆ. ಈ ಭಾಗಗಳ ನಡುವೆ ಘರ್ಷಣೆ ಕಮ್ಮಿ ಮಾಡಲು ರೂಬಿ ಅಥವಾ ಸಫೈರ್ ಸಿಂಥೆಟಿಕ್ ಜ್ಯೂಯೆಲ್‌ಗಳಿಂದ ತಯಾರಾದ ಬೇರಿಂಗ್‌ಗಳ ಮೇಲೇ ಈ ಭಾಗಗಳನ್ನು ಜೋಡಿಸುತ್ತಾರೆ.

ಕೆಲವರು ಎಡಚರಾಗುವುದೇಕೆ ?

*** ಚಂದ್ರಕಾಂತ ವಡ್ಡು ***

ಕಣ್ಣೆದುರು ಅಂಬೆಗಾಲಿಡುತ್ತ ಬೆಳೆಯುವ ಮಗು ಎಡಗೈಯನ್ನೇ ಹೆಚ್ಚು ಮುಂದೊಡ್ಡುವ ಸೂಚನೆ ತೋರಿದಾಗ ಬಹುತೇಕ ತಂದೆ-ತಾಯಿಂದಿರು ದಿಗಿಲುಗೊಳ್ಳುವುದು ಸಹಜ. ಏಕೆಂದರೆ ಅದೊಂದು ಅಸಹಜ ವರ್ತನೆಯಾಗಿ ಕಾಣಿಸುತ್ತದೆ. ಜನಸಂಖ್ಯೆಯ ಶೇಕಡಾ ಹತ್ತರಷ್ಟಿರುವ ಎಡಚರನ್ನು ಉಳಿದವರು ನೋಡುವ ದೃಷ್ಟಿಕೋನ ಸಹಜವಾಗಿರುವುದಿಲ್ಲ. ಅಷ್ಟೇಕೆ ಕೆಲವೇ ದಶಕಗಳ ಹಿಂದೆ ಎಡಚ (ರೊಡ್ಡ, ಲೊಡ್ಡ) ರನ್ನು ಬೌದ್ಧಿಕ ಊನವುಳ್ಳವರೆಂಬಂತೆ ನೋಡಲಾಗುತ್ತಿತ್ತು. ಯಾವುದಾದರೂ ವಸ್ತುವನ್ನು ಇಸಿದುಕೊಳ್ಳುವಾಗ – ವಿಶೇಷವಾಗಿ ಹಣವನ್ನು- ಎಡಗೈ ಮುಂದೊಡ್ಡುವುದು ಸಂಪ್ರದಾಯಶೀಲ ಮನಸ್ಸುಗಳಿಗೆ ಒಗ್ಗುವುದಿಲ್ಲ.

ವಿಚಿತ್ರವೆಂದರೆ ಪ್ರಾಣಿಗಳು ಮನುಷ್ಯರಂತೆ ಕೈಗಳ ಬಳಕೆಯಲ್ಲಿ ಎಡ, ಬಲವೆಂದು ಭೇದ ಮಾಡುವುದೇ ಇಲ್ಲ. ಅವುಗಳ ಎರಡೂ ಕೈಗಳು (ಕಾಲುಗಳು ?) ಸಮಾನವಾಗಿ ಬಳಸಲ್ಪಡುತ್ತವೆ. ಹಾಗಾದರೆ ಒಂದೇ ರೂಪ, ಆಕಾರ, ಶಕ್ತಿ ಪಡೆದ ಕೈಗಳ ಬಳಕೆಯಲ್ಲಿ ಮನುಷ್ಯ ತಾರತಮ್ಯ ತೋರ್ಪಡಿಸಲು ವಿಶೇಷ ಕಾರಣವೇನಿರಬಹುದು ? ಈ ತಾರತಮ್ಯ ಬರಿ ಆಕಸ್ಮಿಕವೇ ಅಥವಾ ಬೇರೇನಾದರೂ ಸಂಗತಿಗಳು ಇದನ್ನು ನಿರ್ಧರಿಸುತ್ತವೆಯೇ ?

ಈ ವಿಷಯದಲ್ಲಿ ಅನೇಕ ವಾದ, ವಿಶ್ಲೇಷಣೆಗಳು ಚರ್ಚೆಗೆ ಲಭ್ಯವಿದ್ದಾವಾದರೂ ಮೂಲ ಕಾರಣವಿನ್ನೂ ಖಚಿತಗೊಂಡಿಲ್ಲ. ಅನುವಂಶೀಯತೆಯೇ ಕೈಗಳ ಬಳಕೆಯಲ್ಲಿಯ ಭಿನ್ನತೆಗೆ ಕಾರಣವೆಂಬುದು ಕೆಲವರ ಅಭಿಪ್ರಾಯ. ಆದರೆ ಈ ನಿಲುವಿಗೆ ವ್ಯತಿರಿಕ್ತವಾದ ಅನೇಕ ಪ್ರಕರಣಗಳು ನಮ್ಮೆದುರು ಇರುವುದರಿಂದ ಈ ವಾದ ಗಟ್ಟಿಯಾಗಿ ನಿಲ್ಲುವುದಿಲ್ಲ. ಜಗತ್ತಿನಾದ್ಯಂತ ನಡೆಸಿದ ಅಧ್ಯಯನದಿಂದ ತಿಳಿದುಬರುವಂತೆ ಶೇ. 80 ರಷ್ಟು ಎಡಚುಗೈಯವರ ತಂದೆ-ತಾಯಂದಿರು ಬಲಗೈಯನ್ನೇ ಪ್ರಮುಖವಾಗಿ ಬಳಸುವವರಾಗಿದ್ದಾರೆ.

ಈ ದಿಸೆಯಲ್ಲಿ ಮತ್ತೊಂದು ಅಭಿಪ್ರಾಯದ ಪ್ರಕಾರ ಕೈಗಳ ಬಳಕೆಯನ್ನು ನಿರ್ದೇಶಿಸುವುದು ಮಕ್ಕಳ ಬೆಳೆಯುವ ಪರಿಸರ. ನವಜಾತ ಶಿಶು ಯಾವ ಒಂದು ಕೈಯನ್ನು ವಿಶೇಷವಾಗಿ ಮುಂದೆ ಮಾಡಲು ಯತ್ನಿಸದೆ ಎರಡೂ ಕೈಗಳನ್ನು ಏಕ ಕಾಲಕ್ಕೆ ಚಾಚುತ್ತದೆ. ಆದರೆ ವಸ್ತುಗಳನ್ನು ಗ್ರಹಿಸುವ ಸಾಮರ್ಥ್ಯವನ್ನು ಮಕ್ಕಳು ಗಳಿಸುತ್ತಿದ್ದಂತೆಯೆ ಅನೇಕ ಪಾಲಕರು ಆಟಿಕೆ, ತಿಂಡಿ ಮುಂತಾದುವುಗಳನ್ನು ಬಲಗೈಯೆಡೆಗೇ ಸರಿಸುವುದರ ಮೂಲಕ ಮಕ್ಕಳಲ್ಲಿ ಬಲಗೈ ಪ್ರಜ್ಞೆ ಮೂಡಿಸುತ್ತಾರೆ. ಅಲ್ಲದೆ ಮುಂಚಿನಿಂದ ಬಲಗೈ

ಬಳಕೆಯೇ ಹೆಚ್ಚಾಗುವುದರಿಂದ ಮಗು ಬಾಲ್ಯಾವಸ್ಥೆ ದಾಟುತಿದ್ದಂತೆ ದೇಹದ ಬಲ ಭಾಗವೇ ಹೆಚ್ಚು ಸದೃಢವಾಗಿ ಬೆಳೆಯುವುದು ಕಂಡುಬರುತ್ತದೆ.

ಇತ್ತೀಚಿನ ಸಂಶೋಧನೆ ಮೇಲಿನ ಎರಡೂ ವಾದಗಳನ್ನು ಅಲ್ಲಗಳೆದು ಬೇರೆಯದೇ ಆದ ವಿಶ್ಲೇಷಣೆಯನ್ನು ಮುಂದಿಸುತ್ತದೆ. ಅನುವಂಶೀಯತೆಯ ಕಾರಣ ಮತ್ತು ಪರಿಸರದ ಪ್ರಭಾವಗಳೆರಡನ್ನೂ ಒಪ್ಪದ ಈ ಹೊಸ ಶೋಧದ ಪ್ರಕಾರ ವ್ಯಕ್ತಿಯ ಕೈ ಬಳಸುವಿಕೆಯನ್ನು ನಿರ್ಧರಿಸುವುದು ಮಿದುಳಿನ ರಚನೆ ಮತ್ತು ಕಾರ್ಯವಿಧಾನ.

ಮಿದುಳಿನ ಅತ್ಯಂತ ಪ್ರಭಾವ ಶಾಲಿ ಭಾಗವಾದ ನಿಮ್ಮಿದುಳು (cerebrum) ಎರಡು ಅರ್ಧಗೋಲಗಳಿಂದ ರಚಿಸಲ್ಪಟ್ಟಿದೆ. ಸುಮಾರು 200 ದಶ ಲಕ್ಷ ಜೀವಕಣಗಳನ್ನೊಳಗೊಂಡ ಕಣಜಾಲವೊಂದು ಈ ಎರಡೂ ಅರ್ಧಗೋಲಗಳನ್ನು ಜೋಡಿಸುವ ಕೊಂಡಿಯಾಗಿರುತ್ತದೆ. ಈ ಅರ್ಧಗೋಲಗಳ ಕಾರ್ಯವಿಧಾನದಲ್ಲಿನ ವಿಶೇಷ ಅಂಶವೆಂದರೆ; ದೇಹದ ಎಡಭಾಗದ ಸ್ಪಂದನಗಳಿಗೆ ಬಲಗಡೆಯ ಅರ್ಧಗೋಲವೂ, ಬಲ ಭಾಗದ ಸ್ಪಂದನಗಳಿಗೆ ಎಡಬದಿಯ ಅರ್ಧಗೋಲವೂ ಪ್ರತಿಕ್ರಿಯಿಸಿ ನಿಯಂತ್ರಿಸುವುದು. ವ್ಯಕ್ತಿಯ ದೇಹದ ಬಲಭಾಗದಲ್ಲಿ ಸೂಜಿಯಿಂದ ಚುಚ್ಚಿದರೆ ಆ ನೋವಿನ ಸಂದೇಶವನ್ನು ವಿದ್ಯುದ್ ರಾಸಾಯನಿಕ ಮಿಡಿತಗಳು (Electrochemical pulses) ನರವಾಹಕಗಳ ಮೂಲಕ ಮಿದುಳಿನ ಎಡ ಅರ್ಧಗೋಲಕ್ಕೆ ರವಾನಿಸುತ್ತವೆ.

ಅಲ್ಲದೆ ಈ ಅರ್ಧಗೋಲಗಳು ಮನುಷ್ಯನ ಚಟುವಟಿಕೆಗಳಿಗೆ ಸಂಬಂಧಿಸಿ ಕರ್ತವ್ಯಗಳನ್ನು ತಮ್ಮಲ್ಲಿಯೇ ಹಂಚಿಕೊಂಡು ನಿಯಂತ್ರಿಸುವುದು ಸಾಬೀತಾಗಿದೆ. ಉದಾಹರಣೆಗೆ: ಮಾತನಾಡುವಾಗ, ಬರೆಯುವಾಗ ಬಹಳ ಮಟ್ಟಿಗೆ ಎಡ ಅರ್ಧಗೋಲವು ಕ್ರಿಯಾಶೀಲವಾಗಿದ್ದರೆ, ಮುಖಗಳನ್ನು ಗುರುತಿಸುವಾಗ ರೇಖಾಗಣಿತವನ್ನು ಮಾಡುವಾಗ ಬಲ ಅರ್ಧಗೋಲವು ಬಳಸಲ್ಪಡುತ್ತದೆ. ಅಂದ ಮಾತ್ರಕ್ಕೆ ಎರಡೂ ಅರ್ಧಗೋಲಗಳು ತಮ್ಮ ತಮ್ಮ ಕರ್ತವ್ಯ ನಿರ್ವಹಿಸುತ್ತ ಪರಕೀಯವಾಗೇನೂ ಉಳಿಯುವುದಿಲ್ಲ. ಕಾರ್ಪಸ್ ಕಲೋಸಮ್ (Corpus callosum) ಎಂದು ಕರೆಯಲಾಗುವ ಮಿದುಳ ದಿಂಡೊಂದು ಈ ಎರಡೂ ಭಾಗಗಳ ಸಂದೇಶಗಳನ್ನು ತಕ್ಷಣವೇ ವಿನಿಮಯಿಸಿ ಸಂಯೋಜಿಸುವುದರಿಂದ ಅರ್ಧಗೋಲಗಳು ಒಂದೇ ಭಾಗದಂತೆ ವರ್ತಿಸುತ್ತವೆ. ವ್ಯಕ್ತಿಯ ಕೈಗಳ ಬಳಸುವಿಕೆಯನ್ನು ಮಿದುಳಿನ ಈ ವಿಸ್ಮಯಕಾರಿ ರಚನೆಯೇ ನಿರ್ಧರಿಸುತ್ತದ್ದೆಂಬುದು ಇತ್ತೀಚಿನ ಸಂಶೋಧನೆಯ ಫಲಿತಾಂಶ.

ಕೆನಡಾ ವಿಶ್ವವಿದ್ಯಾನಿಲಯದಲ್ಲಿ ನಡೆಸಿದ ಅಧ್ಯಯನವೊಂದು ಕೆಲವು ಮಾಹಿತಿಗಳನ್ನು ಹೊರಗೆಡಹಿದೆ. ಈ ಅಧ್ಯಯನಕ್ಕೆ ಒಳಪಡಿಸಿದ 42 ಜನರಲ್ಲಿ 27 ಮಂದಿ ಬಲಗೈ ಬಳಕೆಯವರೂ, ಇಬ್ಬರು ಎಡಚರೂ, ಉಳಿದ 13 ವ್ಯಕ್ತಿಗಳು ಎರಡೂಕೈ ಬಲಗೈ ಬಳಕೆಯುಳ್ಳವರೂ ಆಗಿದ್ದರು. ಅಧ್ಯಯನದ ಅಂಗವಾಗಿ ಪ್ರಯೋಗಕ್ಕೊಳಪಟ್ಟವರು ಸತ್ತ ನಂತರ ಅವರ ಮಿದುಳುಗಳನ್ನು ಕೊಯ್ದು ಪರೀಕ್ಷಿಸಲಾಯ್ತು. ಆಗ ಬಲಗೈ ಬಳಕೆಯವರ ಮಿದುಳು ದಿಂಡಿನ ಗಾತ್ರ ಉಳಿದವರಿಗಿಂತ ಶೇಕಡಾ ಹತ್ತರಷ್ಟು ಕಡಿಮೆ ಇದ್ದದ್ದು ಕಂಡು ಬಂತು. ಹಾಗಾದರೆ 25 ದಶಲಕ್ಷ ಹೆಚ್ಚುವರಿ ಮಿದುಳ ಜೀವಕಣಗಳನ್ನು ಹೊಂದಿದ ಎಡಚರು ಹೆಚ್ಚು ಬುದ್ಧಿವಂತರಾಗಿರುತ್ತಾರೆಯೇ ? ಜಗತ್ತಿನಲ್ಲಿ ಇದುವರೆಗೆ ದಾಖಲಾದ ಮಿದುಳ ಸಾಮರ್ಥ್ಯದಲ್ಲಿ ಅಗ್ರಗಣ್ಯನೆಂದು ಪರಿಗಣಿಸಲಾಗಿರುವ ಇಟಲಿಯ ಬಹುಮುಖ ಪ್ರತಿಭೆಯ ಕಲಾವಿದ ಲಿಯೋನಾರ್ಡೋ ಡ ವಿಂಚಿ ಎಡಚನಾಗಿದ್ದ!

ಕಸ್ತೂರಿ

ವ್ಯಕ್ತಿಯ ಕೈಬಳಕೆಯ ನಿರ್ಣಯದಲ್ಲಿ ಮಿದುಳದಿಂಡಿನ (corpus callosum) ಗಾತ್ರವೇ ಹೇಗೆ ಪರಿಣಾಮ ಬೀರುತ್ತದೆಂಬುದು ಮಾತ್ರ ಇದುವರೆಗೂ ಸ್ಪಷ್ಟವಾಗಿಲ್ಲ.

ಭಾಷೆ ಮತ್ತು ವಸ್ತುಗಳ ಬಳಕೆಯನ್ನು ಗಣಿಸಿ ಮನುಷ್ಯ ಪ್ರಾಣಿಗಳಿಂದ ಭಿನ್ನವಾಗಿ ನಿಲ್ಲುವ ನಿಟ್ಟಿನಲ್ಲಿ ವಿಚಾರ ಮಾಡಿದಾಗ ಬಲಗೈ ಬಳಕೆ ವಿಕಸನ ಕ್ರಿಯೆಯ ಪರಿಣಾಮವೆಂದೂ ತೋರುತ್ತದೆ.

ಪ್ರಯೋಗ ಶಾಲೆಯಲ್ಲಿ ಇಲಿಗಳ ಮೇಲೆ ಸಂಶೋಧನೆ ಕೈಗೊಂಡಾಗ ಅಗತ್ಯ ಸಮಯದಲ್ಲಿ ಅರ್ಧದಷ್ಟು ಇಲಿಗಳು ಎಡಗೈಯನ್ನು ಬಳಸಿದರೆ ಉಳಿದರ್ಧ ಬಲಗೈಯನ್ನು ಬಳಸಿದ್ದು ಕಂಡುಬಂತು. ಅವುಗಳ ಮಿದುಳನ್ನು ಪರೀಕ್ಷೆಗೆ ಒಳಪಡಿಸಿದಾಗ ಡೋಪ್‌ಮೈನ್ ಎಂಬ ರಾಸಾಯನಿಕ ನರವಾಹಕದ (Chemical neurotransmitter) ಪಾತ್ರ ಕುತೂಹಲ ಕೆರಳಿಸಿತು. ಈ ಡೋಪ್‌ಮೈನ್‌ನ ಪ್ರಮಾಣ ಎಡಚ ಇಲಿಗಳ ಮಿದುಳ ಎಡ ಅರ್ಧಗೋಲದಲ್ಲಿಯೂ, ಬಲಗೈ ಬಳಕೆಯ ಮೂಷಿಕಗಳ ಬಲ ಅರ್ಧಗೋಲದಲ್ಲಿಯೂ ಹೆಚ್ಚಿರುವ ಅಂಶ ಬೆಳಕಿಗೆ ಬಂತು. ಮನುಷ್ಯನಲ್ಲಿಯೂ ಈ ರಾಸಾಯನಿಕ ನರತಂತುವಿನ ಪ್ರಮಾಣ ಪ್ರಭಾವ ಬೀರಬಹುದೇ ಎಂಬ ಹೊಸ ಆಲೋಚನೆಯೊಂದು ಇದೀಗ ಹುಟ್ಟಿಕೊಂಡಿದೆ.

ಪೌಲ್ ಬೇಕರ್ ಎಂಬ ಕೆನಡಾದ ಮನಶಾಸ್ತ್ರಜ್ಞ 1975 ರಲ್ಲಿ ಮಾನವನ ಕೈ ಬಳಕೆಯ ಕುರಿತ ತನ್ನ ವಿಶಿಷ್ಟವಾದವನ್ನು ಮುಂದಿಟ್ಟಿದ್ದ. ಆತನ ಪ್ರಕಾರ ವ್ಯಕ್ತಿಯ ಎಡಚತನಕ್ಕೆ ಒತ್ತಡಯುಕ್ತ ಹೆರಿಗೆ ಅಥವಾ ಕ್ಲಿಷ್ಟ ಬಸಿರೇ ಕಾರಣ! ಇನ್ನೂ ಮುಂದುವರೆದ ಪೌಲ್ ಬೇಕನ್ ಒಂದು ಸಮಾಜದಲ್ಲಿಯ ಎಡಚರ ಪ್ರಮಾಣವನ್ನು ಮಾನದಂಡವಾಗಿಟ್ಟು ಕೊಂಡು ಅಲ್ಲಿಯ ವೈದ್ಯರ ಪರಿಣತಿಯನ್ನೇ ಅಳೆಯಬಹುದೆಂದು ಹೇಳಿ ವಿವಾದ ಹುಟ್ಟಿಸಿದ. ನಂತರ ಲಂಡನ್ನಿನ ವಿಜ್ಞಾನಿಯೊಬ್ಬ ಬ್ರಿಟನ್ನಿನಲ್ಲಿ ಹುಟ್ಟಿದ 11,000 ಮಕ್ಕಳ ದಾಖಲೆಗಳನ್ನು ವಿಶ್ಲೇಷಿಸಿ ಎಡಚತನಕ್ಕೂ ಜನನತೊಂದರೆಗಳಿಗೂ ಸಂಬಂಧವಿಲ್ಲವೆಂದು ಸಾರಿದ.

ಕೆನಡಾದಲ್ಲಿ ನಡೆದ ಸರ್ವೇಕ್ಷಣೆ ಕೈಬಳಕೆಯ ಕುರಿತು ಮತ್ತೊಂದು ಕುತೂಹಲಕರ ಆಯಾಮವನ್ನು ಹೊಳೆಯಿಸಿದೆ. ಈ ಅಧ್ಯಯನದ ಪ್ರಕಾರ 30 ರಿಂದ 35 ವರ್ಷದೊಳಗಿನ ತಾಯಂದಿರಲ್ಲಿ ಎಡಚು ಮಕ್ಕಳು ಹುಟ್ಟುವ ಸಾಧ್ಯತೆ ಶೇ. 25 ರಷ್ಟು ಹೆಚ್ಚಿರುತ್ತದೆ. ತಾಯಂದಿರ ವಯಸ್ಸು 35 ರಿಂದ 39 ರೊಳಗಿದ್ದರೆ ಎಡಚು ಮಕ್ಕಳು ಜನಿಸುವ ಸಾಧ್ಯತೆ ಶೇ. 70 ರಷ್ಟು ಹೆಚ್ಚಿದರೆ, ಈ ಪ್ರಮಾಣ 40 ರಷ್ಟು ಮೇಲ್ಪಟ್ಟ ತಾಯಿಂದಿರಲ್ಲಿ ಶೇ. 130 ರಷ್ಟು ಅಧಿಕವಾಗಿರುತ್ತದೆ.

ಬಲಗೈ ಬಳಸುವವರೇ ಹೆಚ್ಚಾಗಿರುವ ಸಮಾಜದಲ್ಲಿ ಎಡಚರಿಗೆ ವಿಶೇಷವಾದ ನೈಸರ್ಗಿಕ ಅನುಕೂಲಗಳೇನಾದರೂ ಇರಬಹುದೇ? ವಿಕಾಸವಾದದ ಪ್ರಕಾರ ಎಡಚರಿಗೆ ಹೆಚ್ಚು ಅನುಕೂಲಗಳು ಇರಲೇಬೇಕು. ಇಲ್ಲದಿದ್ದರೆ ಎಡಚರ ಸಂಖ್ಯೆ ಶೇ. 10ಕ್ಕೆ ಸ್ಥಿರವಾಗಿ ನಿಲ್ಲುವುದರ ಬದಲು ಕಾಲದ ಕದಲುವಿಕೆಯಲ್ಲಿ ಇಳಿಮುಖವಾಗಬೇಕಿತ್ತು. ಆದರೆ ಹಾಗಾಗಿಲ್ಲ. ಎಡಚರಿಗೆ ಕೆಲವು ನೈಸರ್ಗಿಕ ಅನುಕೂಲಗಳಿರುವಂತೆ ಹಲವು ಅನಾನುಕೂಲಗಳೂ, ತೊಂದರೆಗಳೂ ಇರುವುದು ನಿಜ ಸಂಗತಿ. ಹಾಗೆಯೇ ಬಲಗೈ ಬಳಕೆಯವರಿಗೂ!

(ಆಧಾರ)

"ಶ್ರಾವಣ ಮಧ್ಯಾಹ್ನ"ದ ಮಗು

ಪ್ರತಿಭಾ ನಂದಕುಮಾರ್



ಚಿತ್ರ: ಹ.ಶಿ. ಭೈರನಟ್ಟಿ

ಜಯಂತ ಕಾಯ್ಕಿಣಿ ಅವರ ಕಾವ್ಯಸಂಗ್ರಹ 'ಶ್ರಾವಣ ಮಧ್ಯಾಹ್ನ' ಕ್ಕೆ ಸೃಜನಶೀಲ ಮನಸ್ಸೊಂದು ಹೇಗೆ ಸ್ಪಂದಿಸುತ್ತದೆ ? ಮತ್ತೊಬ್ಬ ಕವಯಿತ್ರಿ ಬರೆಯುತ್ತಾರೆ.

ಸುಂಟರ ಗಾಳಿಯಂತೆ ಧಡಾರನೆ ಬಾಗಿಲು ತೆರೆದು ಅಸಾಧ್ಯ ಗದ್ದಲ ಮಾಡುತ್ತಾ ಓಡಾಡುವ ನನ್ನವರು ನಂಬಲು ಸಾಧ್ಯವೇ ಇಲ್ಲದಷ್ಟು ನಿಶ್ಶಬ್ದವಾಗಿ ಅಂಗಾಲ ಮೇಲೆ ನಡೆಯಲು ತೊಡಗಿದ್ದು ನಮ್ಮ ಮಗ ಹುಟ್ಟಿದಾಗ ಆ ಬಗ್ಗೆ ನಾನು ಅವರನ್ನು

ತಮಾಷೆ ಮಾಡುತ್ತಲೇ ಇದ್ದೆ. ಒಂದು ದಿನ ಜಯಂತ ಕಾಯ್ಕಿಣಿಯವರ 'ಶ್ರಾವಣ ಮಧ್ಯಾಹ್ನ' ಕವನ ಸಂಕಲನ ಓದಲು ಎತ್ತಿ ಕೊಂಡೆ. ಮೊದಲ ಕವನದಲ್ಲೇ

"ಮಕ್ಕಳ ನಿದ್ದೆಗೆಡಿಸದಂತೆ ಅಂಗಾಲಲ್ಲಿ ನಡೆದರು" ಎನ್ನುವ ಸಾಲು ಓದಿ ಆ ಕವನಕ್ಕೆ ಮರುಳಾಗಿಬಿಟ್ಟೆ. ನಂತರ ಕೆಲವು ದಿನಗಳ ಕಾಲ ಆ ಕವನ ಸಂಕಲನ ಹಗಲೂ ಇರುಳೂ ನನ್ನ ಜೊತೆಯೇ ಸುತ್ತಾಡಿತು. 'ಶ್ರಾವಣ ಮಧ್ಯಾಹ್ನ'ದ ತುಂಬ ಮಿಂಚಿ ಬೆಳಗುವ ಮಗುವಿನ ಚಿತ್ರಣ ನನ್ನನ್ನು ಪೂರ್ತಿ ಸೆರೆ ಹಿಡಿದುಬಿಟ್ಟಿತ್ತು. ಅದೂ ಬಯಸಿ, ಹಂಬಲಿಸಿ ಮಗುವನ್ನು ಪಡೆದು ತಾಯ್ತನವನ್ನು ಕಣ್ಣು ಬಾಯಿ ಬಿಟ್ಟಕೊಂಡು ಅದ್ಭುತದಂತೆ ಸವಿಯುತ್ತಿದ್ದ ನಾನು ಹೇಳ ಲಾರದ ಅಕ್ಷರದಲ್ಲಿ ಹಿಡಿದಿಡಲಾಗದ ಭಾವ ಗಳನ್ನೆಲ್ಲ ಈ ಹೆರದ ಗಂಡಸು ಎಷ್ಟು ಸುಂದರವಾಗಿ ಹೇಳಿ ಮುಗಿಸಿಬಿಟ್ಟಿದ್ದಾನೆ ಎನ್ನುವ ಹೊಟ್ಟೆಕಿಚ್ಚು. ಮಗು ಹುಟ್ಟುವ, ಬೆಳೆಯುವ, ನಲಿಯುವ, ನೋಯುವ, ಸಾಯುವ, ಹುಟ್ಟದೆಯೇ ಇರುವ ಚಿತ್ರಗ ಳೆಲ್ಲ 'ಶ್ರಾವಣ ಮಧ್ಯಾಹ್ನ'ದ ತುಂಬ ಅಡಿ ಗಡಿಗೆ ಬರುತ್ತವೆ. ತಾಯಿಯೊಬ್ಬಳು ಮಗು ವಿಗೆ ಸಂಬಂಧಪಟ್ಟ ಯಾವುದನ್ನೇ ನೋಡಿ ದರೂ ಅದನ್ನು ತನ್ನ ಮಗುವಿಗೇ ಅನ್ವಯಿ ಸಿಕೊಳ್ಳುವಂತೆ ಮತ್ತೆ ಮತ್ತೆ ಯಾವು ಯಾವುದೋ ಸಂದರ್ಭದಲ್ಲಿ ಥುತ್ತನೆ ಮಗುವಿನ ಚಿತ್ರಣ ತಂದು ಮುಂದೆ ನಿಲ್ಲಿ ಸುತ್ತಾರೆ ಜಯಂತ ಕಾಯ್ಕಿಣಿ. ಬರಿಯ ವರ್ಣನೆಯಾಗಿ ಅಲ್ಲ, ಮಗುವಿನ Concrete ಪ್ರತಿಮೆ ನೀಡುತ್ತಾರೆ. ಎಂತಹ ಸಂದರ್ಭಗಳಲ್ಲಿ ಮಗುವನ್ನು ಕಾಣುತ್ತಾರೆಂ ದರೆ-ರಸ್ತೆಯ ನಟ್ಟ ನಡುವೆ ನಿಂತು ಮದು ವೆಯಾಗಲು ಕೇಳಿದವಳ ಕೈಲೂ "ಹಲಸಿನ ತೊಳೆಯಂಥ ಹಸಿ ಶಿಶು"

"ನಸುಕಿನ ತಿಪ್ಪೆಗುಂಡಿಯಲ್ಲಿ ಬಾಗಿ ಕಾಗದ ಹೆಕ್ಕುವ/ಹೆಂಗಸಿನ ಬೆನ್ನಿಗೊಂದ ಬಟ್ಟೆ ತೊಟ್ಟಿಲು/ಅದರಲ್ಲೊಂದು ಪುಟ್ಟ ಹೊಟ್ಟೆ ಜೋಡಿ ಮೀನು ಕಣ್ಣು", ದಿನ ವಿಡೀ ದಣಿದ ಒಕ್ಕಲು ಹೆದ್ದಾರಿ ಬಳಿ ಒಲೆ ಹೂಡಿದಾಗ "ಮರ ಮರದ ಟೊಂಗೆಗೆ ಇಳಿಬಿದ್ದ ಜೋಳಿಗೆಯ ತೊಟ್ಟಿಲಲಿ ಹಸು ಗೂಸು ತೂಗುತ್ತಿವೆ", ರಾಗ ಮಹಾ ಪೂ ತೆರೆದು ತೂಗುವಾಗ ಕೂಡಾ "ಹೆರಿ ವಾರ್ಡುಗಳ ಹೊರಗೆ ಬಣ್ಣ ಬಳಿಯಲೆಂದ ಖಾಲಿ ತೊಟ್ಟಿಲುಗಳ ರಾಶಿ"


ಯಾಕೆ ಕಾಡುತ್ತದೆ ಈ ಕೂಸು ಕಂದ ತೊಟ್ಟಿಲು ಕವಿಯನ್ನು? ಹೆರಿಗೆಯಲ್ಲಿ ಸಾಯುವ ಹೆಂಗಸರ ಬಟ್ಟೆಗಳು ಈ ನೆಲದ ಮೇಲೆ ಉಳಿದು ಹೋಗುವ ಚಿಂತೆಏಕೆ ಕವಿಗೆ? ಆರತಕ್ಷತೆಗೆ ನಿಂತ ಮದುಮಗ ಮದುವಳತಿ ಎಷ್ಟೋ ವರುಷಗಳ ನಂತ ಆಸ್ಪತ್ರೆಯ ಒಪಿಡಿ ಕ್ಯೂನಲ್ಲಿ ಸಿಗುತ್ತಾ ಯಾಕೆ? ಸಂಜೆ ಐದಕ್ಕೆ ಕೈದಿಯ ಭೇಟಿ ಬಂದವಳು ಬಸುರಿ ಯಾಕೆ?

'ಶ್ರಾವಣ ಮಧ್ಯಾಹ್ನ'ದಲ್ಲಿ ಕವಿಯ ಕಣ್ಣು ಎಷ್ಟರಮಟ್ಟಿಗೆ ಈ ಬಗ್ಗೆ ಎಚ್ಚತ್ತಿದೆ ಎಂದರೆ

ತನಗಾಗಿ ಮೆಟ್ಟಲುಗಳನ್ನೇರುತ್ತಾ ಬಂದ ವಳು ಹಸಿರು ಗೊಂಬೆಯಂತೆ, ಅವಳ ಬರಲು ಹಲವು ಸೂರ್ಯೋದಯಗಳ ಬೇಕಾದುವಂತೆ, ಅವಳು ಎದೆಗೆ ಬಂ ಕವಿತೆ ಮಾತ್ರವಾಗಿದ್ದರೆ ಸಾಕಾಗಿತ್ತು. ಆದ ತನ್ನ ಸೂರ್ಯ ಅವಳೊಳಗನ್ನು ಸೇ "ಹೊಳೆಯುತ್ತಾ ನೀನು ಬೆಳಕಿನ ದೇವಿಯ ಗುವುದನ್ನು ನೋಡುವೆ" ಎನ್ನುವ ಹಂಬ ಹಾಗೆ ಆದಾಗಲೂ ಅದೊಂದು Casual ಸಂಗತಿ ಅಲ್ಲ. ಕವಿಗೆ ಅದೊಂದು ದಿಗ್ಭ್ರಮೆ.

"ಎಲ್ಲಿಂದ ಬಂತಿದು ಬೆಳಕು ನಮ್ಮ ಮೀಟಿ ಯಾವ ತಂತಿಯ ಗುಂಟ ಸಂಚರಿಸಿ ಮಿಂಚು" ಎನ್ನುವ ಆಶ್ಚರ್ಯ.

ತಾರಸಿಯಲ್ಲಿ ಕಳೆದ ಇರುಳಿನ ಕೊನೆ ಯಲ್ಲಿ ಎಲ್ಲ ತಿಳಿಯಿತೆಂದು "ಜಮಖಾ



ಹೊಳೆವ
ಕಂಗಳ ಚಕೋರಿ
ನಲ್ಲನ
ಎದೆಗೊರಗಿ
ಕಣ್ಮುಚ್ಚಿದಾಗ
ಸುತ್ತ ಕತ್ತಲು!

ಪ್ರಕಾಶ.ಎಸ್.ಮನ್ನಂಗಿ

ಕೊಡವಿ ತಾರಸಿಯಿಂದ ಇಬ್ಬನಿಗೆ ಬಾಯ್ತೆರೆದು" ಇಳಿದು ಬರಬಹುದಿತ್ತು. ಅದಕ್ಕೆ ಮಿಗಿಲಾಗಿ ಈಗ "ಇರುಳು ಗುಟ್ಟುಗಳನ್ನು ಬಯಲಿಗೆ ಕೊಡುತ್ತಿದೆ" ಎನ್ನುವುದನ್ನು ಹೇಳಬೇಕಿದೆ ಕವಿಗೆ. ಆಗ "ಋತು ಸುರಿದು ಹೋದರೂ ನನ್ನವಳ ತೊಳೆದ ಕಣ್ಣುಗಳ ಅಂಚಿಗೆ ಬಂದು ನಿಲ್ಲುತ್ತದೆ ಈ ಕಟ್ಟಕಡೆಯ ಮೋಡ ಮತ್ತು ಅದರಾಚೆಯ ನಕ್ಷತ್ರ" ಎನ್ನುವ ಭಾವ ಎದ್ದು ನಿಲ್ಲುತ್ತದೆ.

ಬಸಿರಾಗುವುದೆಂದರೆ ಬೆಳಕಾಗುವುದು ಮಾತ್ರವಲ್ಲ ಅದು "ಮಣ್ಣು ಮಾಗುವಂತೆ" 'ಎರೆ ಮಣ್ಣಿಗೆ ಹೊಳೆ ಮೈತಳೆದಂತೆ' "ಗುಟ್ಟುಗಳನ್ನು ಬಯಲಿಗೆ ಕೊಟ್ಟಂತೆ", "ಅಕ್ಕರೆಯ ಹಂತೆ ಒಳಗೆಂಥ ಮಿಡಿಯುವ ಪುಟ್ಟ ಜೀವಲೋಕ", ಆಗ ಗಾಳಿ ಬೀಸುವುದೂ "ಮುದ್ದು ಮಡದಿಯ ಪುಟ್ಟ ಬಸಿರು ಹೊಟ್ಟೆ ಸವರಲೆಂದೆ".

ಮಗುವಿನ ಬಗ್ಗೆ, ಬಸಿರು, ಹಡೆಯುವುದು ಇತ್ಯಾದಿಗಳ ಬಗ್ಗೆ ತಾಯಂದಿರಿಗೆ ಮಾತ್ರ Obsession ಇರುತ್ತದೆಂದುಕೊಂಡ ನಾನು ಈ ಚಿತ್ರಣಗಳಿಂದ ಪುಳಕಗೊಂಡುದು ಸಹಜವೇ. ಆ ಕಾರಣಕ್ಕಾಗಿ 'ಶ್ರಾವಣ ಮಧ್ಯಾಹ್ನ'ದಲ್ಲಿ ಈ ಕವನ ಇಲ್ಲಿಗೆ ಮುಗಿದು ಇದು ಇಲ್ಲಿಂದ ತೊಡಗಿತು ಎನ್ನುವುದನ್ನು ಮರೆತು ಇಡೀ ಸಂಕಲನವೇ ಒಂದಾಗಿ, ಸಮಗ್ರವಾಗಿ, ದಟ್ಟ ಮಮಕಾರದ ಪ್ರತಿಭೆಯಿಂದ ಮನಸ್ಸಿಗೆ ಹತ್ತಿರವಾಗುತ್ತದೆ. ಹಾಗೆಯೇ ಗೋಚರವಾಗುತ್ತದೆ. ಜಯಂತ ಕಾಯ್ಕಿಣಿ ಕಾವ್ಯ ಸೃಷ್ಟಿಗೂ ಜೀವ ಸೃಷ್ಟಿಗೂ ಕಂಡುಕೊಂಡ ಸಾಮ್ಯ. ಕವನ ಹುಟ್ಟುವುದೂ ಮಗು ಹುಟ್ಟುವುದೂ ಒಂದೇ ರೀತಿ.

"ಆ ಫೇರಿಯ ದಾರಿ ಕೊನೆಗೆ ಒಂದು ಹೆರಿಗೆ ಕೋಣೆ / ಆಚೆಗಿನ ಬೆಳಕೊಂದು ಯೋನಿ ದಾಟಿ ಈಚೆ ಬಂದಿದ್ದೇ ಝಗ್ಗನೆ ಧ್ವನಿಯೊಡೆದು ಅಲಾ ಮಗು ಕೂಗಿದೆ/ಚಿಮ್ಮಿ ಚಿಮ್ಮಿ ಅಳು ಅತ್ತರೇ ಉಸಿರು/ ದಿಕ್ಕು ದಿಕ್ಕಿಗೂ ಅದೇ ಧ್ವನಿ ಅದೇ ರೂಪ ಅದೇ ನಿಜವೊಂದು" ಹುಟ್ಟು ಎಂದರೆ ಆಚೆಗಿನ ಬೆಳಕು ಝಗ್ಗನೆ ಈಚೆ ಬಂದಂತೆ. ಮಗು ಎಂದರೆ "ಮಳೆ ಸೆಲೆದ ಮೋಡಕ್ಕೆ ಮಿಂಚಿ ಮಣ್ಣು ಎದೆಯುಕ್ಕಿ ಬಿಕ್ಕು ಹೂ"ವಾದಂತೆ, ಅದು "ಕರೆದಂತೆ ಯಾವುದೋ ಹೊಸ ಉಪವನ" ಅದು ನಗುತ್ತದೆ "ಕಡಲು ನಸುಕಿನ ದೋಣಿ ತೆರೆದಂತೆ ಹಾಯಿ" ಅದು "ರುಚಿಯ ಆಚೆಗೆ ಮೊಗ್ಗು ಒಡೆವ ದಿವ್ಯ".

ಹಡೆದ ನಂತರ ನಿರಾಳತೆ ಎಷ್ಟು ಹಾಯೆಂದರೆ "ಮುಗ್ಧ ಮಡಿಲೊಳಗೀಗ ಎಂಥ ಮುದ್ರೆ ಎಂಥ ಈಜಿನ ದಣಿವು ಸಂತಸದ ನಿದ್ರೆ" ಕವನ ಸೃಷ್ಟಿಯನ್ನೂ ಜೀವ ಸೃಷ್ಟಿಯನ್ನೂ ಅನುಭವಿಸಿದವರಿಗೇ ಗೊತ್ತು ಈ ಈಜಿನ ದಣಿವಿನ ನಿದ್ರೆಯ ಗಾಢತೆ.

ಇನ್ನು ಮುಂದೆ ಈ ಕೂಸು ಅಂಬೆಗಾಲಿಟ್ಟು ನಲಿಯುತ್ತದೆ.

"ಅವುಗಳ ಕಾಲಿಗೆ ಸರಪಳಿ

ಕೊರಳಿಗೆ ಜೋಲ್ಲು ವಸ್ತ್ರ ಕಟ್ಟಿ ಭದ್ರ

ಓಣಿಯ ಇಕ್ಕೆಲದ ಮೆಟ್ಟಿಲ ಮೇಲಿನ ಮನೆಗಳಲ್ಲಿ

ಸಾಕುತ್ತಲೇ ಉಳಿದೆವು"

ಎನ್ನುವ ಜಯಂತ ಅವು ರಂಗೋಲಿ ಕೆಡಿಸಲು ಬಂದರೆ ತಡೆಯುವ ಅಲೇ ಕಾಗೆ ಅಂತ ಹಾಲನ್ನು ಉಣ್ಣಿಸುವ, ಮನೆ ತುಂಬ ಧೂಪದ ಹೊಗೆ ಹಾಕುವ, ಒಗ್ಗರಣೆಗೆ ಬೆಳ್ಳುಳ್ಳಿ ಸುಲಿದ ಕೈ ಬೆರಳಲ್ಲಿ ಸಿಂಬಳ ಒರೆಸುವ ಅಮ್ಮನಾಗಿ ಬಿಡುತ್ತಾರೆ. ಅಷ್ಟೇ ಅಲ್ಲ-

"ಲಾರಿ ರಸ್ತೆ ರೋಲರು ಬಂದರೆ ಸಾಕು

ಒಳಕ್ಕೆಳೆದುಕೊಂಡು" ಬಿಡುವ ಥೇಟು ತಾಯಿ.

ತಮ್ಮ ಕವನಗಳನ್ನು ಎಂದಿಗೂ ಸಮವಸ್ತ್ರ ಹಾಕಿ ಕಳಿಸಿಕೊಡಲು ಇಷ್ಟಪಡದ ಜಯಂತ ಶಾಲೆಗೆ ಹೋಗುವ ಮಕ್ಕಳ ಚಿತ್ರಗಳನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸುತ್ತಾರೆ ಆಗ ಹಗಲೂ "ಅಳುತ್ತಾ ಶಾಲೆಗೆ ಹೊಂಟಿದೆ" ಎನ್ನುತ್ತಾರೆ. ಆಗ "ಶಾಲೆ ಬಯಲಿಡೀ ಖಾಕಿ ಬಿಳುಪು ಎನ್ನಿಸಿ ಕವಾಯತು ಚಂದ ಮಾವುದ ತುಂಬ ಬಣ್ಣದ ಬಣ್ಣದ ಕಾಳಗ" ಮಗುವಿಗೆ ಸಂಜೆಯಾದರೆ ಶಾಲೆಯಿಂದ ಹೊರಗೆ ಓಡುವ ಮಕ್ಕಳು ಅದಕ್ಕೇ ಜಯಂತನಿಗೆ ತುಂಬ ಪ್ರಿಯರು. ಅದೊಂದು ಮುಕ್ತಿ. ಅವರ ಭಾವಗಳೆಲ್ಲ "ಶಾಲೆಗಳ ಮೇಲೆ ಬಾಹ್ಯಾಂತರಿಕ್ಷದ ತಟ್ಟೆಯೊಂದು ಅವಚಿಕೂತಂತೆ ಮಕ್ಕಳು ಹೊರಗೆ ಓಡಿ" ಬರುವಂತೆ ಚಿಮ್ಮುತ್ತವೆ. "ಓಡೋಡಿ ಬಂದು ಪಾಟಿ ಚೀಲ ಒಗೆದು" ಅಂಗಳದ ತುಳಸಿ ಕಟ್ಟೆಗೆ ಹಳದಿ ಬಳಿಯುವ ಸಂಜೆಯಲ್ಲಿ ಮೈ ಮರೆಯುವ ಹುಡುಗ ಮಗನಿಗಾಗಿ ಕಾದು ಗೇಟಿಗೊರಗುವ ನನ್ನ



ಸ್ವಾಮಿ ವೆಂಕಟೇಶ! ನನ್ನ ಕಥೆ ಪ್ರಕಟವಾಗುವ ಹಾಗೆ ಮಾಡಿದರೆ ನಿನಗೆ ನಮ್ಮ ಯಜಮಾನರ ಮುಡಿ ಅರ್ಪಿಸುತ್ತೇನೆ.

ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಾನೆ. ಈ ಮಗನಾದರೂ ಹೇಗೆ ಬರುತ್ತಾನೆ.

"ಬಾಡುವ ಬೆಳಕಿನಲ್ಲಿ ಸಂಜೆ ಆಡುತ್ತಾ ವೇಳೆ ಮರೆತ ಮಕ್ಕಳಿಗೆ ಹಠಾತ್ತನೆ ಭೀತಿ ಗೋವರ್ಧನ ಕುಸಿದಂತೆ ತಾಯಿ ಮಡಿಲಿಗೆ ಓಡುತ್ತವೆ ಅವು" ಆದರೆ ಸದಾ ಈ ನಲಿವು ಇರುವುದಿಲ್ಲ. ನೋವುಂಟು ಶ್ರಾವಣಕ್ಕೆ.

"ನಿದ್ದೆಯಿಂದ ತಿವಿದೆಬ್ಬಿಸಿ ಶಾಲೆಗೆ ಎಳೆದಂಥ ಪುಟ್ಟ ಹುಡುಗ ಚಿಟ್ಟೆ ಹಿಂದೆ ಲಾರಿಯಡಿಗೆ" ಬಂದಂಥ ನೋವು.

'ಹಠಾತ್ತನೆ ಎದ್ದರೆ ಮಹಿಳೆಗೆ ಶಿಶುವೇಕೆ ಶಿಶುಗಂಟಿದ ಮೊಲೆಯೂ ಮರೆತು ಹೋದ' ನೋವು, ಜೈಲಿನ ಶಿಲಾ ಕಂಬದೊಳಗೆ ನಾಳೆ ಗಲ್ಲಿಗೇರಲಿರುವ ಎಂದಿನ ಮಕ್ಕಳ ಕಣ್ಣ ಬಿಳುಪಿನಲ್ಲಿ ರಾಗ ಬೀಸಿದ ನೋವು, 'ಬೆಳೆದವರ ಪುಟ್ಟ ಅಂಗಿ' ಎಲ್ಲೋ ಹೋಗುವ ನೋವು, ತೊರೆದ ಮನೆಗಳಲ್ಲಿ ಉರುಳಿದ ಗೊಂಬೆ ಬಸ್ಸಿನಲ್ಲಿ ಉರುಳಿದ ಮದ್ದು ಬಾಟಲಿ, ಮಗುವಿನ ಮೈಮರೆಸಿ ಉಣಿಸಿ ಹೋದ ಪಕ್ಷಿಯ ನೆನಪಿನ ನೋವು, ಆ ನೋವಿನಲ್ಲೇ "ನಿದ್ದೆ ಹೋದ ಕೊಲೆಗ

ಡುಕನ ಕನಸಲ್ಲಿ ಸಂಚರಿಸುತ್ತದೆ. ಅವನ ಬಾಲ್ಯದ ಅಂಗಿ, 'ಸಾಯುವ ಶಿಶುಗಳ ಎದುರು ತನ್ನ ಮರಗಳನ್ನು ಅಡವಿಟ್ಟಿದೆ ಪರ್ವತ'.

"ಒಂದು ಇಟ್ಟಿಗೆ ಬಿದ್ದರೂ ಒಂದು ಸಸಿ ಸಾಯು"ವಂತೆ ಗೊತ್ತು ಈ ಕೂಸಿನ ಆಗ ಮನಕ್ಕೆ ಇರುವ ಅಡೆತಡೆಗಳು. "ಕಾಲ್ತೆರದು ಕೀಕಿ ಹಡೆದರೆ ಹೆಣ್ಣು ಶಿಶು ಅಳುವುದಕ್ಕೂ ಮೊದಲು ಹೇಸಿಗೆ ಪಡುತ್ತದೆ ಪೇಟೆ" ಆ ಗಾಭರಿಯಲ್ಲಿ ಗರ್ಭಪಾತವಾಗಿಬಿಡುತ್ತದೆ. ಹುಟ್ಟಿ ಸಾಯುತ್ತದೆ ಮಗು. ಆಗ "ಕವಿತೆಯ ಕಳೇಬರ ಹೊತ್ತುಕೊಂಡು ನಡೆಯುವ" ತಿವಿಕ್ರಮ ಕವಿ.

ಯಾಕೆ ಕವಿ ಹೀಗೆ ಮತ್ತೆ ಮತ್ತೆ ಬಾಲ್ಯದ ಕಡೆಗೆ ತುಯ್ಯುತ್ತಾನೆ? ಬಹುಶಃ ಜಯಂತ ನಲ್ಲಿರುವ 'ಮಗು' ಅವರನ್ನೊಬ್ಬ Adult ಆಗಲು ಬಿಡುತ್ತಿಲ್ಲ. ತನ್ನಲ್ಲಿರುವ ಮಗು ವನ್ನು ಜಯಂತ ಉಳಿಸಿಕೊಳ್ಳಲು ಒದ್ದಾಡುತ್ತಾರೆ. ತನ್ನ ಕವಿತೆಯನ್ನು "ಯಾವುದೋ ಮನೆಯಲ್ಲಿ ಪುಂಡ ಮಗುವೊಂದು ಬರೆಯುತ್ತಿರುವ ಕವಿತೆ" ಎಂದು ವರ್ಣಿಸಿಕೊಂಡಿರುವ ಜಯಂತ ಸದಾ ಈ ಪುಂಡ ಮಗುವನ್ನು ಪೋಷಿಸಿಕೊಂಡೇ ಬಂದಿದ್ದಾರೆ. ತಾನು ಮಾತ್ರವಲ್ಲ ತನ್ನ ಸುತ್ತಲ ಜನರೂ ತಮ್ಮಲ್ಲಿರುವ ಮಗುವನ್ನು ಕಳೆದುಕೊಳ್ಳಬಾರದೆನ್ನುವ ಕಾಳಜಿಯಿದೆ ಜಯಂತನಲ್ಲಿ.

ಮದುವೆ ಮಂಟಪದ ಹೊರಗೆ ಮೂರ್ಛೆ ಹೋದ ಖಾಲಿ ಕಾರುಗಳಿವೆ. ಆದರೆ "ಕಾಣುತ್ತಿಲ್ಲ ಒಂದೂ ಹಾದಿ ತಪ್ಪಿದ ಮಗು ಮುದ್ದು ಮಕ್ಕಳು ಎಲ್ಲಿ ಹೋದವು ಹೀಗೆ ಕೈಬಿಟ್ಟು" ಎನ್ನುವ ಹತಾಶೆ ಇದೆ. ತನ್ನಲ್ಲಿರುವ ಹುಡುಗ ಕಳೆದು ಹೋದರೆ ಎನ್ನುವ ಗಾಭರಿ ಎಷ್ಟಿದೆ ಎಂದರೆ ಅದರ ಸುಳಿವಿಗೇ

"ಎಲ್ಲಿ ಹೋದಾ ಹುಡುಗ
ಅರೇ ಹುಡುಗ ಎಲ್ಲಿ"

ಎಂದು ಚಡಪಡಿಸತೊಡಗುತ್ತಾನೆ. ಕೊನೆಗೆ ಮತ್ತೆ ಶಿಶುವಾಗಿ ಬಿಡುವ ಆಶಯ 'ಏಯ್ ನಿನ್ನ ಮಡಿಲೊಳಗೊಂದು ಬಸಿರಿದೆಯಲ್ಲ. ಅದರಲ್ಲಿ ಸೇರಗೊಡು ನನ್ನ" ಎನ್ನುವ ತುಡಿತ.

'ಶ್ರಾವಣ ಮಧ್ಯಾಹ್ನ'ದ ತುಂಬ ಮಕ್ಕಳು ಓಡೋಡಿ ಬರುತ್ತಾರೆ. 'ದಪ್ಪ ಕತ್ತಲ ಗೋದಾಮಿನೊಳಗಿಂದ ಓಡೋಡಿ ಬಂದ ಎಳೆ ಮಾಣಿ' ಬೇಲೆಯಲ್ಲಿ ಮುಂಡದ ಏರಿಳಿತ ಹೊಟ್ಟೆಯ ಮುಂದೆ ಕಾದ ಮಾಣಿ ಬೆಚ್ಚಿ ಮೈತಗೆದು ಮನೆಗೆ ಓಡುವ ಮಾಸ್ತರ ಮಗಳು ಹಿಂಬಾಗಿಲಿಂದ ಓಡಿ ಅತಿಥಿಗಳಿಗೆ ಅಂಗಡಿಯಿಂದ ಭಜಿ ಕಟ್ಟಿಸಿ ತರುವ ಚಿತ್ರಗಳು ಸುತ್ತಿ ಸುಳಿಯುತ್ತವೆ. 'ನೀಡಿದ ಕಾಲ ಹೆಬ್ಬೆರಳಿಗೆ ದಾರಕಟ್ಟಿ ಅಂಬೋಲಿ ಪೋಣಿಸುವ ಪೋರಿ' 'ಮಾರುಕಟ್ಟೆಯ ನಡುವೆ ಊಟದ ಡಬ್ಬಿಯನ್ನು ಕೆಡವಿ ನಿಲ್ಲುವಾಗ ಅವಳಿಗಿಂತ ನಮಗೇ ತಬ್ಬಲಿಯಾದಂತೆ ಅನಿಸುತ್ತದೆ. ಜಯಂತನಾದರೋ "ನಾನಲ್ಲ ನೀನಲ್ಲ ಇಲ್ಲಿ ತಬ್ಬಲಿ ಈ ಕವಿತೆಗಳು ತಬ್ಬಲಿ ಈ ಜಗತ್ತು" ಎನ್ನುತ್ತಾರೆ. 'ಶ್ರಾವಣ ಮಧ್ಯಾಹ್ನ'ದ ಈ ಮಗುವಿನ ಪ್ರಪಂಚದಿಂದ ಹೊರ ಬಂದು ನಾನು ನನ್ನದೇ ವಾಸ್ತವತೆಯಲ್ಲಿ ಮುಳುಗಿ ಹೋದಾಗಲೂ ಒಂದೇ ಒಂದು ಮಾತು ಮನದಲ್ಲಿ ಆಚ್ಛೋತ್ತಿ ಮಿಡಿಯುತ್ತಿದೆ.

"ಸಾವಿರ ಸುಳ್ಳು ಹೇಳಿ ಒಂದು ಮದುವೆ ಮತ್ತು ಎಲ್ಲ ಸುಳ್ಳುಗಳ ತಲೆಯ ಮೇಲೆ ಹೊಡೆದಂತೆ ಒಂದು ಮಗು"

*

ನಡುವಯಸ್ಸಿನ ನಡುಕ

ಪ್ರಭಾ



ಮಧ್ಯ ವಯಸ್ಸು ತಲುಪುತ್ತಿದ್ದ ಹಾಗೇ ನಮ್ಮಲ್ಲಿ ಒಂದು ರೀತಿಯ ಜೀವಭಯ ಶುರುವಾಗುತ್ತದೆ. ಇದ್ದಕ್ಕಿದ್ದಂತೆ ಇಂದು ರಾತ್ರಿ ನಾನು ಸತ್ತು ಹೋದರೆ ಎಂಬ ಭಯ ಕಾಡಲು ಶುರು ಆಗುತ್ತದೆ. ನಮ್ಮ ಹೆದರಿಕೆಗೆ ತಕ್ಕಂತೆ ನಮ್ಮ ಸುತ್ತಮುತ್ತಲಿನಲ್ಲೋ ಅಥವಾ ಗುರುತಿರುವವರಲ್ಲೋ ಯಾರೋ ಒಬ್ಬರು ನಮ್ಮ ಜೊತೆ ಆಡಿದವರು, ಸಿನಿಮಾ ನೋಡಿದವರು ಇದ್ದಕ್ಕಿದ್ದ ಹಾಗೇ ಸಾಯುತ್ತಾರೆ! ನಮ್ಮ ಭಯ ಮುಗಿಲು ಮುಟ್ಟುತ್ತದೆ. ಜೊತೆ ಜೊತೆಗೇ ಆಯಸ್ಸು ವೃದ್ಧಿಸುವ ಕ್ರಮಗಳ ಬಗೆಗೆ ಚಿಂತಿಸಲು ತೊಡಗುತ್ತೇವೆ. ನೂರು ವರುಷಗಳಷ್ಟು ದೀರ್ಘಕಾಲ ಒಂದು ರೀತಿ 'ಮಾನಾಟೋನಿ' (Monotony) ಜೀವನ ನಡೆಸಿದ ಮಹಾನುಭಾವರು ನಮ್ಮ ಕಣ್ಣೆದುರು ಬರುತ್ತಾರೆ.

ಈ ಮಹಾನುಭಾವರ ದೀರ್ಘಾಯುಷ್ಯದ ಗುಟ್ಟು ತಿಳಿಯಲು ಅವರನ್ನು ಸಂಪರ್ಕ ಮಾಡುವವರು ಕೆಲವರು. ಏಕೆಂದರೆ ಈ ದೀರ್ಘಾಯುಷಿಗಳು ಅಂತಹ ಪ್ರಸಿದ್ಧರಾಗದೇ ಮನೆಯಲ್ಲಿಯೇ ಎಲೆಯ ಮರೆಯ ಕಾಯಿಯಾಗಿರುವವರು. ಮತ್ತೆ ಕೆಲವರ ಜೀವನ ಚರಿತ್ರೆಗಳನ್ನು ಓದಿದರೂ ಆಶ್ಚರ್ಯ ಇಲ್ಲ. ಕಾರಣ ಇಂತಹವರು ಹೆಸರು ಪ್ರಸಿದ್ಧಿಗೊಂಡಿರುವುದೇ ಅಲ್ಲದೇ ತಮ್ಮ ಜೀವನದ ಪ್ರತಿ ಸೆಕೆಂಡನ್ನೂ ಹಾಳೆಗಳಲ್ಲಿ ತೆರೆದಿಟ್ಟು ತಮ್ಮ 'ಗುಟ್ಟು' ಅದೂ ದೀರ್ಘಾಯುಷ್ಯದ ಗುಟ್ಟು ಹೊರಗೆಡವಿರುತ್ತಾರೆ. ಇಂತಹ ಸಮಯದಲ್ಲಿ ಮತ್ತೆ ಕೆಲವು ದೈಹಿಕ ಮಟ್ಟವನ್ನು ಕಾಪಾಡಿಕೊಂಡರೆ ಆಯುಷ್ಯವನ್ನು ಹೆಚ್ಚಿಸಬಹುದು. ಎಂಬ ಗುಟ್ಟು ಕೆಲವರಿಗೆ ಮಧ್ಯ ವಯಸ್ಕರೆಲ್ಲರಿಗೂ ಬರುತ್ತದೆ. ಸರಿ ಈ ಜನರು ಆರಂಭಿಸುವ ಕಸರತ್ತುಗಳ ಬಗೆಗೇ ಒಂದು ಕಾದಂಬರಿ ಬರೆಯಬಹುದು.

ಕೆಲವರು ಬೆಳಗಾಗೆದ್ದು ಜಾಗಿಂಗ್‌ಗೆ ಎಂದು ಆ ವರೆಗೆ ಹತ್ತಿರದಲ್ಲೇ ಇದ್ದು ಈ ವರೆಗೆ ನೋಡಿರದ ಕೆರೆ ಕುಂಟೆಗಳ ಅಂಗಳದಲ್ಲಿ ಕುಣಿಯಲು ಆರಂಭಿಸುತ್ತಾರೆ. ಮತ್ತೆ ಕೆಲವರು ಪಾರ್ಕುಗಳ ಸುತ್ತ ನಡೆದಾಡಲು ಆರಂಭಿಸುತ್ತಾರೆ. ಮತ್ತು ಕೆಲವರು ''ಬೊಜ್ಜು ಇಳಿಸಿ'' ಕೋರ್ಸುಗಳಿಗೆ ಸೇರುತ್ತಾರೆ. ಬೊಜ್ಜು ಇಳಿಸುತ್ತಾರೋ ಏರಿಸುತ್ತಾರೋ ಅದು ಅವರವರುಗಳು ಅವರ ಜೀವಕ್ಕೆ ಕೊಟ್ಟ 'ಬೆಲೆ'ಗಳಿಂದ ನಿರ್ಧಾರ ಆಗುತ್ತದೆ. ವಿಶೇಷ ರೀತಿಯ ಮತ್ತೂ ಕೆಲವು ಮಹನೀಯರು ಇರುತ್ತಾರೆ. ಇಂತಹವರು ಇಪ್ಪತ್ತು ಇಪ್ಪತ್ತೈದು ವರುಷಗಳಿಂದ ಅಂಟಿಸಿಕೊಂಡಿದ್ದ ಚಟಗಳನ್ನು ದೂರ ಮಾಡಬೇಕೆಂದು ಪ್ರತಿ ಸಲವೂ ಪ್ರತಿ ದಿನವೂ ಪ್ರತಿಕ್ಷಣವೂ ಪ್ರಯತ್ನಿಸುತ್ತಾರೆ. ಸಿಗರೇಟಿನ ಚಟ ಇರುವವರು ಹೆಚ್ಚೆಂದರೆ ಎರಡು ಘಂಟೆಗಳಷ್ಟು ಕಾಲ ಈ ಚಟವನ್ನು ಗೆಲ್ಲುತ್ತಾರೆ. ಮತ್ತೆ ಸಿಗರೇಟು ಕೊಂಡು ಎರಡೇ ಪಫ್ ಎಳೆದು ಬಿಸಾಕುವುದು ಎಂದು ನಿರ್ಧರಿಸುತ್ತಾರೆ. ಆದರೆ ಸಿಗರೇಟು ಕೊಂಡನಂತರ. ಈ ಹಾಳು ಸಿಗರೇಟಿಗೆ ಇಷ್ಟು ಹಣ ತೆತ್ತಿದ್ದೇವೆ ಕೊನೆಯವರೆಗೂ ಸೇದಿ ಬಿಸಾಕುವ' ಎಂದು ಹಠತೊಟ್ಟು ಕೊನೆಯ 'ದಂ' ಬರುವವರೆಗೆ ಎಳೆಯುತ್ತಾರೆ. ಕೊನೆಯ ದಂ ಎಳೆದನಂತರ ಇನ್ನು ಮುಂದೆ ಸಿಗರೇಟು ಸೇದಬಾರದು ಎಂದು ನಿರ್ಧರಿಸುತ್ತಾರೆ! ಇದು ಮತ್ತೊಂದೆರಡು ಗಂಟೆಯವರೆಗೆ ಮುಂದುವರೆಯುತ್ತದೆ. ಮತ್ತೆ ಪುನರಾಯನ್ ಮಹಾ ಕಪಿಃ!

ಕಾರು ಗೀರು ಹೊಂದಿರುವ ಶ್ರೀಮಂತರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಪಡುವ ಶ್ರಮ ನೀವು ಗಮನಿಸಿರಲು ಸಾಕು. ಕಾರಿನಲ್ಲಿ ಊರಿನಿಂದಾಚೆ ಹೋಗಿ ಕಾರು ನಿಲ್ಲಿಸಿ ಇವರು ಅರ್ಧ ಮುಕ್ಕಾಲು ಗಂಟೆ ಓಡಿ ದಣಿಯುವುದೂ ಎಂದು. ಮತ್ತು ತಲೆನೋವು ಬಂದರೆ ನರಕ್ಕೆ ಸಂಬಂಧಿಸಿದ ಕಾಯಿಲೆ ಎಂದು, ಹೊಟ್ಟೆ ನೋವು ಬಂದರೆ ಜಠರದ ಕ್ಯಾನ್ಸರ್ ಎಂದೂ, ನೆಗಡಿ ಮತ್ತು ಗಂಟಲು ಕಟ್ಟಿದರೆ ಶ್ವಾಸಕೋಶದ ಕ್ಯಾನ್ಸರ್ ಇರಬಹುದೇ ಎಂದೂ ಈ ಜನ ಚಿಂತಿಸಿ ನರ್ಸಿಂಗ್ ಹೋಂಗಳಿಗೆ ಓಡುತ್ತಾರೆ. ತಿಂಗಳಿಗೆ ಎರಡು ಬಾರಿ ತಮ್ಮ ದೇಹ ಪರೀಕ್ಷೆಗಳನ್ನು ಸತತವಾಗಿ ನಡೆಸುತ್ತಾರೆ.

ಇನ್ನೂ ಕೆಲವರು ಇದ್ದಾರೆ. ಮಧ್ಯವಯಸ್ಸು ತಲುಪಿದಾಗ ಈಗಿನ ಸಾಮಾಜಿಕ ಪರಿಸ್ಥಿತಿಯಂತೆ ಈ ಜನರಿಗೆ ಆಗ ತಾನೇ ಎಲ್.ಕೆ.ಜಿ., ಯು.ಕೇ.ಜಿಗೆ ಸೇರಿದ ಮಕ್ಕಳು ಇರುತ್ತಾರೆ. ಇದ್ದಕ್ಕಿದ್ದಂತೆ ಇಂದು ರಾತ್ರಿ ನಾನು ಸತ್ತು ಹೋದರೆ ಎಂದು ಇವರಿಗೆ ಪ್ರತಿದಿವಸ ಚಿಂತೆ ಹತ್ತುತ್ತದೆ. ದಿವಸಕ್ಕೆ ಎರಡು ಮೂರು ಬಾರಿ ಕುಳಿತು ತಮ್ಮ ಬ್ಯಾಂಕ್ ಬ್ಯಾಲೆನ್ಸು, ಪಿ.ಎಫ್. ಎಲ್.ಐ.ಸಿ ಪಾಲಿಸಿಗಳು ಇತ್ಯಾದಿಗಳನ್ನು ಲೆಕ್ಕ ಹಾಕುತ್ತಾರೆ. ತಾನು ಸತ್ತರೆ ತನ್ನ ಕುಟುಂಬಕ್ಕೆ ಎಷ್ಟು ಹಣಸಿಗಬಹುದು ಎಂದು ಈ ಲೆಕ್ಕ. ಹಣ ಸಾಲದು ಎನಿಸಿದರೆ ಕೂಡಲೇ ಜೀವವಿಮೆ ಪಾಲಿಸಿ ಕೊಳ್ಳುವುದು ಇತ್ಯಾದಿ ಕುಟುಂಬ ಹಿತ ಕಾರ್ಯಕ್ರಮ ನಡೆಸುತ್ತಾರೆ. ಈ ವರೆಗೆ ಆಲಸ್ಯದಿಂದ ಮಾಡಿರದ ಕೆಲಸಗಳನ್ನು ಜರೂರಾಗಿ ನಡೆಸಲು ಒಮ್ಮೆಗೇ

ಉದ್ರಿಕ್ತತೆಗೆ ಒಳಗಾಗುತ್ತಾರೆ. ರೇಷನ್ ಕಾರ್ಡಿನಲ್ಲಿ ಈ ವರೆಗೆ ಸೇರಿಸಿರದ ತಮ್ಮ ನಾಲ್ಕು ವರುಷದ ಮಗಳ ಹೆಸರು, ಕಛೇರಿಗಳಲ್ಲಿ ಈ ವರೆಗೆ ಮಾಡಿರದ ನಾಮಿನೇಷನ್ ಅರ್ಜಿಗಳು, ತನಗೆ ಯಾವ ಯಾವ ಮೂಲದಿಂದ ಬರಬೇಕಾಗಿರುವ ಸಾಲಗಳ ಪಟ್ಟಿ ಇತ್ಯಾದಿಗಳನ್ನು ತಯಾರಿಸಿ ಅದನ್ನು ತಮ್ಮ 'ಸೇಫ್'ನಲ್ಲಿ ಭದ್ರಪಡಿಸಿಡುತ್ತಾರೆ. ತಾನು ಅಕಸ್ಮಾತ್ ಇಂದು ರಾತ್ರಿಯೇ ಸತ್ತರೆ ಹೆಂಡತಿ ಮಕ್ಕಳು ಕೊರಗಬಾರದು ಎಂದು ಈ ಮುನ್ನೆಚ್ಚರಿಕೆ! ಕೆಲವರು ಮುರಾರ್ಜಿ ದೇಸಾಯಿಯವರ ದೀರ್ಘಾಯುಷ್ಯದ ಗುಟ್ಟು ಸ್ವಮೂತ್ರ ಪಾನ ಎಂದು ಈ ಹೊಸಾ ಥೆರಪಿ ಅಭ್ಯಾಸ ಮಾಡುವುದು ಉಂಟು.

ಸುಮಾರು ಈ ಮಧ್ಯ ವಯಸ್ಸಿನಲ್ಲಿಯೇ ಕೆಲವರಿಗೆ ಆಸ್ತಿ ಮಾಡುವ ಹುಚ್ಚು ಅಂಟಕೊಳ್ಳುತ್ತದೆ. ಈ ವರೆಗೆ ಅಂಡಾಲೆಮನಿ ಉಂಡಾಲೆಮನಿ ಬೆಳೆದ ಈ ಜನ ಇಷ್ಟು ದಿವಸ ನನಗೆ ಆಸ್ತಿ 'ಮಾಡುವ ಯೋಚನೆ ಯಾಕೆ ಹೊಳೆಯಲಿಲ್ಲ ಎಂದು ಅಳುತ್ತಾರೆ. ಸಿಕ್ಕ ಅವಕಾಶ ಉಪಯೋಗಿಸಿಕೊಳ್ಳಲಾಗದಿದ್ದುಕ್ಕೆ ಒಳಗೇ ಕೊರಗುತ್ತಾರೆ. ಈಗಲೂ ಕಾಲಮಿಂಚಿಲ್ಲ ಎಂಬಂತೆ ಸಿಕ್ಕ ಸಿಕ್ಕಕಡೆಗಳಲ್ಲಿ ಸೈಟು ಪ್ಲಾಟು ಎಂದು ಓಡಾಡುತ್ತಾರೆ. ಇವರ ವಯಸ್ಸಿನವರೇ ಆದ ಇವರ ಸಹೋದ್ಯೋಗಿಗಳು ಹೇಗೆ ಹೇಗೆ ಆಸ್ತಿ ಮಾಡಿದರು ಎಂದು ಆಳವಾಗಿ ಚಿಂತಿಸುತ್ತಾರೆ. ನಂತರ ಇವರ ಗಮನಗಳು 'ಷೇರು ಪೇಟೆ' ಲಾಟರಿ ಇತ್ಯಾದಿಗಳ ಕಡೆಗೆ ಹರಿದು ಕೈಯಲ್ಲಿ ಹಣ ಇದ್ದರೆ ಅವು ಈ ದಿಕ್ಕಿಗೆ ಪಯಣಬೆಳೆಸುತ್ತದೆ. ಅವರವರ ಅದೃಷ್ಟಕ್ಕೆ ತಕ್ಕ ಹಾಗೆ ಈ ಹಣಗಳು ವೃದ್ಧಿಗೊಂಡರೂ ಆಶ್ಚರ್ಯ ಇಲ್ಲ! ಕೆಲವರು ಇವುಗಳನ್ನೇ ಅತಿ ಹಚ್ಚಿಕೊಂಡು 'ಪಾಪರ್' ಆಗುವುದು ಉಂಟು!

ಇದೇ ವಯಸ್ಸಿನಲ್ಲೇ ಈ ವರೆಗಿನ ಪಾರಮಾರ್ಥದ ಬಗೆಗಿನ ತಮ್ಮ ಅಲಕ್ಷ್ಯ ಕುರಿತು ಚಿಂತಿಸುವವರೂ ಉಂಟು. ದೇವಸ್ಥಾನಗಳಿಗೆ ಹೊಸದಾಗಿ ಭೇಟಿ ಕೊಡಲು ಆರಂಭಿಸುತ್ತಾರೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ಹುದುಗಿಸಿಕೊಳ್ಳುತ್ತಾರೆ. ಮತ್ತು ಮನೆಗಳಲ್ಲಿ ದೇವರ ವಿಶೇಷ ಪೂಜೆ ಇತ್ಯಾದಿಗಳನ್ನು ನಡೆಸಿ ದೇವರೇ ಇಷ್ಟು ದಿವಸ ನಿನ್ನನ್ನು ಮರೆತದ್ದಕ್ಕೆ ನಮ್ಮನ್ನು ಕ್ಷಮಿಸು. ಆದರೆ ಆಯುಸ್ಸು ನೀಡು... ಎಂದು ಬೇಡಿಕೊಳ್ಳುತ್ತಾರೆ! ತಿಂಗಳಿಗೆರಡು ಮೂರು ಸತ್ಯನಾರಾಯಣ ಪೂಜೆಗಳು ನಡೆಯಲು ಆರಂಭವಾಗುತ್ತವೆ.

ಮುರಾರ್ಜಿಯವರ ದೀರ್ಘಾಯುಷ್ಯದ ಗುಟ್ಟು ಅವರ 'ಆಟೋ ಯೂರೀನ್ ಥೆರಪಿ' (Auto Urine Therophy ಸ್ವಮೂತ್ರ ಪಾನ ಚಿಕಿತ್ಸೆ)ಯಿಂದ ಎಂದು ನಂಬಿ ಮಧ್ಯವಯಸ್ಸಿನಲ್ಲಿ ಈ ಥೆರಪಿ ಆರಂಭಿಸಿದ ನನ್ನ ಗೆಳೆಯರಿದ್ದಾರೆ. ಕಾಲೇಜು ಮೆಟ್ಟಲು ಹತ್ತಿದಾಗಲಿಂದ ಕಟ್ಟಾ ವಿಚಾರವಾದಿಯಾಗಿ ಸುಮಾರು ಇಪ್ಪತ್ತು ವರ್ಷಗಳ ಕಾಲ ವೈಚಾರಿಕ ಮನೋಭಾವವನ್ನು ಪ್ರದರ್ಶಿಸಿ ಈಗ ಮನೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿಸುವ ಗೆಳೆಯರೂ ನನಗಿದ್ದಾರೆ! ಅದೇ ರೀತಿ ಇಪ್ಪತ್ತಕ್ಕೆ ಮಾರ್ಕ್ಸ್, ನಾಲವತ್ತಕ್ಕೆ ರಾಘವೇಂದ್ರಸ್ವಾಮಿ ಎಂದು ಜೋಕ್ ಮಾಡುವ ಅಪ್ಪಟ ಕಮ್ಯೂನಿಸ್ಟ್ ಮಿತ್ರರೂ ನನಗೆ ಗೊತ್ತು. ಈ ಅಂಜುಕುಳಿಗಳ ವಿಷಯ ಬಿಡಿ. ಮೇಲಿನ ಗುಂಪಿಗೆ ಸೇರಿದ ಮತ್ತೆ ಕೆಲವರು ಉಂಟು. ಎಪ್ಪತ್ತಾದರೂ ದಿವಸಕ್ಕೆ ಎರಡು ಪ್ಯಾಕು ಸಿಗರೇಟು ಸೇದುವ ಮುದುಕರು ಇವರುಗಳಿಗೆ ಮಾದರಿ. ಅಷ್ಟು ಮುದುಕ ಆತನೇ ಸತ್ತಿಲ್ಲ ಎನ್ನಬೇಕಾದರೆ ಸಿಗರೇಟನಿಂದ ಸಾವು ಬರುತ್ತದೆ ಎನ್ನುವುದು ಮುಟ್ಠಾಳರು ಹೇಳುವ ಮಾತು ಎಂದುಕೊಂಡು, ಹೆದರಿಕೊಂಡೇ ಈ ಜನರೂ ಸಿಗರೇಟು ಎಳೆಯುವುದುಂಟು.

ಒಟ್ಟಿನಲ್ಲಿ ಮಧ್ಯವಯಸ್ಸು ಜೀವನದಲ್ಲಿನ ಉಯ್ಯಾಲೆ. ಇದೇ ನಡುವಯಸ್ಸಿನಲ್ಲೇ ಅಲ್ಲವೇ ಸಾವು ಜನ್ಮಗಳಿಗಂಟದ ಬಾಣಲೆಗಳಿಗೂ ಸಿಲುಕಿಕೊಳ್ಳುವುದು? ಆರೋಗ್ಯ ಅನಾರೋಗ್ಯದ ಉಯ್ಯಾಲೆ ಈ ಮಧ್ಯವಯಸ್ಸು ಎಂದು ಹೇಳಬಹುದು. ●

ಬಾಪುಗೆ ಬರೆದ ವಿಚಿತ್ರ ವಿಳಾಸದ ಪತ್ರಗಳು

ಪ್ರಪಂಚದಲ್ಲಿ ಇಲ್ಲಿಯವರೆಗೆ ಆಗಿ ಹೋದ ಮಹಾಪುರುಷರಲ್ಲಿ ಮಹಾತ್ಮಾ ಗಾಂಧಿಯವರೊಬ್ಬರು ಮಾತ್ರ ತಮಗೆ ಬಂದ ಪ್ರತಿಯೊಂದು ಪತ್ರಕ್ಕೆ ಸರಿಯಾಗಿ, ಸರಿಯಾದ ಸಮಯಕ್ಕೆ ಉತ್ತರ ಬರೆಯುತ್ತಿದ್ದರೆಂಬುದು ಇತ್ತೀಚೆಗೆ ನಡೆಸಿದ ಸರ್ವೇಕ್ಷಣವೊಂದರಿಂದ ತಿಳಿದು ಬಂದಿದೆ.

ಬಾಪು ಅವರಿಗೆ ಪ್ರತಿದಿನ ದೇಶವಿದೇಶಗಳಿಂದ ನೂರಾರು ಪತ್ರಗಳು ಬರುತ್ತಿದ್ದವು. ಮತ್ತು ಅವರು ಆ ಪತ್ರಗಳಿಗೆ ಕೂಡಲೇ ಉತ್ತರಿಸುತ್ತಿದ್ದರು. ಬಾಪು ಅವರು ತಮ್ಮ ಜೀವಿತ ಕಾಲದಲ್ಲಿ ಐದು ಲಕ್ಷ ನಲವತ್ತು ಸಾವಿರದ ನಾಲ್ಕು ನೂರ ಇಪ್ಪತ್ತೇಳು (5,40,427) ಪತ್ರಗಳಿಗೆ ಉತ್ತರಿಸಿದ್ದರು. ಅವರ ಈ ಪತ್ರ ಪ್ರಪಂಚವೇ ಬೇರೆಯಾಗಿತ್ತೆಂದು ಹೇಳಬಹುದು.

ಬಾಪು (ಮಹಾತ್ಮ ಗಾಂಧಿ)ಗೆ ಬರುತ್ತಲಿದ್ದ ಪತ್ರಗಳಲ್ಲಿ ಅನೇಕ ಪತ್ರಗಳ ವಿಳಾಸ ಚಿತ್ರವಿಚಿತ್ರವಾಗಿರುತ್ತಿದ್ದವು. ಆದರೂ ಪ್ರಪಂಚದ ದೂರ ದೂರ ದೇಶಗಳಿಂದ ಬಾಪೂ ಅವರಿಗೆ ಬರೆದ ಈ ಪತ್ರಗಳು ಸರಿಯಾಗಿ ಬಂದು ತಲುಪುತ್ತಿದ್ದವು. ಬಾಪೂ ಅವರಿಗೆ ಬರೆದ ರೋಚಕ ಹಾಗೂ ವಿಚಿತ್ರ ವಿಳಾಸದ ಕೆಲವು ನಮೂನೆಗಳನ್ನು ಇಲ್ಲಿ ಕೊಡಲಾಗಿದೆ.

ಮಿಸ್. ಮರೀನಾ ಹದಿನೇಳು ವರ್ಷದ ವಿದ್ಯಾರ್ಥಿನಿಯಾಗಿದ್ದಳು. ಅವಳು 1926ರಲ್ಲಿ ನ್ಯೂಯಾರ್ಕ ನಗರದ ಕಾಲೇಜೊಂದರಲ್ಲಿ ಓದುತ್ತಿದ್ದಳು. ಒಂದು ದಿನ ಬಾಪೂಗೆ ಭಾವಪೂರ್ಣವಾದ ಒಂದು ಪತ್ರವನ್ನು ಬರೆದಳು. ಅದನ್ನು ಓದಿ ಬಾಪೂಜಿಯವರಿಗೆ ಬಹಳ ಸಂತೋಷವಾಯಿತು. ಆದರೆ ಅವಳು ಬರೆದ ವಿಳಾಸದತ್ತ ಗಮನ ಹರಿಸಿದಾಗ ಅವರಿಗೆ ಸುಖಕರ ಆಶ್ಚರ್ಯವೂ ಆಯಿತು. ಮಿಸ್. ಮರೀನಾ ವಿಳಾಸದ ಸ್ಥಳದಲ್ಲಿ ವಿಳಾಸವನ್ನು ಬರೆಯದೇ ಅಲ್ಲಿ ಮಹಾತ್ಮ ಗಾಂಧೀಜಿಯವರ ಫೋಟೋ (ಚಿತ್ರ) ವನ್ನು ಮಾತ್ರ ಅಂಟಿಸಿದ್ದಳು. ಇದೇ ಅವರ ಆಶ್ಚರ್ಯಕ್ಕೆ ಕಾರಣವಾಗಿತ್ತು.

ಇದರಂತೆಯೇ ಇನ್ನೊಂದು ಲಿಫಾಫೆಯ ಮೇಲೆ ವಿಳಾಸವನ್ನು ಹೀಗೆ ಬರೆಯಲಾಗಿತ್ತು, 'ಮಹಾತ್ಮಾಗಾಂಧಿ ಎಲ್ಲಿರುವರೋ ಅಲ್ಲಿ. ಆದರೂ ಅಂಚೆಯವರು ಈ ಪತ್ರವನ್ನು ಪ್ರಯತ್ನ ಮಾಡಿ ಮಹಾತ್ಮಾ ಗಾಂಧಿಯವರಿಗೆ ಮುಟ್ಟಿಸಿದರು. ಬಾಪೂ ಈ ವಿಳಾಸವನ್ನೋದಿ ಬಹಳ ಹೊತ್ತಿನವರೆಗೆ ಗಹಗಹಿಸಿ ನಕ್ಕಿದ್ದರು.

ಆಗ ಬಾಪು ಆಗಖಾನರ ಮಹಲ್‌ನಲ್ಲಿ ಬಂಧನದಲ್ಲಿದ್ದರು. ಆಗ ಅವರಿಗೆ ವಿದೇಶದಿಂದ ಒಂದು ಪತ್ರ ಬಂದಿತು. ಅದರ ಮೇಲೆ, 'ಟು ಗ್ರೇಟ್ ಅಹಿಂಸಾ ನೋಬಲ್' ಎಂದು ಬರೆಯಲಾಗಿತ್ತು. ಹೀಗೆ ಬರೆದಿದ್ದರೂ ಆಗಿನ ಅಂಚೆ ನೌಕರರು ಈ ಪತ್ರವನ್ನು ಪರಿಶ್ರಮಪಟ್ಟು ಗಾಂಧೀಜಿಯವರಿಗೆ ತಲುಪಿಸಿದ್ದರು.

ದಕ್ಷಿಣ ಆಫ್ರಿಕೆಯ ಓರ್ವ ಕಿಶೋರನು ಬಾಪೂಗೆ ಒಂದು ಸುದೀರ್ಘ ಪತ್ರವನ್ನು ಬರೆದನು ಮತ್ತು ಲಿಫಾಫೆಯ ಮೇಲೆ ವಿಳಾಸವನ್ನು ಹೀಗೆ ಬರೆದನು: 'ಮಹಾತ್ಮಾಗಾಂಧೀಜಿ, ಫಾರ್ಮರ್ ಆ್ಯಂಡ್ ವೀವರ್, ಜೂ, ಭಾರತ.' (ರೈತ ಮತ್ತು ನೇಕಾರ, ಮೃಗಾಲಯ ಭಾರತ) ಹೀಗೆ ವಿಳಾಸ ಬರೆದರೂ ಇತರ ಪತ್ರಗಳಂತೆ ಈ ಪತ್ರವೂ ಬಾಪೂಗೆ ತಲುಪಿತು.

1942ರಲ್ಲಿ ಓರ್ವ ಇಂಗ್ಲೀಷ ಮಹಿಳೆ ಇಂಗ್ಲಂಡಿನಿಂದ ಕಳಿಸಿದ ಪತ್ರದ ಮೇಲೆ ವಿಳಾಸವನ್ನು ಹೀಗೆ ಬರೆದಿದ್ದಳು. 'ಹಿಸ್ ಹೈನೆಸ್ ಮಹಾತ್ಮಾಗಾಂಧಿ (ಕೇರ ಆಫ್) ಗವರ್ನಮೆಂಟ ರೂಲಿಂಗ ಇಂಡಿಯಾ'

ವೆಂಕಟೇಶ ಗಂಗಾವತಿ

ದೃಷ್ಟಿ ಕುದುರಿಸುವ ಕುಂದಣಗಾರ : ಡಾ. ಮೋದಿ

ಡಾ. ಕರವೀರಪ್ರಭು ಕ್ಯಾಲಕೊಂಡ



ತೆರೆದ ಕಂಗಳೆದುರು ಬರೀ ಅಂಧಕಾರ ಮುಗಿಯದ ತಿಮಿರ. ನಿರಾಶೆಯಲ್ಲಿ ರೆಪ್ಪೆಗೊಂದು ಕತ್ತಲಾಗಿ ಕಣ್ಣುಗಳ ಮೇಲೆ ಕವಿದು ಬಿದ್ದಿರುವಾಗ ..... ಎಲ್ಲಿಂದಲೋ ಒಂದು ಆಶಾಕಿರಣ. ಆತ ನೆಮ್ಮದಿಯಾಗಿ ನಡೆದು ಬರುತ್ತಾರೆ ದಿಕ್ಕು ಕಾಣದೆ ಕುಳಿತ ಅಂಧನ ಹಣೆಯ ಮೇಲೆ ಸಾಂತ್ವನದ ಕೈಯಿಕ್ಕಿ ಶಸ್ತ್ರ ಚಿಕಿತ್ಸೆ ಪ್ರಾರಂಭಿಸುತ್ತಾರೆ. ನೀವು ಶ್ರದ್ಧೆಯನ್ನೇ ಪವಾಡವೆಂದು ಕರೆಯುವಿರಾದರೆ, ಕೆಲವು ದಿನಗಳಲ್ಲಿ ಅಂಧ ಪವಾಡ ನಡೆದು ಹೋಗುತ್ತದೆ. ನೇತ್ರಹೀನ ಕಣ್ಣು ಬರುತ್ತಾನೆ. ಈ ಜಗತ್ತಿನ ಹಸಿರು, ನೀಲಾಕಾಶ, ನದಿ - ಸರೋವರ, ಪ್ರಿಯರು, ಆತ್ಮೀಯರು...... ಎಲ್ಲರೂ ಈಗ ಸಿಕ್ಕಿ ಅದೆಲ್ಲವನ್ನೂ ನೋಡುವ ಮೊದಲು ಆತ ತನಗೆ ಕಣ್ಣುಗಳನ್ನಿತ್ತ ಮಹಾಮಾನವನನ್ನು ನೋಡ ಬಯಸುತ್ತಾನೆ. ಎದುರಿಗೆ ನಿಂತಿದ್ದಾರೆ ಡಾ. ಎಂ.ಸಿ.ಮೋದಿ!

ಗಾಂಧೀಜಿಯವರು ಮಾಡಿದ ಭಾಷಣ ಮೋದಿಯವರ ಜೀವನಕ್ಕೆ ಹೊಸ ತಿರುವು ನೀಡಿತು. ಮನದ ತುಮುಲ ತಣ್ಣಗಾಯಿತು ತಾವೇ ಬಡರೋಗಿಗಳ ಬಳಿಗೆ ಹೋಗಲು ನಿರ್ಧರಿಸಿದರು.

ಈಗಾಗಲೇ ಗಿನ್ನೆಸ್ ದಾಖಲೆ ನಿರ್ಮಿಸಿರುವ ಡಾ. ಮೋದಿ ತಮ್ಮ ಎಪ್ಪತ್ತಾರರ ತಾರುಣ್ಯದಲ್ಲಿದ್ದಾರೆ. ಆಪರೇಶನ್ ಥಿಯೇ-

ಟರುಗಳು ಅವರ ಪಾಲಿಗೆ ಪೂಜಾ ಮಂದಿರಗಳಾಗಿವೆ. ಶಸ್ತ್ರ ಚಿಕಿತ್ಸೆಯ ಉಪಕರಣಗಳೇ ಪೂಜಾ ಸಾಮಗ್ರಿಗಳಾಗಿವೆ. ನೇತ್ರಹೀನ ನಿಸ್ಸಹಾಯಕ ರೋಗಿ ಅವರ ಪಾಲಿಗೆ ದೇವರಾಗುತ್ತಾನೆ. ನಿರಂತರವಾಗಿ ನಡೆದಿದೆ 'ನೇತ್ರದಾಸೋಹ'!

ಬದುಕು ಶುರುವಾದದ್ದು

1916 ಅಕ್ಟೋಬರ್ 4 ರಂದು ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ಪಾಲಿಕಟ್ಟೆ ಗ್ರಾಮದಲ್ಲಿ ಹುಟ್ಟಿದ ಮುರಗೆಪ್ಪ ಚನ್ನವೀರಪ್ಪ ಮೋದಿ ಬಾಯಲ್ಲಿ ಬೆಳ್ಳಿ ಚಮಚೆ ಇಟ್ಟುಕೊಂಡು ಹುಟ್ಟಲಿಲ್ಲ. ತಂದೆ ಚನ್ನವೀರಪ್ಪ, ತಾಯಿ ದುಂಡಮ್ಮ. ಸಣ್ಣ ವ್ಯಾಪಾರಿ ಮನೆತನ 'ಮೋದಿ' ಎಂದರೆ 'ಕಿರಾಣಿ ವ್ಯಾಪಾರಿ' ಎಂದರ್ಥ. ಮುರಗೆಪ್ಪ ಹತ್ತು ವರ್ಷದ ಹುಡುಗನಿದ್ದಾಗ ತಂದೆಯನ್ನು ಕಳೆದು ಕೊಂಡು ತಬ್ಬಲಿಯಾದರು. ಸೋದರ ಮಾವನ ಆಶ್ರಯದಲ್ಲಿ ಲೋಕಾಪೂರದಲ್ಲಿ ಬೆಳೆದರು. ಅಲ್ಲಿಯ ಮರಾಠಿ ಶಾಲೆಯಲ್ಲಿ ಓದು. ಬಡತನದ ಬೇಗೆ ಬೆನ್ನಿಗಂಟಿದ್ದರೂ, ಬಡ ಶಾಲಾ ಮಕ್ಕಳ ಬಂಧು ಆಗಿದ್ದ ಸಿದ್ದಲಿಂಗಪ್ಪನವರ ನೆರವಿನಿಂದ ಜಮಖಂಡಿಯಲ್ಲಿ ಮೆಟ್ರಿಕ್ ಮುಗಿಸಿದರು. ಜ್ಞಾನದ ದಾಹ ಹೆಚ್ಚಾಯಿತು. ಬೆಳಗಾವಿಯ ಖಾಸಬಾಗ್ ಆಯುರ್ವೇದ ಕಾಲೇಜಿಗೆ ಸೇರಿದರು. 1940ರಲ್ಲಿ ಆರ್.ಎಂ. ಪಿ. ಪದವಿ ಪಡೆದರು. ಅವರಿವರ ಸಹಕಾರ ಸಹಾಯದಿಂದ, ಮುಂಬೈಯ ಖಾನ್ ಬಹಾದೂರ್ ಹಾಜಿ ಬಚ್ಚೂವಾಲಿ ಕಣ್ಣಿನ ಆಸ್ಪತ್ರೆಗೆ ಹೆಚ್ಚಿನ ಶಿಕ್ಷಣಕ್ಕಾಗಿ ತೆರಳಿದರು. ಗುರುಗಳ ಪ್ರೀತಿಗೆ ಪಾತ್ರರಾದರು. ಮೊಟ್ಟಮೊದಲ ಕಣ್ಣಿನ ಶಸ್ತ್ರ ಚಿಕಿತ್ಸೆ ನಡೆಸಿ ಅಲ್ಲಿಯ ಹಿರಿಯ ಕಣ್ಣಿನ ತಜ್ಞ ಡಾ. ಸರದೇಸಾಯಿ ಅವರನ್ನು ಚಕಿತಗೊಳಿಸಿದರು. ಕಣ್ಣಿನ ಶಿಬಿರಗಳಿಗೆ ಅವರ ಸಂಗಾತಿಯಾದರು. ಅನುಭವಗಳ ಆಗರವಾದರು.

ಬಡತನವನ್ನೇ ಹಾಸಿ ಹೊದೆಯುವ ಹಳ್ಳಿಗರ ಚಿತ್ರ ಕಣ್ಮುಂದೆ ಹೆಪ್ಪುಗಟ್ಟಿದಾಗ ವೃತ್ತಿಯನ್ನು ಪಟ್ಟಣದಲ್ಲಿ ಪ್ರಾರಂಭಿಸಬೇಕೆ? ಇಲ್ಲಾ ಅವರ ಮನೆ ಮನೆಗೆ ಸೇವೆ ಲಭ್ಯವಾಗುವಂತೆ ಮಾಡಬೇಕೆ? ಎಂಬ ದ್ವಂದ್ವದಲ್ಲಿ ಸಿಕ್ಕು ಒದ್ದಾಡುತ್ತಿದ್ದರು. 1942 ಅಗಸ್ಟ್ 8ರಂದು ಮುಂಬೈನ ಗ್ವಾಲಿಯರ್ ಟ್ಯಾಂಕ್ ಮೈದಾನದಲ್ಲಿ ನೆರೆದಿದ್ದ ಜನ ಸಮೂಹವನ್ನು ಉದ್ದೇಶಿಸಿ ಅಜ್ಜ ಗಾಂಧೀಜಿಯವರು ಮಾಡಿದ ಭಾಷಣ ಮೋದಿಯವರ ಜೀವನಕ್ಕೆ ಹೊಸ ತಿರುವು ಕೊಟ್ಟಿತು. ಮನದ ತುಮುಲ ತಣ್ಣಗಾಯಿತು. ತಾವೇ ಬಡರೋಗಿಗಳ ಬಳಿಗೆ ಹೋಗಲು ನಿರ್ಧರಿಸಿದರು. ಪರಿಣಾಮವಾಗಿ 1943ರಲ್ಲಿ 'ನೇತ್ರದಾನ ಶಿಬಿರ ಯಜ್ಞ'ಕ್ಕೆ ಡಾ. ಮೋದಿ ನಾಂದಿ ಹಾಡಿದರು. ಯಾತ್ರೆ ಶುರುವಾಯಿತು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ನಡೆದಿದೆ. ದೇಶದ ಮೂಲೆ ಮೂಲೆಗಳಲ್ಲಿ, ವಿಶ್ವದ ನಾನಾ ಭಾಗಗಳಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸಿ ಸುಮಾರು ಒಂದು ಕೋಟಿ ಜನರ ಕಣ್ಣುಗಳ ಪರೀಕ್ಷೆ ಮಾಡಿ, 6 ಲಕ್ಷಕ್ಕೂ ಹೆಚ್ಚು ಜನರಿಗೆ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ಹೆಚ್ಚು ಶಸ್ತ್ರ ಚಿಕಿತ್ಸೆ ಮಾಡಿದ ಹೆಗ್ಗಳಿಕೆ. ಗಿನ್ನಿಸ್ ಪುಸ್ತಕದಲ್ಲಿ ದಾಖಲಿಸಿದ ಕೀರ್ತಿ.

ಎಲ್ಲವೂ ಅಚ್ಚುಕಟ್ಟು

ಡಾ. ಮೋದಿಯವರ ಹೆಸರಿನಲ್ಲಿ ಏನೋ ಒಂದು ಮೋಡಿ. ಅವರು ಕಣ್ಣಿನ ಆಪರೇಷನ್ ಮಾಡುವಲ್ಲಿ ತೋರುವ ಚಾಕಚಕ್ಯತೆ, ನೈಪುಣ್ಯ ವೈದ್ಯಕೀಯ ಕ್ಷೇತ್ರದಲ್ಲೇ ಬೆರಗುಗೊಳಿಸುವಂತಹುದು. ತಿರುಪತಿಯಲ್ಲಿ ನಡೆದ ಶಿಬಿರವೊಂದರಲ್ಲಿ ಒಂದೇ ದಿನದಲ್ಲಿ 833 ನೇತ್ರ ಶಸ್ತ್ರಚಿಕಿತ್ಸೆ ಮಾಡಿದ ವಿಶ್ವ ದಾಖಲೆ. ತಿರುಪತಿ ತಿಮ್ಮಪ್ಪನನ್ನೂ ಬೆಚ್ಚಿಬೀಳಿಸಿದ್ದಾರೆ.

ಸರಳತೆ, ಸಜ್ಜನಿಕೆ, ಶಿಸ್ತು, ಸಂಯಮ, ಸೇವಾ ಮನೋಭಾವ, ಕರುಣೆ, ಹೃದಯವಂತಿಕೆ, ನಿಸ್ವಾರ್ಥ, ದಕ್ಷತೆ, ಪ್ರಾಮಾಣಿಕತೆ ಇವೆಲ್ಲವುಗಳ ಸಾಕಾರ ಮೂರ್ತಿಯೇ ಡಾ. ಮೋದಿ. ರೋಗಿಗಳ ದಾಖಲಾತಿಯಿಂದ ಹಿಡಿದು ಶಸ್ತ್ರ ಚಿಕಿತ್ಸೆಗೆ ಗುರಪಡಿಸಿ, ರೋಗಿ

ಗಳು ಮನೆಗೆ ಹಿಂದಿರುಗುವವರೆಗೆ ಎಲ್ಲವೂ ಅಚ್ಚುಕಟ್ಟು. ಯಾವುದೇ ಹಂತದಲ್ಲಿ ಸ್ವಲ್ಪ ಏರುಪೇರಾದರೂ ಮೋದಿಯವರು ಸಹಿಸುವುದಿಲ್ಲ. ಅವರು ಶಿಸ್ತಿನ ಸಿಪಾಯಿ. ಸಿಬ್ಬಂದಿಯವರೂ ಅಷ್ಟೇ ರೋಗಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಾರೆ. ನಿಸ್ವಾರ್ಥ ಸೇವೆ, ಪ್ರಾಮಾಣಿಕ ದುಡಿಮೆ ಅವರಿಗೆ ಮೋದಿಯವರಿಂದ ಬಂದ ಬಳುವಳಿ.

ಡಾ. ಮೋದಿಯವರದು ಆದರ್ಶ ಸಂಸಾರ. ಮಡದಿ ಲೀಲಾವತಿ. ಅವರು ಮೆಚ್ಚಿದ್ದು ಪತಿಯನ್ನು ಮಾತ್ರವಲ್ಲ, ಅವರ ತತ್ವಗಳನ್ನೂ ಮೆಚ್ಚಿಕೊಂಡವರು. ಕೀರ್ತಿಗೊಬ್ಬನೇ ಮಗ, ಅವರೂ ನೇತ್ರ ತಜ್ಞ, ಡಾ. ಅಮರನಾಥ ಮೋದಿ, ತಂದೆಯ ಹಾದಿಯಲ್ಲಿಯೇ ಹೆಜ್ಜೆಯಿಡುತ್ತಿದ್ದಾರೆ. ರಾಜಾಜಿನಗರದಲ್ಲಿರುವ ಡಾ. ಮೋದಿಯವರ ಮೌರಿಂಗ್ ಫ್ರೀ ಆಯ್ ಹಾಸ್ಪಿಟಲ್‌ದಲ್ಲಿಯ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ.

"ಪ್ರಪಂಚದ ಐದು ಜನ ಕುರುಡರಲ್ಲಿ ಒಬ್ಬ ಭಾರತೀಯನಿದ್ದಾನೆ. ಭಾರತದಲ್ಲಿ ಮೂವತ್ತು ಲಕ್ಷ ಜನ ಕುರುಡರಿದ್ದಾರೆ. ಆರು ಲಕ್ಷ ಜನ ಅರೆ ಕುರುಡರು. ಕಣ್ಣಿನ ವಿವಿಧ ಬೇನೆಯಿಂದ ನರಳುತ್ತಿರುವವರ ಸಂಖ್ಯೆ ಒಂದು ಕೋಟಿ! ಬೇರೆದೇಗಳಲ್ಲಿ ಬಾಳ ಸಂಜೆಯಲ್ಲಿ ಕಣ್ಣು ಮಂಜಾದರೆ ಇಲ್ಲಿಯ ಪರಿಸ್ಥಿತಿಯೇ ಬೇರೆ. ಭಾರತೀಯರ ಕುರುಡಿಗೆ ಪೌಷ್ಟಿಕಾಂಶಗಳ ಕೊರತೆ, ಬಡತನ, ಅಜ್ಞಾನ, ಸೂಕ್ತ ಚಿಕಿತ್ಸೆಯ ಅಭಾವ, ಮದುಗಟ್ಟಿ ನಿಂತಿರುವ ಮೂಢನಂಬಿಕೆಗಳೇ ಕಾರಣ" ಡಾ. ಮೋದಿ ನೀಡುವ ಈ ವಿವರಣೆ ಕೇಳುತ್ತ, ಕೇಳುತ್ತ ಕಣ್ಣಿದ್ದವರಿಗೂ ಕತ್ತಲೆ ಕಟ್ಟುವುದು ಸಹಜ. ಅಧಿಕ ಅಂಧತ್ವದ ಕಾರಣ ಕಂಡುಕೊಂಡ ಮೋದಿಯವರು ಶಿಬಿರಗಳನ್ನು ನಡೆಸಲು ಪ್ರಾರಂಭಿಸಿದರು. ಇಡೀ ವಿಶ್ವದಲ್ಲಿಯೇ ಮೊಟ್ಟ ಮೊದಲು ವೈದ್ಯಕೀಯ ರಂಗದಲ್ಲಿ ಶಿಬಿರಗಳನ್ನು ಪ್ರಾರಂಭಿಸಿ ಅದಕ್ಕೊಂದು ವಿಶ್ವ ವ್ಯಾಪ್ತಿಯ ಅಸ್ತಿತ್ವ ನೀಡಿದರು. ಮೊದಮೊದಲು ಬಹಿರಂಗ ಶಿಬಿರದ ಬಗ್ಗೆ ಮೂಗು ಮುರಿದ ದಿಗ್ಗಜರೆನಿಸಿಕೊಂಡವರು, ಮುಂಬರುವ ದಿನಗಳಲ್ಲಿ ತಾವು ಇದೇ ಮಾದರಿಯ ಶಿಬಿರ ಪ್ರಾರಂಭಿಸಿ ಡಾ. ಮೋದಿಯವರಿಗೆ ಮಣಿದರು. ಡಾ. ಮೋದಿಯ

ದಿವ್ಯದೃಷ್ಟಿ

1968ರಲ್ಲಿ ನಡೆದ ಘಟನೆ. ಡಾ. ಮೋದಿಯವರಿಗೆ ಪದ್ಮಭೂಷಣ ಪ್ರದಾನ ಮಾಡುವ ಸಮಾರಂಭ. ಡಾ. ಝೂಕೀರ್ ಹುಸೇನರು ಪ್ರಶಸ್ತಿ ನೀಡುತ್ತಿದ್ದರು. ಅವರು ಯಾವತ್ತೂ ಕಪ್ಪು ಕನ್ನಡಕವನ್ನು ಧರಿಸುತ್ತಿದ್ದರು. ಎಷ್ಟೇ ದಿಟ್ಟಿಸಿ ನೋಡಿದರೂ ಅವರ ಕಣ್ಣು ಯಾರಿಗೂ ಕಾಣುತ್ತಿರಲಿಲ್ಲ. ಸಾಮಾನ್ಯವಾಗಿ ಉನ್ನತ ಪ್ರಶಸ್ತಿ ಸಿಕ್ಕಾಗ, ಸ್ವೀಕರಿಸುವ ವ್ಯಕ್ತಿಯ ಕಣ್ಣು ಪ್ರಶಸ್ತಿಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಆದರೆ ಡಾ. ಮೋದಿಯವರ ಸ್ವಭಾವ ಹಾಗಲ್ಲ. ಅಭ್ಯಾಸ ಬಲದಿಂದ ಮೋದಿಯವರು ಯಾರನ್ನೇ ನೋಡಲಿ ಅವರ ಕಣ್ಣನ್ನು ನೋಡದೇ ಬಿಡುತ್ತಿರಲಿಲ್ಲ. ಡಾ. ಝೂಕೀರ್ ಹುಸೇನರ ಕಪ್ಪು ಕನ್ನಡಕ ಇದಕ್ಕೆ ಅಡ್ಡಿಯಾಗಿತ್ತು. ಮೋದಿಯವರು 'ಸ್ಟೇಜ್'ಗೆ ಸೈಡ್ ವಿಂಗ್‌ನಿಂದ ಬರುವಾಗ, ಕನ್ನಡಕದ ಕಿಂಡಿಯಿಂದ ಕಣ್ಣನ್ನು ನೋಡಿದರು ಪ್ರಶಸ್ತಿ ಸ್ವೀಕರಿಸಿ ಆಸೀನರಾಗುವ ಮೊದಲು ಡಾ. ಝೂಕೀರ ಹುಸೇನರ ಆಪ್ತ ಕಾರ್ಯದರ್ಶಿಯನ್ನು ಹುಡುಕಿದರು. ರಾಷ್ಟ್ರಾಧ್ಯಕ್ಷರ ಕಣ್ಣಿನ ವರದಿಯನ್ನು ಒಪ್ಪಿಸಿದರು. ಅಧ್ಯಕ್ಷರ ಗೌರವ ವೈದ್ಯರಿಗೆ ಈ ವರದಿ ರವಾನೆ ಆಯಿತು. ಕಣ್ಣಿನ ತಜ್ಞರು ಎಲ್ಲ ತಪಾಸಣೆ ಮಾಡಿ ನೋಡಿದಾಗ ಮೋದಿಯವರ ಅಭಿಪ್ರಾಯಕ್ಕೆ ಅವರ ಅಭಿಪ್ರಾಯ ತಾಳೆಯಾಯಿತು.

ವರು ಶಿಬಿರಗಳನ್ನು ನಡೆಸುವ ಹಿನ್ನೆಲೆ ಬಗ್ಗೆ ಅವರು ಕೊಡುವ ವಿವರಣೆ "ಭಾರತದ ಬಡ ಜನ ನಮ್ಮಲ್ಲಿಗೆ ಬರುವುದು ಸಾಧ್ಯವಿಲ್ಲ. ಆದ್ದರಿಂದ ನಾನೇ ಅವರ ಬಳಿಗೆ ಹೋಗುತ್ತೇನೆ!" ಈ ತತ್ವ ಪ್ರತಿಪಾದಿಸಿ ಯಶಸ್ಸು ಪಡೆದದ್ದು

ಮಾತ್ರವಲ್ಲ ವೈದ್ಯಕೀಯ ಜಗತ್ತಿನ ಮನೋಭಾವನೆಯನ್ನು ಬದಲಾಯಿಸಿದ್ದು ಡಾ. ಮೋದಿಯವರ ಹಿರಿಮೆ.

“ಭಾರತದಲ್ಲಿ ಈಗ ರೋಗಕ್ಕಿಂತ ಔಷಧ, ಔಷಧಗಿಂತ ವೈದ್ಯರು ಕೆಟ್ಟವರಿದ್ದಾರೆ. ಬಡ ಬಗ್ಗರನ್ನು ದೇವರೇ ಕಾಪಾದಬೇಕು” ಎನ್ನುವ ಮೋದಿಯವರ ಮಾತು ಅವರ ಅಂತರಾಳದ ಆದರ್ಶಗಳಿಗೆ ಹಿಡಿದ ಕನ್ನಡಿ.

ಡಾ. ಮೋದಿ ಅವರಿಗೆ ಹಬ್ಬ ಹರಿದಿನಗಳ ಬಗ್ಗೆ ಗೊತ್ತಿಲ್ಲ. ಶಿಬಿರದ ದಿನಗಳೇ ಹಬ್ಬಗಳು. ರೋಗಿಗಳಿಗೆ ಮಾಡುವ ಸೇವೆಯೇ ದೇವರಿಗೆ ಸಲ್ಲಿಸುವ ಪೂಜೆ. ಈ ಕಣ್ಣಪ್ಪನ ಅಭಿಮಾನಿಗಳು ಇಲ್ಲಷ್ಟೇ ಅಲ್ಲ. ವಿದೇಶಗಳಲ್ಲೂ ಉಂಟು. ನಮ್ಮ ಹಳ್ಳಿ ಮಂದಿಗೆಲ್ಲ ಅವರು “ಕಣ್ಣು ಕೊಟ್ಟ ಅಣ್ಣ” “ಕಣ್ಣು ಕೊಟ್ಟ ಕಣ್ಣಪ್ಪ” ಎಂದೇ ಚಿರಪರಿಚಿತರು. ಅವರ ಪ್ರತಿಭೆಗೆ ಶರಣಾದ ಅಮೆರಿಕಾದವರು “ನೇತ್ರಚಿಕಿತ್ಸೆಯ ಶ್ರೇಷ್ಠ ಶಿಲ್ಪಿ” ಸಾಮೂಹಿಕ ನೇತ್ರ ಚಿಕಿತ್ಸೆಯ ಏಕಮೇವಾ ದ್ವಿತೀಯ ವ್ಯಕ್ತಿ” ಎಂದು ಹಾಡಿ ಹೊಗಳಿದರೆ, ರಷ್ಯಾದವರು “ನೇತ್ರ ಶಸ್ತ್ರಚಿಕಿತ್ಸೆಯ ಮೋಡಿಕಾರ” ಎಂದು ಪ್ರಶಂಸಿಸಿದ್ದಾರೆ.” ಅವರ ಬಹುಮುಖ ವ್ಯಕ್ತಿತ್ವವನ್ನು ಹತ್ತಿರದಿಂದ ನೋಡಿದ ವಿದೇಶಿಯರು ಶಸ್ತ್ರಚಿಕಿತ್ಸಗೆ ಬೇಕಾದ ಶ್ರೇಷ್ಠ ಮಟ್ಟದ ಉಪಕರಣಗಳು, ಕನ್ನಡಕ, ಔಷಧಿಗಳನ್ನು ಉಚಿತವಾಗಿ ಪೂರೈಸಿದರೆ, ವಿಶ್ವ ಸಂಸ್ಥೆಗೆ ಸಂಬಂಧಿಸಿದ ‘ಕೇರ್’ ಸಂಸ್ಥೆ ಏಳು ಲಕ್ಷ ಬೆಲೆ ಬಾಳುವ ಸುಸಜ್ಜಿತ’ ವ್ಯಾನೊಂದನ್ನು ಉಡುಗೊರೆಯಾಗಿ ನೀಡಿ ಮೋದಿಯವರು ನಡೆಸುವ ನೇತ್ರ ಯಜ್ಞದಲ್ಲಿ ಪರೋಕ್ಷವಾಗಿ ಭಾಗಿಯಾಗುತ್ತಿದೆ.

ಡಾ. ಮೋದಿಯವರ ಸೇವೆ ವೈದ್ಯಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ‘ಸ್ಕೌಟ್ ಸೇವಾದಳ, ರೆಡ್ ಕ್ರಾಸ್, ಲಯನ್ಸ್ ಹೀಗೆ

ಕುವೆಂಪು ಕಂಡ ಡಾ. ಮೋದಿ

ರಾಷ್ಟ್ರಕವಿ ಕುವೆಂಪು ಅವರು ನಲವತ್ತು ವಸಂತಗಳನ್ನು ಕಂಡಿದ್ದರು. ಡಾ. ಮೋದಿಯವರು ತಮ್ಮ ಮಿತ್ರ ಮಂಡಳಿಯ ಸಂಗಡ ಕುವೆಂಪು ಅವರನ್ನು ಕಾಣಲು ಅವರ ನಿವಾಸಕ್ಕೆ ಹೋದರು. ಅದೂ ಇದೂ ಮಾತನಾಡಿದರು. ಹೊತ್ತಿಗೆಯೊಂದರಲ್ಲಿಯ ದೃಷ್ಟಾಂತವನ್ನು ತೋರಿಸಲು ಹುಡುಕುವಾಗ ಕುವೆಂಪು ಅವರು ದಿಟ್ಟಿಸಿ ನೋಡುತ್ತಿರುವುದನ್ನು ಡಾ. ಮೋದಿಯವರು ಗಮನಿಸಿದರು. ಅಭ್ಯಾಸಬಲದಿಂದ ಚಾಳೀಸು ಬಂದಿರಬಹುದೆಂದು ಶಂಕಿಸಿದರು. ತಕ್ಷಣ ಜೇಬಿನಲ್ಲಿದ್ದ ಟಾರ್ಚ್‌ಲೈಟ್ ತೆಗೆದು ಕುವೆಂಪು ಅವರ ಕಣ್ಣು ಪರೀಕ್ಷೆ ಮಾಡಿ ಸಂಶಯವನ್ನು ಖಚಿತ ಪಡಿಸಿಕೊಂಡರು. ಬೇಕಾಗುವ ಚಾಳೀಸ ನಂಬರನ್ನು ಬರೆದು ಕೊಟ್ಟರು.

ಕಣ್ಣು ಪರೀಕ್ಷೆ ಇಷ್ಟೊಂದು ಸರಳವೇ. ಅನುಮಾನ ಕುವೆಂಪು ಅವರನ್ನು ಕೊರೆಯತೊಡಗಿತು. ಅದನ್ನು ತೋರ್ಪಡಿಸದೇ ಮೋದಿಯವರು ಕೊಟ್ಟ ಚೀಟಿಯನ್ನು ಜೇಬಿನಲ್ಲಿಟ್ಟುಕೊಂಡರು. ವೈಜ್ಞಾನಿಕ ಮನೋಭಾವದ ಕುವೆಂಪು ಅವರು ಕಣ್ಣಿನ ತಜ್ಞರಲ್ಲಿ ತಪಾಸಣೆಗೆ ಹೋದರು. ಕುವೆಂಪು ಅವರಿಗೆ ವೈದ್ಯರ ಕ್ಲಿನಿಕ್, ಲ್ಯಾಬರೋಟರಿ ಅಂತ ಮೂರು ದಿನಗಳವರೆಗೆ ಓಡಾಡುವುದು ಅನಿವಾರ್ಯವಾಯಿತು. ಪರೀಕ್ಷಾ ವರದಿಗಳ ತಾಳೆಮಾಡಿ ನೇತ್ರ ತಜ್ಞರು ಚೀಟಿ ಬರೆದು ಕೊಟ್ಟರು. ನುರಿತ ವೈದ್ಯರ ಚಾಳೀಸ ನಂಬರಿನ ಚೀಟಿ ಪಡೆದಾಗ ಸಮಾಧಾನದ ನಿಟ್ಟುಸಿರು ಬಿಟ್ಟರು. ಮನೆಗೆ ಬಂದರು. ಡಾ. ಮೋದಿಯವರು ಕೊಟ್ಟ ಚೀಟಿ ಬಿಚ್ಚಿ ನೋಡಿದರು. ಪರೀಕ್ಷೆ ಮಾಡಿದಾಗ ಎರಡೂ ಒಂದೇ ರೀತಿಯವಾಗಿದ್ದವು!

ಮುಂದ ಒಂದು ಸಂದರ್ಭದಲ್ಲಿ ಕುವೆಂಪು ಬರೆದ ಸಾಲುಗಳಿವು- “ನಾನು ಪದೇ ಪದೇ ನೆನೆಯುತ್ತಿರುವ ವಿಭೂತಿ ಪ್ರಮಾಣದ ಜೀವಂತ ವ್ಯಕ್ತಿಗಳಲ್ಲಿ ಒಬ್ಬರು ಸಂತ ವಿನೋಬಾಜಿ, ಮತ್ತೊಬ್ಬರು ಡಾ. ಮೋದಿ.”



ಹತ್ತು ಹಲವು ಸೇವಾ ಸಂಸ್ಥೆಗಳೊಂದಿಗೆ ಸಂಪರ್ಕವನ್ನಿರಿಸಿಕೊಂಡು ಸಮಾಜ ಸೇವೆಯಲ್ಲಿ ಮಗ್ನರಾಗಿರುವದು ಅವರ ವ್ಯಕ್ತಿತ್ವದ ವಿಶೇಷ.

ಡಾ. ಮೋದಿಯವರು ಪ್ರಶಸ್ತಿಗಾಗಿ ಏನನ್ನೂ ಮಾಡಿಲ್ಲ. ನಿಸ್ವಾರ್ಥ ಸೇವೆಯಿಂದ ಸೇವೆ ಸಲ್ಲಿಸಿದರು. ಪುರಸ್ಕಾರ ಪ್ರಶಸ್ತಿಗಳು ಪೈಪೋಟಿಯ ಮೇಲೆ ಮೋದಿಯವರನ್ನು ಹುಡುಕಿಕೊಂಡು ಬಂದವು. ಇದರಿಂದ ಮೋದಿಯವರಿಗಿಂತ ಪ್ರಶಸ್ತಿಗಳಿಗೇ ಹೆಚ್ಚು ಘನತೆ, ಗೌರವ ಬಂದಿತು. ಪ್ರಶಸ್ತಿಗಳು ಮೋದಿಯವರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಬದಲಾವಣೆಯನ್ನು ತರಲಿಲ್ಲ, ಅವರದು ನಿರ್ಲಿಪ್ತ ವ್ಯಕ್ತಿತ್ವ ಬಾಹುಬಲಿಯಷ್ಟೇ ಅಚಲ. ಅರಿಸಿ ಬಂದ ಪ್ರಶಸ್ತಿಗಳ ಪಟ್ಟಿ ಮಾಡುವದು ಕಷ್ಟ. ಮುಖ್ಯವಾದವುಗಳೆಂದರೆ: ಕರ್ನಾಟಕ ಮೈಸೂರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿ, ಕರ್ನಾಟಕ ಸರಕಾರದ 'ಸೇವಾ ಪ್ರಶಸ್ತಿ' 1956ರಲ್ಲಿ ಭಾರತ ಸರಕಾರದಿಂದ 'ಪದ್ಮಶ್ರೀ', 1968ರಲ್ಲಿ 'ಪದ್ಮಭೂಷಣ' ಪ್ರಶಸ್ತಿ. ಕರ್ನಾಟಕ, ಕೇರಳ, ಮಹಾರಾಷ್ಟ್ರ, ಬಿಹಾರ, ಗುಜರಾತ್, ರಾಜ್ಯ ಸರಕಾರಗಳು ಡಾ. ಮೋದಿಯವರನ್ನು 'ರಾಜ್ಯದ ಅತಿಥಿ'ಯನ್ನಾಗಿ ಮನ್ನಿಸಿ ಗೌರವಿಸಿವೆ. ಯು.ಎಸ್.ಎ. ಲಯನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ 'ದೃಷ್ಟಿ ರಹಿತರ ಸಂತ'ನೆಂಬ ಗೌರವ. ದೇಶ ವಿದೇಶಗಳ ಖ್ಯಾತ "ಅಂಬ್ಯಾಸಡರ್ ಆಫ್ ಗುಡ್ ವಿಲ್" ಪ್ರಶಸ್ತಿ. 1989 ರಲ್ಲಿ ಮಾನವತಾವಾದಿ ಪ್ರಶಸ್ತಿ ನೀಡಿಕೆ.

ಖ್ಯಾತ ವಿಜ್ಞಾನಿ ಹಾಗೂ ಭಾರತ ರತ್ನ ಗೌರವಾನ್ವಿತರಾದ ಡಾ. ಸಿ.ವಿ. ರಾಮನ್ ಅವರು ಮೋದಿಯವರು ಕಣ್ಣುಗಳ ಮೇಲೆ ತಮ್ಮ ಕೈಚಳಕ ಸಾಧಿಸಿದ್ದನ್ನು ನೋಡಿ, ನಿಬ್ಬೆರಗಾಗಿ "ನನ್ನ ಕೊರಳಲ್ಲಿರುವ ಭಾರತ ರತ್ನ ಪ್ರಶಸ್ತಿ ಡಾ. ಮೋದಿಯವರಿಗೆ ನೀಡಲು ಬರುತ್ತಿದ್ದರೆ ನಿಸ್ಸಂಶಯವಾಗಿ ಈ ಪ್ರಶಸ್ತಿ ಅವರ ಕೊರಳಿಗೆ ಹಾಕುತ್ತಿದ್ದೆ" ಎಂದು ಉದ್ಗರಿಸಿದರು.

ಈ ವರ್ಷ ಅಕ್ಟೋಬರ್ 14ರಂದು "ಧನ್ವಂತರಿ" ಪ್ರಶಸ್ತಿ ಪ್ರಧಾನ ಮಾಡಲಾಯಿತು.



ವೈದ್ಯಕೀಯ ಕ್ಷೇತ್ರದಲ್ಲಿ ಈ ದೇಶವು ಕೊಡಬಹುದಾದ ಅತ್ಯುನ್ನತ ಗೌರವವು ಇದಾಗಿದೆ. ರಾಜ್ಯ ಸರಕಾರವು ಇವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಿದೆ. ನಿರಾಶ್ರಿತರಿಗೆ, ಅಂಗವಿಕಲರಿಗೆ ಪುನರ್ವಸತಿಯನ್ನು ಕಲ್ಪಿಸುವ ಅವರ ಕನಸು ನನಸಾಗಿಸಲು ಇದು ಅನುಕೂಲಕರ ಕಾಲ.

ಕಣ್ಣಿನ ಶಸ್ತ್ರ ಚಿಕಿತ್ಸೆಯಲ್ಲಿ ಮೋಡಿಯನ್ನು ಮಾಡುವ ಡಾ. ಮೋದಿಯವರ ಅಪೂರ್ವ ಕೈಗಳ ಮಾದರಿಗಳನ್ನು ಅಮೆರಿಕಾದ ಸುಪ್ರಸಿದ್ಧ ಮ್ಯೂಜಿಯಂನಲ್ಲಿ ಇಡಲಾಗಿದೆ. ಅಮೆರಿಕಾದ ವಾರ್ತಾ ಸಂಸ್ಥೆಯ ಭಾರತೀಯ ಘಟಕ ಇವರ ಬಗ್ಗೆ ಸಾಕ್ಷ್ಯ ಚಿತ್ರವೊಂದನ್ನು ತಯಾರಿಸಿದೆ.

ಒಂದು ಇಣುಕು ನೋಟ

ಡಾ. ಮೋದಿಯವರು ಒಮ್ಮೆ ನೋಡಿದ ಕಣ್ಣನ್ನು ಅಷ್ಟು ಸಲೀಸಾಗಿ ಮರೆಯುವುದಿಲ್ಲ. ಇದು ಅವರ ವ್ಯಕ್ತಿತ್ವದ ವಿಶೇಷ. ಆದವಾನಿಯಲ್ಲಿ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ ಇತ್ತು. ಸಾವಿರಾರು ಮಂದಿ ನೋಂದಣಿ ಮಾಡಿಸಿದ್ದರು. ಮುಂಜಾನೆ ಕಣ್ಣು ಪರೀಕ್ಷಿಸಲು ಮೋದಿಯವರು ಪ್ರಾರಂಭಿಸಿದರು.

ಪಟ ಪಟ ಕಣ್ಣು ಪರೀಕ್ಷಿಸುವುದು ಸ್ವಭಾವ. "ನಿನ್ನ ಕಣ್ಣ ಪೊರೆ ಇನ್ನೂ ಪೂರ್ತಿ ಬೆಳೆದಿಲ್ಲ. ಅಪರೇಷನ್‌ಗೆ ಬರುವುದಿಲ್ಲ." ಎಂದು ಯಥಾಪ್ರಕಾರ ಹೇಳಿ ಮುಂದೆ ಸಾಗಿದರು. ಮೋದಿಯವರಿಗೆ ತಮ್ಮ ನಿರ್ಣಯದ ಬಗ್ಗೆ ಆತ್ಮ ವಿಶ್ವಾಸವಿತ್ತು. ಆದರೆ ಅದು ಕಣ್ಣು ತೋರಿಸಿದ ವ್ಯಕ್ತಿಗೆ ಇರಲಿಲ್ಲ. ಅನುಮಾನ ಅವನಿಗೆ. ಅದನ್ನು ಯಾರಿಗೂ ಹೇಳಲಿಲ್ಲ.

ಸಂಜೆ ವೇಳೆಗೆ ಜನರು ಕಡಿಮೆಯಾಗಿದ್ದರು. ಆ ವ್ಯಕ್ತಿ ಮತ್ತೆ ಸರದಿಯಲ್ಲಿ ನಿಂತ. ಡಾ. ಮೋದಿಯವರು ಟಾರ್ಚ್ ಹಾಕಿ ಪರೀಕ್ಷೆ ಮಾಡಿದರು. "ನಿನ್ನ ಕಣ್ಣಿನ ಪೊರೆ ಪೂರ್ತಿ ಬೆಳೆದಿಲ್ಲವೆಂದು ಇಂದು ಮುಂಜಾನೆಯಷ್ಟೇ ಹೇಳಿದ್ದೇನೆ. ಸಂಜೆ ವೇಳೆಗೆ ಪೂರ್ತಿ ಬೆಳೆಯುವುದೆಂದು ಭಾವಿಸಿರುವಿಯೇನು?" ಎಂದರು ನಗುನಗುತ್ತ. ವ್ಯಕ್ತಿಯ ಅನುಮಾನ ಓಡಿ ಹೋಗಿತ್ತು. ಮೋದಿಯವರು ಅವನ ಬೆನ್ನು ತಟ್ಟಿ ತಮ್ಮ ಕೂಡ ಬರಲು ಹೇಳಿದರು- ತಪ್ಪಿಸಿಕೊಂಡು ಮತ್ತೆ ಸರದಿಗೆ ನಿಲ್ಲದಿರಲಿ ಎಂದು. *

ಡಾ. ಮೋದಿಯವರು ಅಮೆರಿಕಾಕ್ಕೆ ಹೋದಾಗ, ಸುಸಜ್ಜಿತ ಕಣ್ಣಿನ ಆಸ್ಪತ್ರೆಗೆ ಭೆಟ್ಟಿಕೊಟ್ಟರು-ಹೊಸ ತಂತ್ರಜ್ಞಾನ ತಿಳಿಯಲು. ಅಮೆರಿಕಾದಲ್ಲ ಖ್ಯಾತಿ ಪಡೆದ ನೇತ್ರ ತಜ್ಞರ ತಂಡ ಕ್ಯಾಟರಾಕ್ಟ್ ಆಪರೇಷನ್ ಮಾಡುತ್ತಿದ್ದರು. ತದೇಕ ಚಿತ್ತದಿಂದ ಮೋದಿಯವರು ವೀಕ್ಷಿಸುತ್ತಿದ್ದರು. ಅವರು ಗಂಟೆಗೆ ಮೂರು ಆಪರೇಷನ್ ಮಾಡಿ ಮುಗಿಸಿದರು. ವೈದ್ಯರೊಬ್ಬರು-'ದಿನಕ್ಕೆ ನೀವೆಷ್ಟು ಆಪರೇಷನ್ ಮಾಡುತ್ತೀರಿ? ಎಂದು ಪ್ರಶ್ನಿಸಿದರು. ಕನಿಷ್ಠ ನೂರಿನ್ನೂರು" ಎಂದರು ಡಾ. ಮೋದಿ. ಬೆಕ್ಕಸಬೆರಗಾದ ವೈದ್ಯರ ಹುಬ್ಬು ಗಂಟಿಕ್ಕಿದವು-'ಇದು ಸಾಧ್ಯವೇ?' ಎನ್ನುವಂತೆ, ಮಾಡಿ ತೋರಿಸುತ್ತೀರಾ?" ಎಂದು ಸವಾಲು ಹಾಕಿದರು. ನಗುನಗುತ್ತ ಒಪ್ಪಿ, ಆಪರೇಷನ್ ಟೇಬಲ್ ಮೇಲೆ ಪೊರೆ ತೆಗೆಸಿಕೊಳ್ಳಲು ಮಲಗಿದ್ದ ರೋಗಿಯ ಪೊರೆಯನ್ನು ಒಂದೇ ಒಂದು ನಿಮಿಷದಲ್ಲಿ ಆಪರೇಶನ್ ಮಾಡಿ ತೋರಿಸಿದರು. ವೈದ್ಯರಿಗೆ ಅಚ್ಚರಿ- ಮೋದಿಯವರ ಕೈಚಳಕ ಕಂಡು ಅಭಿನಂದಿಸಿದರು. ಪತ್ರಿಕೆಗಳು, ಟಿ.ವಿ.ಯವರು ಸಂದರ್ಶನ ಮಾಡಿದರು. ಕೈಚಳಕದ ಬಗ್ಗೆ ಎಲ್ಲರೂ ಕೇಳುವವರೇ. ಮೋದಿಯವರು ಮುಗುಳ್ನಗುತ್ತ ಹೇಳಿದರು-"ಕಲೆ, ಚಿತ್ರಕಲೆ, ಸಂಗೀತ ಕಲೆಗಳಂತೆ ಶಸ್ತ್ರ ಚಿಕಿತ್ಸೆಯೂ ಒಂದು ಕಲೆ. ಅತ್ಯಂತ ಕುಶಲ ಕಲೆ" 'ಸರ್ಜನ್ಸ್ ಆರ್ ಬಾರ್ನ' ಎಂಬ ಮಾತನ್ನು ಮೋದಿಯಂತವರನ್ನು ನೋಡಿಯೇ ಮಾಡಿರಬೇಕು.

ಕುರುಡರ ಬಗ್ಗೆ ನಾವು ಅನುಕಂಪ ತೋರಬೇಕಾಗಿಲ್ಲ. ಅವರು ಸಮಾಜದಲ್ಲಿ ಇತರರಂತೆ ಬದುಕಲು, ಬಾಳಲು ಅವಕಾಶ ಕಲ್ಪಿಸಿ ಕೊಡಬೇಕಾದ್ದು ಪ್ರತಿಯೊಬ್ಬ ಪ್ರಜ್ಞಾವಂತ ಪ್ರಜೆಯ ಕರ್ತವ್ಯ. ಮರಣ ಹೊಂದಿದ ಕೂಡಲೇ ಅವರ ಕಣ್ಣುಗಳನ್ನು ಕಣ್ಣಿನ ಬ್ಯಾಂಕಿಗೆ ಕೊಡಬೇಕೆಂದು ಮೋದಿಯವರು ಮೃತ್ಯುಪತ್ರ ಬರೆದಿದ್ದಾರೆ. "ಜೀವನದ ಕೊನೆಯ ಉಸಿರಿರುವವರೆಗೂ ಕುರುಡರ ಸೇವೆಯೇ ನನ್ನ ಗುರಿ. ಕುರುಡರೇ ನನ್ನ ಜೀವಂತ ದೇವರು. ಕಣ್ಣಿನ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಕೊನೆಯ ಉಸಿರನ್ನೆಳೆಯುವ ಆಸೆ ನನ್ನದು" ಎನ್ನುವ ಡಾ. ಮೋದಿಯವರು ನಮ್ಮ ಮಧ್ಯದಲ್ಲಿ ಜೀವಿಸುತ್ತಿರುವ ಮಹಾ ಸಂತ. *


ಕದೆಯುನಲ್ಲೂರಿನ ಓರ್ವ ಸ್ತ್ರೀ

ಮಲಯಾಳದಲ್ಲಿ : ಟಿ. ಪದ್ಮನಾಭನ್
ಕನ್ನಡಕ್ಕೆ : ಕೆ.ಕೆ. ನಾಯರ್



ಅಲ್ಲಿ ವಾಸಿಸತೊಡಗಿದ ಬಳಿಕ ಅಂದೇ ಮೊದಲ ಸಲ ಆತ ಅವಳೊಡನೆ ಮಾತನಾಡಿದ್ದ. ತೀರಾ ಆಕಸ್ಮಿಕವಾಗಿತ್ತು ಆ ಘಟನೆ. ವೇಳೆ ಮಧ್ಯಾಹ್ನ ಕಳೆದಿತ್ತು. ಬಾಲಚಂದ್ರನಿಗ ಒಬ್ಬನೇ ಕುಳಿತು ಬೇಸರವಾಗಿತ್ತು. ಹಗಲಿನ ನಿದ್ದೆ ಆತನಿಗಾಗದು. ಮಾಡತಕ್ಕ ವಿಶೇಷ ಕೆಲಸವೂ ಇರಲಿಲ್ಲ. ಮುಂಜಾನೆ ಬಂದಿದ್ದ ದಿನಪತ್ರಿಕೆಯ ಒಂದು ಸಾಲನ್ನೂ ಬಿಡದೆ ಆಗಲೇ ಓದಿ ಮುಗಿಸಿದ್ದ. ಇನ್ನೊಮ್ಮೆ ಅದರಲ್ಲೇ ಕಣ್ಣು ಹಾಯಿಸುವುದೆಂದರೆ ಕಷ್ಟವೇ.

"ತೆಂಕಾಚಿ"ಯಿಂದ ಹನ್ನೆರಡು ಮೈಲಿ



ದೂರದಲ್ಲಿರುವ ಆ ಗ್ರಾಮದಲ್ಲಿ ಹೊತ್ತು ಸರಿಯುತ್ತಲೇ ಇಲ್ಲ! ಅಡುಗ ಮನೆಯ ಹಿಂಭಾಗದಲ್ಲಿರುವ ನೀರಿನ ಟ್ಯಾಂಕಿಯ ಬಳಿ ಹೋಗಿ, ಬಾಲಚಂದ್ರನು ನಿಂತುಕೊಂಡ. ಸದಾ ನೀರು ಬೀಳುತ್ತಿರುವ ಕಾರಣ, ಅಲ್ಲಿ ಒಂದಷ್ಟು ಕಾಡು ಹರಿವೆ ಹುಲುಸಾಗಿ ಬೆಳೆದುಕೊಂಡಿತ್ತು. ಅದರೆಡೆಯಲ್ಲಿ ಅವಿತುಕೊಂಡಿದ್ದ ಎರಡು ಕಪ್ಪೆ ಮರಿಗಳತ್ತ ಆತ ಕುತೂಹಲದಿಂದ ನೋಡಿದ. ನೀರ

ಗಾಗಿ, ಇಲ್ಲವೇ ಸ್ನಾನಕ್ಕಾಗಿ ತೆರಳಿದಾಗಲೆಲ್ಲಾ ಅಲ್ಲಿ ಬಾಲಚಂದ್ರನಿಗೆ ಆ ಸಂಗಾತಿಗಳ ಭೇಟಿ ಯಾಗುತ್ತಿತ್ತು. ಎರಡು ಸಾವಿರದಷ್ಟು ನಿವಾಸಿ ಗಳಿರುವ ಕಡೆಯನಲ್ಲೂರು ಗ್ರಾಮದಲ್ಲಿ ಆ ಸೀನಿಯರ್ ಇನ್ಸ್‌ಪೆಕ್ಟರ ಜೊತೆ ನಿಕಟ ಸಲುಗೆ ಹೊಂದಿದ್ದು ಅವುಗಳಷ್ಟೆ.

ಅವುಗಳ ಒಂದೊಂದೇ ಚಲನೆಯನ್ನೂ ಸೂಕ್ಷ್ಮವಾಗಿ ದಿಟ್ಟಿಸುತ್ತಾ ಕುಳಿತಾಗ ಬಾಲಚಂದ್ರ ಅಂದುಕೊಂಡ - ತಾನೇಕೆ ಪಕ್ಕದ ಮನೆಯ ನೀಲಿಕೋಟಿನವನೊಂದಿಗೆ ಮಾತನಾಡಬಾರದು? ಏನಾದರೂ ಆತ ಒಬ್ಬ ವಿದ್ವಾಂಸ. ಒಂದೆ ರಡು ಸಲ ಬೀದಿಯಲ್ಲಿ ಸಂಧಿಸಿದಾಗ 'ವಣಕ್ಕಂ' ಎಂದು ತಮಿಳಿನಲ್ಲೇ ವಂದನೆಯನ್ನೂ ಸಲ್ಲಿಸಿದ್ದ.

ಭಾನುವಾರವಾದ ಕಾರಣ ಆತ ಮನೆ ಯಲ್ಲೇ ಇರಬಹುದು.

ವರಾಂಡಕ್ಕೆ ತೆರಳಿದ ಬಾಲಚಂದ್ರ ಪಿಸು ಮೆಲ್ಲನೇ ಕರೆದ : "ಮಿಸ್ಟರ್ ರೆಹಮಾನ್" ಆತನ ಕರೆಗೆ ಯಾರೂ ಓಗೊಡಲಿಲ್ಲ.

ಬಾಲಚಂದ್ರ ಇನ್ನೊಮ್ಮೆ ಕರೆದ ಕುರ್ಚಿ ಸರಿಸಿದ. ಕೈ ಬಳೆಗಳು ಅಲುಗಿದ ಸದ್ದುಗಳು ಆತನಿಗೆ ಕೇಳಿಸಿದವು. ಅದರ ಬೆನ್ನಲ್ಲೇ ಸಿತಾ ರಿನ ತಂತಿಗಳನ್ನೂ ನಾಚಿಸುವ ಹಾಗೆ ಓರ್ವ ಹೆಣ್ಣಿನ ಸವುರಾದ ದನಿ, ಅದೂ ತಮಿಳಿನಲ್ಲಿ:

"ಊಟಮಾಡಿ ಹೋದ್ರು ಕಣ್ರೀ'

ಬಾಲಚಂದ್ರ ಬೆಚ್ಚಿಬಿದ್ದ. ತನ್ನ ಕರೆ ಯಾವುದಾದರೂ ಸಂಶಯಕ್ಕೆ ಕಾರಣವಾಯಿ ತೇನೋ ಎಂದು ಆತ ಹೆದರಿದ. ರೆಹ ಮಾನ್ ಮನೆಯಲ್ಲಿಲ್ಲವೆಂದು ತಿಳಿದೇ ಕರೆ ದನೆಂದು ಅವಳು ಅನುಮಾನಿಸುವಳೇನೋ? ಓರ್ವ ಹೆಣ್ಣಿನೊದನೆ ಮುಖಾಮುಖಿಯಾಗಿ ಬಾಲಚಂದ್ರ ಮಾತಾಡಿದ್ದೇ ಇಲ್ಲ. ನಿಜಕ್ಕೂ ಅಂತಹ ವಿಚಾರಗಳಿಗೆ ಆತ ಬಹಳ ನಾಚುತ್ತಿದ್ದ.

"ಏನು ಬೇಕಾಗಿದೆ ರೀ?"

ಈ ಪ್ರಶ್ನೆ, ಕೋಣೆಗೆ ಮರಳುವುದರ ಲ್ಲಿದ್ದ ಬಾಲಚಂದ್ರನನ್ನು ಅಲ್ಲೇ ತಡೆದು ನಿಲ್ಲಿ ಸಿತು. ಶೀರಾ ಗೊಂದಲದಲ್ಲಿ ಬಿದ್ದು ಬಿಟ್ಟ ಆತ ಒಬ್ಬ ಚಿಕ್ಕ ಹುಡುಗನ ಹಾಗೆ ಬೆರಳ ತುದಿಯನ್ನು ಕಚ್ಚುತ್ತಾ ಯೋಚಿಸಿದ. ಏನಾ ದರೊಂದು ಸಬೂಬು ಹೇಳಬೇಕು. ಆದರೆ ಏನಂತ ಹೇಳುವುದು? ಅಪರಿಚಿತ ವ್ಯಕ್ತಿಯೊ ಬ್ಬನ ಹಿಂದಟಿಹೊದನೆ, ತಾನು ವೇಳೆ ಕಳೆಯಲು ದಾರಿ ತೋರದೆ ತೊಳಲುತ್ತಿದ್ದೇನೆ ಎನ್ನಬಹುದೆ? ಅದೂ ಗಂಡಸು ಮನೆಯಲ್ಲಿಲ್ಲದ ವೇಳೆ! ಹೇಳಿ ದರೂ ಆಕೆಗೆ ಅದು ಅರ್ಥವಾದೀತೇ?

ಬಾಲಚಂದ್ರನಿಗೆ ಥಟ್ಟನೆ ಒಂದು ಉಪಾಯ ಹೊಳೆಯಿತು. ತಮಿಳಿನಲ್ಲೇ ಆತನೆಂದ : "ಕುಡಿ ಯಲು ಕೊಂಚ ನೀರು ಬೇಕಿತ್ತು."

ಒಂದು ಚೊಂಬಿನ ನೀರು ಹಿಡಿದು ಹುಡು ಗನೊಬ್ಬ ಬಂದ. ಅವನು ರೆಹಮಾನ್‌ನ ಮನೆ ಯವನಲ್ಲವೆಂದೂ ನೆರೆಹೊರೆಯ ಯಾವುದೋ ಹುಡುಗನಿರಬೇಕೆಂದೂ ಬಾಲಚಂದ್ರ ಊಹಿಸಿದ. ಚೊಂಬಿನ ತಣ್ಣಗಿನ ನೀರು ತುಟಿಗೆ ತಾಗಿದಾಗ ಬಾಲಚಂದ್ರನ ಮುಖದಲ್ಲೊಂದು ಮುಗುಳ್ನಗೆ ಹಬ್ಬಿತು.

ತಾನು ಮಧ್ಯಾಹ್ನ ಬೆವರು ಸುರಿಸುತ್ತ ಬರು ವಾಗ ಕೆಲವೊಮ್ಮೆ ಪಕ್ಕದ ಮನೆಯ ಮುಂಬಾ ಗಿಲ ಬಳಿ ಕಾಣಿಸುತ್ತಲಿದ್ದ ಆ ಯುವತಿಯ ಕುರಿತು ಬಾಲಚಂದ್ರ ಯೋಚಿಸಿದ. ಬುರ್ಖಾ ತೊಟ್ಟುಕೊಂಡಿರದಿದ್ದರೂ ಅವಳನ್ನು ಸರಿಯಾಗಿ ನೋಡಲು ಆತನಿಗೆ ಯಾವತ್ತೂ ಸಾಧ್ಯವಾ ಗಿರಲಿಲ್ಲ. ಒಂದು ಹುರಿಮಿಂಚಿನಷ್ಟೇ ವೇಗದಲ್ಲಿ ಆಕೆ ಮಾಯವಾಗಿಬಿಡುತ್ತಿದ್ದಳು. ಬೇರೆ ಯಾರಾ ದರೂ ಆಗಿದ್ದರೆ, ರೆಹಮಾನ್‌ನ ಬೇಗಂ ಓರ್ವ ನೂರ್‌ಜಹಾನ್ ಇರಬಹುದೇ ಎಂದು ಶೋಧಿ ಸುತ್ತಿದ್ದರು. ಆದರೆ ಬಾಲಚಂದ್ರನ ಮನಸ್ಸಿನಲ್ಲಿ ಅಂತಹ ವಿಚಾರ ಒಮ್ಮೆ ಕೂಡ ಸುಳಿದಿಲ್ಲ.

ಚೊಂಬು ಹಿಂದಿರುಗಿಸುತ್ತಾ ಆತ ಹುಡು ಗನೊಡನೆ, "ಅವರಿಗೆ ತುಂಬಾ ಥ್ಯಾಂಕ್ಸ್ ಹೇಳು, ಆಯ್ತಾ" ಎಂದ.

ಒಳಗೆ ಹೋಗದೆ ಬಾಲಚಂದ್ರ ಇನ್ನೂ ಅಂಗಳದಲ್ಲೇ ನಿಂತುಕೊಂಡ ಕಣ್ಣಿಗೆಟುಕುವಷ್ಟು ದೂರಕ್ಕೂ ಬಂಜರು ನೆಲವೇ ಹಬ್ಬಿಕೊಂಡಿದೆ. ಬರಿಯ ಬಂಜರು ನೆಲ! ಕಲ್ಲುಗಳಿಂದ ತುಂಬಿ ಕಳ್ಳಿಗಿಡಗಳಷ್ಟೇ ಬೆಳೆಯುತ್ತಿರುವ ಸಾರ ಹೀನವಾದ ಮಣ್ಣು ಎಲ್ಲೋ ಅಲ್ಲೊಂದು ಇಲ್ಲೊಂದು ಎಂಬಂತೆ ಕೆಲವು ಹುಣಸೆ ಮರ ಗಳಿದ್ದು ಯಾವುದೋ ಶಾಪಕ್ಕೆ ಪಕ್ಕಾದ ಹಾಗೆ ಮಂಪರಿನಲ್ಲಿ ಬಿದ್ದುಕೊಂಡಿವೆ.

'ಕುತ್ತಾಲಂ' ಜಲಪಾತದಲ್ಲಿ ಮಿಂದು ಕದ ಯಸಲ್ಲೂರಿಗೆ ಬಸ್ಸು ಹತ್ತಿ ಕುಳಿತಾಗ ಆತ ಕಂಡಿದ್ದ ಸವಿಗನಸುಗಳೇ ಬೇರೆ. ಹಚ್ಚ ಹಸುರು ಹೊತ್ತ, ಸದಾ ಚೇತಭರಿತವಾದ ಒಂದು ಊರಾಗಿತ್ತು ಆಗ ಆತನ ಕಲ್ಪನೆಯಲ್ಲಿ. ಆದರೆ ಇಲ್ಲಿ ತಲುಪಿದಾಗ ಪ್ರತ್ಯಕ್ಷ ಕಂಡದ್ದು—?

ಪಶ್ಚಿಮ ಘಟ್ಟದ ಒಣಸೆರಗಿನಲ್ಲಿ ಉಸಿರು ಕಟ್ಟಿಬಿದ್ದುಕೊಂಡಿರುವ ಒಂದು ಗ್ರಾಮ!

ವರಾಂಡದ ಬದಿಗೆ ತೆರಳಿ ಬಾಲಚಂದ್ರ ಪಡುವಣದತ್ತ ದಿಟ್ಟಿಸಿದ. ಆತನ ವ್ಯಾಮೋಹವನ್ನು ಗೇಲಿಮಾಡುತ್ತಿರುವಂತೆ ದೂರದ ಬೆಟ್ಟಸಾಲುಗಳು ನೀರವ-ಗಂಭೀರವಾಗಿ ನೆಲೆಸಿವೆ. ಬೆಳದಿಂಗಳ ರಾತ್ರಿಯಲ್ಲಿ ದುಂದಗಿನ ಅಮೃತಶಿಲೆಯ ಒಂದು ಕೋಟೆಯ ಹಾಗೆ ಭಾಸವಾಗುತ್ತಿದ್ದ ಆ ಬೆಟ್ಟದ ಸಾಲುಗಳನ್ನು ಹಗಲು ಹೊತ್ತು ನೋಡಬಾರದು. ಆಗ ಅಲ್ಲಿ ಸಾವಿನ ಶೂನ್ಯತೆಯಷ್ಟೆ ಗೋಚರಿಸುತ್ತದೆ.

ನಿಖರವಾಗಿ ಹೇಳುವುದಾದರೆ ಕದೆಯಸಲ್ಲೂರು ಗ್ರಾಮವಿರುವುದು ಆತನ ವಾಸಸ್ಥಳದಿಂದ ಮೂರು ಫರ್ಲಾಂಗು ದೂರದಲ್ಲಿ. ಇಪ್ಪತ್ತೈದರಷ್ಟು ಬೀದಿಗಳಿವೆ. ಆದರೆ ಚೊಕ್ಕವಾಗಿ ಒಂದು ಕೂಡ ಇಲ್ಲ. ಇಕ್ಕಟ್ಟಾದ ಕೋಣೆಗಳಲ್ಲಿ ಕಷ್ಟದಲ್ಲಿ ವಾಸಿಸುತ್ತಿರುವ ಬಡ ನೇಕಾರರು. ಪ್ರತಿಯೊಂದು ಮನೆಯ ಜಗುಲಿಯಲ್ಲೂ ಗುಣಿ ಮಗ್ಗಗಳು. ಬೀದಿಯ ಉದ್ದಕ್ಕೂ ನೇಯ್ಗೆಯ ಹಾಸುಗಳು. ಆ ಹಾಸುಗಳಿಂದ ಇಳಿಯುತ್ತಿದ್ದ ನೀರಿನಲ್ಲಿ ಕಾಲು ಮುಳುಗಿಸದೆ ದಾರಿ ತುಳಿಯಲು ಸಾಧ್ಯವೇ ಇಲ್ಲ. ಮೊದಲನೆಯ ದಿನ ಬಾಲಚಂದ್ರ, ಮಿರುಗುವ ಶೂ ಹಾಕಿಕೊಂಡೇ ಆ ಬೀದಿಗಳಲ್ಲಿ ಓಡಾಡಿದ್ದ. ಮುಂದೆ ಅದನ್ನಾತ ಹೊರ ತೆಗೆಯಲಿಲ್ಲ. ಪಾಲಿಶ್ ಹಾಕಿ ಕೋಣೆಯಲ್ಲೊಂದೆಡೆ ಜೋಪಾನವಾಗಿ ಇರಿಸಿದ್ದ. ಕದಯಸಲ್ಲೂರು ಬಿಡುವ ತನಕ ಶೂ ಧರಿಸಬೇಕಾಗಿಲ್ಲವೆಂದು ಅಂದೇ ನಿರ್ಧರಿಸಿದ್ದ. ಎಷ್ಟಾದರೂ ಆತ ಒಬ್ಬ ಅಲ್ಪ ವೇತನದ ಸೀನಿಯರ್ ಇನ್ಸ್‌ಪೆಕ್ಟರ್ ತಾನೆ.

ಸೀನಿಯರ್ ಇನ್ಸ್‌ಪೆಕ್ಟರ್ -

ಸಹಕಾರಿ ಕ್ಷೇತ್ರದ ಮಧ್ಯಮ ಮಟ್ಟದ ಒಂದು ಹುದ್ದೆ. ಆದರೆ ಕದಯಸಲ್ಲೂರಿನ ಒಂದು ಸರಪಿಳ್ಳೆಗೆ ಕೂಡ ಅದು ಅರ್ಥವಾಗದು. ಹದಿಮೂರು ರೂಪಾಯಿ ಬೆಲೆಯ ಶೂ ಹಾಳಾಗಬಾರದೆಂದು ಮೂಲೆಗಿರಿಸಿ ಬರಿಗಾಲಿನಲ್ಲೇ ಕೊಳಚೆ ಬೀದಿಗುಂಟ ನಡೆಯುತ್ತಿದ್ದ ಆತನನ್ನು ಅವರು ಬೆಳಗಿನಿಂದಲೇ ನೋಡುತ್ತಿದ್ದರು. ಮೊಣಗಂಟಿನ ತನಕ ತೋಳಿರುವ ಕುಪ್ಪಸ ತೊಟ್ಟು ಸೆರಗಿನ ತುದಿಯಿಂದ ನೆತ್ತಿ ಮುಚ್ಚಿ ಹಾಸು ಜೋಡಿಸುತ್ತಿರುವ ಹೆಂಗಸರೂ, ರಂಗುರಂಗಿನ ಲುಂಗಿಯನ್ನು ಎತ್ತಿಕಟ್ಟಿ ನೆಲದ ಮೇಲೆ ಪಟ್ಟಾಗಿ ಕುಳಿತು ನೇಯ್ಗೆ ಮಾಡುತ್ತಿರುವ ಗಂಡಸರೂ ಮೈಯಲೆಲ್ಲಾ ಕೊಳೆ ಮೆತ್ತಿಸಿಕೊಂಡು ಆಟವಾಡುತ್ತಿರುವ ಮಕ್ಕಳೂ ಆತನನ್ನೂ ಕಾಣುವಾಗಲೆಲ್ಲಾ ಬೆಚ್ಚಿ ಬೀಳುತಿದ್ದರು! ಆತ ಸೀನಿಯರ್ ಇನ್ಸ್‌ಪೆಕ್ಟರೇ ತಾನೆ?

ಊರಿನ ಹೆಚ್ಚಿನವರು ಸಹಕಾರಿ ಸಂಘದ ಸದಸ್ಯರೇ ಆಗಿದ್ದಾರೆ. ಆಗದವರು ಕೆಲವರಿರಬಹುದು. ಆದರೆ ನೂಲು ಮಾತ್ರ ಎಲ್ಲರಿಗೂ ಬೇಕೇ ಬೇಕು. ನೂಲು, ನೂಲು, ನೂಲು! ಅವರ ಜೀವನದ ತಳಪಾಯವೇ ನೂಲು. ತಮ್ಮ ಮಗ್ಗಗಳೊಂದಿಗೆ ಅವರ ಸಂಬಂಧ ಶತಮಾನಗಳಿಗಿಂತಲೂ ಹಿಂದಿನದು.

ಜಗತ್ತು ಬಹಳಷ್ಟು ಮುಂದಾಗಿದ್ದರೂ ಕದೆಯಸಲ್ಲೂರು ಮಾತ್ರ ಗತಕಾಲದ ಮಸಣದಲ್ಲೇ ತಡಕಾಡುತ್ತಾ ಇದೆ.

ನೌಕರಿಗೆ ಸೇರಿದಾಗ ಬಾಲಚಂದ್ರ ಅಂದುಕೊಂಡಿದ್ದ-ಏನಾದರೊಂದಿಷ್ಟು ಸಾಧಿಸಲೇ ಬೇಕು. ಎಲ್ಲೇ ಆದರೂ ಆಯಾಯ ಊರವರೊಂದಿಗೆ ಸಮರಸವಾಗಿ ಬೆರೆತುಕೊಂಡು ದುಡಿಯುತ್ತೇನೆ. ಅವರ ಹಿತವೇ ತನ್ನ ಗುರಿಯಾಗಿರುತ್ತದೆ... ಉಕ್ಕುತ್ತಿರುವ ತಾರುಣ್ಯದ ಹುಮ್ಮಸದಲ್ಲಿ ಅನೇಕ ಸಾಧ್ಯತೆಗಳನ್ನು ಆತ ಕಲ್ಪಿಸಿಕೊಂಡಿದ್ದ.

ಆದರೆ ಕದೆಯನಲ್ಲೂರಿಗೆ ಬಂದ ಬಳಿಕ ಆತನೊಬ್ಬ ಸಂಶಯ ಪ್ರಕೃತಿಯವನಾಗಿ ಪರಿವರ್ತಿಸಿದ. ಅಲ್ಲಿನ ಜನರನ್ನು ಸರಿದಾರಿಗೆ ತರುವುದು ಸುಲಭ ಕೆಲಸವಲ್ಲವೆಂದು ಆತ ಮನಗಂಡ. ಅವರಿಗೆ ಬೇಕಾದುದು ನೂಲಿಗಾಗಿ ಅರ್ಹತಾಪತ್ರ ಮಾತ್ರ! ಬೇರೆ ಏನಾದರೂ ಹೇಳಿದರೆ ಅವರು ಬಿದುಗಣ್ಣು ಬಿಡುತ್ತಾರೆ. ಬಾಲಚಂದ್ರ ಗೊಂದಲದಲ್ಲಿ ಬಿದ್ದು ಬಿಟ್ಟ. ಉತ್ಸಾ



ನೀನೇನೂ ಚಿಂತೆ ಮಾಡ್ಕೋಬೇಡ ಕಣಾ... ನನಗೆ ಬೇರೊಬ್ಬರ ಜೊತೆ ಎಂಗೇಜ್‌ಮೆಂಟ್ ಆಯಿತು!

ರನೆ ಹಾಗೂ ಶೇಖರಣೆಗಳ ಬಗೆಗಿನ ನೂತನ ಥಿಯರಿಗಳನ್ನು ಅವರ ತಲೆಯೊಳಗೆ ತುರುಕಿಸಲು ಆತನಿಗೆ ಸಾಧ್ಯವಾಗಲೇ ಇಲ್ಲ.

ಅಂದು ಸಂಜೆ ಆತ ರಿಸರ್ವ್ ಬ್ಯಾಂಕಿನ ಕೇಂದ್ರ ಸಮಿತಿಯ ವರದಿಯನ್ನು ತುಸು ಹೊತ್ತು ಓದಿದ.

ಮರುದಿನ ಮಧ್ಯಾಹ್ನ ಸೊಸೈಟಿಯಿಂದ ಮರಳಿ ಬರುವಾಗ ರಹಮಾನನ ಹೆಂಡತಿ ಮನೆ ಬಾಗಿಲಲ್ಲಿ ನಿಂತಿದ್ದಳು. ಎಂದಿನಂತೆ ಅವಳು ಒಳಗಡೆಗೆ ಧಾವಿಸಲಿಲ್ಲ. ಬಾಲಚಂದ್ರನ ನೋಟ ಅಯೋಚಿತವಾಗಿ ಅವಳ ಮುಖದ ಮೇಲೆ ಬಿದ್ದಿತು. ಆದರೆ ಮರುಕ್ಷಣವೆ ಆತ ದೃಷ್ಟಿಯನ್ನು ನೆಲದೆಡೆಗೆ ಹರಿಸಿದ. ಮತ್ತೆ ಮನೆ ಮುಟ್ಟಲು ಹಸ್ತುವ ತನಕ ತಲೆ ಎತ್ತಲೇ ಇಲ್ಲ.

ಅವಳು ಮಾತ್ರ ಆ ಬಳಿಕ ಆತನನ್ನು ಯಾವಾಗ ಕಂಡರೂ ಅಲ್ಲೇ ನಿಂತಿರುತ್ತಿದ್ದಳು. ಬಾಲಚಂದ್ರನು ಕೂಡ ತಲೆಎತ್ತಿಕೊಂಡೇ ನಡೆಯುತ್ತಿದ್ದ. ಒಂದೆರಡು ಬಾರಿ ಆತ ಅವಳನ್ನು ಚೆನ್ನಾಗಿಯೇ ನೋಡಿಯೂ ಇದ್ದ. 'ಲಕ್ಷಣವಾದ ಹುಡುಗಿ' ಆತ ತನಗೆ ತಾನೇ ಹೇಳಿಕೊಂಡಿದ್ದ: 'ಈ ಹುಡುಗಿ ಒಳ್ಳೆ ರೂಪಸಿ ಇರುವಂತೆಯೇ ಒಳ್ಳೆ ಗುಣ ನಡತೆಯುಳ್ಳವಳೂ ಇರಬಹುದು'.

ನೆರೆಮನೆಯವನ ಹೆಂಡತಿ ಅವನ ದೃಷ್ಟಿಯಲ್ಲಿ ಇನ್ನೂ ಅಪ್ರಾಯಸ್ಕ ಹುಡುಗಿಯಷ್ಟೇ ಆಗಿದ್ದಳು!

ಕದಯನಲ್ಲೂರಿನ ಅತ್ಯಂತ ಪ್ರತಿಷ್ಠಿತರಾದ ನಾಲ್ಕು ಮಂದಿಯೇ ಆತನ ಬ್ಲಾಕಿನಲ್ಲಿ ವಾಸವಾಗಿದ್ದರು. ಆದರೂ ರಹಮಾನ್ ದಂಪತಿಗಳ ಹೊರತು ಉಳಿದ ಗಂಡ ಹೆಂಡಿರು ಪರಸ್ಪರ ಜಗಳವಾಡುವುದರಲ್ಲೂ ಗದ್ದಲವೆಬ್ಬಿಸುವುದರಲ್ಲೂ ಗಟ್ಟಿಗರಾಗಿದ್ದರು. ರಹಮಾನ್ ಮಾತ್ರ ಬೆಳಿಗ್ಗೆ ಹೊರಟು ಹೋದರೆ ಸಂಜೆಯಷ್ಟೆ ಮನೆಗೆ ಮರಳುತ್ತಿದ್ದ. ಆತ ನಾಲ್ಕು ಮೈಲಿ ದೂರದ ರಿಜಿಸ್ಟ್ರಿ ಕಚೇರಿಯಲ್ಲಿ ಒಬ್ಬ ಗುಮಾಸ್ತೆಯಾಗಿದ್ದ. ಕೆಲವೊಮ್ಮೆ ಫ್ರೀಲಿಫ್ಟ್ ಏನಾದರೂ ದೊರೆತರೆ ಆತ ಮಧ್ಯಾಹ್ನವೂ ಮನೆಗೆ ಬರುತ್ತಿದ್ದ. ಆದರೆ ಆತ ಇರುವ ಹೊತ್ತಿನಲ್ಲಾಗಲಿ ಇರದ ಹೊತ್ತಿನಲ್ಲಾಗಲಿ ಯಾವುದೇ ರೀತಿಯ ಗದ್ದಲವೂ ಬಾಲಚಂದ್ರನಿಗೆ ಆ ಮನೆಯಿಂದ ಕೇಳಿಸಿಟ್ಟಿಲ್ಲ. ಆದುದರಿಂದಲೇ ಆತ ಊಹಿಸಿದ್ದ: 'ಈ ಹುಡುಗಿ ಒಳ್ಳೆ ಗುಣನಡತೆಯವಳೂ ಇರಬಹುದು'.

ಆದರೂ ಆ ಸೀನಿಯರ್ ಇನ್ಸ್‌ಪೆಕ್ಟರ್, ಅವರ ಕುರಿತು ಬಹಳ ವಿರಳವಾಗಿ ಮಾತ್ರವೇ ಯೋಚಿಸುತ್ತಿದ್ದ. ಸೊಸೈಟಿಯಿಂದ ಮರಳಿ ಬಂದ ಬಳಿಕ ಆತ ಮನೆಯಲ್ಲೇ ಸುಮ್ಮಗೆ ಕುಳಿತಿರುತ್ತಿದ್ದ. ಮಾಡತಕ್ಕದ್ದೇನೂ ಇಲ್ಲ; ಏನನ್ನೂ ಮಾಡಲು ಸಾಧ್ಯವೂ ಇಲ್ಲ. ಕದಯನಲ್ಲೂರಿನ ಜನರು, ಅಲ್ಲಿನ ಮಣ್ಣಿನ ಹಾಗೂ ಬಂಡೆಗಲ್ಲಿನಂತಹ ಜನರೇ ಆಗಿದ್ದರು. ಅವರ ಮಧ್ಯದಲ್ಲಿ ಹೆಚ್ಚಿನ ದಿನ ಕಳೆಯಬೇಕಾಗಿ ಬಂದಲ್ಲಿ ಆತ ಉಸಿರುಗಟ್ಟಿ ಸತ್ತು ಹೋದಾನು.

ಹೀಗಿರುತ್ತಾ ಸುದ್ದಿಯೊಂದು ಆತನ ಕಿವಿಗೂ ಬಿತ್ತು. ಅಲ್ಲಿನ ಯಾವುದೋ ಬೀದಿಯೊಂದರಲ್ಲಿ ಯಾವನೋ ಒಬ್ಬನಿಗೆ ಕಾಲರಾ ಬಡಿದಿದೆ. ಮನುಷ್ಯರು ಹುಳುಗಳ ಹಾಗೆ ಸತ್ತುಬೀಳುವ ಮೊದಲೇ ಏನಾದರೊಂದು ಪರಿಹಾರ ಕಂಡುಕೊಳ್ಳಬೇಕೆಂದು ಬಾಲಚಂದ್ರ ಬಯಸಿದ. ಆದರೆ ಗ್ರಾಮದ ಒಬ್ಬ ನರಪಿಳ್ಳೆ ಕೂಡ ಆತನಿಗೆ ಯಾವ ವಿವರವನ್ನೂ ನೀಡಲಿಲ್ಲ. ಅವರು ಆ ಸುದ್ದಿಯನ್ನೇ ಬಚ್ಚಿಟ್ಟರು.

ಬ್ಯಾಂಕಿನ ಬಳಿಗೆ ತೆರಳಿದ ಬಾಲಚಂದ್ರ ಕಪ್ಪೆಗಳ ಚೇಷ್ಟೆ ನೋಡುತ್ತಾ ನಿಂತುಕೊಂಡ.

ಕಪ್ಪೆಗಳನ್ನೇ ನೋಡುತ್ತಾ ಎಷ್ಟು ಹೊತ್ತು ನಿಂತಿರಲು ಸಾಧ್ಯ? ಆತನಿಗೆ ಬೇಕಾದದ್ದು ಮನುಷ್ಯರು; ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಬಲ್ಲ ಮನುಷ್ಯರು. ಅವರು ಎಷ್ಟೊಂದು ನಗಣ್ಯರಾದರೂ ಸರಿಯೆ. ಆದರೆ.....

ಕದೆಯನಲ್ಲೂರಿನಲ್ಲಿ ಅವನೊಡನೆ ಬೆರೆಯುವ ಮನುಷ್ಯರೇ ಇಲ್ಲ!

ಬಾಲಚಂದ್ರ ಒಳಗೆ ಹೋಗಿ ಕೇಂದ್ರ ಸಮಿತಿಯ ವರದಿಯನ್ನು ಕೈಗೆತ್ತಿಕೊಂಡು ಕೆಲವೇ ಸಾಲುಗಳನ್ನು ಓದಿದ ಬಳಿಕ ಮೇಜಿನ ಮೇಲೆ ಬಿಸುಟುಬಿಟ್ಟ.

'ದೂರದಲ್ಲಿ ಕುಳಿತು ಅಪ್ಪಣೆ ಕೊಡಿಸುವುದು ಸುಲಭ. ಈ ವಿಲ್ಲೇಜಿಗೊಮ್ಮೆ ಬಂದು ನೋಡಲಿ.' ಆತ ತನಗೆ ತಾನೇ ಹೇಳಿದ.

ಆತ ಇದ್ದಕಿದ್ದಂತೆ ಅಂದುಕೊಂಡ, ಪಕ್ಕದ ಮನೆಯ ಹುಡುಗಿಯೂ ತನ್ನ ಹಾಗೆಯೆ ಒಬ್ಬಂಟಿಯಾಗಿ ಕುಳಿತಿರಬಹುದು. ತತ್‌ಕ್ಷಣವೇ ತಿದ್ದಿಕೊಂಡ. ಆದರೆ ದಿನದ ಇಪ್ಪತ್ನಾಲ್ಕು ತಾಸೂ ಅವಳು ಒಬ್ಬಂಟಿ ಅಲ್ಲ. ಆದರೂ ಈಗ ಅವಳು ಏಕಾಏಕಿ ಸುಮ್ಮಗೆ ಕುಳಿತಿರಬಹುದು. ಅವಳಾದರೂ ಮಾತಾಡಲು ಸಿಕ್ಕಿದ್ದರೆ, ಅವಳು ಖಂಡಿತ ತನ್ನನ್ನು ಅರ್ಥ ಮಾಡಿಕೊಂಡಾಳು.

ಆದರೆ ಓರ್ವ ಸ್ತ್ರೀಯೊಡನೆ ಏನಂತ ಮಾತಾಡುವುದು?

ಏನಾದರೂ ಮಾತಾಡುವ ಎಂದುಕೊಂಡರೂ ಹೇಗೆ ಆರಂಭಿಸುವುದು?

ಕುಡಿಯಲು ನೀರು ಕೇಳಬಹುದು.

ನೀರು ತನ್ನ ಮನೆಯಲ್ಲಿಲ್ಲವೇನು ?

ಅದು ಮುಗಿದುಹೋಗಬಹುದು!

ಸರಿ ನೀನು ಕೇಳಿದೆ. ಸಿಗಿತು ಆ ಬಳಿಕ?

ಹೆಚ್ಚು ಹೊತ್ತು ಯೋಚಿಸುತ್ತಾ ನಿಲ್ಲಲು ಬಾಲಚಂದ್ರನಿಗೆ ಸಾಧ್ಯವಾಗಲಿಲ್ಲ. ತಮ್ಮ ಎರಡು ಮನೆಯ ಅಂಗಳಗಳನ್ನು ಬೇರ್ಪಡಿಸುತ್ತಿದ್ದ ಮೋಟು ಗೋಡೆಯ ಬಳಿ ತೆರಳಿ ಆತ ಕರೆದ.

"ಮಿಸ್ಟರ್. ರೆಹಮಾನ್"

ಹಿಂದಿನಂತೆಯೇ ಕುರ್ಚಿ ಸರಿಸಿದ, ಕೈಬಳೆಗಳು ಅಲುಗಿದ ಸದ್ದು. ರೆಹಮಾನ್‌ನ ಹೆಂಡತಿ ಆತನ ದೃಷ್ಟಿಗೆ ಬೀಳದ ಹಾಗೆ ಗೋಡೆಯ ಆಚೆಬದಿಗೆ ನಿಂತು ಕೇಳಿದಳು.

"ಊಟಮಾಡಿ ಹೋದರು ಕಣ್ರೀ. ಏನ್ಬೇಕಾಗಿತ್ತು?"

"ಪರವಾಗಿಲ್ಲ ಬಿಡಿ ಕುಡಿಯಲು ಕೊಂಚ ನೀರುಬೇಕಿತ್ತು."

ಅವಳು ಹೋಗಿ ಪಕ್ಕದ ಮನೆಯ ಹುಡುಗನನ್ನು ಕರೆಯುತ್ತಿರುವುದು ಆತನಿಗೆ ಕೇಳಿಸಿತು.

ಬಾಲಚಂದ್ರನ ಹೃದಯ ಗಟ್ಟಿಯಾಗಿ ಹೊಡೆದುಕೊಳ್ಳುತ್ತಿದ್ದಂತೆಯೇ ಆತ ತನ್ನ ಹಣೆಯಿಂದ ಬೆವರು ತೊಡೆದು ಹಾಕಿದ.

ಲೋಟವೊಂದರಲ್ಲಿ ನೀರು ಸಹಿತ ಅವಳೇ ಬಂದಳು. ಮೋಟು ಗೋಡೆಯ ಮೇಲೆ ಕೈ ಚಾಚಿ ಅದನ್ನು ತೆಗೆದುಕೊಂಡ ಬಾಲಚಂದ್ರ, ಬೆರಳು ಸೋಕದಂತೆ ಎಚ್ಚರವಹಿಸಿದ. ಆದರೂ ಸಾಧ್ಯವಾಗಲಿಲ್ಲ. ಲೋಟ ಹಿಂದಿರುಗಿಸುವಾಗ ಆತನ ಬಿರುಸಾದ ಕೈ ರೆಹಮಾನ್‌ನ ಹೆಂಡತಿಯ ಬಲು ಮೆತ್ತಗಿನ ಬೆರಳುಗಳನ್ನು ಸ್ಪರ್ಶಿಸಿತು.

ಏನೋ ಕಚ್ಚಲ್ಪಟ್ಟ ಹಾಗೆ ಆತ ಕೈ ಹಿಂದಕ್ಕೆಳೆದ. ರೆಹಮಾನ್‌ನ ಹೆಂಡತಿ ಮುಗುಳ್ನಕ್ಕಳು. ಮಾದಕ ಹೂವೊಂದು ಮೆಲ್ಲಗೆ ಅರಳುವಹಾಗೆ ಮನೋಜ್ಞವಾದ ಮುಗುಳ್ನಗೆ.

ನೆತ್ತಿಯಿಂದ ಜಾರುತ್ತಲಿದ್ದ ಸೆರಗನ್ನು ಸರಿಪಡಿಸುತ್ತ ಅವಳು ಅಲ್ಲೇ ನಿಂತುಕೊಂಡಳು; ಬಾಲಚಂದ್ರನು ಕೂಡ.

"ತಣ್ಣೀ ಪೋದುಮ?"


ನೀರು ಸಾಕೆ ಎಂಬ ಆಕೆಯ ಪ್ರಶ್ನೆಗೆ ಆತ ತಲೆದೂಗಿದ.

ಬಳಿಕ ಮಾತಾಡುವಂಥ ವಿಷಯವೇನೂ ಅವರ ಬಳಿ ಇರಲಿಲ್ಲ. ಅವಳು ತತ್‌ಕ್ಷಣ ಹೊರಟುಹೋದಾಳೆಂದು ಬಾಲಚಂದ್ರ ಅಂದುಕೊಂಡ. ನಿಜ ಅವಳು ಹಿಂದಿರುಗುವುದರಲ್ಲಿದ್ದಾಳೆ.

"ಎಂತಹ ಬಿಸಿಲು! ಆಕಾಶದತ್ತ ದಿಟ್ಟಿಸುತ್ತಾ ಬಾಲಚಂದ್ರನೆಂದ. ಅವಳ ಮುಖದತ್ತ ದಿಟ್ಟಿಸಲು ಅವನಿಗೆ ಧೈರ್ಯ ಸಾಲಲಿಲ್ಲ.

"ಮಳೆ ಬೇಗ ಬರ್ಬಹುದು".

ಅವಳೂ ಆಕಾಶದತ್ತ ನೋಡಿದಳು. ನೀರು ತುಂಬಿದ ಕಾರ್ಮೋಡಗಳು ಗುಂಪು ಗುಂಪಾಗಿ ಪಡುವಣ ಬೆಟ್ಟದ ಇಳಿಜಾರಿನತ್ತ



ಸರಿಯುತ್ತಿದ್ದವು.

ಬಾಲಚಂದ್ರನು ಮಾತು ಮುಂದುವರಿಸಿದ. ಗೋಡೆಯಾಚೆ ನಿಂತಿರುವ ಆ ತರುಣಿ ತನಗೆ ತೀರ ಅಲ್ಪ ಪರಿಚಿತಳೆಂಬುದನ್ನು ಆತ ನೆನೆಯಲೇ ಇಲ್ಲ. ಆತನ ಹೃದಯದಲ್ಲಿ ಆಗ ಹರ್ಷ ತುಂಬಿ ತುಳುಕುತ್ತಿತ್ತು. ಅಳುಕು ಅಂಜಿಕೆಗಳಾವುದೂ ಅದಕ್ಕೆ ಅಡ್ಡಿಯಾಗಲಿಲ್ಲ. ಬಿಳಿ ಸೀರೆ ಹಾಗೂ ನಸುಕೆಂಪು ಬಣ್ಣದ ಕುಪ್ಪಸ ಧರಿಸುವ ಆ ಹುಡುಗಿ ಆತನಿಗೆ ತುಂಬು ಪರಿಚಿತಳಂತೆ ಕಂಡಳು!

"ನನಗೆ ಈ ಊರೇ ಹಿಡಿಸ್ತಾ ಇಲ್ಲ!-"

ಕದೆಯನಲ್ಲೂರಿನ ಬದುಕಿನ ಬಗ್ಗೆ ಆತನೆಂದಾಗ ಆಕೆಯ ಮುಖದಲ್ಲಿ ದುಃಖದ ನೆರಳೊಂದು ಕವಿಯಿತು.

"ಇಲ್ಲಿ ತುಂಬ ಕಷ್ಟ!-"

ಇಬ್ಬರೂ ಯಾವುದೋ ಯೋಚನೆಯಲ್ಲಿ ಬಿದ್ದುಬಿಟ್ಟರು.

"ನಾನ್ ವಂತ ಪೋದ್ ಉಂಗುಳ ಪೋಲೆ ಎನಕ್ಕುಂ ಮೂಚ್ ವಿಡ ಮುಡಿಯ ವಿಲ್ಲೆ-"

ಅಲ್ಲಿಗೆ ಮೊತ್ತ ಮೊದಲು ಬಂದಾಗ ಅವಳಿಗೂ ಆತನ ಹಾಗೆಯೇ ಉಸಿರುಕಟ್ಟಿ ಹೋಗಿತ್ತಂತೆ.

ಬಾಲಚಂದ್ರನಲ್ಲಿ ಅವಳ ಬಗ್ಗೆ ಇನ್ನಷ್ಟು ಸಲುಗೆ ಮೂಡಿತು. ಅವಳೂ ಕದೆಯನಲ್ಲೂರಿಗೆ ಹೊರಗಿನವಳು! ಹಾಗಾಗಿ ತನ್ನ ತೊಂದರೆಗಳನ್ನು ಅರ್ಥಮಾಡಿಕೊಳ್ಳಲೂ ಸಮರ್ಥಳೆ.

ಇವಳನ್ನು ಕಂಡಾಗಲೆ ಈ ಊರಿನವಳಲ್ಲವೆಂದು ಅಂದುಕೊಂಡಿದ್ದ. ಅದು ನಿಜವಾಯಿತು. ಇಂಥವಳೊಬ್ಬಳು ಈ ಕದೆಯನಲ್ಲೂರಿನಲ್ಲಿ ಹೇಗೆ ತಾನೆ ಹುಟ್ಟಿ ಬೆಳೆದಾಳು? ಎಂದುಕೊಂಡ ಬಾಲಚಂದ್ರ, ಮತ್ತೂ ಯೋಚಿಸಿದ-

ಆದರೂ ಉಸಿರು ಕಟ್ಟಿಸುವಂತಹ ತೊಂದರೆಗಳೇನಿವೆ ಅವಳಿಗಿಲ್ಲಿ? ಜೊತೆಯಲ್ಲಿ ಗಂಡನಿದ್ದಾನೆ. ಆತ ಇತರರ ಹಾಗ ಜಗಳಕೋರನೂ ಅಲ್ಲ. ಮಕ್ಕಳಾಗಿಲ್ಲ ಎಂಬುದೇನೋ ಸರಿ. ಆದರೆ ಪ್ರಾಯ ಕೂಡ ಅಷ್ಟೇನೂ ಆಗಲಿಲ್ಲವಲ್ಲ?

"ನೀವಿಲ್ಲಿ ಆರಾಮವಾಗಿಯೇ ಇದ್ದೀರಿ, ಯಾವ ತೊಂದರೆಯೂ ಇಲ್ಲದೆ....."

ಅವಳು ಪ್ರತಿ ಹೇಳಲಿಲ್ಲ. ಆದರೆ ಆ ಕಣ್ಣುಗಳು ಮಾತ್ರ ತಾಳಲಾರದ ದುಗುಡವನ್ನು ಸೂಚಿಸಿದವು.

ಯಾರೊಬ್ಬರ ರಗಳೆಯೂ ಇಲ್ಲದೆ ಗಂಡನ ಜೊತೆ ಬಾಳುತ್ತಿರುವ ಆ ಹೆಣ್ಣುಮಗಳಿಗೆ ಯಾವ ಕೊರಗೂ ಇರಲಾರದೆಂದೇ ಬಾಲಚಂದ್ರ ಅಂದುಕೊಂಡಿದ್ದ. ಈಗ ಮಾತ್ರ ತನ್ನ ಮಾತು ತಪ್ಪಾಯಿತೆ ಎಂದು ಆತ ಚಡಪಡಿಸಿದ. ಅವಳಿನ್ನು ತನ್ನೊಡನೆ ಮಾತೇ ಆಡಲಾರಳೇನೋ.....

ಬಾಲಚಂದ್ರ ಏನೋ ವಿವರಣೆ ನೀಡುವವನಿದ್ದ. ಸೂಕ್ತ ಶಬ್ದಗಳಿಗಾಗಿ ಯೋಚಿಸುವಷ್ಟರಲ್ಲಿ ಆಚೆ ಮನೆಯಿಂದ ಯಾರೋ ರೆಹಮಾನನ ಹೆಂಡತಿಯನ್ನು ಕೂಗಿ ಕರೆದರು.

"ನನ್ನನ್ನೇ ಕರೀತಿದ್ದಾರೆ" ಎಂದು ನಗುತ್ತಾ ಅವಳು ಅತ್ತ ಹೋದಳು. ಇನ್ನೂ ತುಸು ಹೊತ್ತು ಅಲ್ಲೇ ನಿಂತುಕೊಂಡಿದ್ದ ಬಾಲಚಂದ್ರನ ಸಂದೇಹ ಮಾತ್ರ ಪೂರ್ತಿ ನಿವಾರಣೆಯಾಗಿರಲಿಲ್ಲ. ಅವಳು ಅಪಾರ್ಥ ಮಾಡಿಕೊಂಡಿರುವಳೋ ಏನೋ!

ಆದರೆ ಆ ಸಂದೇಹ ಬುಡವಿಲ್ಲದ್ದೆಂದು ಆತನಿಗೆ ಬೇಗನೆ ಮನದಟ್ಟಾಯಿತು.

ಜೀವನದಲ್ಲಿ ಇದ್ದಕ್ಕಿದ್ದಂತೆ ಗೆಲವು ಸೊಗಸು ಮೂಡಿದವು.

ಅಂಗಳದ ಇಳಿಮಾಡಿನ ನೆರಳಿನಲ್ಲಿ ನಿಂತು

ಕೊಂಡು ಬಾಲಚಂದ್ರನು ಜಗದ ... ವಿಚಾರ ಕುರಿತೂ ಮಾತನಾಡುತ್ತಾನೆ. ಅವಳು ಬಹಳ ಗಮನವಿಟ್ಟು ಅದನ್ನು ಆಲಿಸುತ್ತಾಳೆ. ಕೆಲವೊಮ್ಮೆ ಅವಳೂ ತಾನು ಕಂಡು ಕೇಳಿದ ಜನಗಳ, ಘಟನೆಗಳ ಕುರಿತು ಹೇಳುತ್ತಾಳೆ. ಹೇಳುತ್ತಾ, ಹೇಳುತ್ತಾ ಅವರು ಮರಳಿ ಕದಯನಲ್ಲೂರಿಗೇ ತಲುಪುತ್ತಾರೆ. ಅಲ್ಲಿಂದ ಕೊನೆಯದಾಗಿ ತಂತಮ್ಮ ಸ್ವಂತ ವಿಚಾರಗಳಿಗೇ ಬರುತ್ತಾರೆ. ಆಗ ಇದ್ದಕಿದ್ದಂತೆ ಅವರ ಮಾತಿನ ಕೊಂಡಿ ತುಂಡರಿಸಲ್ಪಡುತ್ತದೆ. ಕ್ಷಣ ಹೊತ್ತಿನ ಹಿಂದೆ ಕೂಡ ತಾವು ಮನದಣಿಯೆ ಮಾತಾಡಿ ನಕ್ಕು ನಲಿದುದನ್ನು ಅವರೀಗ ಮರತೇ ಬಿಟ್ಟಿರುತ್ತಾರೆ.

"ಏನೇ ಆಗಲಿ ನೀವಿಲ್ಲಿ ಖಾಯಂ ನೆಲಸುವವರಲ್ಲವಲ್ಲ!"-ಹೀಗ ಅವಳೊಮ್ಮೆ ಹೇಳಿದಾಗಲಷ್ಟೆ ಬಾಲಚಂದ್ರ ಆ ಬಗ್ಗೆ ಯೋಚಿಸಿದ್ದ. ನಿಜ, ಅವನು ಅಲ್ಲಿಂದ ಹೊರಟುಹೋಗುವವನು. ಪ್ರಾಯಶಃ ಮತ್ತೆ ಯಾವತ್ತೂ ಕದಯನಲ್ಲೂರಿಗ ಮರಳಲಾರ.

ಅವಳು-?

ಅವಳ ಆಕ್ಷೇಪಣೆ ಹುರುಳಿಲ್ಲದ್ದು. ಅವಳಿಗಿಲ್ಲಿ ಯಾವ ರಗಳೆಯೂ ಇಲ್ಲ. ಕದಯನಲ್ಲೂರಿನಲ್ಲೇ ಆದರೂ ಅವಳು ಉಸಿರಾಡುತ್ತಿರುವುದು ತಾನು ಹುಟ್ಟಿ ಬೆಳೆದ ನಾಡಿನ ಗಾಳಿಯನ್ನೇ ತಾನೆ?

ಈ ಬಗ್ಗೆ ಇನ್ನಷ್ಟು ಯೋಚಿಸುವ ಸಾಮರ್ಥ್ಯ ಆ ಎಳೇ ಪ್ರಾಯದ ಜೂನಿಯರ್ ಇನ್ಸ್‌ಪೆಕ್ಟರಲ್ಲಿರಲಿಲ್ಲ.

ಆ ದಿನ ಟ್ಯಾಂಕಿಯ ಬಳಿ ಹೋಗಿ ನೋಡಿದಾಗ ಕಪ್ಪೆಗಳು ಕಾಣಸಲಿಲ್ಲ; ಎಲ್ಲೋ ಓಡಿ ಹೋಗಿದ್ದವು.

ಈ ಬಗ್ಗೆ ಅವಳೊಡನೆ ನಕ್ಕು ನುಡಿದ ಬಾಲಚಂದ್ರ ಅವಳೂ ಹಾಗೆಯೇ ಹೇಳದೆ ಕೇಳದೆ ಹೊರಟು ಹೋಗಬಾರದು ಎಂದ. ಬಳಿಕ ಅವನು ಮಾತನಾಡುವುದಾದರೂ ಯಾರೊಡನೆ?

"ನೀವು ಅವರೊಡನೆ ಮಾತಾಡುವುದೇ ಇಲ್ಲವಲ್ಲ!"

ಯಾವುದೋ ಯೋಚನೆಯಲ್ಲಿದ್ದು ತೀರ ಭಾರವಾದ ಧ್ವನಿಯಲ್ಲಿ ಅವಳೆಂದಳು.

ಆ ಮಾತು ನಿಜವಾಗಿತ್ತು. ಬಾಲಚಂದ್ರ ರಹಮಾನ್‌ನ ಜೊತೆ ಸಂಪರ್ಕ ಹೊಂದಿರಲಿಲ್ಲ. ಆತ ಮೌನವಹಿಸಿದ.

ಬೆಳಿಗ್ಗೆ ಬಲು ಬೇಗನೆ ಆಫೀಸಿಗೆಂದು ಹೊರಟು ಹೋಗಿ ಕತ್ತಲಾದ ಬಳಿಕವೇ ಮರಳುತ್ತಿದ್ದ ರಹಮಾನನೊಡನೆ ಬಾಲಚಂದ್ರ ಮಾತನಾಡುವುದಾದರೂ ಯಾವಾಗ? ರಾತ್ರಿ ಒಮ್ಮೆ ಕೂಡ ರಹಮಾನ್ ವರಾಂಡದಲ್ಲಿ ಕುಳಿತಿದ್ದು ಆತ ಕಂಡಿದ್ದಿಲ್ಲ. ಹೊರನಾಡಿನಿಂದ ಒಬ್ಬಾತ ತನ್ನ ನೆರೆ ಮನೆಯಲ್ಲಿ ನೆಲೆಸಲು ಬಂದಾಗ ರಹಮಾನ್ ಶಿಷ್ಟಾಚಾರಕ್ಕಾದರೂ ಮಾತನಾಡಿಸಬೇಕಿತ್ತು. ಆದರೆ ಅದಾವುದೂ ನಡೆಯಲಿಲ್ಲ.

"ಯಾಕೆ ಮಾತಾಡಬೇಕು?" ಬಾಲಚಂದ್ರ ಮೌನ ಮುರಿದ.

ಅವಳ ಗಂಡನೊಡನೆ ತನಗೆ ಮಾತನಾಡುವ ಅಗತ್ಯವೇನೂ ಇಲ್ಲ ಎಂಬುದಾಗಿತ್ತು ಬಾಲಚಂದ್ರನ ನಿಲುವು. ಆದರೂ ತಮಾಷೆಗೆಂಬಂತೆ ಆತನೆಂದ.

"ನಿನಗಾಗಿ ನಾನು ಮಾತನಾಡುತ್ತೇನೆ."

ಆಕೆಯ ಮುಖ ಕೆಂಪಡರಿತು.

ಇಬ್ಬರೂ ಮೌನವಾಗಿ ನಿಂತರು . ಅವರ ನೆರಳುಗಳು ಅಂಗಳದುದ್ದಕ್ಕೂ ಬೆಳೆಯುತ್ತಲೇ ಇದ್ದವು.

"ಪತ್ರಿಕೆ ಪಡಿತ ಕೊಡುಕರಿಂಗಳಾ?"

ತನಗೆ ಓದಲು ಪತ್ರಿಕೆ ಕೊಡುತ್ತೀರಾ ಎಂದು! ಒಳ್ಳೆ ಪ್ರಶ್ನೆ! ಅವಳಿಗಲ್ಲದೆ ಇನ್ನಾರಿಗೆ ತಾನೆ ಕೊಟ್ಟಾನು! ಕೇಳುವ ಮೊದಲೇ ಕೊಡಬೇಕಿತ್ತು; ಅವಳು ಓದಬಲ್ಲಳೆಂದು ತಿಳಿದ ಬಳಿಕವಾದರೂ.

ಆದರೆ ಪತ್ರಿಕೆ ಇಸಕೊಳ್ಳಲು ಮಾತ್ರ ಅವಳು ಅಲ್ಲಿ ನಿಲ್ಲಲಿಲ್ಲ. ಅದಕ್ಕಾಗಿ ರಹಮಾನನನ್ನು ತನ್ನ ಬಳಿಗೆ ಕಳುಹಿಸುವಳೆಂದು ಬಾಲಚಂದ್ರ ಊಹಿಸಿದ. ಅರ್ಥಾತ್ ಅವಳಿಗೆ ಬೇಕಾದದ್ದು ಅದು; ಹೇಗಾದರೂ ತಮ್ಮಿಬ್ಬರಲ್ಲಿ ಸಂಪರ್ಕ ಏರ್ಪಡಿಸುವುದು. ಬಾಲಚಂದ್ರ ಅಂದುಕೊಂಡ.

"ಭಾರೀ ಜಾಣೆ!"

ಆಗಲೂ ಅವಳ ಕಂಗಳಲ್ಲಿದ್ದದ್ದು ಎಂದೂ ಮಾಸದ ದುಃಖದ ನೆರಳಾಗಿತ್ತು.

ರಾತ್ರಿ ರಹಮಾನ್ ಮನೆ ಸೇರಿದ್ದು ಬಾಲಚಂದ್ರನಿಗೆ ತಿಳಿಯಿತು. ಆ ಕಡೆಗೇ ಗಮನ

ಕೊರಗು

ನಲ್ಲೆಯ
ಎದೆಯ
ಗೂಡೊಳಗೆ
ಅಡಗುವೆನೆಂದು
ಹುಡುಗ
ಹೋಗುವ
ಸಮಯಕ್ಕೆ
ಹುಡುಗಿ
ಅಡಿಗೆ.
ಮನೆ ಸೇರಿದಳು!

ಪ್ರಕಾಶ.ಎಸ್.ಮನ್ನಂಗಿ

ಹರಿಸುತ್ತಾ ಆತ ತನ್ನ ಕೋಣೆಯೊಳಗೆ ಕುಳಿತಿದ್ದ. ಪಿಸು ದನಿಯಲ್ಲಿ ಅವಳು ಗಂಡನೊದನೆ ಏನೋ ಹೇಳುತ್ತಿರುವುದು ಕೇಳಿಸಿತ್ತಾದರೂ ಏನೆಂದು ಅರ್ಥವಾಗಲಿಲ್ಲ. ಅದರಲ್ಲೊಂದು ಬೇಡಿಕೆ ಇತ್ತು ಎನ್ನುವುದು ಮಾತ್ರ ಸ್ಪಷ್ಟವಾಗಿತ್ತು.

ಹಿಂಜರಿಯುತ್ತಿದ್ದ ಗಂಡನನ್ನು ಹೆಂಡತಿ ಹುರಿದುಂಬಿಸುತ್ತಿರುವಂತೆ ಅನ್ನಿಸಿತು. ಗಂಡನ ಪಿಸುದನಿ ಕೂಡ ಬಾಲಚಂದ್ರನಿಗೆ ಕೇಳಿಸಲಿಲ್ಲ.

ಬಾಲಚಂದ್ರ ತನಗೆ ತಾನೇ ಹೇಳಿಕೊಂಡ ಪಾಪ ! ಬಲು ನಾಚಿಕೆಯವನಿರಬೇಕು.

ತುಸು ಹೊತ್ತಿನ ಬಳಿಕ ರೆಹಮಾನ್ ಬಾಲಚಂದ್ರನ ಬಳಿಗೆ ಬಂದ. ಬಂದವನೇ ಕೇಳಿದ "ಕೊಂಚ ಪತ್ರಿಕೆ ಕೊಡುತ್ತೀರಾ?... ತನ್ನ ಹೆಂಡತಿಗೆ ಬೇಕಾಗಿದೆ.... ತಮಗೆ ...ತಮಗೆ. ಆರಾಮವಿದೆ ತಾನೆ?"

ದಂಡೆಗೆಸೆಯಲ್ಪಟ್ಟ ಒಂದು ಮೀನಿನಂತೆ ರೆಹಮಾನನಿಗೆ. ಉಸಿರುಕಟ್ಟುತ್ತಿತ್ತು.

ಬಾಲಚಂದ್ರ ತತ್ಕ್ಷಣವೇ ಪತ್ರಿಕೆಯನ್ನು ನೀಡಿದ.

ಆ ಮನುಷ್ಯನ ಉಸಿರಾಟ ಸಲೀಸಾಯಿತು.

'ಥ್ಯಾಂಕ್ಸ್' ಎಂದು ಅಗ್ನಿಪರೀಕ್ಷೆಯಿಂದ ಪಾರಾದ ನೆಮ್ಮದಿಯೊಂದಿಗೆ ಆತ ಹೊರಟು ಹೋದ.

ಮರುದಿನ, ಕೆಲವು ಕಾಗದ ಪತ್ರಗಳ ರವಾನೆಗಾಗಿ ತೆಂಕಾಶಿಗೆ ತೆರಳಿದ್ದ ಬಾಲಚಂದ್ರ ಎರಡು ದಿನಗಳ ಬಳಿಕವಷ್ಟೆ ಹಿಂದಿರುಗಿದ್ದ. ಆ ತನಕ ಆತನ ಮನಸ್ಸಿನಲ್ಲಿ ನೆರೆಮನೆಯ ಹುಡುಗಿಯೇ ತುಂಬಿಕೊಂಡಿದ್ದಳು. ಎಷ್ಟೇ ಪ್ರಯತ್ನಿಸಿದ್ದರೂ ಅಲ್ಲಿಂದ ಆ ರೂಪವನ್ನು ಕದಲಿಸಲಾಗಲಿಲ್ಲ. ಕಚೇರಿಯ ಕಾಗದ ಪತ್ರಗಳನ್ನು ಪರಿಶೀಲಿಸುವಾಗ ಹಾಗೂ ಮೇಲಧಿಕಾರಿಯೊಂದಿಗೆ ಮಾತನಾಡುವಾಗ ಕೂಡ ಎದುರಿಗಿದ್ದದ್ದು ಅವಳೇ, ಅವಳೊಬ್ಬಳೇ!

ಅದೇಕೆಂದು ಬಾಲಚಂದ್ರನಿಗೆ ಅರ್ಥವಾಗಲೇ ಇಲ್ಲ. ತಾವಿಬ್ಬರೂ ಕದಡಿಹೋದ ಕನಸುಗಳನ್ನು ದ್ವೇಷಿಸುತ್ತೇವೆ. ಆದ್ದರಿಂದಲೇ ಇರಬಹುದೆಂದು ಆತ ಸಮಾಧಾನ ತಂದುಕೊಂಡ. ಕದಡಿಹೋದ ಕನಸುಗಳಿಂದ ನೀರಸ ಬದುಕಿನ ಕುರಿತು ಹೇಳುವಂತಾಗಲಿಲ್ಲ ಕನಸುಗಳು ತುಂಬಿದ್ದ ಕಣ್ಣುಗಳನ್ನು ದೂರಕ್ಕೆ ಹಾಯಿಸುತ್ತಾ ಅವಳು ಒಂದು ಪುತ್ಥಳಿಯ ಹಾಗೆ ನಿಂತುಬಿಡುತ್ತಿದ್ದುದನ್ನು ಆತ ನೆನಪಿಗೆ ತಂದುಕೊಂಡ. ತಾವಿಬ್ಬರೂ ಸಮಾನ ದುಃಖಿಗಳೇ.

ಆದರೆ.....ಅವಳ ಮಟ್ಟಿಗೆ ಅಂತಹ ದುಃಖಕ್ಕೆ ಆಸ್ಪದವೇ ಇಲ್ಲವಲ್ಲ! ಎಂದೂ ಆತ ಯೋಚಿಸಿದ.

ತನಗೆ ಗೊತ್ತಿಲ್ಲದೆಯೇ ಅವಳು ತನ್ನ ಜೀವನದ ಒಂದು ಅಂಶವಾಗಿ ಬಿಟ್ಟಿದ್ದಾಳೆಂದು ಆತ ನೆನೆಯಲೇ ಇಲ್ಲ.

ಬಾಲಚಂದ್ರನೇ ಮರಳಿ ಮನೆ ಸೇರುವಷ್ಟರಲ್ಲಿ ಅವಳು ಪೂರ್ತಿ ಬದಲಾಗಿ ಬಿಟ್ಟಿದ್ದಳು. ಅವಳು ಮಾತಾಡಿದ್ದೇ ತೀರ ಸ್ವಲ್ಪ. ಅದೂ ಅಂತಹ ಆಸಕ್ತಿಯೇನೂ ಇಲ್ಲದ ವಿಷಯಗಳ ಕುರಿತು!

ಆಕೆಯ ಮುಖ ಬಿಳುಚಿಕೊಂಡಿತಲ್ಲದೆ, ಕಣ್ಣುಗಳೂ ಕದಡಿದ್ದವು. ಅವಳು ಮಿಂದಿರಲಿಲ್ಲವೆಂದು ಆ ಕೆದರಿದ್ದ ತಲೆಗೂದಲೇ ಸಾರಿ

ಹೇಳುತ್ತಿತ್ತು. ಆತ ಪ್ರಶ್ನಿಸಿದ.

"ಯಾಕೆ ತುಂಬ ಸೊರಗಿದ್ದೀಯೆ?"

"ಎರಡು ದಿನಗಳಿಂದ....." ಎಂದವಳೇ ಅವುಡುಗಚ್ಚಿದಳು, "ಯಾಕೋ ಗೊತ್ತಿಲ್ಲ!"

. ಕಣ್ಣುಗಳಲ್ಲಿ ನೀರಾಡುತ್ತಿರುವುದು ಕಾಣಿಸದಿರಲೆಂದು ಅವಳು ಮುಖ ತಿರುಗಿಸಿದರೂ ಬಾಲಚಂದ್ರನಿಗೆ ಅದು ಕಾಣಿಸಿತು.

ಆತ ನೊಂದುಕೊಂಡ. ಪಾಪದ ಹುಡುಗಿ! ವಿಪರೀತ ಹೆದರಿದ್ದಾಳೆ. ಈ ಬೀದಿಯಲ್ಲೆಲ್ಲೋ ಕಲರಾ ಇದೆ ಅಂತ ಕೇಳಿದ್ದರಿಂದಲೇ ಇರಬಹುದು. ಈ ಗೋಡೆಯನ್ನು ದಾಟಿ ಹೋಗಿ ಅವಳನ್ನು ಸಂತೈಸಲು ಸಾಧ್ಯವಾಗಿದ್ದರೆ! ಆತ ನಿಟ್ಟುಸಿರು ಬಿಟ್ಟ.

"ಡಾಕ್ಟ್ರಿಗೆ ತೋರಿಸಿದ್ದೀರಾ?"

"ಡಾಕ್ಟ್ರಿಗೆ ತೋರಿಸುವುದಿಲ್ಲ ಅಣ್ಣ".

ಯಾಕೆ ತೋರಿಸುವುದಿಲ್ಲ? ಹೆಂಡತಿಗೆ ಹುಷಾರಿಲ್ಲವೆಂದು ತಿಳಿದೂ ಡಾಕ್ಟ್ರಿಗೆ ತೋರಿಸುವುದಿಲ್ಲವೆಂದರೆ! ಎಂತಹ ಗಂಡ!

ಪಕ್ಕದ ಗ್ರಾಮದಲ್ಲಷ್ಟೆ ಒಂದು ದವಾಖಾನೆ ಹಾಗೂ ಒಬ್ಬರು ಡಾಕ್ಟ್ರು ಇದ್ದಾರೆ. ಅವರನ್ನು ಕರೆತರುವುದೂ ಸುಲಭವಲ್ಲ. ಆದರೂ ಹೆಂಡತಿಗಾಗಿಯೇ ತಾನೆ?

"ನಾನು ಕರೆತರಲೇನು?" ಆತ ಪ್ರಶ್ನಿಸಿದ.

"ಯಾಕೆ ನಿಮಗೆ ತೊಂದರೆ?" ಹೀಗೆಂದರೂ ಅವಳ ಮುಖದಲ್ಲಿ ಗೆಲವು ಮೂಡಿತು.

ರಾತ್ರಿ ಗಂಡ ಬಂದಾಗ ಅವಳಾಡಿದ ಮಾತುಗಳನ್ನು ಬಾಲಚಂದ್ರ ಗಮನಿಸಿದ. 'ಪಕ್ಕದ ಮನೆಯವರು ಹೇಳಿದರೆ ಡಾಕ್ಟ್ರು ಬಾರದೆ ಇರುತ್ತಾರಾ? ಅವರು ದೊಡ್ಡ ಅಧಿಕಾರಿ ಅಲ್ಲವಾ? ಹೀಗೊಂದು ಉಪಕಾರ ಮಾಡೋದಾದ್ರೆ ಯಾಕೆ ಕೇಳಿ ನೋಡಬಾರದು?'

ತುಸು ಹೊತ್ತಿನ ಬಳಿಕ ರೆಹಮಾನ್ ಬಾಲಚಂದ್ರನ ಬಳಿಗೆ ಬಂದು.

"....ನಿಮಗೆ ತೊಂದರೆಯಾದೀತು, ಆದರೂ...."

"ಹೇಳಿ, ಏನಾಗಬೇಕು?"

ರೆಹಮಾನ್ ಕೆಲವೇ ಮಾತುಗಳಲ್ಲಿ ಬಂದ ಉದ್ದೇಶವನ್ನು ಹೇಳಿದ. ಅದೆಲ್ಲವೂ ಆತನ



ಹೆಂಡತಿ ಕಂಠಪಾಠ ಮಾಡಿಸಿದ್ದ ಮಾತುಗಳೇ ಆಗಿದ್ದವು. ಆತನೊಬ್ಬ ದದ್ದನಿರಬಹುದೆಂಬ ಬಾಲಚಂದ್ರನ ಊಹೆ ಈಗ ಮತ್ತಷ್ಟು ದೃಢವಾಯಿತು.

ನಸುಕು ಹರಿಯುತ್ತಲೇ ಬಾಲಚಂದ್ರ ಒಬ್ಬ ಹುಡುಗನ ವಶ ಸೊಸೈಟಿ ಕಾರ್ಯದರ್ಶಿಗೆ ಒಂದು ಪತ್ರ ಕಳುಹಿಸಿಕೊಟ್ಟ.

ಡಾಕ್ಟರ್ ಬಂದು ರೋಗಿಯನ್ನು ಪರೀಕ್ಷಿಸಿದ ಬಳಿಕ, ತುಸು ಬೇಸರ ಧ್ವನಿಯಲ್ಲೇ ನುಡಿದರು. "ಬರೇ ಥಂಡಿಯಿಂದಾದ ಜ್ವರ. ಮದ್ದು ಬೇಕೇ ಬೇಕೆಂದಾದರೆ ಎರಡು ಡೋಸ್ ಕೋಲ್ಡ್ ಮಿಕ್ಸ್‌ರ್ ತೆಗೆದುಕೊಂಡರೆ ಸಾಕು."

ರೆಹಮಾನನ ಹೆಂಡತಿ ಕೋಲ್ಡ್ ಮಿಕ್ಸ್‌ರ್ ತೆಗೆದುಕೊಂಡಳು. ಬಾಲಚಂದ್ರನೇ ತರಿಸಿದ.

ಹೀಗಿರುತ್ತಾ ಕಡು ಬೇಸಗೆ ಕಾಲಿರಿಸಿತು. ಧಗೆಯಿಂದಾಗಿ ಬಾಲಚಂದ್ರ ಹೊರಹೋಗುವುದನ್ನೇ ನಿಲ್ಲಿಸಿಬಿಟ್ಟ.

ಬಳಿಕ ಮಳೆ ಶುರುವಾಯಿತು. ಮೊದಲು ಬಂದದ್ದು ಗಾಳಿ; ಬಂಡೆಗಳನ್ನೂ ಅದುರಿಸುವಂಥ ಗಾಳಿ. ಧೂಳಿನಿಂದ ಆಗಸ ಮುಚ್ಚಿ ಹೋಯಿತು.

ಹಿತ್ತಲ ಬಾಗಿಲ ತೆರೆದು ಬಾಲಚಂದ್ರ ಪಡುವಣದತ್ತ ದಿಟ್ಟಿಸಿದ. ಕಣ್ಣಿಗೆ ದಟ್ಟನೆ

ಬಿದ ಮೋಡಗಳು ಬೆಟ್ಟ ಸಾಲುಗಳನ್ನು ಪೂರ್ತಿ ಮರೆ ಮಾಡಿದ್ದವು. ಅಲೆಮಾರಿ ನಾಯಿಯೊಂದು ಎಲ್ಲಿಂದಲೋ ಬೊಗಳುತ್ತಿತ್ತು. ಸಂದಿಗೊಂದಿಗಳಿಂದ ಕಪ್ಪೆಗಳು ವಟಗುಟ್ಟುತ್ತಿದ್ದವು. ಅಪೂರ್ವ ಸಂಭ್ರಮದಿಂದ ಬಾಲಚಂದ್ರನ ಹೃದಯ ಪುಳಕಿತವಾಯಿತು. ಚಿಕ್ಕಂದಿನಲ್ಲಿ ಕಲಿತ ಕವಿತೆಯೊಂದನ್ನು ಆತ ಗುಣುಗುಣಿಸಿದ. 'ನಿಸರ್ಗ ಮಾತೆ ನವಜೀವನಕೆ ನೀಡುತಿದೆ ಜನ್ಮ....'

ತಿರುಗಿ ಕೋಣೆಗೆ ಹೊರಟಾಗ ಗೋಡೆಯ ಆಚೆ ಆ ಹುಡುಗಿ ನಿಂತಿರುವುದನ್ನು ಆತ ಕಂಡ. ಅವಳು ಆತನನ್ನು ನೋಡುತ್ತಾ ಇದ್ದಳು.

ಬಾಲಚಂದ್ರ ಆ ತನಕ ಕಂಡಿರದಂಥ ಒಂದು ಲವಲವಿಕೆ ಅವಳ ಕಣ್ಣುಗಳಲ್ಲಿ ಹೊಳೆಯುತ್ತಿತ್ತು.

ಆತ ಪ್ರಶ್ನಿಸಿದ.

"ಶೀತೆಲ್ಲ ಗುಣವಾಯ್ತಾ?"

ಆ ಮೋಟು ಗೋಡೆಯ ಬಳಿಗೆ ಬಂದು ಮೊಣಕೈಗಳನ್ನು ಅದರ ಮೇಲಿರಿಸಿ, ತುಂಟ ನಗೆ ಚೆಲ್ಲುತ್ತಾ ಅವಳೆಂದಳು. "ಮುಟ್ಟಿ ನೋಡಿರಿ."

ಬಾಲಚಂದ್ರ ಒಂದು ಗೊಂಬೆಯಂತೆ ನಿಂತುಬಿಟ್ಟನೆ ಹೊರತು, ನಿಂತಲ್ಲಿಂದ ಕದಲಲಿಲ್ಲ

ಅವಳು ಕೈ ಮುಂದೆಮಾಡಿದಳು.

ಅಷ್ಟು ಚಂದದ ಕೈಗಳನ್ನು ಆತ ಹಿಂದೆಂದೂ ಕಂಡಿರಲಿಲ್ಲ. ಆದರೂ ಆ ಕೈಗಳನ್ನು ಮುಟ್ಟಿ ನೋಡಲು ಆತ ಹಿಂಜರಿದ.

ಎರಡು ವಿರುದ್ಧ ಶಕ್ತಿಗಳು ಆತನ ಮನಸ್ಸನ್ನು ಅತ್ತಿತ್ತ ಜಗ್ಗಿದವು.

ಅವಳು ಅನ್ಯ ಮತದವಳು.

ಪರನಾರಿ, ಅಲ್ಪ ಪರಿಚಿತಳು.

ಆದರೇನಂತೆ? ಚಿಕ್ಕ ಹುಡುಗಿಯೇ ತಾನೆ?

ಚಿಕ್ಕ ಹುಡುಗಿ?

ಹೌದು ಚಿಕ್ಕ ಹುಡುಗಿಯೇ!

ಬಾಲಚಂದ್ರ ಆ ಕೈಯನ್ನು ಮುಟ್ಟಿ ನೋಡಿದ. ಅವನಿಗೆ ಬಿಸಿ ತಂಪು ಯಾವುದೂ ಗೊತ್ತಾಗಲಿಲ್ಲ. ಆ ಕೈಯನ್ನು ಅವಳು ಹಗುರ ಎತ್ತಿದಳು. ಆಗ ತಾನೆ ರೋಗ ಮುಕ್ತಳಾದ ಮುದ್ದು ಹುಡುಗಿಯೊಬ್ಬಳ ಚಪಲ ಚೇಷ್ಟೆಯೆಂದಷ್ಟೆ ಅದನ್ನಾತ ಪರಿಗಣಿಸಿದ.

ಆತ ಕೈಗಳನ್ನು ಹಿಂತೆಗೆಯಲು ಯತ್ನಿಸಿದ. ಅವಳು ಹಿಡಿತವನ್ನು ಬಿಗಿಗೊಳಿಸಿದಳು.

"ಮೈ ಮುಟ್ಟಿ ನೋಡಿದಿರಲ್ಲ."

ಕುತ್ತಿಗೆ ಕೆಳಗಡೆಗೆ ಆತನ ಕೈಗಳನ್ನು ಒಯ್ದಳು. ಇನ್ನೊಂದು ಕೈಯಿಂದ ಕುಪ್ಪಸದ ಗುಂಡಿಯನ್ನು ಬಿಚ್ಚತೊಡಗಿದಳು.

ಆ ನಾಲ್ಕು ಮನೆಯ ಹಿಂಭಾಗದಲ್ಲೂ ಆಗ ಯಾರೊಬ್ಬರೂ ಇರಲಿಲ್ಲ.

ಅವಳು ಪ್ರಶ್ನಿಸಿದಳು. "ಶೀತೇನು ಇಲ್ಲವಾ?"

ಬಾಲಚಂದ್ರ ಮರು ಮಾತಾಡದೆ ಹಿಂತಿರುಗಿದ. ಆ ಯುವಕನಿಗೆ ಅದೊಂದು ಹೊಸ ಅನುಭವವಾಗಿತ್ತು. ಅವಳು ಕರೆದಳು.

ಆತ ಹಿಂದಿರುಗಿ ನೋಡಲೇ ಇಲ್ಲ. ಆತ ತೀರಾ ಗಲಿಬಿಲಿಗೊಂಡಿದ್ದ. ಕಂಠ ಪೂರ್ತಿ ದ್ರವತುಂಬಿದ ಒಂದು ಪಾತ್ರೆ. ಇನ್ನೊಂದು ಹನಿ ಬಿದ್ದುಬಿಟ್ಟರೆ ಹೊರಚೆಲ್ಲೀತು. ಒಂದು ಮಾತು ಆತನಿಂದಲೂ ಹೃದಯ ಬಿರಿದೀತು!

ಬಾಲಚಂದ್ರ ಕುರ್ಚಿಯಲ್ಲಿ ಹೋಗಿ ಬಿದ್ದುಕೊಂಡ. ಆತ ಅಳುವುದೊಂದೇ ಬಾಕಿ! ಹಣೆ ಹೊತ್ತಿ ಉರಿಯುತ್ತಿರುವಂತೆ ಅನ್ನಿಸಿತು.

ಆತ ಯೋಚಿಸತೊಡಗಿದ: ಚಿಕ್ಕ ಹುಡುಗಿಯೆಂದು ತಿಳಿದುಕೊಂಡ ತನ್ನದ್ದೇ ತಪ್ಪು.....

ಗಂಡು ಹೆಣ್ಣುಗಳ ನಡುವೆ ಅನಾದಿಕಾಲದಿಂದಲೂ ಸಂಭವಿಸುತ್ತಿರುವುದಾಗಿ ಅನಿಷ್ಟ ಸಂಬಂಧಗಳ ಕುರಿತು ಪುಸ್ತಕದಲ್ಲಿ ಓದಿರುವುದನ್ನು ಬಾಲಚಂದ್ರ ನೆನಪಿಗೆ ತಂದುಕೊಂಡ. ಆದರೆ ಆಗಲೂ ರಿಹಮಾನನ ಹೆಂಡತಿಯ ರೂಪ ಅವನ ಮನಸ್ಸನ್ನು ಕಾಡುತ್ತಲೇ ಇತ್ತು.

'ಸ್ವತಃ ತಂದುಕೊಂಡ ಗಂಡಾಂತರ ಇದು!' ಆತ ತನ್ನನ್ನೇ ಹಳಿದ.

ಹೊರಗೆ ಜಡಿ ಮಳೆ ಸುರಿಯುತ್ತಿತ್ತು. ಮೊದಲು ತಾಳಬದ್ಧವಾಗಿ ಹನಿಯುತ್ತಿದ್ದ ಮಳೆ ಬಳಿಕ ಕ್ರಮನಿಯಮಗಳೇನೂ ಇಲ್ಲದ ಮುಸಲಧಾರೆಯಾಗಿ ಭೋರ್ಗರೆಯತೊಡಗಿತು. ದೂರದಿಂದ ಕೇಳಿಬರುತ್ತಿರುವ ಸಮುದ್ರದ ಮೊರೆತದ ಹಾಗೆ ಅದು ಬಾಲಚಂದ್ರನ ಕಿವಿಗೆ ಅಪ್ಪಳಿಸುತ್ತಿತ್ತು.

ವರಾಂಡಕ್ಕೆ ತೆರಳಿ ಹೊರಗೆ ಕಣ್ಣುಹಾಯಿಸಿದಾಗ ಕದೆಯನಲ್ಲೂರು ಗ್ರಾಮ ಪೂರ್ತಿ

ಕೊಚ್ಚಿ ಹೋದೀತೇನೋ ಎಂಬ ಅನುಮಾನವುಂಟಾಯಿತು ಆತನಿಗೆ. ಏನೇನೂ ಕಾಣಿಸುತ್ತ ಇಲ್ಲ. ಎಲ್ಲೆಲ್ಲೂ ಕತ್ತಲೆ ಮುತ್ತಿಬಿಟ್ಟಿವೆ.

ರೆಕ್ಕೆ ಮೂಡಿದ ಒಂದು ಬೆಳ್ಳಿ ಹಾವಿನ ಹಾಗೆ ಬೆಳಕಿನ ಗೆರೆಯೊಂದು ಆಗಸವನ್ನು ರಪ್ಪನೆ ಹಲವು ಕಲವುಗಳಾಗಿ ಸೀಳಿ ಮಾಯವಾಯಿತು.

ಗುಡುಗು ಮೊಳಗಿತು.

ಆತ ಅವಸರ ಅವಸರವಾಗಿ ಹಿತ್ತಲಿನ ಬಾಗಿಲಿನತ್ತ ಧಾವಿಸಿದ. ಅದು ತೆರೆದುಕೊಂಡೇ ಇತ್ತು.

ಅಲ್ಲಿ ಆ ಗೋಡೆಯ ಆಚೆ, ಇಳಿಮಾಡಿನ ಕೆಳಗೆ ಆತನ ನಿರೀಕ್ಷೆಯಲ್ಲಿ ಎಂಬಂತೆ ಅವಳು ನಿಂತಿದ್ದಳು!

ಅವರು ಒಬ್ಬರನ್ನೊಬ್ಬರು ಕಂಡರು. ಅವಳ ಮೋರೆ ಕಾಗದದ ಹಾಗೆ ಬಿಳುಚಿ ಕೊಂಡಿತ್ತು.

ಪುನಃ ಮಿಂಚು ಬೆಳಗಿತು.

ಬಾಲಚಂದ್ರ ಒಂದು ಕ್ಷಣ ಅನುಮಾನಿಸುತ್ತ ನಿಂತುಕೊಂಡ.

"ಒಳಗ ಹೋಗು." ಆತ ಗಟ್ಟಿಯಾಗಿ ಹೇಳಿದ.

ಅವಳು ಆತನ ಮುಖವನ್ನೇ ಪಿಳಿ ಪಿಳಿ ನೋಡಿದಳು.

ಗುಡುಗು ಮೊಳಗಿತು.

ಬಾಲಚಂದ್ರ ಭಯದಿಂದ ಕಣ್ಣು ಮುಚ್ಚಿ ಬಿಟ್ಟ. ಅವಳು ಮತ್ತೂ ಅಲ್ಲೇ ನಿಂತಿದ್ದಳು.

ಆತ ಇನ್ನೊಮ್ಮೆ ಹೇಳಿದ "ಒಳಗ ಹೋಗು!"

"ನನಗೆ ತುಂಬ ಭಯವಾಗುತ್ತೆ."

ಮಳೆಯ ಬಿರುಸು ಇನ್ನಷ್ಟು ಹೆಚ್ಚುತ್ತಿತ್ತು..

"ನಾನು ಇಲ್ಲೇ ಇದ್ದೇನೆ!"

"ಬನ್ನಿ ರೀ ಮಾತಾಡುತ್ತಾ ಕೂರೋಣ."

ಬಾಲಚಂದ್ರ ಬಾಗಿಲು ಮುಚ್ಚಿದ.

ಆತ ಮರಗಟ್ಟಿದ ಹಾಗೆ ಆಗಿ ಬಿಟ್ಟಿದ್ದ.

ಗಾಳಿ ಬೀಸುತ್ತಲೇ ಇತ್ತು. ಮಳೆಯ ಸದ್ದಿನಲ್ಲಿ ಯಾವುದೋ ಒಂದು ಬದಲಾವಣೆ.

ಎಲ್ಲಿಂದಲೋ ಒಬ್ಬಳು ಹುಡುಗಿ ಮನಸೊಂದು ಅಳುತ್ತಿರುವಂತೆ ಆತನಿಗನ್ನಿಸಿತು. ಆತ ಕಿವಿಯೊಡ್ಡಿ ಆಲಿಸಿದ. ಒಬ್ಬಳು ಹುಡುಗಿಯ ಧ್ವನಿಯಷ್ಟೇ ಅಲ್ಲ; ಜಗತ್ತಿನ . ದುಃಖಿತ ಮನುಷ್ಯರೆಲ್ಲರ ಧ್ವನಿಯೂ ಅದರಲ್ಲಿ ಬೆರೆತಿರುವಂತಿದೆ.

ಆ ಧ್ವನಿ ಕ್ರಮೇಣ ಹೆಚ್ಚತೊಡಗಿತು.

ಪಕ್ಕದ ಕೋಣೆಯಲ್ಲಿ ಹುಡುಗಿಯೊಬ್ಬಳು ಏಕಾಕಿಯಾಗಿ ಕುಳಿತಿದ್ದಾಳೆ. ಅವಳು ಹೆದರಿ ನಡುಗುತ್ತಿರಬಹುದು. ಪ್ರಾಯಶಃ ಅಳುತ್ತಿರಲೂ ಬಹುದು. ಅಥವಾ ಆ ಹುಡುಗಿ ಸಿಡಿಲೆರಗಿ ಸತ್ತಿರಬಹುದು, ಯಾಕೆ ಸಾಯಬಾರದು!

ಅಸು ನೀಗುವಾಗ ಅವಳು ಆತನನ್ನು ನೆನೆದಿರಬಹುದು. ಭಯದಿಂದಲೇ ಅವಳು ಆತನನ್ನು ಕರೆದಿದ್ದಳು. ಆದರೆ ಆತ ಹೋಗಲಿಲ್ಲ.

ಮಿಂಚಿನ ಬೆಳಕು ಕಿಟಕಿಯ ಮೂಲಕ ಒಳಗೆ ನುಗ್ಗಿತು.

ಬಾಲಚಂದ್ರ ಮನೆಯಿಂದ ಹೊರಬಿದ್ದ.

ಮುಚ್ಚಿಕೊಂಡಿದ್ದ ಬಾಗಿಲನ್ನು ತಳ್ಳಿ ತೆರೆದು ಆತ ಒಳಗೆ ಪ್ರವೇಶಿಸಿದ. ಕೋಣೆಯೊಳಗೆ ಸಾಕಷ್ಟು ಬೆಳಕಿರದಿದ್ದರೂ ಒಂದು ಮೂಲೆಯಲ್ಲಿ ಅವಳು ಹೊದ್ದು ಮುಚ್ಚಿ ಕುಳಿತಿರುವುದನ್ನು ಆತ ಕಂಡ. ಅವಳು ಅಳುತ್ತಿದ್ದಾಳೆ. ಆತ ಅವಳ ಬಳಿ ಕುಳಿತುಕೊಂಡ.

ಗಾಳಿ ನೆಲೆಸಿತಾದರೂ ಮಳೆಯ ಬಿರುಸು ಇನ್ನಷ್ಟು ಹೆಚ್ಚಿತು.

ದೊಡ್ಡದೊಂದು ಮರವನ್ನು ಕಡಿದು ಕೆಡವಿದ ಹಾಗೆ ಗುಡುಗು ಮೊಳಗಿತು. ಅವಳು ಆತನಿಗೆ ಒತ್ತಿ ಕುಳಿತುಕೊಂಡಳು.

ಕಡೆಯನಲ್ಲೂರು ಗ್ರಾಮ ಪೂರ್ತಿ ಪ್ರಜ್ಞಾಹೀನವಾಗಿ ಬಿದ್ದುಕೊಂಡಿತು.

ಮುಸ್ಸಂಜೆಯಷ್ಟೆ ಆತ ಹಿಂದಿರುಗಿದ. ಆಗಲೂ ಮಳೆ ನಿಂತಿರಲಿಲ್ಲ.

ಕೋಣೆ ಸೇರಿದೊಡನೆ ಹಾಸಿಗೆ ಬಿಡಿಸಿ ಮಲಗಿದ. ಆಳು ಊಟ ತಂದಾಗ ಶೆಲ್ಫಿನಲ್ಲಿ ಮುಚ್ಚಿಟ್ಟು ಹೊರಟು ಹೋಗಲು ಹೇಳಿದ.

ದೀಪ ಹಚ್ಚಲಿಲ್ಲ.

ಒಂದೊಂದೇ ಘಟನೆಗಳನ್ನೂ ಆತ ನೆನಪಿಗೆ ತಂದುಕೊಂಡ.

ಅವಳ ಅದುವರೆಗಿನ ಪ್ರತಿಯೊಂದು ನೋಟದಲ್ಲೂ ಒಂದು ಹೊಸ ಅರ್ಥ ಬಾಲಚಂದ್ರನಿಗೆ ಕಾಣಿಸಿತು. ಮೊದಲೇ ಅದನ್ನು ತಾನು ಮನಗಾಣಬೇಕಿತ್ತು.

ಎಂತಹ ಅಪಚಾರ!

ನಸುಕು ಹರಿದ ಬಳಿಕ ಅವಳಿಗೆ ಮುಖ ತೋರಿಸುವುದಾದರೂ ಹೇಗೆ?

ನೋವು! ಮೈಮನಗಳೆರಡೂ ಒಂದೇ ಥರ ನೋಯುತ್ತಲಿವೆ.

ಮುಂಜಾನೆಯೇ ಎದ್ದು ಆತ ಸಾಮಾನುಗಳನ್ನೆಲ್ಲಾ ಟ್ರಂಕಿನಲ್ಲಿ ಜೋಡಿಸಿದ. ಶಂಕಾರಿಗೆ ತೆರಳಿ ರಜೆಗೆ ಬರೆದುಕೊಟ್ಟು ಬಳಿಕ ಹುಟ್ಟೂರಿಗೆ ಹೊರಟು ಹೋಗಲು ಆಗಲೇ ಆ ಯುವಕ ನಿರ್ಧರಿಸಿದ್ದ..

ಕಾರ್ಯದರ್ಶಿಗೆ ಆತ ಒಂದು ಪತ್ರ ಬರೆದ. ಅದನ್ನು ಹಿಡಿದುಕೊಂಡು ವರಾಂಡದಲ್ಲಿ ನಿಂತುಕೊಂಡ. ಯಾರಾದರೂ ಹುಡುಗರು ಕಾಣ ಸಿಕ್ಕಿದರೆ ಕೊಟ್ಟು ಕಳುಹಿಸಬೇಕು.

ಸರಿಯಾಗಿ ಬೆಳಗಾಯಿತು.

ಹಿಂದಿನ ದಿನ ಅವಳ ಸನಿಹದಿಂದ ಹೊರಡುವಾಗ ಕೇಳಿದ ಪ್ರಶ್ನೆಯನ್ನು ಬಾಲಚಂದ್ರನ್ ನೆನಪಿಗೆ ತಂದುಕೊಂಡ. "ಏನೇ ದುಃಖ?"

"ದುಃಖವಾ? ದುಃಖವಲ್ಲದೆ ನನ್ನ ಬದುಕಿನಲ್ಲಿ ಇನ್ನೇನೂ ಇಲ್ಲ!"

ಈ ಮಾತುಗಳನ್ನೇ ಬಾಲಚಂದ್ರನ್ ಉರು ಹೊಡೆದ. ಅದರ ಅರ್ಥ ಅದು ತನಕ ಆತನಿಗೆ ಹೊಳೆದಿರಲಿಲ್ಲ.

ಆತ ಅಂದುಕೊಂಡ. ತಾನು ಎಂತಹ ದಡ್ಡನಾಗಿದ್ದ! ಅವಳಿಗೆ ದುಃಖಿಸಲು ಯಾವ ಕಾರಣವೂ ಇಲ್ಲ ಎಂದುಕೊಂಡಿದ್ದನಲ್ಲ! ಏನಾದರೂ ಬೇಸರವಿದ್ದಲ್ಲಿ ಕದಯನಲ್ಲೂರಿನ ಜೀವನವೇ ಅದಕ್ಕೆ ಕಾರಣವೆಂದು ಭಾವಿಸಿದ್ದ. ಆದರೆ ಕದಯನಲ್ಲೂರು ಮತ್ತು ಅವಳ ನಡುವಿನ ಸಂಬಂಧ ಎಷ್ಟೊಂದು ಶಿಥಿಲವಾದದ್ದು!

ಅವನಿಗದು ಅರ್ಥವಾಯಿತು.

ರಹಮಾನನ್ನು ದಡ್ಡನೆಂದು ಭಾವಿಸಿದ್ದ ತಾನು ಯಾವ ಗುಂಪಿಗೆ ಸೇರಿದವನೆಂದು ಯೋಚಿಸಿದಾಗ ಆತನಿಗೆ ನಾಚಿಕೆ ಎನಿಸಿತು.

ಬಾಲಚಂದ್ರ ಆ ಪತ್ರವನ್ನು ಹರಿದು ಅಂಗಳದಲ್ಲಿ ಮಡುಗಟ್ಟಿ ನಿಂತಿದ್ದ ನೀರಿಗೆ ಎಸೆದುಬಿಟ್ಟ.

ಪಕ್ಕದ ಮನೆಯ ಬಾಗಿಲೂ ತೆರೆಯಲ್ಪಟ್ಟಿತು. ಆತ ಅತ್ತ ದಿಟ್ಟಿಸಿದ. ಹೌದು, ಅವಳೇನೆ. ಅವರಿಬ್ಬರೂ ಮುಗುಳುನಕ್ಕರು.

ಬಾಲಚಂದ್ರನಿಗೆ ಆಗ ತನ್ನೆದುರು ಕಾಣಿಸಿದ್ದು ಓರ್ವ ಚಿಕ್ಕ ಹುಡುಗಿಯಾಗಿರಲಿಲ್ಲ.

* * * * * * *

ಭೂಕಂಪದ ಬಗ್ಗೆ ಮುನ್ಸೂಚನೆ

ಪ್ರಾಣಿಗಳು ಭೂಕಂಪದ ಬಗ್ಗೆ ಮುನ್ಸೂಚನೆ ನೀಡಬಲ್ಲವೇ? ಎಂದರೆ, "ಹೌದು" ಎನ್ನುತ್ತಾರೆ ಭೂಗರ್ಭ ಶಾಸ್ತ್ರಜ್ಞರು. ಅವರ ಪ್ರಕಾರ ಹಾವುಗಳು ದಾರಿಯ ಮೇಲೆ ಸತ್ತಂತೆ ಬಿದ್ದಿರುವುವು, ಬಾತುಕೋಳಿಗಳು ಹಾರಲು ಪ್ರಯತ್ನಿಸುವುದು, ಕೋಳಿಮರಿಗಳು ತಮ್ಮ ಗೂಡು ಪ್ರವೇಶಿಸಲು ನಿರಾಕರಿಸುವುದು, ಹಂದಿಗಳು ತಮ್ಮ ಗೂಡಿನಲ್ಲಿ ಸುತ್ತಲು ಪ್ರಾರಂಭಿಸುವುವು, ಹಸುಗಳು ಗೂಟಗಳನ್ನು ಕಿತ್ತೊಗೆದು ಓಡಿ ಹೋಗಲು ಪ್ರಯತ್ನಿಸುವವು. ಮೇಕೆಗಳು ಚಡಪಡಿಸುತ್ತವೆ. ಇಲಿಗಳು ಕುಡಿದವರಂತೆ ಉನ್ಮತ್ತವಾಗಿರುತ್ತವೆ. ಶಿಸ್ತಿಗೆ ಹೆಸರುವಾಸಿಯಾದ ಪೊಲೀಸ್ ನಾಯಿಗಳು ತಮ್ಮ ತರಬೇತುದಾರನ ಮಾತು ಕೇಳುವುದಿಲ್ಲ ಮತ್ತು ನೆಲವನ್ನು ಮೂಸಿ ನೋಡುತ್ತ ಊಳಿಡುತ್ತವೆ. ಇವೆಲ್ಲಾ ಮುಖ್ಯ ಸೂಚನೆಗಳಾಗಿವೆ.

● ರಾಮನ್



ಮಕ್ಕಳ ರೊಚ್ಚಿಗೆ ಪರಿಹಾರವುಂಟೆ?

ಕೆ. ವೆಂಕಣ್ಣಾಚಾರ್

ಅಳು ಚಿಕ್ಕಮಕ್ಕಳ ಒಂದು ಸ್ವಾಭಾವಿಕ ಸ್ವಭಾವವಾಗಿದೆ. ನವಜಾತ ಶಿಶುಗಳು ಅಳುವಿನಿಂದಲೇ ತಮ್ಮ ಜೀವಂತಿಕೆಯನ್ನು ಧೃಢಪಡಿಸುತ್ತವೆ. ಬಹುತೇಕ ಮಕ್ಕಳು ತಮ್ಮ ನೋವು, ಸಂಕಟ, ರೋಗರುಜಿನಗಳು, ನಿರಾಶೆ, ಅಸಹಾಯಕತೆ, ಏಕಾಕಿತನ, ಅಸೂಯೆ, ಹಸಿವೆ, ತೃಷೆ ಮೊದಲಾದುವುಗಳನ್ನು ಅಳುವಿನ ಮೂಲಕವೇ ಪ್ರಕಟ ಪಡಿಸುತ್ತವೆ. ಆದುದರಿಂದ ಸಣ್ಣ ಮಕ್ಕಳಿಗೆ ಅಳುವುದು ಸಹಜವೆಂದೂ ಅಳದಿರುವುದು ಗಮನಾರ್ಹವಾದ ಅಸಹಜ ವರ್ತನೆಯೆಂದೂ ತಿಳಿಯಲಾಗುತ್ತದೆ.

ಅಳುವ ಮಗುವನ್ನು ಸುಮ್ಮನಿರಿಸುವ ಕಲೆ ಸಣ್ಣದೇನಲ್ಲ. ಆದರೆ ಯಾವಾಗ, ಹೇಗೆ ಮತ್ತು ಏಕೆ ಸುಮ್ಮನಿರಿಸಬೇಕೆಂಬುದು ಗೊತ್ತಿದ್ದರೆ ಮಾತ್ರ ಆ ಕಲೆಗೆ ಸಾರ್ಥಕ್ಯ.

ಆದರೆ ಕೆಲವು ಮಕ್ಕಳು ಪದೇ ಪದೇ ಅಳುವುದು, ಕಿರುಚಾಡುವುದು, ನೆಲದ ಮೇಲೆ ಹೊರಳಾಡುವುದು, ಸಿಕ್ಕ ವಸ್ತುಗಳನ್ನು ಬೇಕಾಬಿಟ್ಟಿ ಎರಚಾಡುವುದು, ಎದುರು ಬಂದವರನ್ನು ಹೊಡೆದು, ಬಡಿದು, ಪರಚಿ, ಚಿಗುಟಿ, ಕಚ್ಚಿ ರಂಪಮಾಡುವುದು, ತಲೆಯನ್ನು ನೆಲಕ್ಕೋ ಗೋಡೆಗೋ ಗಟ್ಟಿಸಿಕೊಳ್ಳುವುದು, ಅತ್ತು ಅತ್ತು ಮೈ ಕೈಗಳನ್ನು ನೀಲಿಗಟ್ಟಿಸಿಕೊಳ್ಳುವುದು, ಉಸಿರುಗಟ್ಟಿ ತೇಲುಗಳಲ್ಲಿ ಮೇಲುಗಣ್ಣು ಮಾಡುವುದು, ಎಚ್ಚರ ತಪ್ಪುವುದು, ರೋಶೆ, ರೊಚ್ಚೆ ಹಾಗೂ ಚಂಡಿತನ ಮಾಡುವುದು ಮೊದಲಾದ ಸ್ವಭಾವಗಳನ್ನು ಪ್ರಕಟಪಡಿಸುತ್ತವೆ. ಕೆಲವರು ಇಂಥ ಸ್ವಭಾವವನ್ನು ಜಾಣ್ಮೆಯ ಲಕ್ಷಣವೆಂದೂ ಬೆಳವಣಿಗೆಯ ಪ್ರತೀಕವೆಂದೂ ಹೇಳಿದರೆ ಶಿಶು ಸ್ವಭಾವ ತಜ್ಞರು ಅದನ್ನು ಒಂದು ಮಾನಸಿಕ ವಿಕಲತೆಯೆಂದೇ ತಿಳಿಯುತ್ತಾರೆ.

ಅತಿರೇಕದ ಕ್ರಮಗಳು:

ಮಕ್ಕಳು ಅತಿಯಾಗಿ ರಚ್ಚೆ ಮಾಡಹತ್ತಿದಾಗ ಬಹುತೇಕ ತಂದೆ ತಾಯಿಗಳು ಏನು ಮಾಡಬೇಕೋ ತೋಚದೆ ತಾವೂ ರೇಗಿ ಗದರಿಸಿ ಬೆದರಿಸಿ, ಹೊಡೆದುಬಡಿದು, ತಣ್ಣೀರೆರಚಿ ಮಕ್ಕಳನ್ನು ಸುಮ್ಮನಾಗಿಸಲು ಯತ್ನಿಸುವರು. ಇನ್ನು ಕೆಲವರು ಯಾವ ಯೋಚನೆಯನ್ನು ಮಾಡದೆ ಮಕ್ಕಳ ಬೇಡಿಕೆಯನ್ನು ಪೂರೈಸಿ ಅವರನ್ನು ಸಮಾಧಾನ ಪಡಿಸಲೆತ್ನಿಸುವರು. ಮತ್ತೆ ಕೆಲವರು ಮಕ್ಕಳು ಏನು ಮಾಡಿದರೂ ಸರಿ, ಉದಾಸೀನದಿಂದ ಅವರನ್ನು ಕಡೆಗಣಿಸುವರು. ತಜ್ಞರ ಪ್ರಕಾರ ಈ ಮೂರು ಕ್ರಮಗಳೂ ಅತಿರೇಕದವು.

ರಚ್ಚೆಮಾಡುತ್ತಿರುವ ಮಕ್ಕಳನ್ನು ಬೆದರಿಸಿ ಹಿಂಸಿಸಿದರೆ ಅವರು ಹಟ ಮಾರಿಗಳಾಗಬಹುದು. ಒಂದು ಘಟ್ಟದಲ್ಲಿ ಅವರು ಶಿಕ್ಷೆಗೆ ಹೆದರದೆ ತೀವ್ರ ಉದ್ವೇಗಕ್ಕೆ ಒಳಗಾಗಬಹುದು. ಹೃದಯ ಹಾಗೂ ಥೈಮಸ್ ಗ್ರಂಥಿಗಳ ಊತವಿರುವ ಮಕ್ಕಳು ಉದ್ವೇಗಕ್ಕೆ ಒಳಗಾದರೆ ಅವರ ಎದೆಬಡಿತ ಹಾಗೂ ರಕ್ತದೊತ್ತಡಗಳು

ಚಂಡಿ ಹಿಡಿದ ಮಕ್ಕಳನ್ನು ತಕ್ಕೈಸಿ ಬೋಳೈಸಿ ಉಚಿತವೋ ಅನುಚಿತವೋ ಅವರ ಬೇಡಿಕೆಗಳನ್ನು ಈಡೇರಿಸಿ ಸುಮ್ಮನಾಗಿಸಲು ಯತ್ನಿಸಿದರೆ ಮಕ್ಕಳಿಗೆ ತಂದೆ ತಾಯಿಗಳ ದೌರ್ಬಲ್ಯದ ಅರಿವಾಗಿ ಅವರು ಸಣ್ಣ ಪುಟ್ಟ ವಿಚಾರಗಳಿಗೂ ಭೀಕರವಾಗಿ ರಗಳೆಮಾಡಬಹುದು. ಅವರು ದೊಡ್ಡವರಾದ ಮೇಲೆಯೂ



ಏರಿ ಸಾವು ಕೂಡಾ ಸಂಭವಿಸಬಹುದು. ಅತಿಯಾದ ಅಳು ಅಪಸ್ಮಾರಕ್ಕೆ ಕ್ಯಾನ್ಸರಿನ ಸೂಚನೆಯೂ ಆಗಿರಬಹುದು. ಅಂಥ ಮಕ್ಕಳನ್ನು ಹಿಂಸಿಸುವುದರಿಂದ ದುಷ್ಪರಿಣಾಮ ಖಂಡಿತ.

ಇಂಥದೇ ಸ್ವಭಾವವನ್ನು ಉಳಿಸಿಕೊಂಡರೆ ತಂದೆ ತಾಯಿಗಳ ಪಾಡು ಶೋಚನೀಯವಾಗುತ್ತದೆ.

ಮಕ್ಕಳ ರೋದನವನ್ನು ಸಾರಾಸಗಟಾಗಿ ಉದಾಸೀನ ಮಾಡುವುದು ಕೂಡಾ ಅನರ್ಥ

ಕಾರಿಯಾಗಬಹುದು. ತಮ್ಮ ಅಳಲನ್ನು ತಂದೆ ತಾಯಿಗಳು ಕಡೆಗಣಿಸುತ್ತಾರೆ ಎಂಬ ಭಾವನೆ ಮಕ್ಕಳನ್ನು ಖಿನ್ನದಾಗಿಮಾಡಿ, ಅವರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗಳು ಕುಂಠಿತವಾಗುವಂತೆ ಮಾಡಬಹುದು.

ದಾಗ ಗಟ್ಟಿಮನಸಿನಿಂದ ಅವರನ್ನು ಗಮನಿಸಿಯೂ ಗಮನಿಸದ ಹಾಗೆ ಸುಮ್ಮನಿರಬೇಕು. ಆಗ ಮಕ್ಕಳು ತಮ್ಮ ಅನುಚಿತವಾದ ಹಟಮಾರಿತನಕ್ಕೆ ಬೆಲೆಯಿಲ್ಲ ಎಂಬುದನ್ನರಿತು ಸುಮ್ಮನಾಗುವರಲ್ಲದೆ ಇನ್ನೊಮ್ಮೆ ನಿರರ್ಥಕವಾಗುವ



ಪರಿಹಾರ:

ಈ ಎಲ್ಲಾ ಕಾರಣಗಳಿಂದ ತಂದೆ ತಾಯಿಗಳು ಮೊದಲು ಮಕ್ಕಳ ಹಟಮಾರಿತನಕ್ಕೆ ಕಾರಣವೇನೆಂಬುದನ್ನು ಕಂಡುಕೊಂಡು ಅನಂತರ ಸೂಕ್ತ ಪರಿಹಾರೋಪಾಯಗಳನ್ನು ಕೈಗೊಳ್ಳಬೇಕು. ಶೀತ, ಉಷ್ಣ, ಹಸಿವೆ, ತೃಷೆ ನೋವು, ಸಂಕಟ ಮೊದಲಾದುವನ್ನು ಪರಿಹರಿಸಬೇಕು. ಒದ್ದೆಯಾದ ಹಾಸಿಗೆ ಬಟ್ಟೆ ಮೊದಲಾದುವನ್ನು ಬದಲಿಸಬೇಕು. ಸೊಳ್ಳೆ, ತಿಗಣೆ ಮೊದಲಾದ ಕೀಟಗಳ ಕಡಿತದಿಂದ ಅವರನ್ನು ಪಾರುಮಾಡಬೇಕು. ಪ್ರೀತಿ, ಮಮತೆ, ಮರುಕ, ಸಹಾನುಭೂತಿಗಳಿಂದ ಅವರ ಭಯ, ಶಂಕೆ, ಅಸೂಯೆ, ಏಕಾಕಿತನಗಳನ್ನು ನಿವಾರಿಸಬೇಕು. ರೋಗ ರುಜಿನಗಳಿಂದ ಬಳಲುತ್ತಿದ್ದರೆ ವೈದ್ಯರಿಂದ ಉಪಚಾರಮಾಡಿಸಬೇಕು. ಅವರ ನ್ಯಾಯೋಚಿತವಾದ ಬೇಡಿಕೆಗಳನ್ನು ಈಡೇರಿಸಬೇಕು. ಆದರೆ ಅವರ ಕೋರಿಕೆಗಳು ಸರಿಯಾದುವಲ್ಲ ಎನಿಸಿ

ರೋತೆ ಎಂಬ ಅಸ್ತ್ರವನ್ನು ಬಳಸಲು ಹಿಂಜರಿಯುವರು. ಆದರೆ ಮಕ್ಕಳು ತಮ್ಮ ದೈಹಿಕ ಮಾನಸಿಕ ವೈಪರಿತ್ಯಗಳನ್ನು ಸೂಚಿಸಲು ಬಳಸಬಹುದಾದ ಅಳು, ಸಂಜ್ಞೆ, ಸೂಚನೆ ಮೊದಲಾದುವನ್ನು ಅರ್ಥಮಾಡಿಕೊಂಡು ಸೂಕ್ತವಾಗಿ ಪ್ರತಿಕ್ರಿಯಿಸುವುದನ್ನು ಮಾತ್ರ ಕಡೆಗಣಿಸಬಾರದು. ಯಾವಾಗಲೂ ಮಕ್ಕಳ ರೊಚ್ಚು ಕೊಂಚ ತಣ್ಣಗಾದಾಗ ಮಾತ್ರ ಅವರನ್ನು ಮೃದುವ್ಚಚನಗಳಿಂದ ಸಮಾಧಾನಮಾಡಲೆತ್ನಿಸಬೇಕು.

ಇಂಥ ಅರ್ಥಪೂರ್ಣ ಕ್ರಮಗಳಿಂದ ಮಕ್ಕಳು ತಮ್ಮ ಸ್ವಭಾವವನ್ನು ಸೂಕ್ತವಾಗಿ ಬದಲಿಸಿಕೊಳ್ಳುತ್ತವೆ. ಕ್ರಮೇಣ ಅವರ ರೋತೆ ರೊಚ್ಚುಗಳು ಕಡಿಮೆಯಾಗುತ್ತವೆ. ತಂದೆ ತಾಯಿಗಳ ಆತುರದ ಅತಿರೇಕದ ಕ್ರಮಗಳಿಂದ ಮಕ್ಕಳಿಗೆ ಕೆಡುಕಾಗುವುದಲ್ಲದೆ ಅವರೂ ಪಶ್ಚಾತ್ತಾಪದಿಂದ ಪರಿತಪಿಸಬೇಕಾಗುತ್ತದೆ ಎಂದು ಶಿಶುಸ್ವಭಾವ ತಜ್ಞರು ಎಚ್ಚರಿಸುತ್ತಾರೆ.

(ಸಾಧಾರ) *

ಇದಮ್ಮನ್ನೇ ಜೀವ ಇದು ಜೀವನ

ಕಾರ್ಯ ತತ್ಪರತೆ

ಕೆಲಸದ ಒತ್ತಡದಿಂದಾಗಿ ಮೇಲಧಿಕಾರಿಗಳು ತಮ್ಮ ಕೈಕೆಳಗಿನವರ ಮೇಲೆ ಆಗಾಗ್ಗೆ ಹೆಚ್ಚಿನ ಕಾಲಾವಧಿ (overtime) ಗಾಗಿ ಒತ್ತಾಯಿಸುವುದು ಸಾಮಾನ್ಯ. ಖಾಸಗಿ ಕಂಪನಿಗಳಲ್ಲಿ ಇದು ಬಹುಶಃ ದಬ್ಬಾಳಿಕೆಯ ಮಟ್ಟ ತಲುಪುತ್ತದೇನೋ ಅನ್ನಿಸುತ್ತದೆ.

ಕೆಲದಿನಗಳ ಹಿಂದೆ ಒಂದು ತ್ವರಿತ ಕೆಲಸವನ್ನು ನನ್ನ ಕೈಕೆಳಗಿನ ಅಧಿಕಾರಿ ಪ್ರತಿಭಾಳಿಗೆ ಕೊಟ್ಟಿದ್ದೆ. ಸಂಜೆಯ ವೇಳೆಗೆ ಅದಿನ್ನೂ ಮುಗಿದಿರಲಿಲ್ಲ. ಸ್ವಲ್ಪ ಬಾಕಿ ಇತ್ತು. ಇದನ್ನು ತಿಳಿಸಲು ಬಂದ ಆಕೆಗೆ ಅದನ್ನು ಪೂರ್ತಿ ಮುಗಿಸಿದ ನಂತರವೇ ಮನೆಗೆ ಹೋಗಬೇಕೆಂದು ಕಡ್ಡಾಯವಾಗಿ ತಿಳಿಸಿದೆ. ಏನೋ ಹೇಳಲು ಪ್ರಯತ್ನಿಸಿದ ಆಕೆಗೆ ಅವಕಾಶವನ್ನೇ ಕೊಡದೇ ಕಾರ್ಯ ತತ್ಪರತೆಯ ಬಗ್ಗೆ ಒಂದು ಪುಟ್ಟ ಭಾಷಣ ಬಿಗಿದು ಆಕೆಯನ್ನು ಅಟ್ಟಿದೆ. ಒಂದು ಮಾತನ್ನೂ ಆಡದೆ ಆಕೆ ತನ್ನ ಕೆಲಸ ಮುಂದುವರೆಸಿದಳು.

ಮರುದಿನ ಪ್ರತಿಭಾ ಕೆಲಸಕ್ಕೆ ಬರಲಿಲ್ಲ. ಅದರ ನಂತರದ ದಿನ ಆಕೆ ಹಾಜರಾದಾಗ ನನ್ನ ಕೋಪ ಮಿತಿ ಮೀರಿತ್ತು. ಗೈರು ಹಾಜರಿಯ ಕಾರಣ ತಿಳಿದಾಗ ನನಗೆ ಏನು ಹೇಳಲೂ ತೋಚಲಿಲ್ಲ. ನನ್ನ ಒತ್ತಾಯಕ್ಕೆ ಮಣಿದು ಆ ದಿನ ಸಂಜೆ ತನ್ನ ಕೆಲಸದಲ್ಲಿದ್ದಾಗ, ಅಲ್ಲಿ ಆಕೆಯ ತಾಯಿ ನಿಧನರಾಗಿದ್ದರು. ಬಹಳ ದಿನಗಳಿಂದ ಹಾಸಿಗೆ ಹಿಡಿದಿದ್ದ ಆಕೆಯ ಸ್ಥಿತಿ ಆಗಾಗ್ಗ ಉಲ್ಬಣಗೊಳ್ಳುತ್ತಿತ್ತು. ಅಂದಿನ ಸ್ಥಿತಿ ಹಾಗಿತ್ತು. ಆ ದಿನ ಸಮಯಕ್ಕೆ ಸರಿಯಾಗಿ ಪ್ರತಿಭಾ ಮನೆ ತಲುಪಿದ್ದರೆ, ಬಹುಶಃ ಕೊನೆಯ ಗಳಿಗೆಯಲ್ಲಿ ತನ್ನ ತಾಯಿಯ ಪಕ್ಕದಲ್ಲಿ ಇರುತ್ತಿದ್ದಳೇನೋ ಅನ್ನುವ ಪಾಪ ಭಾವನೆ ನನ್ನನ್ನು ಕುಟುಕುತ್ತಿದೆ. ಆಕೆಯ ಮಾತನ್ನು ಕೇಳಿಕೊಳ್ಳುವಷ್ಟು ತಾಳ್ಮೆ ಇದ್ದಿದ್ದರೆ ಇಂತಹ ತಪ್ಪು ಸಂಭವಿಸುತ್ತಿರಲಿಲ್ಲವೇನೋ.

ಪುಣೆ — ***ಕೆ.ಎಸ್. ಆನಂದರಾಮ್***

ಹೊಟ್ಟೆ ಪಾಡಿಗಾಗಿ

ನಾನು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ಇದ್ದಾಗ ನಡೆದ ಒಂದು ಘಟನೆ. ಆ ದಿವಸ ಅಲ್ಲಿ ವಾರದ ಸಂತೆ ನಡೆದಿತ್ತು. ನಾನು ತರಕಾರಿ ತರಲೆಂದು ಸಂತೆಗೆ ಹೋಗಿದ್ದೆ. ಒಂದು ಕಡೆ ಜನರ ಗುಂಪೊಂದು ಕಾಣಿಸಿತು. ನಾನು ಕುತೂಹಲದಿಂದ ನೋಡಲು ಹೋದೆ. ಹಾವಾಡಿಗನೊಬ್ಬ ಪುಂಗಿ ಬಾರಿಸುತ್ತಾ ಹಾವಾಡಿಸುತ್ತಿದ್ದ. ನಾಗರ ಹಾವೊಂದು ತನ್ನ ಹೆಡೆ ಬಿಚ್ಚಿ ಪುಂಗಿಯ ನಾದಕ್ಕೆ ನರ್ತಿಸುತ್ತಿತ್ತು.

ಹೀಗೆ ತುಂಬಾ ಹೊತ್ತು ಆಟವಾಡಿಸಿ ಆಟವು ಕೊನೆಯ ಘಟ್ಟಕ್ಕೆ ತಲುಪಿದಾಗ ಹಾವಾಡಿಗ ತಟ್ಟೆಯೊಂದನ್ನು ಹಿಡಿದುಕೊಂಡು ಹಣಕ್ಕಾಗಿ ಪ್ರೇಕ್ಷಕರ ಎದುರು ಬಂದ. ತಟ್ಟೆಯನ್ನು ನೋಡಿದಾಕ್ಷಣ ಪ್ರೇಕ್ಷಕರಲ್ಲಿ ಕೆಲವರು ತಮ್ಮ ಸ್ಥಳ ಖಾಲಿ ಮಾಡುವ ಹವಣಿಕೆಯಲ್ಲಿದ್ದರು. ಇದನ್ನು ಗಮನಿಸಿದ ಹಾವಾಡಿಗ ಗಡಸು ಧ್ವನಿಯಲ್ಲಿ ಹೇಳಿದ 'ಎಲ್ಲರೂ ಒಂದೊಂದು ರೂಪಾಯಿ ತಟ್ಟೆಯಲ್ಲಿ ಹಾಕಿ. ಯಾರಾದರೂ ಒಂದು ಹೆಜ್ಜೆ ಹಿಂದೆ ಇಟ್ಟರೆ ಸ್ಥಿತಿ ಗಂಭೀರವಾದೀತು.' ಎನ್ನುತ್ತಾ ಮಾನವನ ತಲೆಬುರುಡೆಯೊಂದನ್ನು ಕೈಯಲ್ಲಿ ಹಿಡಿದು ಕೊಂಡು 'ಜೈ ಭಜ್ರಂಗಿ ಭವ' ಎನ್ನುತ್ತಾ ನೆಲದಲ್ಲಿ ಕವಚಿ

ಹಾಕಿದ. ಇದ್ದಕ್ಕಿದ್ದಂತೆ ಪ್ರೇಕ್ಷಕರ ಎದುರು ಸಾಲಿನಲ್ಲಿ ಕುಳಿತಿದ್ದ ಬಾಲಕರ ಪೈಕಿ ಒಬ್ಬ ಬಾಲಕ ತನ್ನ ಹೊಟ್ಟೆಯನ್ನು ತನ್ನ ಎರಡು ಕೈಯಲ್ಲಿ ಹಿಡಿದುಕೊಂಡು 'ಅಯ್ಯೋ ಸತ್ತೆ' ಎಂದು ಚೀರುತ್ತಾ ನೆಲದಲ್ಲಿ ಬಿದ್ದು ಹೊರಳಾಡ ತೊಡಗಿದ. ಬಾಯಿಯಿಂದ ರಕ್ತ ಕಾರುತ್ತಿತ್ತು. ದೃಶ್ಯ ಬಹಳ ಭೀಕರವಾಗಿತ್ತು. ಪ್ರೇಕ್ಷಕರೆಲ್ಲರೂ ಒಂದೊಂದು ರೂಪಾಯಿ ತಟ್ಟೆಯಲ್ಲಿ ಹಾಕುತ್ತಾ ಹುಡುಗನನ್ನು ಬಚಾವ್ ಮಾಡು ವಂತೆ ಹಾವಾಡಿಗನಲ್ಲಿ ಅಂಗಲಾಚುತ್ತಿದ್ದರು. ನನಗೂ ಹೆದರಿಕೆಯಾಗಿ ಯಾಂತ್ರಿಕವಾಗಿ ಕೈ ಜೇಬಿಗೆ ಹೋಗಿ ಒಂದು ರೂಪಾಯಿಗಾಗಿ ತಡ ಕಾಡಿತು.

ತಟ್ಟೆ ಹಣದಿಂದ ತುಂಬಿದ ಕೂಡಲೇ ಹಾವಾ ಡಿಗ ಏನೋ ಮಂತ್ರ ಪಠಿಸುತ್ತಾ ಹುಡುಗನನ್ನು ಎಬ್ಬಿಸಿದ. ಎಲ್ಲರೂ ನಿಟ್ಟುಸಿರು ಬಿಟ್ಟರು. ಪ್ರೇಕ್ಷಕರೆಲ್ಲರೂ ಹೋದ ಮೇಲೆ ಹಾವಾಡಿಗ ತನ್ನ ಗಂಟು ಮೂಟೆ ಕಟ್ಟುತ್ತಿದ್ದ. ನಾನು ಕುತೂ ಹಲದಿಂದ ಅವನ ಹತ್ತಿರಕ್ಕೆ ಹೋಗಿ ನೋಡಿ ದಾಗ, ನೆಲದ ಮೇಲೆ ರಕ್ತ ಕಾರುತ್ತಿದ್ದ ಆ ಹುಡುಗ ಹಾವಾಡಿಗನ ಬಳಿಯಲ್ಲಿದ್ದ. ಆತ ಬೇರೆ ಯಾರೂ ಆಗಿರದೆ ಹಾವಾಡಿಗನ ಮಗನೇ ಆಗಿದ್ದು ಕೃತ್ರಿಮ ರಕ್ತ ಕಾರಿದ್ದ. ಹೊಟ್ಟೆ ಪಾಡಿ ಗಾಗಿ ಹಾವಾಡಿಗ ಹೂಡಿದ ನಾಟಕಕ್ಕೆ ನಾನು ತಲೆ ದೂಗಿದೆ.

ಅಬ್ದುಲ್ ಕಾದರ್ ಕುಪ್ಪೆಪದವು.

ನಡುರಸ್ತೆಯಲ್ಲಿ ಎದುರಾದ ಮಾನವೀಯತೆ

ನಾನು ಮತ್ತು ನನ್ನ ಸ್ನೇಹಿತ ಜೊತೆಯಾಗಿ ಮೋಟಾರ್ ಬೈಕ್ ಮೇಲೆ ನಮ್ಮ ಊರಿನಿಂದ ನಿಡಗುಂದಿಗೆ ಹೋಗುತ್ತಿದ್ದೆವು. ಇಬ್ಬರೂ ಆದಷ್ಟು ಬೇಗ ಊರು ಸೇರುವ ಆತುರದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ವೇಗವಾಗಿ ಹೋಗು ತ್ತಿದ್ದೆವು. ಅರ್ಧ ದಾರಿಯಲ್ಲೇ ಬೈಕಿನ ಹಿಂದಿನ ಟೈರು ಪಂಕ್ಚರ್ ಆಯಿತು. ಅಕ್ಕಪಕ್ಕ ಯಾವ ಊರು ಇದ್ದಿದ್ದಿಲ್ಲ, ರಾತ್ರಿ ಬೇರೆ ಆಗುತ್ತಿತ್ತು. ಗೆಳೆಯ ಇಲ್ಲಿ ಡಕಾಯತಿ ಆಗುತ್ತದೆ ಎಂದು ಹೆದರಿಸಿದ. ಹಾಗೆ ಬೈಕ್ ತಳ್ಳುತ್ತ ಸ್ವಲ್ಪ ದೂರ ನಡೆದುಕೊಂಡು ಹೋದೆವು. ಕಾಲು ಬೇರೆ ನೋಯಲಿಕ್ಕೆ ಹತ್ತಿತ್ತು, ಎಷ್ಟು ಉಲ್ಲಾಸದಿಂದ ಹೊರಟದ್ದೆವೋ, ಅಷ್ಟೇ ವೇಗದಲ್ಲಿ ನಿರು ತ್ಸಾಹ, ಹಸಿವು, ವ್ಯಥೆ, ಭಯ ಎಲ್ಲವೂ ದಾಳಿ ಯಿಟ್ಟವು. ಇನ್ನೇನು ಮಾಡುವುದು ದೇವರೆ ಎಂದು ತಲೆಗೆ ಕೈಯಿಟ್ಟು ನಿಂತೆವು. ಅಷ್ಟರಲ್ಲಿ ನಮ್ಮೆದುರಿಗೆ ತಲೆಯ ಮೇಲೆ ಮೇವನ್ನು ಹೊತ್ತುಕೊಂಡು ಒಬ್ಬ ಮುದುಕ ಬರುತ್ತಿದ್ದ. ಅವನನ್ನು ಇಲ್ಲಿ ಯಾವುದಾದರೂ ಊರು ಸಿಗು ವುದೇನೋ ಎಂದು ಕೇಳಿದೆವು ಅವನು, "ಇಲ್ಲಿ ಎಪ್ಪಾ, ಊರು ದೂರ ಅದಾವರಿ, ಅಲ್ಲಿ ತನಕಾ ನೀವು ನಡೆಯೋದಿಲ್ಲ, ರಾತ್ರಿ ಬೇರೆ ಆಗೇತ್ರಿ. ಇಲ್ಲೆ ಸನಿಯದಾಗ ನನ್ನ ಮನೆ ಐತ್ರಿ. ಅಲ್ಲೆ ಇದ್ದು ಬೆಳಗ್ಗೆ ಹೋಗುವಂತ್ರಿ" ಎಂದ. ನಮಗೆ ಭಯವಾದರೂ ಸಂಕಟದಲ್ಲಿ ವೆಂಕಟರಮಣ ಎಂದು ಅವನ ಹಿಂದೆ ನಡೆದೆವು. ನೀರು ಕೊಟ್ಟು ಕುಡಿಯಲು ದೊಡ್ಡ ಲೋಟದಲ್ಲಿ ಹಾಲು ಕೊಟ್ಟ. ತನ್ನ ಮನೆಯವರನ್ನೂ ಪರಿಚಯ ಮಾಡಿಸಿದ. ಒಬ್ಬ ಮಗ, ಸೊಸೆ ಇಬ್ಬರು ಮೊಮ್ಮಕ್ಕಳು. ಎಲ್ಲರೂ ನಮ್ಮನ್ನು ಆದರ ದಿಂದ ಸತ್ಕರಿಸಿದರು. ಮತ್ತೆ ಅರ್ಧ ಗಂಟೆಯಲ್ಲಿ ಊಟಕ್ಕೆ ಎಬ್ಬಿಸಿದರು. ಮುಂಜಾನೆ ಎದ್ದು ಚಾ ಕುಡಿದು ಹೊರಡಲು ಅಣಿಯಾದಾಗ ನನಗೆ ಅಲ್ಲಿಂದ ಕಾಲು ಕೀಳಲು ಆಗಲೆ ಇಲ್ಲ. ಅವರ ಸೌಜನ್ಯಪೂರಿತ ನೋಟ, ಮಾನವೀಯತೆ ಯನ್ನು ನೋಡಿ ದ್ವೇಷ, ಅಸೂಯೆ, ಜಾತೀಯ ತೆಯಿಂದ ಎಷ್ಟೋ ದೂರ ಇದ್ದ ಅವರೇ ಶ್ರೇಷ್ಠರು ಎನ್ನಿಸಿತು. ಈ ಘಟನೆ ನಡೆದು ಒಂದು ವರ್ಷ ಕಳೆದರೂ ಅದು ಇನ್ನೂ ನನ್ನ ಮನಸ್ಸಲ್ಲಿ ಅಚ್ಚಳಿಯದೆ ಉಳಿದಿದೆ.

ರಬಕವಿ **ಸುರೇಶ.ಬ.ಸೋನಾರ**

ಒಂದು ಪುಟ್ಟ ಕಥೆ

ವೆರಿ ಸಿಂಪಲ್

ತೆಲುಗು ಮೂಲ: ಮಲ್ಲಾದಿ ವೆಂಕಟಕೃಷ್ಣ ಮೂರ್ತಿ
ಕನ್ನಡಕ್ಕೆ: ರಾಮಣ್ಣ ಅರ್ಚೆಟ್ಟೆ

ಡೈವೋರ್ಸ್ ಕೇಸಿನಲ್ಲಿ ಕೋರ್ಟಿಗೆ ಹೋಗಿ, ಕಟಕಟೆ ಹತ್ತಿ ತನ್ನ ಗಂಡನಿಂದ ತನಗೆ ವಿಚ್ಛೇದನ ಬೇಕು ಎಂದು ಹೇಳಿಕೊಳ್ಳುವುದು ಹೆಂಡತಿ ಎನ್ನುವ ಹುಡುಗಿಗೆ ಜೀವನದಲ್ಲುಂಟಾಗುವ ದೌರ್ಭಾಗ್ಯ ಸ್ಥಿತಿಯಲ್ಲೊಂದು. ಅದರಲ್ಲಿ ಅವರ ಮದುವೆ ಪ್ರೇಮ ವಿವಾಹವಾದರೆ ಇನ್ನೂ ದಾರುಣ ಸ್ಥಿತಿ. ನಾಲ್ಕು ವರ್ಷ ಸಂಸಾರ ಮಾಡಿದ ಹೆಣ್ಣಾದರೆ ಅವಳ ಪರಿಸ್ಥಿತಿ ಇನ್ನೂ ಗಂಭೀರ.

ಅಂಥಾ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸುವ ಸಾಮರ್ಥ್ಯ ತನಗಿದೆಯೆಂದು ಅರ್ಪಿತ ಕೋರ್ಟ್ ಹಾಲ್‌ನೊಳಗೆ ಹೋಗುವ ಮುಂಚೆ ಯೋಚಿಸಿರಲಿಲ್ಲ, ಕೋರ್ಟ್ ಹಾಲಿನಲ್ಲಿ ಪ್ರತಿವಾದಿಗೆ ಉಂಟಾಗುವ ದುಗುಡ ಅರ್ಪಿತಳಿಗೆ ಎಳ್ಳಷ್ಟೂ ಉಂಟಾಗಲಿಲ್ಲ. ಮೇಘಾವೃತವಾದ ಆಕಾಶದಲ್ಲಿ ಹೊಳೆಯುವ ಮಿಂಚಿನಂತೆ ಅರ್ಪಿತ ರುದ್ಧಕಂಠದಿಂದ ವೇಗವಾಗಿ ಹೇಳತೊಡಗಿದಳು.

"ಆತ ಸ್ವಂತದ್ರೋಹಿಯೆಂದೇ ಹೇಳಬಹುದು. ಎಲ್ಲಕ್ಕಿಂತ ಹೆಚ್ಚು ಸಂಬಳ ಬರುತ್ತದೆ. ಮೊದಲು ಪ್ರೀತಿಸಿದೆ. ಕೊನೆಗೆ ಮದುವೆ ಆಯಿತು. ಅವರಿಗೆ ಕೂಡಾ ನಾನೆಂದ್ರೆ ತುಂಬಾ ಇಷ್ಟ. ತುಂಬಾ ವಿಷಯಗಳಲ್ಲಿ ಅವರು ನನ್ನ ಮೇಲೆ ಆಧಾರಪಡೋದು ಮುಖ್ಯವಾಗಿ ನನ್ನ ಮೇಲೆ ಅವರಿಗಿರುವ ಪ್ರೀತಿಯನ್ನು ಅಧಿಕಗೊಳಿಸಿತು. ಸ್ನಾನ ಮಾಡುವಾಗ ಬಗ್ಗಿ ಪಾದಗಳನ್ನು ಉಜ್ಜಿಕೊಳ್ಳುವುದು ಕೂಡ ಅವರಿಗೆ ಗೊತ್ತಿಲ್ಲ. ಆ ಅಭ್ಯಾಸ ಕೂಡಾ ನನ್ನ ಮುಖಾಂತರವಾಯಿತು. ಅವರಿಗೆ ನಾನಂದ್ರೆ ತುಂಬಾ ಪ್ರೀತಿ! ಪ್ರತಿ ತಿಂಗಳು ಸಂಬಳದ ಜೊತೆಗೆ ಸ್ವೀಟ್ ಪಾಕೆಟ್ ತರುತ್ತಾರೆ. ಸಂಬಳವನ್ನೆಲ್ಲಾ ನನ್ನ ಕೈಗೆ ಕೊಡುತ್ತಾರೆ. ಎಷ್ಟು ಉಳಿಯಿತು, ಎಷ್ಟು ಖರ್ಚಾಯಿತು ಎಂದು ಕೇಳುವುದಿಲ್ಲ. ಅಡಿಗೆಯಲ್ಲಿ ಉಪ್ಪು ಹೆಚ್ಚಾಗಿದ್ದು ಕೂಡಾ ತಿಳಿಯುವುದಿಲ್ಲ. ಮರೆತು ಬಿಟ್ಟರೂ ಹಾಗೇ ಊಟ ಮಾಡುತ್ತಾರೆ. ಲಾಂಡ್ರಿಗೆ ಬಟ್ಟೆ ಹಾಕಿದರೆ ನಾನು ನೆನಪು ಮಾಡುವವರೆಗೆ ತರುವುದಿಲ್ಲ. ಮರೆವು ಎಂದು ಕೂಡಾ ಹೇಳೋಕ್ಕಾಗಲ್ಲ. ನನ್ನ ಹುಟ್ಟು ಹಬ್ಬಕ್ಕೆ, ಮದುವೆಯ ದಿನಕ್ಕೆ ಚೆನ್ನಾಗಿ ಜ್ಞಾಪಕ ಇಟ್ಟುಕೊಂಡು ಸೀರೆ ತರುತ್ತಾರೆ. ಯಾವುದಾದರೂ ಸಿನಿಮಾ ಬಿಡುಗಡೆಯಾದರೆ ಮೊದಲ ಆಟಕ್ಕೇ ಟಿಕೆಟ್ಸ್ ಬುಕ್ ಮಾಡುತ್ತಾರೆ, ಆದರೆ ಅವರೊಬ್ಬರು ಮಾತ್ರ ಹೋಗುವುದಿಲ್ಲ. ನನಗೆ ಇಷ್ಟವಿಲ್ಲವೆಂದು ಹೇಳಿದರೆ ತಲೆಯಾಡಿಸಿ

ಟಿಕೆಟ್ಸ್ ಕ್ಯಾನ್ಸಲ್ ಮಾಡುತ್ತಾರೆ. ಪ್ರತಿದಿನ ರಾತ್ರಿ ಅವರೇ ಅಡಿಗೆ ಮಾಡುತ್ತಾರೆ. ಅವರ ಅಡಿಗೆ ರುಚಿ ನೋಡಿದರೆ ಪ್ರತಿದಿನ ಬೇಕೆನ್ನಿಸು ವಷ್ಟು ಅದ್ಭುತವಾಗಿರುತ್ತದೆ. ಜಡೆ ಹಾಕೆಂದರೆ ಆಫೀಸರ್ ನಮ್ಮ ಮನೆಗೆ ಟೀಗೆ ಬಂದರೆ ಅವರ ಎದುರು ಹಾಕಲು ಸಂಕೋಚಪಡುವುದಿಲ್ಲ. ಬಿಕಾಸ್ ಹಿ ರಿಯಲ್ಲೀ ಲವ್ಸ್ ಮಿ ಅಂಡ್ ಹಿ ನೀಡ್ಸ್ ಮಿ. ಮನೆಯಲ್ಲಿ ರೇಡಿಯೋ ಕೆಟ್ಟರೆ ಕತ್ತಲೆಯಲ್ಲಿ ಕೂಡಾ ರಿಪೇರಿ ಮಾಡ್ತಾರೆ. ಬಲ ಗೈಯಿಂದ ಸೈಕಲ್ ಹ್ಯಾಂಡಲ್ ಹಿಡಿದುಕೊಂಡು ಎಡಗೈಯಿಂದ ಇಪ್ಪತ್ತು ಲೀಟರ್ ಸೀಮೆಎಣ್ಣೆ ಡಬ್ಬಿಯನ್ನು ಅನಾಯಾಸವಾಗಿ ತರಬಲ್ಲರು. ಆಫೀಸ್‌ನಿಂದ ಬಂದ ಮೇಲೆ ಒಂದು ಗಂಟೆಯ ವರೆಗೆ ಷಟಲ್ ಕಾಕ್ ಆಡ್ತೇವೆ. ಅವರೇ ನನಗೆ ಚೆಸ್ ಕಲಿಸಿದ್ದು. ಹಿ ಈಜ್ ಎ ಕ್ಲೆವರ್ ಮ್ಯಾನ್. ಅವರು ಆಡುವ ಪದ್ಧತಿ ನೋಡಿದರೆ ಗೊತ್ತಾ ಗುತ್ತೆ, ಐ ಲವ್ ಹಿಮ್ ಸೋ ಮಚ್ .....''

ಅರ್ಪಿತ ಆಯಾಸದಿಂದ ಕೆಲ ಕ್ಷಣ ನಿಂತು ಪುನಃ ಹೇಳತೊಡಗಿದಳು. ಕಣ್ಣಂಚಿನಲ್ಲಿ ನೀರು ಕಾಣಿಸಿಕೊಂಡಿತು.

''ಇಷ್ಟೊಂದು ಒಳ್ಳೆಯ ಗುಣಗಳಿದ್ದರೂ ಅಮೃತದಲ್ಲಿ ವಿಷದ ಬಿಂದುವಿನಂತೆ ಅವರೊಳ ಗಿನ ಅತಿ ಕೆಟ್ಟದಾದ ಒಂದು ಗುಣವನ್ನು ನನ್ನಿಂದ ಭರಿಸಲಾಗುತ್ತಿಲ್ಲ. ತಿಂಗಳಿಗೊಂದು ಮನೆಯನ್ನು ಲಜ್ಜೆಯಿಂದ ಸಾಯುತ್ತಾ ಬದಲಾ ಯಿಸುವುದು ನನ್ನಿಂದಾಗೋಲ್ಲ'' ಕರವಸ್ತ್ರ ದಿಂದ ಕಣ್ಣೊರೆಸಿಕೊಂಡಳು.

''ಯಾವುದು ಆ ಕೆಟ್ಟ ಗುಣ'' ಕುತೂಹಲ ದಿಂದ ಕೇಳುತ್ತಿದ್ದ ನ್ಯಾಯಾಧೀಶರು ಆಸಕ್ತಿ ಯಿಂದ ಅವಳನ್ನು ಕೇಳಿದರು.

''ಅವರಿಗೂ ನನಗೂ ವಿಚ್ಛೇದನ ಕೊಡದೇ ಹೋದರೆ ಈ ಕೋರ್ಟಿನಲ್ಲಿ ನ್ಯಾಯವೇ ಇಲ್ಲಾಂತ ತಿಳ್ಕೊಳ್ತೀನಿ. ಪ್ರತಿದಿನ ಬೆಳಗ್ಗೆ ಆಫೀ ಸಿಗೆ ಹೋಗುವಾಗ ರಸ್ತೆಯ ಮೇಲೆ ನಿಂತು ಕೊಂಡು ಆ ದಿನ ರಾತ್ರಿ ತನಗೆ ಎಷ್ಟು ಸಲ ರತಿಸುಖವನ್ನು ಕೊಡಬೇಕೆನ್ನುವುದರ ಬಗ್ಗೆ ನೆರೆ ಹೊರೆಯವರಿಗೆ ಕೇಳುವ ಹಾಗೆ ಗಟ್ಟಿಯಾಗಿ ಹೇಳಿಹೋಗುತ್ತಾರೆ. ಇದನ್ನು ಕಳೆದ ಒಂದೂ ವರೆ ವರ್ಷದಿಂದ ಮುಂದುವರೆಸಿಕೊಂಡು ಬರು ತ್ತಿದ್ದಾರೆ. ನಾಚಿಕೆ ಅವಮಾನಗಳಿಂದ ಸಾಯ್ತಿ ದ್ದೀನಿ. ಹಾಗೆ ವರ್ತಿಸಬೇಡಿ ಅಂದ್ರೆ ಕೇಳ್ತಾ ಇಲ್ಲ, ದಯವಿಟ್ಟು ನನಗೆ ಡೈವೋರ್ಸ್ ಕೊಡಿ'' ಉಮ್ಮಳಿಸುವ ದುಃಖದೊಂದಿಗೆ ಹೇಳಿ ದಳು.

ಅವಳಿಗೆ ವಿಚ್ಛೇದನ ಸಿಕ್ಕಿತು.

ಸುಮಾರು ಒಂದು ವರ್ಷದ ನಂತರ ಡೈವೋರ್ಸ್ ಪಡೆದ ಅರ್ಪಿತಳ ಗಂಡ ಮಾಜಿ ಪ್ರೇಯಸಿಯಾಗಿದ್ದ ತನ್ನ ಎರಡನೇ ಹೆಂಡತಿಗೆ ಮುದ್ದುಕೊಟ್ಟು ''ನೋಡ್ದಿಯಾ! ನಿನ್ನ ಗೆಳತಿ ಅರ್ಪಿತಳಿಂದ ಡೈವೋರ್ಸ್ ಪಡೆಯೋದು ವೆರಿ ಸಿಂಪಲ್ ಅಂತ ಹೇಳಿದ್ರೆ, ನೀನು ನಂಬಲೇ ಇಲ್ಲ,'' ಎಂದು ಸಂತೋಷದಿಂದ ಹೇಳಿದ. *

ಏಕಾಂತ

ಎಲ್ಲರಲ್ಲೂ ಎಲ್ಲರಂತಿರಬಹುದು. ಒಬ್ಬಂಟಿಗನಾಗಿ ತನ್ನ ಸುಖ ತಾನು ಸವಿಯಬ ಹುದು. ಆದರೆ ಎಲ್ಲರೊಳಗಿದ್ದು ಏಕಾಂತ ಮಾಧುರ್ಯ-ಸ್ವಾತಂತ್ರ್ಯ ಸವಿಯುವುದನ್ನು ಕಲಿಯಬೇಕು.

* * * – ಎಮರ್ಸನ್

ಏಕಾಕಿಯಾಗಿಯೇ ಹೊರಟವನು ಬಹುದೂರ ಸಾಗುತ್ತಾನೆ.

– ಕ್ಲಿಪಿಂಗ್

ಪದಾರ್ಥ ಚಿಂತಾಮಣಿ

-143-

ಪ್ರಾಣಿಗಳು ಮತ್ತು ಮಾನವಾದರ್ಶಗಳು

ಮನುಷ್ಯನೊಡನೆ ಸಂಬಂಧ ಸ್ಥಾಪಿಸಿದ ಪ್ರಾಣಿಗಳಲ್ಲಿ 'ನಾಯಿ' ಮೊಟ್ಟಮೊದಲಿನದಾಗಿರಬೇಕು. ಸುಮಾರು ಹನ್ನೆರಡು ಸಾವಿರ ವರ್ಷಗಳಿಂದ ಅದು ಮನುಷ್ಯಾಶ್ರಯದಲ್ಲಿದೆ. ಗುಹಾವಾಸಿ ಮಾನವನು ಚೆಲ್ಲಿಕೊಟ್ಟ ಎಲುಬು, ಮಾಂಸದ ತುಣುಕುಗಳ ಆಸೆಯಿಂದ ಬಂದು ಕಾಲಾಂತರದಲ್ಲಿ ಪಳಗಿದ ತೋಳನೇ ನಾಯಿಯೆಂದು ಪ್ರಾಣಿಶಾಸ್ತ್ರಗಳು ತರ್ಕಿಸುತ್ತಾರೆ. ಅದರ ಕೃತಜ್ಞತೆ, ಸ್ವಾಮಿಭಕ್ತಿಯ ಪರಾಕಾಷ್ಠೆ ಮೊದಲಾದ ಗುಣಗಳನ್ನು ದೃಷ್ಟಾಂತಿಸುವ ಕಥೆಗಳು ಅಸಂಖ್ಯ. 'ಮನುಷ್ಯನ ಅತ್ಯುತ್ತಮ ಮಿತ್ರ' ಎಂಬ ಉಪಾಧಿಯೂ ಅದಕ್ಕಿದೆ.

ಆದರೂ ಮನುಷ್ಯನ ಭಾಷೆಗಳಲ್ಲಿ ಅದನ್ನು ಮೆಚ್ಚುವುದಕ್ಕಿಂತಲೂ ತುಚ್ಛೀಕರಿಸುವ ನುಡಿಕಟ್ಟುಗಳು ತುಂಬಾ ಹೆಚ್ಚೆಂಬುದು ಮನುಷ್ಯ ಜಾತಿಯ ಕೃತಘ್ನ ಸ್ವಭಾವಕ್ಕೆ ಹಿಡಿದ ಕನ್ನಡಿಯೆನ್ನಬೇಕೋ ಮತ್ತೇನು ಹೇಳಬೇಕೋ ತಿಳಿಯುವುದಿಲ್ಲ.

ಕನ್ನಡದಲ್ಲೇ ನೋಡಿ. ಹೀನ, ನೀಚ ವರ್ಗಕ್ಕೆ ಸೇರಿಸಬಹುದಾದ್ದಕ್ಕೆ ಹಿಂದೆ 'ನಾಯಿ' ಎಂಬ ಉಪಾಧಿ ಸೇರಿಸುತ್ತೇವೆ. ನಿದರ್ಶನಕ್ಕೆ 'ನಾಯಿ-ತುಳಸಿ' ಎಂದರೆ ತುಳಸಿಯಂತೆಯೇ ಕಡುವಾಸನೆಯ, ಆದರೆ ಕಾಡುಜಾತಿಯ ಒಂದು ಸಸ್ಯ (ಮಲೆಜ್ವರಕ್ಕೆ ಒಳ್ಳೆ ಕಷಾಯ ಇದರಿಂದ ತಯಾರಿಸಬಹುದೆಂದು ಹಲ ವರ್ಷ ಹಿಂದೆ ಪ್ರಕಟವಾಗಿತ್ತು.) ಹಾಗೆಯೆ ನಾಯಿ-ನೇರಳೆ ಇದೆ. ಇಂಗ್ಲಿಷಿನಲ್ಲಿಯೂ dog berry ಇದೆ Dog violet ಕೂಡ ಇದೆ-ಒಂದು ಕೀಳು ಹೂವಿನ ಹೆಸರು ಅದು. ನಾಯಿ ಕಗ್ಗಲಿ, ನಾಯುತ್ತಿ, ನಾಯಹತ್ತಿ, ನಾಯಿಕಳ್ಳಿ, ನಾಯಿ ಬೆಂಡೆ - ಎಷ್ಟು ಬೇಕು ನಿಮಗೆ? 'ನಾಯಿ-ಡಿಂಗರ' ಎಂದರೆ ತೀರ ನೀಚ ಮನುಷ್ಯ 'ನಾಯಿಗಣ್ಣು' ಎಂದರೆ ನಿರ್ಲಜ್ಜ ಕಾಮುಕ ದೃಷ್ಟಿ 'ನಾಯಿ ಜನ್ಮ' ಎಂದರೆ ಹೀನ ಜಾತಿ. 'ನಾಯಿ ಸಂತೆ' ಎಂದರೆ ತೀರ ಜಾಸ್ತಿ ಬೆಳೆ ಬಂದು ಪೇಟೆಯಲ್ಲಿ ಅತಿ ಅಗ್ಗವಾಗಿ ಯಾವುದೇ ಪದಾರ್ಥ ಸಿಗುವಿಕೆ (ಹೋಲಿ-ಅಗ್ಗ ಎಂಬ ಪದವೂ ಇದಕ್ಕುಂಟು). ಮರಿ ಇಡುವುದರಲ್ಲಿ ನಾಯಿಗಿಂತಲೂ ಹೇ-ಹಂದಿ ಹೆಚ್ಚು; ಆದರೂ 'ನಾಯಿ-ಸಂತೆ' ಎನ್ನುತ್ತೇವಲ್ಲದೆ ಹಂದಿ-ಸಂತೆಯೆಂದಲ್ಲ! 'ನಾಯಿ ಬದುಕು' ಕನ್ನಡದಲ್ಲಿದೆ ಮಾತ್ರವಲ್ಲದೆ ಇಂಗ್ಲಿಷಿನಲ್ಲಿಯೂ ಅದೇ ಅರ್ಥದ a dog's life ಇದೆ. ಸಾಲದ್ದಕ್ಕೆ ಅಲ್ಲಿ dying a dog's death (ನಾಯಿಯ ಸಾವು) ಕೂಡ ಇದೆ. ನಮ್ಮಲ್ಲಿಯಂತೆ ನಾಯಿ ಅಲ್ಲಿ ಮೈಲಿಗೆಯಲ್ಲವಲ್ಲ ಆದರೂ ಆ ಭಾಷೆಯಲ್ಲಿ ಅಶುದ್ಧ ಲ್ಯಾಟಿನ್ ಭಾಷೆಗೆ dog Latin ಎಂದು ಹೆಸರು ಕೊಟ್ಟಿದ್ದಾರೆ.

ಕರಾರಿಲ್ಲದ ಉಪಕಾರ ಮಾಡುತ್ತಿರುವುದಕ್ಕೆ ನಾಯಿಗೆ ಇದು ಪ್ರತಿಫಲವೆ?

★

ಪ್ರಾಚೀನ ಕಾಲದಿಂದ ಮನುಷ್ಯ ತನಗೆ ಹೆಸರಿಟ್ಟುಕೊಳ್ಳುವಲ್ಲಿ ಪ್ರಾಣಿಗಳ ಹೆಸರುಗಳನ್ನು ಪ್ರಯೋಗಿಸಿದ್ದಾನೆ. ಅವು ಅವನ ಅಥವಾ ಆ ಜನ ಪಂಗಡದ ಜೀವನಾದರ್ಶಗಳನ್ನು ಪ್ರತಿಬಿಂಬಿಸುತ್ತವೆಂದು ನಾವು ಭಾವಿಸಬಹುದು. ನಾಯಿಯ ಬಗ್ಗೆ ಮನುಷ್ಯನ (ದುರ್-) ಅಭಿಪ್ರಾಯಗಳನ್ನು ನೋಡಿದರೆ ಯಾರಿಗಾದರೂ ನಾಯಿಯ ಹೆಸರು ಇದ್ದೀತೇ ಎಂದು ಸಂಶಯವಾಗುತ್ತದೆ. ಆದರೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ

ಕೆಳಜಾತಿಯ ಒಂದು ಪಾತ್ರಕ್ಕೆ 'ನಾಯಿ' ಎಂಬ ಹೆಸರಿದ್ದುದು ನೋಡಿ ನನಗೆ ಜುಗುಪ್ಸೆನಿಸಿತು. ಕೀಳು ಜಾತಿಯರಾದ್ದರಿಂದ ತಮ್ಮ ಅವಸ್ಥೆಯನ್ನು ಸ್ವೀಕರಿಸಿದ ಅವನ ಹೆತ್ತವರು ಹಾಗೆ ಹೆಸರಿಟ್ಟಿರಬಹುದೆನ್ನಿ. ಆದರೆ ನಮ್ಮ ಪ್ರಾಚೀನ ಪುರಾಣ ಸಾಹಿತ್ಯ ನೋಡಿದರೆ ನಾಯಿಗೆ ಆ ಜನ ಅಷ್ಟು ಕೀಳು ಸ್ಥಾನ ಇತ್ತಿದ್ದರೇ ಎಂಬ ಸಂಶಯ ಬರುತ್ತದೆ. ಚ್ಯವನ ಋಷಿಯ ಮೊಮ್ಮಗನ ಹೆಸರು 'ಶುನಕ' (=ನಾಯಿ) ಎಂದಿತ್ತು; ಅವನ ಮಗ 'ಶೌನಕ'. ಇಬ್ಬರೂ ಮಹರ್ಷಿಗಳೇ. ಅದಕ್ಕಿಂತ ಹಿಂದೆ ಹೋದರೆ ವೇದದ ಮಂತ್ರ ದ್ರಷ್ಟಾರ ಋಷಿಯಾದ ದೇವರಾಜನ ಮೂಲ ಹೆಸರು 'ಶುನಃಶೇಪ'; ಹಾಗೆಂದರೆ ನಾಯಿಬಾಲ ಅಥವಾ ನಾಯಿಯ ಶಿಶ್ನ. ಇದು ನಮ್ಮ ಕೀಳು, ಜಾತಿಯವರಿಗೆ ಅಥವಾ ನಮ್ಮ ಪ್ರಾಚೀನರಿಗೆ ಮಾತ್ರ ಮೀಸಲಾದದ್ದಲ್ಲ; 'ಕಲೀಬ್' (Calib) ಎಂಬ ಹೀಬ್ರೂ ಹೆಸರಿನ ಅರ್ಥ ನಾಯಿ ಅಥವಾ ಧೈರ್ಯಶಾಲಿ ಎಂದು.

★

ಪ್ರಾಣಿಗಳ ಬಗ್ಗೆ ಪ್ರಾಚೀನರ ಭಾವನೆಗಳು ಈಗ ನೋಡಿದರೆ ಸೋಜಿಗ ಉಂಟು ಮಾಡಬಹುದು. ತೋಳನ ಬಗ್ಗೆ ನಮಗಿಂದು ಒಂದು ಬಗೆಯ ಭಯಮಿಶ್ರಿತ ದ್ವೇಷವಿದೆ. ಹೆಂಗಸರನ್ನು ಮರುಳು ಮಾಡಿ ಭೋಗಿಸಿ ಕೈ ಬಿಡುವವರನ್ನು wolf (ತೋಳ) ಎಂದು ಇಂಗ್ಲೀಷಿನಲ್ಲಿ ಕರೆಯುವುದುಂಟು. ಆದರೆ ಯುರೋಪಿನ ಹಲವಾರು ಭಾಷೆಗಳಲ್ಲಿ ತೋಳನೆಂಬರ್ಥದ ಹೆಸರುಗಳು ಬಹಳ ಕಾಲದಿಂದ ಇವೆ. ಉದಾಹರಣೆಗೆ ಹಿಟ್ಲರನ ಹೆಸರಿನೊಡನೆ ಸಂಬಂಧವಾದ 'ಅಡಾಲ್ಫ್' (Adolph) ಎಂಬ ಪದದ ಅರ್ಥ ತೋಳ. ಜರ್ಮಾನಿಕ್ ಮೂಲಕ ಈ ಪದಕ್ಕೆ ಸಂವಾದಿ ಹೆಸರುಗಳು ಫ್ರೆಂಚ್ ಇಟಾಲಿಯನ್, ಸ್ಪಾನಿಷ್, ಪ್ರಾಚೀನ ಇಂಗ್ಲಿಷ್‌ಗಳಲ್ಲಿ ಮನುಷ್ಯರ ಹೆಸರುಗಳಾಗಿ ಸಿಗುತ್ತವೆ. ಫ್ರೆಂಚ್, ಇಟಾಲಿಯನ್ ಮತ್ತು ಬೇರೆ ಕೆಲವು ಯುರೋಪಿಯನ್ ಭಾಷೆಗಳಲ್ಲಿ ಹೊಳೆಯುವ ತೋಳ ಎಂಬರ್ಥದ 'ಬರ್ಡೋಲ್ಫ್' (Bardoldph) ಎಂಬ ಹೆಸರುಗಳಿವೆ. ನಮ್ಮವರೂ ಇದರಲ್ಲಿ ಬೇರೆಯಾಗಿದ್ದಿಲ್ಲ. 'ವೃಕ' ಎಂದರೆ ಸಂಸ್ಕೃತದಲ್ಲಿ ತೋಳ. ಆ ಹೆಸರಿನ ಪಾಂಚಾಲ ರಾಜಪುತ್ರನೊಬ್ಬ ಮಹಾಭಾರತದಲ್ಲಿ ಕಾಣಸಿಗುತ್ತಾನೆ. 'ವೃಕದೇವಿ' ಎಂಬುದು ವಸುದೇವನ ಹೆಂಡಂದಿರಲ್ಲೊಬ್ಬಳ ಹೆಸರು. ಭೀಮನಿಗಂತೂ 'ವೃಕೋದರ' (=ತೋಳನ ಹೊಟ್ಟೆ) ಎಂಬುದು ಅಪರನಾಮ. ಪ್ರಾಚೀನರು ತೋಳನನ್ನು ಧೈರ್ಯಶೌರ್ಯಗಳಿಗೆ ಆದರ್ಶವಾಗಿ ಗ್ರಹಿಸಿದ್ದರೆಂದು ಇದರಿಂದ ಪ್ರತೀತವಾಗುತ್ತದೆ.

ಕಾಡುಹಂದಿಯೆಂಬರ್ಥದ 'ವರಾಹ' ನಮ್ಮಲ್ಲಿ ವಿಷ್ಣುವಿನ ಅವತಾರವೆಂಬುದರಿಂದ ಕೆಲವರ ಹೆಸರಾಗಿದೆ. ಆದರೆ ಇತರ ಭಾಷೆಗಳಲ್ಲಿ 'ವರಾಹ'ಕ್ಕೆ ಮನುಷ್ಯರ ಹೆಸರಿನ ಸ್ಥಾನ ಸಿಕ್ಕಿದೆ. 'ಅವರಿಲ' (Averil), 'ಎವರಾರ್ಡ್' (Everard) ಎಂಬ ಹೆಸರುಗಳು ಕಾಡುಹಂದಿಯೆಂಬರ್ಥ ಕೊಡುವವು.

ಕರಡಿ ಏನು ಸುಂದರ ಪ್ರಾಣಿ? ಆದರೆ ಅದರ ಹೆಸರೂ ನಮ್ಮಲ್ಲಿಯೂ ಯುರೋಪಿನಲ್ಲಿಯೂ ಜನಪ್ರಿಯವಾಗಿತ್ತೆಂದು ಹೆಸರುಗಳಿಂದ ಗೊತ್ತಾಗುತ್ತದೆ. 'ಋಕ್ಷ' (ಕರಡಿ) ಎಂಬ ಹೆಸರಿನ ಇಬ್ಬಿಬ್ಬರು ರಾಜರು ಮಹಾಭಾರತದಲ್ಲಿ ಬರುತ್ತಾರೆ. ಯುರೋಪಿನ ಅನೇಕ ಭಾಷಾ ಪ್ರದೇಶಗಳಲ್ಲಿರುವ Bernard (=ಬಲಿಷ್ಠ ಕರಡಿ), Arthur (ಕರಡಿ ಅಥವಾ ಶಿಲೆ) ಎಂಬ ಹೆಸರುಗಳನ್ನು ಉಲ್ಲೇಖಿಸಬಹುದು. ಹೆಂಗಸರಿಗೆ ಕೂಡ ಪುಟ್ಟ ಕರಡಿ (ಹೆಣ್ಣು) ಎಂಬರ್ಥದ ಉರ್ಸುಲಾ (Ursula) ಎಂಬ ಹೆಸರಿತ್ತು. ಕೃಷ್ಣನ ಹೆಂಡತಿಯೊಬ್ಬಳು ಜಾಂಬವತಿಯಲ್ಲವೆ?

ಹುಲಿ, ಸಿಂಹ ಮೊದಲಾದವುಗಳ ಹೆಸರು ನಮ್ಮಲ್ಲಿ ಮನುಷ್ಯರಿಗೆ ಸಂದದ್ದುಂಟು. ಅವು ಶೌರ್ಯದ ಪ್ರತೀಕಗಳೆಂದು ಸ್ವೀಕೃತವಾಗಿಯೆ ಇವೆಯಲ್ಲ. ಯುರೋಪಿನಲ್ಲಿ 'ಲಿಯೊನಾರ್ಡ್' Leonard (ಗಡುಸು ಸಿಂಹ), ಲಿಯೊನೆಲ್ (Lionel) ಪುಟ್ಟ ಸಿಂಹ ಇತ್ಯಾದಿ ಹೆಸರುಗಳಿದ್ದರೆ ನಮ್ಮಲ್ಲಿ ಪುಲಿಕೇಶಿಗಳಿದ್ದಿಲ್ಲವೆ?

ಆದರೆ ಹಾವುಗಳೊ? ನಮ್ಮಲ್ಲಿ 'ನಾಗಮ್ಮ'ಗಳಿದ್ದಾರೆ (ಸರ್ಪಿಣಿಯರಿಲ್ಲ-ಅನ್ನಿ). ಯುರೋಪಿನಲ್ಲಿ 'ಬೆಲಿಂಡಾ' (Belinda) ಎಂಬ ಸ್ತ್ರೀನಾಮದ ಉತ್ತರ ಪದಕ್ಕೆ ಹಾವೆಂದೇ ಅರ್ಥ. ಬೈಬಲ್ಲಿನಲ್ಲಿ ಹಾವು ಪಾಪ ಪ್ರಚೋದಕ ಜೀವಿ. ಅದು ಮೊದಲು ಪಾಪ ಪ್ರಚೋದನೆ ಮಾಡುವುದು ಹೆಣ್ಣನಲ್ಲಿ. ಅದ್ದರಿಂದ ಹೆಣ್ಣಿಗೆ ಹಾವಿನ ಹೆಸರಿಡಲು ಏನಡ್ಡಿ?

ಪಾವೆಂ.

ನೀವೂ ಮಾಡಿ ಟಾನಿಕ್ ಸ್ನಾನ

● ಡಿ. ವಿ. ಬಡಿಗೇರ

'ಟಾನಿಕ್ ಸ್ನಾನ' ಎಂದ ಕೂಡಲೆ ಅಚ್ಚರಿಪಡಬೇಕಾಗಿಲ್ಲ. ದೇಹದ ಅಶಕ್ತಿ ನೀಗಲು ಟಾನಿಕ್ ಗುಳಿಗೆ ಸೇವನೆ ಹೇಗೆ ಅವಶ್ಯವೊ ಹಾಗೆ ಚರ್ಮದ ಸ್ವಾಸ್ಥ್ಯಕ್ಕೆ ಟಾನಿಕ್ ಸ್ನಾನ ಬೇಕೇಬೇಕು. ಸ್ನಾನದ ನೀರಿನಲ್ಲಿ ಗುಲಾಬ, ಅತ್ತರ, ಗಂಧ, ವನಸ್ಪತಿ ಇತ್ಯಾದಿ ಔಷಧಿಯುಕ್ತ ದ್ರವ್ಯಗಳನ್ನು ಬೆರಸಿ ಸ್ನಾನ ಮಾಡುವುದಕ್ಕೆ 'ಟಾನಿಕ್ ಸ್ನಾನ' ಎನ್ನುವರು.


ದೇಹದ ನಖಶಿಖಾಂತ ಮೇಲುಹೊದಿಕೆಯಾದ ಚರ್ಮಕ್ಕೆ ಭಾರತೀಯ ವೈದ್ಯಶಾಸ್ತ್ರದಲ್ಲಿ ತ್ವಚೆ ಅಥವಾ ತ್ವಕ್ ಎನ್ನುವರು. ದೇಹದ ಒಳ ಅಂಗಗಳನ್ನು ಇದು ರಕ್ಷಿಸುವುದಲ್ಲದೇ ದೇಹದ ಬಾಹ್ಯ ಸೌಂದರ್ಯ ಇದನ್ನೇ ಅವಲಂಬಿಸಿದೆ. ತ್ವಚೆ ಕೂಡಾ ದೇಹದ ಬಹುಮುಖ್ಯ ಭಾಗವಾಗಿದ್ದು ಇದು ಸದೃಢ ಹಾಗೂ ಆರೋಗ್ಯಪೂರ್ಣವಾದಷ್ಟು ಶರೀರವು ಬಾಹ್ಯಾಘಾತಗಳಿಂದ ರಕ್ಷಿಸಲ್ಪಡುವಲ್ಲಿ ಸಹಾಯಕವಾಗುತ್ತದೆ. ಅಂತೆಯೇ ಚರ್ಮವನ್ನು ದೇಹ ಸೌಂದರ್ಯ ಪ್ರಧಾನ ಅಂಶ (Beauty is only skin deep) ಎನ್ನುವರು. ಚರ್ಮ ಕೇವಲ ಹೊದಿಕೆಯ ಸ್ವರೂಪದ ಪೊರೆಯಾಗಿರದೇ ಭಿನ್ನ ಪದರುಗಳಿಂದ ಕೂಡಿದ ಬೆವರು ಗ್ರಂಥಿ, ವಸಾ ಗ್ರಂಥಿ, ರೋಮಕೂಪ, ಸಂಜ್ಞಾವಹನಾಡಿ ಮುಂತಾದ ಸೂಕ್ಷ್ಮಾಂಶಗಳಿಂದ ಕೂಡಿದ್ದು ಅದು ಶಾರೀರಿಕ ಕ್ರಿಯೆಗಳಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಉದ್ದಳತೆಯಲ್ಲಿ ವ್ಯಕ್ತಿಶಃ ಭಿನ್ನವಾಗಿದ್ದರೂ ವ್ಯಕ್ತಿಯ ದೇಹದ ಒಟ್ಟು ಸರಾಸರಿ ಚರ್ಮದ ತೂಕ ೪ ಕೆ.ಜಿ.ಯಷ್ಟಿರುವುದೆಂದು ಹೇಳುತ್ತಾರೆ. ಹೀಗೆ ವಿವಿಧ ಕಾರಣಗಳಿಂದಾಗಿ ದೇಹದ ಅತ್ಯಂತ ಮಹತ್ವಪೂರ್ಣಭಾಗವೆಂದು ಪರಿಗಣಿಸಲ್ಪಟ್ಟ ತ್ವಚೆಯ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ಅತ್ಯವಶ್ಯ. ಆದರೆ ಇದನ್ನು ದೇಹದ ಮಹತ್ವಪೂರ್ಣ ಅಂಗವೆಂದು ಬಹಳ ಜನ ಭಾವಿಸುವಂತಿಲ್ಲ. ಅಂತೆಯೇ ತ್ವಚೆಯ ಬಗ್ಗೆ ಅನೇಕರು ಉಪೇಕ್ಷಿಸುವುದುಂಟು. ಆದರೆ ದೇಹದ ಬೆಳವಣಿಗೆಗೆ ಹಿತಮಿತ ಆಹಾರ, ಪೋಷಣೆ ಹೇಗೆ ಅಗತ್ಯವೋ ಅದೇ ರೀತಿ ಬಾಹ್ಯ ತ್ವಚೆಯ ಆರೈಕೆಯ ಬಗೆಗೂ ಅಷ್ಟೇ ಕಾಳಜಿ ಅಗತ್ಯ ಎಂಬುದನ್ನು ಮರೆಯಕೂಡದು.

ನಿತ್ಯದ ಸ್ನಾನದೊಂದಿಗೆ ಆಗಾಗ ಟಾನಿಕ್ ಸ್ನಾನ ಮಾಡುವುದರಿಂದ ಚರ್ಮ ಸ್ನಿಗ್ಧ ಹಾಗೂ ಆರೋಗ್ಯಪೂರ್ಣಗೊಂಡು ಶರೀರದ ಸ್ವಾಸ್ಥ್ಯ ಕಾಪಾಡಲು ಸಹಾಯಕ ಆಗುತ್ತದೆ. ಆದರೆ ಇಂದಿನ ಫ್ಯಾಶನ್ ಪ್ರಿಯರು ಚರ್ಮಕ್ಕೆ ಕೇವಲ ಸುಗಂಧ ದ್ರವ್ಯಗಳನ್ನು ಪೂಸಿಕೊಳ್ಳುವರು. ಇದರಿಂದ ದೇಹಕ್ಕಾಗಲಿ, ಚರ್ಮಕ್ಕಾಗಲಿ ಒಂದು ಗುಂಜಿಯಷ್ಟೂ ಲಾಭ ಇಲ್ಲವೆಂಬುದನ್ನು ಮರೆಯಕೂಡದು.

ಹಿಂದೆ ರಾಣಿ-ಮಹಾರಾಣಿಯರು

ಚರ್ಮದ ಕಾಂತಿ, ಆರೋಗ್ಯಕ್ಕಾಗಿ ಅತ್ತರ, ಗುಲಾಬ, ವನಸ್ಪತಿ ಬೆರೆಸಿದ ನೀರಿನಲ್ಲಿ ಸ್ನಾನ ಮಾಡುತ್ತಿದ್ದರೆಂದು ಇತಿಹಾಸದಲ್ಲಿ ಓದಿದ್ದೇವೆ. ಟಾನಿಕ್‌ಯುಕ್ತ ದ್ರವ್ಯಗಳನ್ನು ಸ್ನಾನದ ನೀರಿನಲ್ಲಿ ಬೆರೆಸಿ ಸ್ನಾನ ಮಾಡುವ ಪದ್ಧತಿ ಬಹಳ ಪ್ರಾಚೀನ ಕಾಲದಿಂದಲೇ ರೂಢಿಯಲ್ಲಿತ್ತೆಂದು ತಿಳಿದು ಬರುತ್ತದೆ. ಈಗಲೂ ಹಬ್ಬ ಹರಿದಿನಗಳಲ್ಲಿ ಸ್ನಾನದ ನೀರಿಗೆ ನೀಲಗಿರಿ ಎಲೆ, ಬೇವಿನ ಸೊಪ್ಪು, ಮಾಲಿಂಗನ ಬಳ್ಳಿ ಮುಂತಾದ ವನಸ್ಪತಿಗಳನ್ನು ಬೆರೆಸುವುದನ್ನು ಕಾಣಬಹುದು. ಅಲ್ಲದೇ ಸಮುದ್ರ ಸ್ನಾನದ ಉದ್ದೇಶವೂ ಮೂಲತಃ ಆರೋಗ್ಯದ ಕಾರಣವನ್ನವಲಂಬಿಸಿದೆ. ಇಂಗ್ಲೆಂಡಿನ ಕೆಲವು ರಾಣಿಯರು ಹೆಂಡ, ಹಾಲಿನಲ್ಲಿ ಕೂಡ ಸ್ನಾನ ಮಾಡುತ್ತಿದ್ದರಂತೆ. ನಮ್ಮ ದೇಶದಲ್ಲಿ ಮೊಗಲ್ ರಾಣಿಯರು ಹಾಲಿನಲ್ಲಿ ಸ್ನಾನ ಮಾಡುತ್ತಿದ್ದರೆಂದು ಇತಿಹಾಸದಲ್ಲಿ ಉಲ್ಲೇಖಗಳಿವೆ. ಸ್ನಾನ ಭಾರತದಲ್ಲಿ ಆರೋಗ್ಯ ಸಾಧನವಾಗಿರುವಂತೆ ಧಾರ್ಮಿಕ ಕ್ರಿಯೆ ಕೂಡ ಆಗಿದೆ. ಗ್ರೀಕರು, ರೋಮನ್‌ರು ಬಿಸಿ ನೀರಿನ ಸ್ನಾನವನ್ನು ಆನಂದ, ಮನರಂಜನೆ ಸಲುವಾಗಿ ಮಾಡುತ್ತಿದ್ದರಂತೆ.

ಟಬ್ ಬಾಥ್, ಫುಟ್ ಬಾಥ್, ಸ್ಪೈ ಬಾಥ್ ಇವೆಲ್ಲ ಆಧುನಿಕರ ಶೋಧನೆಗಳೇನಲ್ಲ. ಇವೆಲ್ಲ ನಮ್ಮ ಹಿಂದಿನವರಿಗೂ ತಿಳಿದಿದ್ದವು. ಗ್ರೀಕ್‌ರಲ್ಲಿ ಟಬ್ ಬಾಥ್ ಬಗ್ಗೆ ಉಲ್ಲೇಖ ದೊರೆಯುತ್ತದೆ. ಖ್ಯಾತ ಕವಿ ಹೋಮರ ತನ್ನ ಕಾವ್ಯದಲ್ಲಿ ಬೆಳ್ಳಿಯ ಟಬ್‌ಗಳ ಬಗ್ಗೆ ಉಲ್ಲೇಖಿಸಿದ್ದಾನೆ. ನಮ್ಮ ಆಯುರ್ವೇದ ಶಾಸ್ತ್ರಗಳಲ್ಲಿ ಸಹ ಅನೇಕ ಬಗೆಯ ಸ್ನಾನಗಳ ವಿವರಣೆ ದೊರೆಯುತ್ತದೆ. ಇಂದಿಗೂ ನೀಡಲಾಗುವ ನಿಸರ್ಗ ಚಿಕಿತ್ಸೆಯಲ್ಲಿ ಸ್ನಾನದ ಉಪಚಾರ ಪ್ರಮುಖವಾಗಿದೆ. ಹೀಗೆ ವೈವಿಧ್ಯಮಯ ಸ್ನಾನಗಳು ಧಾರ್ಮಿಕ ಹಾಗೂ ವೈದ್ಯಕೀಯ ದೃಷ್ಟಿಯಿಂದ ಪ್ರಾಚೀನ ಕಾಲ



ತುಕ್ಕು ನಿರೋಧಕ ಎಣ್ಣೆ ಸ್ನಾನ

ದಿಂದಲೂ ಮಹತ್ವ ಪಡೆದಿರುವುದನ್ನು ಮೇಲಿನ ವಿವರಣೆಗಳಿಂದ ಮನಗಾಣಬಹುದಾಗಿದೆ.

ಯಾರಿಗೆ ಸ್ನಾನಕ್ಕೆ ಶುದ್ಧ ನೀರು, ಸಾಕಷ್ಟು ಸಮಯ ಹಾಗೂ ಸೂಕ್ತ ಸ್ಥಳ ಉಂಟೋ ಅವರು ನಿಜಕ್ಕೂ ಭಾಗ್ಯಶಾಲಿಗಳೆಂದು ವೈದ್ಯ ಶಾಸ್ತ್ರದಲ್ಲಿ ಹೇಳಲಾಗಿದೆ. ಈ ರೀತಿ ಟಾನಿಕ್‌ಯುಕ್ತ ಜಲದಿಂದ ಸ್ನಾನ ಮಾಡಲು ಕನಿಷ್ಟ ಒಂದು ಗಂಟೆಯಾದರೂ ಸಮಯ ಬೇಕು. ಆದರೆ ಇಂದಿನ ಗಡಿಬಿಡಿಯುಗದಲ್ಲಿ ಸ್ನಾನಕ್ಕೆ ಇಷ್ಟೊಂದು ಸಮಯ ಒದಗಿಸುವುದು ಕಷ್ಟವಾಗಬಹುದು. ಆದರೂ ತಿಂಗಳಿಗೊಮ್ಮೆ ಇಂಥ ಟಾನಿಕ್ ಸ್ನಾನಕ್ಕಾದರೂ ಸಾಕಷ್ಟು ಸಮಯ ಅನುಕೂಲ ಮಾಡಿಕೊಳ್ಳುವುದು ಒಳಿತು.

ಸ್ನಾನವೆಂದರೆ ಕೇವಲ ನಾಲ್ಕಾರು ತಂಬಿಗೆ ನೀರು ಮೈಮೇಲೆ ಸುರುವಿಕೊಳ್ಳುವುದಲ್ಲ. ಇದನ್ನು ಹುಡುಗಾಟಕ್ಕೆ 'ಕಪ್ಪೆಸ್ನಾನ' ಎಂದು ಕರೆದಿದ್ದಾರೆ. ವಾಸ್ತವವಾಗಿ ಸ್ನಾನವೆಂದರೆ, ಧಾರಾಳವಾಗಿ ನೀರನ್ನು ಮೈಮೇಲೆ ಎರೆಚಿಕೊಳ್ಳುತ್ತ ಪ್ರತಿಯೊಂದು ಅಂಗಾಂಗವನ್ನು

ಉಜ್ಜಿ ತೊಳೆದುಕೊಳ್ಳುವುದು. ಇದರಿಂದ ಚರ್ಮದ ಮೇಲಿನ ರೋಮಕೂಪಗಳು ಶುಭ್ರಗೊಂಡು ತೀವ್ರ ರಕ್ತ ಸಂಚಲನಕ್ಕೆ ಸಹಕಾರಿಯಾಗುವುದು.

ಟಾನಿಕ್ ಸ್ನಾನಕ್ಕೆ ಸಾಧ್ಯವಾದಷ್ಟು ಟಬ್ ಬಳಸುವುದು ಹೆಚ್ಚು ಪ್ರಭಾವಕಾರಿ. ಆದರೆ ಮನೆಯಲ್ಲಿ ಈ ಸೌಲಭ್ಯ ಇಲ್ಲದವರು ನಿತ್ಯ ಬಳಸುವ ಬಕೆಟ್, ಹಂಡೆ, ಡಬರಿಗಳಲ್ಲೇ ನೀರು ಹಾಕಿ ಅದರಲ್ಲಿ ಟಾನಿಕ್ ದ್ರವಣಗಳನ್ನು ಸರಿಯಾಗಿ ಬೆರೆಸಿ ಸ್ನಾನ ಮಾಡಬಹುದು.

ಬೇಸಿಗೆ ಕಾಲದಲ್ಲಿ ನೀರಿಗೆ ಬೇವಿನ ಸೊಪ್ಪು ಸೇರಿಸಿ ಸ್ನಾನ ಮಾಡುವುದು ಸೂಕ್ತ. ಇದರಿಂದ ತ್ವಚೆಗೆ ತಂಪು ದೊರೆತು ದೇಹಕ್ಕೂ ತಂಪು ಸಿಗುವುದು. ಅಲ್ಲದೆ ಇದರಿಂದ ಚರ್ಮರೋಗಗಳಿದ್ದಲ್ಲಿ ವಾಸಿಯಾಗುವವು. ಅದೇ ರೀತಿ ಸ್ನಾನದ ನೀರಿನಲ್ಲಿ ಕಬ್ಬಿನ ರಸ ಬೆರೆಸುವುದರಿಂದ ತ್ವಚೆಯ ಸ್ನಿಗ್ಧತೆ ವೃದ್ಧಿಸುವುದು. ಚಳಿಗಾಲದಲ್ಲಿ ಚರ್ಮ ಒರಟಾಗಿ ವೇದನೆಯುಂಟಾಗುವಷ್ಟು ಚರ್ಮದಲ್ಲಿ ಬಿರುಕು ಕಾಣಿಸುವವು. ಇದನ್ನು ತಪ್ಪಿಸಲು ಸ್ನಾನದ ನೀರಿನಲ್ಲಿ ಸಾಸಿವೆ ಪುಡಿ ಬೆರೆಸಬೇಕು. ಇದರಿಂದ ತ್ವಚೆ ಮೃದು ಹಾಗೂ ನುಣುಪುಗೊಂಡು ಬಾಧೆ ದೂರಾಗುವುದು. ಅಲ್ಲದೆ ಕಂದಮೂಲ, ಗಜ್ಜರಿ, ಅತ್ತರ, ಮನರಂಗಿ ಮುಂತಾದವುಗಳನ್ನು ಬೆರೆಸುವುದರಿಂದ ಚರ್ಮಕ್ಕೆ ಪ್ರೋಷಕಾಂಶಗಳು ದೊರೆಯುವವು. ಬೆಚ್ಚಗಿನ ನೀರಿನಲ್ಲಿ ಒಂದಿಷ್ಟು ಜವೆಗೋದಿ ಬೆರೆಸಿದಲ್ಲಿ ತ್ವಚೆ ಅತ್ಯಂತ ಮೃದು ಹಾಗೂ ಸ್ನಿಗ್ಧವಾಗುವುದು. ನಿದ್ರೆ ಸರಿಯಾಗಿ ಆಗದಿದ್ದರೆ ಸ್ನಾನದ ನೀರಿನಲ್ಲಿ ಮಧು ಬೆರೆಸಿದಲ್ಲಿ ದಣಿವು ದೂರಾಗಿ ಗಾಢ ನಿದ್ರೆ ಹತ್ತುವುದು. ನೀರಿನಲ್ಲಿ ಎರಡು ಮುಷ್ಟಿ ಉಪ್ಪು ಬೆರೆಸಿದಲ್ಲಿ ಅದರಿಂದಲೂ ದಣಿವು ದೂರಾಗುವುದು. ತ್ವಚೆಗೆ ಮಿಂಚು, ಹೊಳಪು ಬೇಕೆನಿಸಿದಾಗ ಸ್ನಾನದ ನೀರಿಗೆ ಸ್ವಲ್ಪ ಗ್ಲಿಸರಿನ್ ಬೆರೆಸಿದರಾಯಿತು. ಮುಖ ಲಕ್ಷಣದಲ್ಲಿ ಅದ್ವಿತೀಯ ಕಳೆ ಕಾಣಿಸುವುದು ಮತ್ತು ತ್ವಚೆ ಎಣ್ಣೆಯಂತೆ ಹೊಳೆಯುವುದು. ಶ್ರೀಗಂಧ ಬೆರೆಸಿದ ನೀರಿನ ಸ್ನಾನವು ದೇಹಕ್ಕೆ ಸೊಂಪನ್ನು ಕಂಪನ್ನು ನೀಡುವುದು. ಸಹಸ್ರಪರ್ಣಿ ಬೆರೆಸುವುದರಿಂದ ರಕ್ತ ಪಿತ್ತ ನಾಶವಾಗುವುದು. ಗುಲಾಬಿ ಜಲದ ಸ್ನಾನದಿಂದ ದೇಹದ ದುರ್ಗಂಧ ದೂರಾಗುವುದು. ಅಜವಾನದಿಂದ ತ್ವಚೆಗೆ ಆರಾಮದಾಯಕವೆನಿಸುವುದು. ಲವಂಗ ತೈಲ ಬೆರೆಸುವುದರಿಂದ ಶೀತ ನಿವಾರಣೆಯಾಗುವುದು. ಶುಂಠಿ, ತುಳಸಿ ಬೆರೆಸುವುದರಿಂದ ಶೀತ, ವಾತ, ನೋವು ನಿವಾರಣೆಯಾಗುವವು; ಚರ್ಮರೋಗಗಳೂ ವಾಸಿಯಾಗುವವು. ಕಸ್ತೂರಿಯನ್ನು ಬೆರೆಸಿ ಸ್ನಾನಮಾಡಿದರೆ ಚರ್ಮರೋಗ ವಾಸಿಯಾಗಿ ದೇಹಕ್ಕೆ ಚೈತನ್ಯ ಒದಗುವುದು. ಮುತ್ತುಗದ ಹೂವು ಬೆರೆಸಿದರೆ ಉಷ್ಣ ಉಪಶಮನವಾಗುವುದು. ಹಾಲು, ತೆಂಗಿನ ಎಣ್ಣೆ ಚರ್ಮವನ್ನು ಮೃದುಲಗೊಳಿಸುವವು. ಕರಿಕೆಯನ್ನು ಬೆರೆಸಿದ ನೀರಿನ ಸ್ನಾನ ಸರ್ವರೋಗ ಕೀಟ ಪ್ರಭಾವವನ್ನು ಕಡಿಮೆ ಮಾಡುವುದು. ತೈಲಾಭ್ಯಂಗ (ತೈಲವನ್ನು ಮೈಗೆ ಸವರಿಕೊಂಡು ಸ್ನಾನ ಮಾಡುವುದು) ದಿಂದ ಚರ್ಮ ಶುಭ್ರಗೊಂಡು ರಕ್ತವಹನ ಕ್ರಿಯೆ ಹೆಚ್ಚಾಗುವುದು.

ಈ ರೀತಿಯ ಟಾನಿಕ್ ಸ್ನಾನ ದುಬಾರಿ ಏನಲ್ಲ. ಇದಕ್ಕಾಗಿ ಹೆಚ್ಚಿನ ಹಣ ಖರ್ಚು ಮಾಡಬೇಕಾಗಿಲ್ಲ. ಜಾಹೀರಾತಿನ ಮೋಹಕ ಜಾಲಕ್ಕೆ ಬಲಿಯಾಗಿ ದುಬಾರಿ ಸಾಬೂನು ಬಳಸುವದಕ್ಕಿಂತ ಮನೆಯಲ್ಲೇ ಸುಲಭವಾಗಿ ದೊರೆಯಬಹುದಾದ ದ್ರವ್ಯಗಳನ್ನು ಬಳಸಿ ಸ್ನಾನಮಾಡಿ ಚರ್ಮದ ಸ್ವಾಸ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಕಾರಣ ನೀವೂ ಏಕೆ ಟಾನಿಕ್ ಸ್ನಾನ ರೂಢಿಸಿಕೊಳ್ಳಬಾರದು? *

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಸಾದಿಲ್ವಾರು
   (ಅ) ಕುದುರೆ ಲಾಯದ ವೆಚ್ಚ
   (ಆ) ಒಂದೇ ತರಹ ಕಾಣುವಂಥಾದ್ದು
   (ಇ) ಸಾರಥ್ಯ
   (ಈ) ಚಿಲ್ಲರೆ ಖರ್ಚು

2. ಸೆಕ್ಕು
   (ಅ) ತುರುಕು
   (ಆ) ಮುದುರು
   (ಇ) ಸೆಕೆಕಾಲ
   (ಈ) ಕಟ್ಟಿಗೆಯ ತುಣುಕು

3. ಹತ್ತಿಗ
   (ಅ) ಮರವೇರುವವ
   (ಆ) ಸಂಬಂಧಿಕ
   (ಇ) ನಿರಾಶ
   (ಈ) ದೀಪದ ಹುಳು

4. ಹಾವಳಿ
   (ಅ) ಬೆಡಗು
   (ಆ) ನೀರಲ್ಲಿ ಬೆಳೆಯುವ ಸಸ್ಯ
   (ಇ) ಉಪಟಳ
   (ಈ) ಮರದಿಂದ ಮಾಡಿದ ಪಾದರಕ್ಷೆ

5. ಸರಿದೊರೆ
   (ಅ) ಸಮಸಮ
   (ಆ) ಸಡಿಲುಗಂಟು
   (ಇ) ಕಾಲುವೆ
   (ಈ) ರಾಜಪ್ರತಿನಿಧಿ

6. ಸರೀಸೃಪ
   (ಅ) ಕೆರೆ
   (ಆ) ಉರುಳು
   (ಇ) ಸರ್ಪಜಾತಿ
   (ಈ) ನದಿ

7. ಶಿಲಾಯುಗ
   (ಅ) ಬಂಡೆಗಲ್ಲು
   (ಆ) ಕಲ್ಲಿನ ಆಯುಧಗಳ ಕಾಲ
   (ಇ) ತುಂಬಿ
   (ಈ) ಎರಡು ಮೊನೆಯ ಬಾಣ

8. ಶ್ರುತಪಡಿಸು
   (ಅ) ವೇದ ಕಲಿಸು
   (ಆ) ಶಾಸ್ತ್ರಾಭ್ಯಾಸ ಮಾಡು
   (ಇ) ಕಂದಾಚಾರದಲ್ಲಿ ತೊಡಗು
   (ಈ) ಅರುಹು

9. ಶಾಕಾಹಾರ
   (ಅ) ಸಸ್ಯಾಹಾರ
   (ಆ) ಮಾಂಸಭಕ್ಷಣೆ
   (ಇ) ಬಿಸಿ ಬಿಸಿ ಊಟ
   (ಈ) ಹಸಿ ತರಕಾರಿ ತಿನ್ನುವುದು

10. ತೂಷೀಕ
   (ಅ) ಬತ್ತಳಿಕೆ
   (ಆ) ಮೌನ
   (ಇ) ದುಷ್ಟರನ್ನು ತೃಪ್ತಿಪಡಿಸುವುದು
   (ಈ) ಉದ್ರೇಕ

11. ತೆಪ್ಪ
   (ಅ) ಹರವೆ
   (ಆ) ಸುರುಳಿ
   (ಇ) ಕಂದಾಯ
   (ಈ) ಜಾಲಿ

12. ಪುಷ್ಪಕ
   (ಅ) ವಿಮಾನ
   (ಆ) ಕೊಳೆ ವಾಸನೆ
   (ಇ) ಪೇಟೆ ಎಬ್ಬಿಸುವುದು
   (ಈ) ಅಹಂಕಾರಿ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಸಾದಿಲ್ವಾರು
(ಈ) ಲೇಖನ ಸಾಮಗ್ರಿ, ಮೊದಲಾದವುಗಳಿಗಾಗಿ ಮಾಡುವ ಚಿಕ್ಕಪುಟ್ಟ ಖರ್ಚು, ಚಿಲ್ಲರೆ ಖರ್ಚು. ಉದಾ: ಸಾದಿಲ್ವಾರು ಖರ್ಚು ದೊಡ್ಡದಾಯಿತು. (ಮರಾಠಿ)

2. ಸೆಕ್ಕು
(ಅ) ತುರುಕು, ಒಳಗೆ ಸೇರಿಸು; ಸೆಮ; ಹೊಂದಿಸು; ಒಳಗೆ ಸೇರಿಸಿ ಹೊಲಿ. ಉದಾ: ಸೆರಗನ್ನು ಉಡಿಯಲ್ಲಿ ಸೆಕ್ಕಿ ಜಗಳಕ್ಕೆ ಅಣಿಯಾದಳು. (ದೇಶ್ಯ)

3. ಹತ್ತಿಗ
(ಅ) ನೆಂಟ, ಒಳಗದವ, ಆಪ್ತ, ಸಂಬಂಧಿ ಉದಾ: ಹತ್ತಿಗರೆಲ್ಲ ಕೈಬಿಟ್ಟರು. (ದೇಶ್ಯ-ಹತ್ತು, ಹತ್ತು=ತಗಲು)

4. ಹಾವಳಿ
(ಇ) ಉಪಟಳ, ಉಪದ್ರವ, ಕಾಟ, ತೊಂದರೆ. ಉದಾ: ಕಳ್ಳಕಾಕರ ಹಾವಳಿ. (ಅರಬ್ಬಿ-ಹೌಲ್=ಭಯ, ಗಾಬರಿ)

5. ಸರಿದೊರೆ
(ಅ) ಸಮ ಸಮ, ಸಾಟಿ, ಸಮಾನ. ಉದಾ: ಗಂಡನೊಡನೆ ಸರಿದೊರೆಯಾಗಿ ದುಡಿದಳು. (ದೇಶ್ಯ- ಸರಿ=ಸಮ+ದೊರೆ=ಸಮ)

6. ಸರೀಸೃಪ
(ಇ) ಹಾವು ಜಾತಿ, ಉರಗವರ್ಗ, ಸರ್ಪ. ಉದಾ: ಸರೀಸೃಪಗಳ ಯುಗವೊಂದು ಭೂಮಿಯಲ್ಲಿತ್ತು. (ಸಂ.)

7. ಶಿಲಾಯುಗ
(ಅ) ಮನುಷ್ಯರು ಕಲ್ಲುಗಳಿಂದ ಮಾಡಿದ ಆಯುಧ ಸಲಕರಣೆಗಳನ್ನು ಅವಲಂಬಿಸಿದ್ದ ಕಾಲ. ಉದಾ: ಮನುಷ್ಯನು ಶಿಲಾಯುಗದ ಅವಸ್ಥೆಗೆ ಮರಳುವನೆ? (ಸಂ. ಶಿಲಾ=ಕಲ್ಲು+ಯುಗ)

8. ಶ್ರುತಪಡಿಸು
(ಈ) ಅರುಹು, ನಿವೇದಿಸು, ತಿಳಿಯಪಡಿಸು, ಗೌರವಪೂರ್ವಕವಾಗಿ ಹೇಳು. ಉದಾ: ತನ್ನ ಸಂದೇಹವನ್ನು ಗುರುವಿಗೆ ಶ್ರುತಪಡಿಸಿದನು. (ಸಂ.ಶ್ರುತ ಕೇಳಿದ್ದು+ದೇಶ್ಯ-ಪಡಿಸು)

9. ಶಾಕಾಹಾರ
(ಅ) ಸಸ್ಯಾಹಾರ, ಮಾಂಸವಿಲ್ಲದ ಆಹಾರ, ಕಾಳುಕಡಿ ಕಾಯಿಪಲ್ಯಗಳೇ ಮುಖ್ಯವಾದ ಊಟ. ಉದಾ: ಶಾಕಾಹಾರದಿಂದಲೇ ಆರೋಗ್ಯ. (ಸಂ.ಶಾಕ=ಕಾಯಿಪಲ್ಯ+ಆಹಾರ)

10. ತೂಷೀಕ
(ಅ) ಮೌನ ಮಾತಾಡದಿರುವುದು, ಸುಮ್ಮನಿದ್ದುಬಿಡುವುದು. ಉದಾ: ದುಷ್ಪರ ನಡುವೆ ತೂಷೀಕವನ್ನು ಅವಲಂಬಿಸು. (ಸಂ.ತೂಷಿಕ=ಮೌನವಾಗಿ+ಕ)

11. ತೆರವು
(ಈ) ಖಾಲಿ, ವಜಾ, ನಿವಾರಣೆ ಹಿಂತೆಗೆದುಕೊಳ್ಳುವುದು. ಉದಾ: ಪ್ರತಿಬಂಧಕಾಜ್ಞೆ ತೆರವಾಯಿತು. (ದೇಶ್ಯ-ತೆರೆ+ವು)

12. ಹಪ್ಪಕ
(ಇ) ಬೇಟೆಯೆಬ್ಬಿಸುವುದು, ಪೊದೆಗಳನ್ನು ಬಡಿದು ಅರಣ್ಯ ಪ್ರಾಣಿಗಳನ್ನು ಹೊರಗೆ ಬರಿಸುವುದು, ಸೋವುವಿಕೆ. ಉದಾ: ಹಪ್ಪಕ ಬೇಟೆಯ ಮೊದಲ ಹೆಜ್ಜೆ. (ದೇಶ್ಯ?)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಬರೆಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	"	... ಉತ್ತಮ
11-12	"	... ಅತ್ಯುತ್ತಮ

ಬೆಳಕಿನ ವೇಗದಲ್ಲಿ ಬರಲಿರುವ ನಾಳೆಗಳು

ಎ.ಓ. ಆವಲಮೂರ್ತಿ

ವಿಜ್ಞಾನ ಮತ್ತು ತಂತ್ರಜ್ಞಾನದ ಆಧುನಿಕ ಆವಿಷ್ಕಾರಗಳು ಮನುಷ್ಯನ ಬದುಕನ್ನು ಹೆಗಲಿಗೆ ಕಟ್ಟಿಕೊಂಡು ಓಡುತ್ತಿವೆ. ವಿಕಾಸದ ಹಂತಗಳು ವೇಗವಾಗಿ ಹಿಂದೆ ಸರಿಯುತ್ತಿವೆ. ಹಾಗಾದರೆ ನಾಳೆಗಳು ತೆರೆದಿಡುವ ಬದುಕಿನ ಸ್ಥಿತಿ-ಗತಿ ಹೇಗೆ?

ನಾವು ಬದುಕುತ್ತಿರುವ ಜಗತ್ತಿನ ಸ್ವರೂಪ ದಿನೇ ದಿನೇ ಬದಲಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಅತಿ ವೇಗವಾಗಿ ಬದಲಾಗುತ್ತಿರುವ ಈ ಜಗತ್ತು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ? ಅದು ಸೃಷ್ಟಿಸುತ್ತಿರುವ ಭವಿಷ್ಯದ ಹೊಸ ಜಗತ್ತಿನ ಆವೇಗವಾದರೂ ಎಂಥದು? ಅದರ ಪರಿಣಾಮಗಳೇನು? ಈ ಪ್ರಶ್ನೆಗಳಿಗೆ ಉತ್ತರ ಕುತೂಹಲಕಾರಿಯಾಗಿಯೂ ಮತ್ತು ಆತಂಕ ಉಂಟುಮಾಡುವಂತೆಯೂ ಇದೆ.

ಭವಿಷ್ಯದ ಜಗತ್ತಿನ ವಿವರವಾದ ರೂಪರೇಖೆ ಹೇಗಿರುತ್ತದೆ ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ. ಸ್ವತಃ ವಿಜ್ಞಾನಿ ಮತ್ತು ಬರಹಗಾರ ರಾಲ್ಫ್ ಲ್ಯಾಪ್ ಹೇಳುವಂತೆ ಇಂದು ಜೀವಂತವಿರುವ ಅತಿ ಪ್ರತಿಭಾವಂತ ವಿಜ್ಞಾನಿ ಕೂಡ ವಿಜ್ಞಾನ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ಖಚಿತವಾಗಿ ಹೇಳಲಾರ. ನಾವು ವೇಗೋತ್ಕರ್ಷದಲ್ಲಿರುವ ಒಂದು ರೈಲಿನಲ್ಲಿ ಕುಳಿತಿದ್ದೇವೆ. ಅದರಲ್ಲಿ ನಮ್ಮನ್ನು ಅಜ್ಞಾತ ಸ್ಥಳಗಳಿಗೆ ಕರೆದುಕೊಂಡು ಹೋಗಬಲ್ಲ ಅಸಂಖ್ಯ ಒತ್ತು ಗುಂಡಿಗಳಿವೆ. ಇಂಜಿನ್ನಿನ ಬಳಿ ಒಬ್ಬ ವಿಜ್ಞಾನಿಯೂ ಇಲ್ಲ; (ಒತ್ತು ಗುಂಡಿಯ ಬಳಿ) ದೆವ್ವಗಳಿದ್ದರೂ ಇರಬಹುದು. ಈ ಚಿತ್ರ ವಿಚಿತ್ರವಾಗಿಯೂ ಭೀಭತ್ಸವಾಗಿಯೂ ತೋರಬಹುದು. ಆದರೆ ಇದು ಭವಿಷ್ಯದ ಸಮರ್ಥ ಚಿತ್ರವೂ ಆಗಿದೆ.

ನಿರುಪಾಧಿಕ ಅರ್ಥದಲ್ಲಿ ಯಾರೂ ಭವಿಷ್ಯದ ಚಿತ್ರವನ್ನು ಕಟ್ಟಿಕೊಡಲಾಗದಿದ್ದರೂ ವಿಜ್ಞಾನದ ಬೆಳವಣಿಗೆಯಿಂದ ಮುಂದೆ ಆಗಬಹುದಾದ ಬದಲಾವಣೆಗಳ ಬಗ್ಗೆ ದಿಕ್ಸೂಚಿಯಾಗಿ ಹಿಂದಿನ ಮತ್ತು ಇಂದಿನ ಚಿತ್ರಗಳು ನಮ್ಮ ಮುಂದಿವೆ. ಇವುಗಳ ತುಲನಾತ್ಮಕ ಅಧ್ಯಯನದಿಂದ ಭವಿಷ್ಯದ ಜಗತ್ತಿನ ವೇಗ-ಆವೇಗಗಳನ್ನು, ಬೆಳವಣಿಗೆ-ಬದಲಾ

ವಣೆಯ ಚಕ್ರದ ಗತಿಯನ್ನು ಊಹಿಸಬಹುದು. ಊಹಿಸಬಹುದಷ್ಟೆ! ಆದರೇನು ವಿಜ್ಞಾನದಲ್ಲಿ ಊಹೆ ಮತ್ತು ವಾಸ್ತವದ ನಡುವಿನ ತೆರೆ ಪಾರದರ್ಶಕವಾಗಿರುತ್ತವೆ.

ಮನುಷ್ಯ ಇತಿಹಾಸದ ಪ್ರಾರಂಭದಿಂದ ಈ ಶತಮಾನದ ಪ್ರಾರಂಭದವರೆಗೂ ಆಗಿರುವ ವಿಜ್ಞಾನ ತಂತ್ರಜ್ಞಾನ ಅಭಿವೃದ್ಧಿಗಿಂತಲೂ ಹಲವು ಪಟ್ಟು ಹೆಚ್ಚು ಅಭಿವೃದ್ಧಿ ಈ ಶತಮಾನದ ಕೇವಲ ೬೦-೭೦ ವರ್ಷಗಳಲ್ಲಿ ಆಗಿದೆ. ವೈಜ್ಞಾನಿಕ ಪ್ರಗತಿಯಲ್ಲಿನ ಈ ತೀಕ್ಷ್ಣ ವೇಗೋತ್ಕರ್ಷ ಮನುಷ್ಯ ಜೀವನದ ಎಲ್ಲ ಪ್ರಕಾರಗಳ ಮೇಲೆ ಅಗಾಧ ಪರಿಣಾಮ ಬೀರಿದೆ. ಅನೇಕ ಬದಲಾವಣೆಗಳನ್ನು ತಂದಿದೆ.

ಈ ಶತಮಾನದಲ್ಲಾದ ಬದಲಾವಣೆಯ ದೈತ್ಯ ದಾಪುಗಾಲನ್ನು ವಿಶದಪಡಿಸಲು ಈ ವಿವರಣೆಯನ್ನು ಪರಿಣಾಮಕಾರಿಯಾಗಿ ಬಳಸಬಹುದು.

ಮನುಷ್ಯನ ಅಸ್ತಿತ್ವದ ಕಳೆದ ೫೦,೦೦೦ ವರ್ಷಗಳನ್ನು ಒಂದೊಂದು ಸರಾಸರಿ ೬೨ ವರ್ಷಗಳ ಜೀವಿತಕಾಲಗಳನ್ನಾಗಿ ವಿಭಾಗಿಸಿದರೆ ನಮಗೆ ೮೦೦ ಜೀವಿತಕಾಲಗಳು ಲಭ್ಯವಾಗುತ್ತವೆ. ಈ ೮೦೦ ಜೀವಿತಕಾಲಗಳಲ್ಲಿ ಸುಮಾರು ೬೫೦ನ್ನು ಮನುಷ್ಯ ಗುಹೆಗಳಲ್ಲಿ ಕಳೆದಿದ್ದಾನೆ. ಕಳೆದ ಕೇವಲ ೭೦ ಜೀವಿತಕಾಲಗಳಿಂದೀಚೆಗೆ ಒಂದು ಜೀವಿತಕಾಲದಿಂದ ಮತ್ತೊಂದು ಜೀವಿತಕಾಲದ ನಡುವೆ ಸಂವಹನ ಸಾಧ್ಯವಾಗಿದೆ. ಬರವಣಿಗೆಯ ಮೂಲಕ ಆರು ಜೀವಿತ ಕಾಲಗಳಿಂದ ಈಚೆಗೆ ಮಾತ್ರ ಮನುಷ್ಯ ಮುದ್ರಿತ ಅಕ್ಷರಗಳನ್ನು ನೋಡುತ್ತಿದ್ದಾನೆ. ನಾಲ್ಕು ಜೀವಿತ ಕಾಲದಿಂದ ಸಮಯವನ್ನು ನಿಷ್ಕೃಷ್ಟವಾಗಿ ಅಳೆಯುವುದನ್ನು ಕಲಿತಿದ್ದಾನೆ. ಎರಡು ಜೀವಿತಕಾಲದಿಂದ ವಿದ್ಯುತ್ ಮೋಟರನ್ನು ಉಪಯೋಗಿಸುತ್ತಿದ್ದಾನೆ. ಮತ್ತು ಮನುಷ್ಯ ದಿನನಿತ್ಯ ಈಗ ಬಳಸುತ್ತಿರುವ ಲಕ್ಷೋಪಲಕ್ಷ ವಸ್ತು-ಸಾಧನಗಳನ್ನು ಈಗಿನ ಅಂದರೆ ಅವನ ೮೦೦ನೇ ಜೀವಿತಕಾಲದಲ್ಲಿಯೆ ಅಭಿವೃದ್ಧಿಪಡಿಸಿದಂತವುಗಳು.

ಬದಲಾವಣೆಯ ವ್ಯಾಪ್ತಿ ಮತ್ತು ಗಾತ್ರ ದೊಡ್ಡದಷ್ಟೆ ಅಲ್ಲ ಆದರ ತೀವ್ರತೆ ಕೂಡ ಜಾಸ್ತಿ. ಬದಲಾವಣೆಯ ತೀವ್ರತೆಯನ್ನು ಕುರಿತು ಕಾದಂಬರಿಕಾರ ಮತ್ತು ವಿಜ್ಞಾನಿ ಸಿ.ಪಿ. ಸ್ನೋ ಹೀಗೆ ಹೇಳಿದ್ದಾರೆ "ಕಳೆದ ಶತಮಾನದವರೆಗೆ ಸಾಮಾಜಿಕ ಬದಲಾವಣೆ ಎಷ್ಟು ಮಂದಗತಿಯಲ್ಲಿತ್ತು ಎಂದರೆ ಯಾವನೆ ವ್ಯಕ್ತಿಯ ಜೀವಿತಾವಧಿಯಲ್ಲಿ ಅದು ಅವನ ಗಮನಕ್ಕೆ ಬಾರದೆ ಹೋಗುತ್ತಿತ್ತು. ಆದರೆ ಈಗ ಹಾಗಲ್ಲ. ಬದಲಾವಣೆಯ ವೇಗ ಎಷ್ಟು ಹೆಚ್ಚಿದೆಯೆಂದರೆ ನಮ್ಮ ಕಲ್ಪನೆ ಕೂಡ ಅದನ್ನು ಸರಿಗಟ್ಟಲಾರದು"

ಸಾಮಾಜಿಕ ಮನಶಾಸ್ತ್ರಜ್ಞ ವಾರನ್ ಬೆನ್ನಿಸ್ ಪ್ರಕಾರ "ಯಾವುದೇ ಅತ್ಯುಕ್ತಿ..ಬದಲಾವಣೆಯ ವ್ಯಾಪ್ತಿ ಮತ್ತು ಗತಿಯನ್ನು

ಉತ್ಪಾದನೆಯ ಪ್ರಮಾಣ

ಮುಂದುವರಿದ ದೇಶಗಳಲ್ಲಿ ಪ್ರತಿ ೧೫ ವರ್ಷಕ್ಕೊಮ್ಮೆ ಉತ್ಪನ್ನಗಳ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ. ಮತ್ತು ಅದೇ ಕಾಲಕ್ಕೆ ದ್ವಿಗುಣಗೊಳ್ಳಲು ಬೇಕಾಗುತ್ತಿರುವ ಕಾಲ ಕಡಿಮೆಯಾಗುತ್ತಿದೆ. ಅಂದರೆ, ಈ ತರದ ಸಮಾಜದಲ್ಲಿರುವ ಯಾವುದೇ ಮಗು ಹುಡುಗನಾಗುವ ಹೊತ್ತಿಗೆ ಅವನ ಸುತ್ತ ಅವನ ತಂದೆ-ತಾಯಿಗಳ ಕಾಲದಲ್ಲಿ ಇದ್ದುದಕ್ಕಿಂತ ಎರಡು ಪಟ್ಟು ಹೆಚ್ಚು ಮಾನವ ನಿರ್ಮಿತ ಹೊಸ ವಸ್ತುಗಳಿರುತ್ತವೆ. ಮತ್ತು ಮಗು ೭೦ ವರ್ಷ ತಲುಪುವ ಹೊತ್ತಿಗೆ ೩೨ ಪಟ್ಟು ಹೆಚ್ಚಿನ ವಸ್ತುಗಳು ಅವನು ಹುಟ್ಟಿದಾಗ ಇದ್ದುದಕ್ಕಿಂತ ಹೆಚ್ಚಿಗೆ ಇರುತ್ತವೆ.

ವಾಸ್ತವವಾಗಿ ವಿವರಿಸಲಾರದು. ನಿಜ ಹೇಳ ಬೇಕೆಂದರೆ ಕೇವಲ ಆತ್ಮಶಕ್ತಿಗಳೇ ವಾಸ್ತವ ವಾಗಿ ತೋರುತ್ತವೆ".

ನಮ್ಮ ಚಿಂತನೆಯ ಪರಿಧಿಯೊಳಗೆ ಬರುವ-ಅದು ಕ್ರಮಿಸಿದ ದೂರವಾಗಿರಬಹುದು, ಏರಿದ ಎತ್ತರವಾಗಿರಬಹುದು, ಅಗೆದು ತೆಗೆದ ಖನಿಜಗಳ ಪ್ರಮಾಣವಾಗಿರಬಹುದು, ಶಕ್ತಿಯ ಬಳಕೆಯಾಗಿರಬಹುದು, ಬಳಸುತ್ತಿರುವ ವಸ್ತುಗಳ ಸಂಖ್ಯೆಯಾಗಿರಬಹುದು, ಜ್ಞಾನದ ಸಂಗ್ರಹವಾಗಿರಬಹುದು, ಎಲ್ಲದರಲ್ಲಿಯೂ ಬೆಳವಣಿಗೆಯ ದೈತ್ಯ ದಾಪುಗಾಲನ್ನು ಗುರುತಿಸಬಹುದು, ಬೆಳವಣಿಗೆ ಧುತ್ತೆಂದು ಸ್ಫೋಟಗೊಂಡಿರುವುದನ್ನು ಕಾಣಬಹುದು. ಮನುಷ್ಯ ಹಿಂದೆ ಶತಶತಮಾನಗಳಿಂದ ಸಾಧಿಸಲಾಗದ್ದನ್ನು ಈಚಿನ ೬೦-೭೦ ವರ್ಷಗಳಲ್ಲಿ ಸಾಧಿಸಿ 'ತನಗೆ ಸಮರಿಲ್ಲ' ಎಂದು ಬೀಗುತ್ತಿರುವುದು ಸ್ಪಷ್ಟವಾಗಿದೆ.

ಇದಕ್ಕೆ ಕಾರಣ ಕೂಡ ಸ್ಪಷ್ಟವಾಗಿದೆ. ತಂತ್ರಜ್ಞಾನ ತಂತ್ರಜ್ಞಾನವನ್ನೆ 'ತಿಂದು' ಕೊಬ್ಬುತ್ತದೆ; ಗುಣಿತಗೊಳ್ಳುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಪ್ರಕ್ರಿಯೆಯನ್ನು ನೋಡಿದರೆ ಇದು ಇನ್ನು ಹೆಚ್ಚು ಸ್ಪಷ್ಟವಾಗುತ್ತದೆ.

ತಂತ್ರಜ್ಞಾನದ ಬೆಳವಣಿಗೆ ಮೂರು ಹಂತಗಳಲ್ಲಿ ಪೂರ್ಣಗೊಳ್ಳುತ್ತದೆ. ಒಂದು ಕಲ್ಪನೆ, ಎರಡು ಅನ್ವಯ, ಮೂರು ಮಾರುಕಟ್ಟೆ.

ಹಿಂದೆ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗಲು ಶತಮಾನಗಳೆ ಹಿಡಿಯುತ್ತಿದ್ದವು. ಆದರೆ ಈಗ (ವಿಜ್ಞಾನಿಗಳ) ಕಲ್ಪನೆ ಮತ್ತು (ತಂತ್ರಜ್ಞರ) ಅನ್ವಯದ ನಡುವೆ ಆ ತರಹದ ನಿಧಾನ ಯೋಚಿಸಲೂ ಸಾಧ್ಯವಿಲ್ಲ. ಇದರ ಅರ್ಥ ನಾವು ಹಿಂದಿನವರಿಗಿಂತ ಹೆಚ್ಚು ಉತ್ಸುಕರಾಗಿದ್ದೇವೆ ಮತ್ತು ಕಡಿಮೆ ಸೋಮಾರಿಗಳಾಗಿದ್ದೇವೆ ಎಂದಲ್ಲ. ಬದಲಿಗೆ ನಾವು ಕಾಲದೊಂದಿಗೆ ಈ ಪ್ರಕ್ರಿಯೆಯನ್ನು ತೀವ್ರಗೂಳಿಸಬಲ್ಲ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದೇವೆ ಎಂಬುದೇ ಆಗಿದೆ. ಆದ್ದರಿಂದಲೇ ಕಲ್ಪನೆಯ ಮೊದಲ ಹಂತದಿಂದ ಅನ್ವಯದ ಎರಡನೆ ಹಂತದ ನಡುವಿನ ಕಾಲವನ್ನು ಗಮನಾರ್ಹವಾಗಿ ಕಡಿಮೆ ಮಾಡಿಕೊಂಡಿದ್ದೇವೆ. ಫ್ರಾಂಕ್‌ಲಿನ್‌ರ ಅಧ್ಯಯನದ ಪ್ರಕಾರ ಈ ಕಡಿತ ಸುಮಾರು ಪ್ರತಿಶತ ೬೦ರಷ್ಟಾಗಿದೆ.

ಹೀಗೆಯೆ ಎರಡನೆ ಹಂತದಿಂದ ಮೂರನೆ ಹಂತವನ್ನು ತಲುಪುವ ಕಾಲ ಕೂಡ ಆಶ್ಚರ್ಯಕರ ರೀತಿಯಲ್ಲಿ ಶೀಘ್ರವಾಗುತ್ತದೆ. ೧೯೨೦ಕ್ಕೂ ಮುಂಚೆ ಅಮೇರಿಕಾದಲ್ಲಿ ಸಾದರಪಡಿಸಲಾದ ಶೂನ್ಯ ಮಜ್ಜಕ, ರೆಫ್ರಿಜರೇಟರ್ ಮುಂತಾದವು ಗರಿಷ್ಠ ಮಾರುಕಟ್ಟೆಯನ್ನು ಪಡೆಯಲು ಮೂವತ್ತಾರು ವರ್ಷಗಳು ಬೇಕಾದವು. ೧೯೩೯ ಮತ್ತು ೫೯ರ ನಡುವೆ ಬಂದ ವಿದ್ಯುತ್ ಹುರಿಯುವ ಬಾಣಲೆ, ದೂರದರ್ಶನ ಮುಂತಾದವುಗಳಿಗೆ ಕೇವಲ ಎಂಟು ವರ್ಷಗಳು ಸಾಕಾದವು.

ಪ್ರತಿ ಒಂದು ಯಂತ್ರ ಮತ್ತು ತಂತ್ರದ ಸಂಯೋಜನೆಯಿಂದ ಹೊಸದೊಂದು ಯಂತ್ರ ಮತ್ತು ತಂತ್ರ ರೂಪುಗೊಳ್ಳಲು ಹೆಚ್ಚು ಕಾಲ ಬೇಕಾಗುವುದಿಲ್ಲ. ಇದು ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುತ್ತದೆ. ಜೊತಗೆ, ವಿಜ್ಞಾನದಲ್ಲಿ ಇಂದು ಸಾಧ್ಯವೇ ಇಲ್ಲ ಎಂಬ ಲೇವಡಿಗೆ ಒಳಗಾದದ್ದು ಮರುದಿನವೇ ಸಾಕಾರಗೊಂಡಿದ್ದಿದೆ. ಉದಾಹರಣೆಗೆ ಟೆಲಿಫೋನ್, ರೇಡಿಯೋ...

ಇವೆಲ್ಲವುಗಳ ಪ್ರಭಾವದಿಂದ ಅತಿ ಕೈಗಾರಿಕೀಕರಣ ಮತ್ತು ಅತಿ ತಾಂತ್ರೀಕರಣಗಳಾಗುತ್ತಿವೆ. ಪರಿಣಾಮ: ಮನುಷ್ಯ ಹೆಚ್ಚು ಹೆಚ್ಚು ಅವಿಶ್ರಾಂತನಾಗುತ್ತಿದ್ದಾನೆ. ವಸ್ತು, ಸ್ಥಳ, ಮನುಷ್ಯರ ಜೊತೆಗಿನ ಸಂಬಂಧ ಕ್ಷೀಣಿಸುತ್ತಿದೆ.

ಮನುಷ್ಯನ ವಸ್ತುಗಳ ಜೊತೆಗಿನ ಸಂಬಂಧ ಕ್ಷಣಿಕಗೊಳ್ಳುತ್ತಿದೆ ಎಂಬುದಕ್ಕೆ ಈಗ ಕೊಂಡು ಉಪಯೋಗಿಸಿ ಬಿಸಾಡುವಂತಹ ವಸ್ತುಗಳಿಗೆ ಬೇಡಿಕೆ ಹೆಚ್ಚುತ್ತಿರುವುದು ಸಾಕ್ಷಿಯಾಗಿದೆ. ಮೊದಲೇ ಪೇಸ್ಟಿನ ಲೇಪನ ಮಾಡಿದ ಟೂತ್ ಬ್ರಷ್‌ಗಳಿಂದ ಹಿಡಿದು ಸ್ಥಳದಿಂದ ಸ್ಥಳಕ್ಕೆ ಆಗತ್ಯ ಮತ್ತು ಬೇಡಿಕೆಗೆ ತಕ್ಕಂತೆ ಒಯ್ಯಬಲ್ಲ ಆಟದ ಮೈದಾನದವರೆಗೆ ಉಪಯೋಗಿಸಿ ಬಿಸಾಡಬಹುದಾದಂತಹ ವಸ್ತುಗಳು ಇಂದು ಮಾರುಕಟ್ಟೆಗೆ ಬರುತ್ತಿವೆ.

ಸ್ಥಳದೊಂದಿಗಿನ ಮನುಷ್ಯನ ಸಂಬಂಧ ಕೂಡ ಆಮೂಲಾಗ್ರ ಬದಲಾವಣೆ ಹೊಂದುತ್ತಿದೆ. ಮೊದಲಿನಂತೆ ಗಾಢ ಸಂಬಂಧವೇ ಉಳಿಯುತ್ತಿಲ್ಲ. ಸಾಗಣೆ ಸೌಕರ್ಯದ ಹೆಚ್ಚಳ, ಕಾರ್ಯಕ್ಷೇತ್ರದ ವಿಸ್ತಾರ, ಜನದಟ್ಟಣೆ ಮುಂತಾದ ಕಾರಣಗಳಿಂದಾಗಿ ಮನುಷ್ಯ ಸಡಿಲ ಪಾದಿಯಾಗುತ್ತಿದ್ದಾನೆ. ಇದ್ದಲ್ಲೇ ಇರಲಾಗದೆ ನವ-ಅಲೆಮಾರಿಯಾಗುತ್ತಿದ್ದಾನೆ. ತಾನಿರುವ ಸ್ಥಳದ ಜೊತೆಗೆ, ಮತ್ತು ಅಕ್ಕಪಕ್ಕದವರೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಲು ಸಾಧ್ಯವಾಗುವಷ್ಟು ಕಾಲವೂ ಒಂದು ಸ್ಥಳದಲ್ಲಿ ನಿಲ್ಲಲಾರದಷ್ಟು ಅವಿಶ್ರಾಂತನಾಗುತ್ತಿದ್ದಾನೆ.

ಅಮೇರಿಕ ಒಂದರಲ್ಲೇ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಮಾರ್ಚ್ ೬೭ ರಿಂದ ಮಾರ್ಚ ೬೮ರ ಕೇವಲ ಒಂದು ವರ್ಷದ ಅವಧಿಯಲ್ಲಿ ಸುಮಾರು ಮೂರು ಕೋಟಿ ಅರವತ್ತಾರು ಲಕ್ಷ ಜನ ತಮ್ಮ ವಾಸಸ್ಥಳವನ್ನು ಬದಲಿಸಿದ್ದಾರೆ. ಇದು ಕಾಂಬೋಡಿಯ, ಘಾನ, ಮಂಗೋಲಿಯಾ, ನಿಕರಾಗುವ, ಗೌಟೆಮಾಲ, ಹುಂಡುರಾಸ್, ಟುನೀಸಿಯಾ ಈ ಎಲ್ಲ ದೇಶಗಳ ಒಟ್ಟು ಜನಸಂಖ್ಯೆಗಿಂತ ಜಾಸ್ತಿ.

ಅತಿಹೆಚ್ಚಿನ ನಗರೀಕರಣದಿಂದಾಗಿ ಮನುಷ್ಯರ ನಡುವಿನ ಸಂಬಂಧ ತುಂಡು ತುಂಡಾಗುತ್ತಿದೆ. ಇದು ಸಮಾಜಶಾಸ್ತ್ರದ ಇತ್ತೀಚಿನ ಮುಖ್ಯಪ್ರಶ್ನೆಯಾಗಿದೆ. ನೆರೆಹೊರೆಯವರೂ ಗೊತ್ತಿಲ್ಲದಂತ ಪರಿಸ್ಥಿತಿ ಉಂಟಾಗುತ್ತಿದೆ. ಮಿತವಾದ ಅರ್ಥದಲ್ಲಿ ಮಾತ್ರ ಸಂಬಂಧಗಳು ಉಳಿದಿವೆ. ಜನರ ಜೊತೆಗಿನ ಸಂಪರ್ಕದ ಸಂಖ್ಯೆ ಹೆಚ್ಚಾಗುತ್ತಿವೆ. ಆದರೆ ಸಂಬಂಧದ ಗಾಢತೆ ಮತ್ತು ಕಾಲ ಕಡಿಮೆಯಾಗುತ್ತಿದೆ. ದೀರ್ಘಕಾಲದ ಸಂಬಂಧಗಳಾದ ಕುಟುಂಬದ ಸದಸ್ಯರ ನಡುವಿನ ಸಂಬಂಧ ಕೂಡ ದೀರ್ಘವಾಗಿ ಉಳಿಯುತ್ತಿಲ್ಲ. ಏರುತ್ತಿರುವ ವಿಚ್ಛೇದನಗಳ ಸಂಖ್ಯೆ ಇದನ್ನು ತೋರಿಸುತ್ತದೆ. ಮಧ್ಯ ಕಾಲೀನ ಸಂಬಂಧಗಳಾದ ಸ್ನೇಹಿತರು, ನೆರೆಹೊರೆಯವರು, ಸಹೋದ್ಯೋಗಿಗಳು ಮತ್ತು ಸಂಘ ಸಂಸ್ಥೆಗಳ ಸದಸ್ಯರ ನಡುವಿನ ಸಂಬಂಧ ಕೂಡ ಹೆಚ್ಚು ಕಾಲ ಬಾಳುತ್ತಿಲ್ಲ. ಹೆಚ್ಚಿನ ಓಡಾಟ, ಹೆಚ್ಚಿನ ಜನಸಂಖ್ಯೆ, ಹೆಚ್ಚಿನ ಸಂಪರ್ಕ ಇದಕ್ಕೆ ಕಾರಣ. ಇವು ಮೂರು ವಸ್ತು, ವ್ಯಕ್ತಿ, ಸ್ಥಳಗಳ ಜೊತೆಗಿನ ಸಂಬಂಧಗಳ ಕ್ಷಣಿಕತೆ ಅನೇಕ ಸಾಮಾಜಿಕ ಮತ್ತು ಮಾನ

ಜ್ಞಾನದ ಶೇಖರಣೆ

೧೫೦೦ಕ್ಕೆ ಮುಂಚೆ ಯೂರೋಪ್ ವರ್ಷವೊಂದಕ್ಕೆ ಕೇವಲ ೧೦೦೦ ಪುಸ್ತಕಗಳನ್ನು ಹೊರತರುತ್ತಿತ್ತು. ೧೦೦.೦೦೦ ಪುಸ್ತಕಗಳನ್ನು ಉತ್ಪಾದಿಸಲು ಇಡೀ ಒಂದು ಶತಮಾನ ಬೇಕಾಗುತ್ತಿತ್ತು. ೪೫೦ ವರ್ಷಗಳ ನಂತರ ೧೯೫೦ರ ಹೊತ್ತಿಗೆ ಪುಸ್ತಕ ಪ್ರಕಾಶನ ಎಷ್ಟು ವೇಗವಾಗಿ ಬೆಳೆದಿತ್ತೆಂದರೆ ಯೂರೋಪೊಂದೆ ವರ್ಷಕ್ಕೆ ೧೨೦.೦೦೦ ಪುಸ್ತಕಗಳನ್ನು ಹೊರ ತಂದಿತ್ತು. ಈಗಂತೂ ಜಗತ್ತಿನ ಪುಸ್ತಕ ಪ್ರಕಾಶನದ ಸಂಖ್ಯೆ ದಿನವೊಂದಕ್ಕೆ ೧೦೦೦ ಮೀರಿದೆ.

ಸಿಕ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿವೆ.

೧೮೫೦ರಲ್ಲಿ ಈ ಪ್ರಪಂಚದ ಮೇಲಿನ ಕೇವಲ ೪ ನಗರಗಳಲ್ಲಿ ಮಾತ್ರ ಜನಸಂಖ್ಯೆ ದಶಲಕ್ಷವನ್ನು ಮೀರಿತ್ತು. ೧೯೦೦ರ ಹೊತ್ತಿಗೆ ಇದು ೧೯ ಆಯಿತು. ೧೯೬೧ರಲ್ಲಿ ೧೪೧. ೨೧ನೇ ಶತಮಾನದ ಆರಂಭಕ್ಕೆ?

ಬಹುಶಃ ಇದೇ ಕಾರಣಕ್ಕೆ ಮುಂದೆ ಹುಟ್ಟಿಕೊಳ್ಳಬಹುದಾದ ಅತಿದೊಡ್ಡ ನಗರಗಳ ಜನದಟ್ಟಣೆಯನ್ನು ನಿಭಾಯಿಸಲು, ಫ್ರಾನ್ಸ್ ನಗರದ ಯೋಜಕರು ಮಾರುಕಟ್ಟೆ, ವಸ್ತು ಸಂಗ್ರಹಾಲಯ, ಗೋದಾಮು ಮತ್ತು ಕಾರ್ಖಾನೆಗಳನ್ನು ಭೂಮಿಯೊಳಗೆ ಹಳ್ಳ ಕೊರೆದು ನಿರ್ಮಿಸಲು ಯೋಚಿಸುತ್ತಿದ್ದಾರೆ. ಮತ್ತು ಜಪಾನಿನ ವಾಸ್ತುಶಿಲ್ಪಿಗಳು ಸಾಗರದ ಮೇಲೆ ಅಟ್ಟಗಳನ್ನು ಕಟ್ಟಿ ಅವುಗಳ ಮೇಲೆ ನಗರ ನಿರ್ಮಾಣಕ್ಕೆ ನಕ್ಷೆಯನ್ನು ತಯಾರಿಸಿದ್ದಾರೆ.

ಇನ್ನೂ ಮುಂದೆ ಯೋಚಿಸಿರುವ ವಿಜ್ಞಾನಿಗಳು ಅದ್ಭುತ ಸಾಧ್ಯತೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಸ್ಕ್ರಿಪ್ಸ್ ಇನ್‌ಸ್ಟಿಟ್ಯೂಟ್ ಆಫ್ ಓಷನೋಗ್ರಫಿಯ ಡಾ. ಒಫ್.ಎನ್. ಸ್ಪೀಸ್ ಹೇಳುತ್ತಾರೆ "ಜನಸಂಖ್ಯೆ ಬೆಳೆದಂತೆ ನಿಜವಾದ ವಾಸಸ್ಥಾನವಾಗಿ ಮನುಷ್ಯ ಇನ್ನು ಐವತ್ತು ವರ್ಷಗಳೊಳಗೆ ಸಮುದ್ರಗಳ ಒಳಹೊರಗನ್ನು ಆಕ್ರಮಿಸಿಕೊಳ್ಳುತ್ತಾನೆ ಮತ್ತು ತನ್ನೆಲ್ಲ ಆವಶ್ಯಕತೆಗಳಿಗೆ ದುಡಿಸಿಕೊಳ್ಳುತ್ತಾನೆ".

ಈಗಾಗಲೇ ಡಾ. ವಾಲ್ಕರ್ ಎಲ್. ರೊಬ್ಸ್ ಎಂಬ ವಿಜ್ಞಾನಿ ಹೆಗ್ಗಣ ಜಾತಿಗೆ ಸೇರಿದ ಪ್ರಾಣಿಯೊಂದನ್ನು ನೀರಿನ ಒಳಗೆ ಜೀವಂತವಾಗಿ ಇಟ್ಟಿದ್ದಾರೆ. ಇದಕ್ಕಾಗಿ ಅವರು ಸಂಶ್ಲೇಷಿತ ಪೊರೆಯಿಂದ ತಯಾರಾದ ಪೆಟ್ಟಿಗೆಯನ್ನು ಉಪಯೋಗಿಸಿದ್ದಾರೆ. ಇದು ನೀರನ್ನು ಹೊರಗಡೆ ಇಟ್ಟು ಅದರಿಂದಲೇ ಆ ಪ್ರಾಣಿಗೆ ಅಗತ್ಯವಾದ ಗಾಳಿಯನ್ನು ಉತ್ಪಾದಿಸುತ್ತದೆ. ಮುಂದೆ ಈ ತರದ ಪೊರೆಗಳು ನೀರಿನ ಒಳಗೆ ನಿರ್ಮಿಸಲ್ಪಡುವ ಪ್ರಯೋಗಾರ್ಥ ನಿಲ್ದಾಣಗಳಲ್ಲಿ ವಾಸಿಸುವವರಿಗೆ ಗಾಳಿಯನ್ನು ಪೂರೈಸುವ ಕೆಲಸವನ್ನು ನಿರ್ವಹಿಸಬಹುದು. ಯಾರಿಗೆ ಗೊತ್ತು? ಮುಂದೊಂದು ದಿನ ಇವುಗಳನ್ನು ಮಾನವ ದೇಹದೊಂದಿಗೆ ಜೋಡಣೆ ಮಾಡಿ ಆರಾಮವಾಗಿ ನೀರಿನಲ್ಲಿ ಜೀವಿಸುವಂತೆ ಮಾಡಬಹುದು. ಇದು ವೈಜ್ಞಾನಿಕ ಕಾದಂಬರಿಗಳಲ್ಲಿ ಬರುವ ಶಸ್ತ್ರಕ್ರಿಯೆಯಿಂದ ಜಲ, ಪುಪ್ಪುಸಗಳನ್ನು ಸೇರಿಸಿಕೊಂಡ ಜಲಮಾನವರಂತೆ ತೋರುತ್ತಾರಲ್ಲವೆ? ಇದು ಸತ್ಯವೂ ಆಗಬಹುದು. ಏಕೆಂದರೆ ಕೆಲವು ವಿಜ್ಞಾನಿಗಳು ಹೇಳುವಂತೆ ವೈಜ್ಞಾನಿಕ ಕತೆಗಳಲ್ಲಿ ಬರುವ ಊಹಾಚಿತ್ರಗಳಿಗೂ ಮತ್ತು ವಾಸ್ತವ ಚಿತ್ರಗಳಿಗೂ ನಡುವಿನ ಗೆರೆ ತೀರ ತೆಳುವಾಗಿರುತ್ತದೆ. ಇದು ಸತ್ಯವೇ ಆದಲ್ಲಿ, ಮುಂದೆ ಹೊಸ ಜೀವನ ಕ್ರಮವೇ ಸೃಷ್ಟಿಯಾಗುತ್ತದೆ. ಭೂ ಕೃಷಿಗೆ ಬದಲಾಗಿ ಜಲ ಕೃಷಿ, ಭೂ

ಶಕ್ತಿಯ ಬಳಕೆ

ಭಾರತದ ಅಣುವಿಜ್ಞಾನಿ ಡಾ. ಹೋಮಿಬಾಬರವರ ವಿಶ್ಲೇಷಣೆಯಂತೆ ೩೩,೦೦೦ ದಶಲಕ್ಷ ಟನ್ ಕಲ್ಲಿದ್ದಲಿನಲ್ಲಿ ಅಡಕವಾಗಿರುವ ಶಕ್ತಿಯನ್ನು Q ಅಕ್ಷರದಿಂದ ಗುರುತಿಸಿದರೆ ಕ್ರಿ.ಶ.ದ ಪ್ರಾರಂಭದಿಂದ ಕಳೆದ ೧೮.೫ ಶತಮಾನಗಳಲ್ಲಿ ಮನುಷ್ಯ ಉಪಯೋಗಿಸಿದ ಶಕ್ತಿ ಪ್ರತಿ ಶತಮಾನಕ್ಕೆ .೫ Q ಗಿಂತಲೂ ಕಡಿಮೆ. ೧೮೫೦ ರ ಹೊತ್ತಿಗೆ ಇದು ೧ Q ಮುಟ್ಟಿತು. ಈವತ್ತು ೧೦ Qಗೆ ಏರಿದೆ. ಅಂದರೆ, ಅಂದಾಜು ಲೆಕ್ಕಾಚಾರದ ಪ್ರಕಾರ ಕಳೆದ ೨೦೦೦ ವರ್ಷಗಳಲ್ಲಿ ಮನುಷ್ಯ ಬಳಸಿದ ಒಟ್ಟು ಶಕ್ತಿಯಲ್ಲಿ ಅರ್ಧದಷ್ಟನ್ನು ಕಳೆದ ಕೇವಲ ನೂರು ವರ್ಷಗಳಲ್ಲಿ ಬಳಸಿದ್ದಾನೆ.

ಸಂಸ್ಕೃತಿಗೆ ಬದಲಾಗಿ ಜಲ ಸಂಸ್ಕೃತಿ ಬರುತ್ತದೆ. ಸಮುದ್ರವನ್ನು ಆರಾಧಿಸುವ ಆಧ್ಯಾತ್ಮ ಕೂಡ ಬೆಳೆಯುತ್ತದೆ.

ಇದರಂತೆ ಬಾಹ್ಯಾಕಾಶದಲ್ಲಿ ಜೀವಿಸಲು ಅಗತ್ಯ ಪರಿಕರಗಳನ್ನೊಳಗೊಂಡ ಮನುಷ್ಯನ ಸೃಷ್ಟಿಯೂ ಮುಂದೆ ಸಾಧ್ಯವಾಗಬಹುದು. ಬೇರೆ ಬೇರೆ ಆಕಾಶಕಾಯಗಳಲ್ಲಿರುವ ವಿಭಿನ್ನ ಗುರುತ್ವಾಕರ್ಷಣೆ, ಉಷ್ಣತೆ, ಗಾಳಿಯ ಒತ್ತಡ, ಗಾಳಿಯ ರಚನೆ, ವಿಕಿರಣ ಮುಂತಾದ ವಾತಾವರಣದೊಂದಿಗೆ ಹೊಂದಿಕೊಂಡು ಜೀವಿಸಬಲ್ಲ ವ್ಯತ್ಯಸ್ತ ಮನುಷ್ಯನ ಸೃಷ್ಟಿ ಇಂದು ಅಸಾಧ್ಯವಾಗಿ ಕಾಣುತ್ತಿಲ್ಲ. ರಸಾಯನಿಕ ಜೈವಿಕ ಪರಮಾಣು ಯುದ್ಧ, ಕಾಯಿಲೆಗಳು, ಪ್ರಕೃತಿ ಅವಘಡ ಮುಂತಾದವುಗಳಿಂದ ಈ ಗ್ರಹದ ಮೇಲೆ ಜೀವನಾಶವಾದರೂ ಇತರ ಗ್ರಹಗಳಲ್ಲಾದರೂ ಅದನ್ನು ಮುಂದುವರೆಸುವುದು ಇದರಿಂದ ಸಾಧ್ಯವಾಗುತ್ತದೆ.

ಅನೇಕ ರಂಗಗಳಲ್ಲಿ ಆಗುತ್ತಿರುವ ಸಂಶೋಧನೆಗಳು ಇವುಗಳ ಸಾಧ್ಯತೆಗೆ ಪುಷ್ಟಿ ನೀಡುತ್ತಿವೆ. ವಂಶವಾಹಿ ತಂತ್ರಜ್ಞಾನ ಮತ್ತು ಉತ್ತಮ ಸಂತಾನೋತ್ಪತ್ತಿ ಶಾಸ್ತ್ರದ ಬೆಳವಣಿಗೆಯಿಂದ ವಂಶವಾಹಿಗಳನ್ನು ವ್ಯತ್ಯಸ್ಥಗೊಳಿಸುವುದಷ್ಟೆ ಅಲ್ಲದೆ ಬೇಕಾದಂತ ಹೊಸ ರೀತಿಯ ಬಲಿಷ್ಠ ಮನುಷ್ಯರ ಆವೃತ್ತಿಯನ್ನೆ ಸೃಷ್ಟಿಸುವುದು ಸಾಧ್ಯವಾಗುತ್ತದೆ ಎಂದು ಹೇಳಲಾಗುತ್ತಿದೆ. ಇದರಿಂದ ಮನುಷ್ಯನ ಈಗಿರುವ ನಿರ್ದಿಷ್ಟ ಚಿತ್ರದ ಕಲ್ಪನೆ ಕುಸಿದು ಬೀಳುತ್ತದೆ. ಜೊತೆಗೆ, ಮಗು ಬೇಕೆನಿಸಿದ ಮಹಿಳೆ ತನಗೆ ಬೇಕಾದಂತ ರೀತಿಯ ಮಗುವಿಗೆ ಕಾರಣವಾಗುವ ಘನೀಭವಿಸಿದ ಭ್ರೂಣವನ್ನು ಗ್ಯಾರಂಟಿ ಕಾರ್ಡಿನೊಂದಿಗೆ ಮಾರುಕಟ್ಟೆಯಲ್ಲಿ ಖರೀದಿಸಿ, ನಂತರ ಅದನ್ನು ತನ್ನ ಗರ್ಭದಲ್ಲಿ ಅಳವಡಿಸಿಕೊಂಡು ಒಂಬತ್ತು ತಿಂಗಳ ನಂತರ ಮಗುವಿಗೆ ಜನ್ಮ ಕೊಡಬಹುದಾದಂತ ವ್ಯವಸ್ಥೆಯೂ ಬರಲಿದೆ. ಮತ್ತೂ ಮುಂದೆ ಯೋಚಿಸಿರುವ ವಿಜ್ಞಾನಿಗಳು ಹೇಳುತ್ತಾರೆ; ಮಾನವ ಗರ್ಭಕೋಶವೇ ಇಲ್ಲದ, ಅದರ ಹೊರಗಡೆಯ ಕೃತಕ ವಾತಾವರಣದಲ್ಲಿ ಮಕ್ಕಳನ್ನು ಗರ್ಭಾಂಕುರ ಮಾಡಿಸಿ, ಪೋಷಿಸಿ, ಬೆಳೆಸುವ ಕಾಲವೂ ಬರುತ್ತದೆ. ಆಗ ಹೆಂಗಸರು ಗರ್ಭಧರಿಸುವ ಮುಜುಗರವೇ ಇಲ್ಲದೆ ತಾಯಂದಿರಾಗಬಹುದು. ಈ ಬೆಳವಣಿಗೆಯಿಂದ ಲೈಂಗಿಕತೆ,

ವೇಗದ ಹೆಚ್ಚಳ

ಕ್ರಿ.ಪೂ. ೬೦೦೦ ವರ್ಷದಲ್ಲಿ ಮನುಷ್ಯನ ಅತಿವೇಗದ ವಾಹಕ ಒಂಟೆಯಾಗಿತ್ತು. ಗಂಟೆಗೆ ೮ ಮೈಲಿ ಹೋಗುತ್ತಿತ್ತು. ೪೫೦೦ ವರ್ಷಗಳ ನಂತರ ಕ್ರಿ.ಪೂ. ೧೬೦೦ ರ ಹೊತ್ತಿಗೆ ರಥಗಳ ಪಾದಾರ್ಪಣದೊಂದಿಗೆ ವೇಗ ೨೦ ಮೈ. / ಗಂ. ತಲುಪಿತು. ಮುಂದಿನ ವೇಗದ ಬೆಳವಣಿಗೆಯ ಆವೇಗ ದಂಗುಬಡಿಸುವಂತಿದೆ. ಸುಮಾರು ೩೫೦೦ ವರ್ಷಗಳ ನಂತರ ೧೭೮೪ ರಲ್ಲಿ ಬಂದ ರೈಲು ಗಂಟೆಗೆ ೧೨ ಮೈಲಿ ವೇಗದಲ್ಲಿ ಚಲಿಸುತ್ತಿತ್ತು. ೧೮೨೫ ರ ಹೊತ್ತಿಗೆ ಇದು ಗಂಟೆಗೆ ೩೦ ಮೈಲಿಯನ್ನು ಮುಟ್ಟಿತು. ಮತ್ತೆ ಕೇವಲ ೩೫ ವರ್ಷಗಳಲ್ಲಿ ಈ ವೇಗ ೧೦೦ ಮೈ. / ಗಂ. ಮಟ್ಟವನ್ನು ತಲುಪಿತು. ಈ ವೇಗ ೪ ಪಟ್ಟು ಹೆಚ್ಚಾಗಲು ಕೇವಲ ೫೦ ವರ್ಷಗಳು ಸಾಕಾದವು. ೧೯೩೮ ರಲ್ಲಿ ೪೦೦ ಮೈ. / ಗಂ. ಹಾರಾಡುವ ವಿಮಾನಗಳು ಬಂದಿದ್ದವು. ನಂತರದ ಇಪ್ಪತ್ತೇ ಇಪ್ಪತ್ತು ವರ್ಷಗಳಲ್ಲಿ ೧೯೬೦ರಲ್ಲಿ ೪೦೦೦ ಮೈ. / ಗಂ. ಚಲಿಸಬಲ್ಲ ರಾಕೆಟ್ ವಿಮಾನಗಳು ಹಾರಾಡುತ್ತಿದ್ದವು. ಇಂದು ಗಂಟೆಗೆ ೪೮,೦೦೦ ಕಿ.ಮೀ. ವೇಗದಲ್ಲಿ ಭೂಮಿಯಿಂದ ದೂರಸರಿಯುತ್ತಿರುವ ಪಯೋನೀರ್ ಗಗನವಾಹನ ಇದೆ.

ರಸಾಯನಿಕ ಧಾತುಗಳು

೧೫ನೇ ಶತಮಾನಕ್ಕೆ ಮೊದಲು ಕೇವಲ ೧೧ ರಸಾಯನಿಕ ಧಾತುಗಳನ್ನು ಮಾತ್ರ ಕಂಡು ಹಿಡಿಯಲಾಗಿತ್ತು. ಹನ್ನೆರಡನೆಯದನ್ನು ಕಂಡು ಹಿಡಿಯುವ ಹೊತ್ತಿಗೆ ೨೦೦ ವರ್ಷಗಳು ಸಂದು ಹೋಗಿದ್ದವು. ನಂತರದ ೪೫೦ ವರ್ಷಗಳ ಅವಧಿಯಲ್ಲಿ ಸುಮಾರು ೭೦ ಧಾತುಗಳನ್ನು ಕಂಡು ಹಿಡಿಯಲಾಯಿತು. ೧೯೦೦ ರಿಂದೀಚೆಗೆ ಸರಾಸರಿ ಪ್ರತಿ ಮೂರು ವರ್ಷಕ್ಕೆ ಒಂದರಂತೆ ಆವರ್ತ ಕೋಷ್ಟಕಕ್ಕೆ ಸೇರಿಸಲಾಗುತ್ತಿದೆ.

ನೈತಿಕತೆ, ತಾಯ್ತನದ ಪಾವಿತ್ರ್ಯ, ಪ್ರೀತಿ, ಮಕ್ಕಳ ಪೋಷಣೆ ಮುಂತಾದವುಗಳೆಲ್ಲ ಹೊಸ ಅರ್ಥವನ್ನು ಪಡೆಯುತ್ತವೆ.

ಹಿಂದೆ ಸಾಧ್ಯವೇ ಇಲ್ಲ ಅಂದುಕೊಂಡಿದ್ದ ಬದಲಿ ಹೃದಯ, ಮೂತ್ರಪಿಂಡ, ಯಕೃತ್ತು, ಮೇದೋಜೀರಕ ಗ್ರಂಥಿ ಮೊದಲಾದವುಗಳ ಯಶಸ್ವಿ ಜೋಡಣೆ ಇಂದು ಸಾಧ್ಯವಾಗಿದೆ.

ಇಂಥ ಸಾಧನೆಗಳು ದೇಹದ ಭಾಗಗಳು ಕೂಡ ತಮ್ಮ ಶಾಶ್ವತ ಅಸ್ತಿತ್ವದ ಕಲ್ಪನೆಯನ್ನು ಕಳೆದುಕೊಳ್ಳುವಂತೆ ಮಾಡುತ್ತಿವೆ. ಇಂದು ಡಾಕ್ರಾನ್ ಮೆಷ್‌ನಿಂದ ತಯಾರಾದ ಕೃತಕ ಹೃದಯ ಕವಾಟಗಳಿಂದ ಬದುಕುತ್ತಿರುವ ಸಾವಿರಾರು ಜನರಿದ್ದಾರೆ. ಮುಂದೆ ಅತಿ ಮಾನವ ಸಾಧನೆಗಳನ್ನು ಮಾಡಬಲ್ಲ ಸೈಬೋರ್ಗ್ ಎಂದು ಕರೆಯಲ್ಪಡುವ ಬಹಳಷ್ಟು ಯಂತ್ರ ಭಾಗಗಳನ್ನೊಳಗೊಂಡ ಮಾನವರು ಬರುವ ಕಾಲ ದೂರವಿಲ್ಲ ಎಂಬುದು ವಿಜ್ಞಾನಿಗಳ ಅಭಿಪ್ರಾಯ. ಯಂತ್ರಮಾನವ ನಿರ್ಮಾಣದಲ್ಲಿ ಸಾಧಿಸಲಾಗುತ್ತಿರುವ ಮುನ್ನಡೆ, ಕೃತಕ ಬುದ್ಧಿಮತ್ತೆಯಿಂದ 'ಯೋಚಿಸಿ' ಚದುರಂಗ ಆಡಬಲ್ಲ ಕಂಪ್ಯೂಟರ್‌ಗಳ ಆವಿಷ್ಕಾರ. ಮುಂದೆ ಕಂಪ್ಯೂಟರ್ ಯಂತ್ರ ಮಾನವ ಮತ್ತು ಜೀವ ತಂತ್ರಜ್ಞಾನಗಳ ಸಂಯೋಜನೆಯಿಂದ ಎಲ್ಲ ರೀತಿಯಲ್ಲೂ ಮಾನವರನ್ನೆ ಹೋಲುವ ಮಾನವ ಯಂತ್ರಗಳಿಗೆ ದಾರಿ ಮಾಡಿಕೊಡುತ್ತದೆ. ಇದರಿಂದ ಮಾನವನ 'ಶ್ರೇಷ್ಠತೆ' ಪ್ರಶ್ನಾರ್ಹವಾಗುತ್ತದೆ.

ಇಂದು ನಾವು ಕ್ರಾಂತಿಕಾರಿ ಹಂತದಲ್ಲಿದ್ದೇವೆ. ಅತಿ ಕೈಗಾರಿಕೀಕರಣ ಅತಿ ಯಾಂತ್ರೀಕರಣ ಮತ್ತು ಅತಿ ನಗರೀಕರಣಗಳಿಂದಾಗಿ ಎಲ್ಲವೂ ಅತಿಯಾಗಿ ಒಂದೇ ಉಸುರಿನಲ್ಲಿ ಅತಿ ವೇಗವಾಗಿ ಸಾಗುವ ಭವಿಷ್ಯದ ಜಗತ್ತಿನ ಮುಖ್ಯ ಲಕ್ಷಣಗಳು ಹೊಸತನ ಮತ್ತು ಕ್ಷಣಿಕತೆಗಳಾಗಿರುತ್ತವೆ. ಇದರ ವೇಗ-ಆವೇಗಕ್ಕೆ ಹೊಂದಿಕೊಳ್ಳಲಾಗದ ಜನ, ವಿಜ್ಞಾನಿಗಳ ಪ್ರಕಾರ, ಭವಿಷ್ಯಾಘಾತಕ್ಕೆ ಸಿಕ್ಕಿ ನರಳುತ್ತಾರೆ. ಇದಕ್ಕೆ ಪರಿಹಾರವೇನು? *

ಯುಗೋಸ್ಲಾವಿಯದ ಪ್ರಸಿದ್ಧ ಸಾಹಸಿ
ಭೂಶೋಧಕನ ರೋಮಾಂಚಕ ಅನುಭವ

ನರಭಕ್ಷಕರ ಸಹವಾಸದಲ್ಲಿ

ಟೈಬರ್ ಸೆಕೆಲ್



ಬ್ರೇಜಿಲ್ ದೇಶದ ಅಮೆಜಾನ್ ಅರಣ್ಯಗಳಲ್ಲಿ ನಾವು ಅನುಸಂಧಾನ ಕಾರ್ಯದಲ್ಲಿ ಮಗ್ನವಾಗಿದ್ದಾಗ ಆ ಅರಣ್ಯದ ಗಹನ ಪ್ರದೇಶದಲ್ಲಿ ಎಲ್ಲೋ ಒಂದು ನರಭಕ್ಷಕ ಜಾತಿಯೊಂದು ವಾಸಿಸುತ್ತಿದೆಯೆಂಬ ಸುದ್ದಿ ಕೇಳಿದೆವು. ಮಾನವ ಶಾಸ್ತ್ರಜ್ಞರಿಗೆ ಅಮೇರಿಕಾ ಖಂಡದಲ್ಲಿ ನರಭಕ್ಷಕರು ಇರುವರೇ ಎಂಬುದು ಅಧಿಕೃತವಾಗಿ ಗೊತ್ತಿರಲಿಲ್ಲ. ಹೊಸ ವಿಷಯಗಳನ್ನು ಕಂಡು ಹಿಡಿಯಲು ಇದೊಂದು ಕುತೂಹಲಜನಕ ಅವಕಾಶವಾಗಿತ್ತು. ಕೂಡಲೇ ಹೋಗಿ ತಥ್ಯವನ್ನು ಕಂಡುಬರಬೇಕೆಂದು ನಾವು ನಿರ್ಧರಿಸಿಕೊಂಡೆವು.

ನಮ್ಮ ತಂಡದಲ್ಲಿ ನಾವು ನಾಲ್ಕೇ ಜನರಿದ್ದೆವು. ಇಬ್ಬರು ಗಂಡಸರು, ಇಬ್ಬರು ಹೆಂಗಸರು. ನಾವು ಹೊರಟೇ ಬಿಟ್ಟೆವು. ಅರಣ್ಯದಲ್ಲಿ ಎರಡು ತಿಂಗಳ ಕಾಲ ನಾವು ಎತ್ತಿನ ಬಂಡಿ, ಕುದುರೆ ಮತ್ತು ಎತ್ತುಗಳ ಮೇಲೆ ಸವಾರಿ ಮಾಡಿದ ಮೇಲೆ ಮೂವತ್ತು ದಿನ ಹರಗೋಲಲ್ಲಿ ಹುಟ್ಟು ಹಾಕುತ್ತ ಸಾಗಿದ ನಂತರ ನಮಗ

ಆದಿಮ ಜನಾಂಗದ ಕೆಲ ಜನರ ಸಂಪರ್ಕ ಬಂತು. ಇಂಥ ಐದು ಬೇರೆ ಬೇರೆ ಜನಾಂಗಗಳ ವಸತಿಗಳನ್ನು ದಾಟಿದ ಬಳಿಕ ನಮಗ ನರಭಕ್ಷಕರೆಂದು ಭಾವಿಸಲ್ಪಟ್ಟ ತುಪಾರಿ ಜನಾಂಗದ ನಾಡು ಸಿಕ್ಕಿತು.

ಒಂದು ಜನಾಂಗದ ವಸತಿಯಿಂದ ಇನ್ನೊಂದು ಜನಾಂಗದ ವಸತಿಗೆ ಹೋಗುವಾಗ ನಾವು ಯಾವಾಗಲೂ ನಮ್ಮೊಡನೆ ಹತ್ತು ಹನ್ನೆರದು ಜನ ಆದಿ ನಿವಾಸಿಗಳನ್ನು ಕರೆದೊಯ್ಯುತ್ತಿದ್ದವು. ಅವರು ನಮ್ಮ ಗಂಟು ಗದಡಿಗಳನ್ನು ಹೊರುತ್ತಿದ್ದರಲ್ಲದೆ ನಿಬಿಡವಾದ ಅರಣ್ಯವನ್ನು ಸವರಿ ದಾರಿ ಮಾಡಿಕೊಳ್ಳಲಿಕ್ಕೂ ನೆರವಾಗುತ್ತಿದ್ದರು. ಈ ಕೆಲಸಕ್ಕಾಗಿ ನಾವು ಅವರಿಗೆ ಪ್ರತಿಫಲ ಕೊಡುತ್ತಿದ್ದೆವು. ಅವರು ಹಣ ತೆಗೆದುಕೊಳ್ಳಲು ಒಪ್ಪುತ್ತಿರಲಿಲ್ಲವೆನ್ನಿ. ಬದಲಿಗೆ ಬಾಚಣಿಗೆ, ಕನ್ನಡಿ, ಕರವಸ್ತ್ರ, ಚೂರಿ, ಕತ್ತಿ ಮತ್ತು ಉಪ್ಪಿನ ರೂಪದಲ್ಲಿ ನಾವವರಿಗೆ ಪ್ರತಿಫಲವನ್ನು ಕೊಡಬೇಕಾಯಿತು.

ಆದರೆ ನಾವು ತುಪಾರಿ ನಾಡಿನ ಬಳಿಗೆ ಬಂದಾಗ ಮಾತ್ರ ನಮ್ಮ ಈ ಹತ್ತು ಜನ ಸಂಗಡಿಗರು ಗಂಟು ಗದಡಿಗಳನ್ನು ಒಗೆದುಬಿಟ್ಟು ಓಡಿ ಹೋಗಲು ಅನುವಾದರು. "ಅವರು ನಿಮ್ಮನ್ನು ತಿಂದುಹಾಕಬೇಕೆಂದು ಬಯುಸುತ್ತಿದ್ದರೆ ನೀವು ಮುಂದೆ ಹೋಗಿರಿ, ನಾವು ಬೇಡವೆನ್ನುವುದಿಲ್ಲ. ನಾವು ಮಾತ್ರ ತಿರುಗಿ ಬರುವುದಾಗಿ ನಮ್ಮ ಹೆಂಡಂದಿರಿಗೆ ಮಾತು ಕೊಟ್ಟಿದ್ದೇವೆ" ಎಂದರವರು.

ಪ್ರಥಮ ದರ್ಶನ

ಅದೇ ಸ್ಥಳದಲ್ಲಿ ಕೆಲ ಕಾಲ ಉಳಿಯುವಂತೆ ಅವರ ಮನವೊಲಿಸಬೇಕಾದರೆ ನಮಗೆ ಸಾಕೋ ಸಾಕಾಯಿತು. ನಾವು ನಾಲ್ವರು ಮಾತ್ರ ಕಳ್ಳ ಹೆಜ್ಜೆಯಿಂದ, ತುಪಾರಿಗಳಿಗೆ ತಿಳಿಯದ ಹಾಗೆ ಅವರ ಊರಿನ ಸಾರ್ವಜನಿಕ ಗುಡಿಸಲನ್ನು ಸಮೀಪಿಸಿದೆವು. ಗುಡಿಸಲು ವಿಶಾಲವಾಗಿತ್ತು. ಅದರ ಸುತ್ತಲೂ ಅಂಗಳವಿತ್ತು. ನಾವು ಈ ಅಂಗಳವನ್ನು ಸುತ್ತುವರಿದ ಪೊದೆಗಳ ಕೊನೆಯ ಸಾಲಿನ ಹಿಂದೆ ಬಂದು ನಿಂತಿದ್ದೆವು. ಅಂಗಳದಲ್ಲಿ ಸುಮಾರು ಇಪ್ಪತ್ತು ಜನ ಗಂಡಸರು, ಹೆಂಗಸರು ಮತ್ತು ಮಕ್ಕಳು ಮಾತ

ಕಸ್ತೂರಿ ನಡೆದು ಬಂದ ದಾರಿ

ನಾಡುತ್ತ ಕೆಲಸ ಮಾಡುತ್ತ ಓಡಾಡುತ್ತಿದ್ದರು.

ಈ ನರಭಕ್ಷಕರನ್ನು ನೋಡುತ್ತ ನಿಂತಿದ್ದ ನಮ್ಮೆದೆ ಢವಢವನೆ ಬಡಿದುಕೊಳ್ಳುತ್ತಿತ್ತು. ಇದು ನಮ್ಮ ಜೀವಮಾನದ ಅಪೂರ್ವ ಸನ್ನಿವೇಶವಾಗಿತ್ತು. ಇಂಥ ಸಂದರ್ಭ ಸಿಗುವವರು ಜಗತ್ತಿನಲ್ಲಿ ವಿರಳ. ಆದರೆ ನಾವು ಈ ಭೆಟ್ಟಿಯಿಂದ ಬದುಕಿ ಉಳಿದು ಬಂದೇವೇ?

ಹೊಸ ನಾಡುಗಳ ಅನುಸಂಧಾನದಲ್ಲಿ ಅಳಿದ ಅನೇಕ ಧೀರರ ಜೀವನ ವೃತ್ತಾಂತಗಳನ್ನು ನಾನು ಓದಿದ್ದೇನೆ. ಆದಿ ಜನಾಂಗಗಳ ಕೈಯಲ್ಲಿ ಸಾವನ್ನು ಕಂಡವರನೇಕರ ಮರಣದ ಕಾರಣಗಳನ್ನೂ ಅಭ್ಯಸಿಸಿದ್ದೇನೆ. ಇದೆಲ್ಲದರಿಂದ ನಾನು ಮಾಡಿದ ತೀರ್ಮಾನವೆಂದರೆ ಅವರಿಗೊದಗಿದ ಗತಿಗೆ ಅವರೇ ಹೊಣೆಗಾರರೆಂಬುದು. ಯಾವುದಾದರೊಂದು ರೀತಿಯಿಂದ ತಮ್ಮ ಶಕ್ತಿ ಪ್ರದರ್ಶನ ಮಾಡುವ ಹವ್ಯಾಸಕ್ಕೆ ಬಿದ್ದು ಅವರು ಆ ಜನರನ್ನು ಭಯಭೀತರನ್ನಾಗಿ ಮಾಡುತ್ತಿದ್ದರು. ಆದಿಮ ಜನರನ್ನು ನಾವು ಅನಾಗರಿಕರೆಂದೇ ಕರೆದರೂ ತಮ್ಮ ಜೀವಕ್ಕೆ ಅಪಾಯವಿದೆಯೆಂದು ಹೆದರಿಕೆಯಾದಾಗ ಮಾತ್ರವೇ ಅವರು ಯಾರನ್ನಾದರೂ ಕೊಲ್ಲುವರಲ್ಲದೆ ಬೇರೆ ಅಲ್ಲ.

ಆದರೆ ಅವರು ನಮ್ಮನ್ನು ಕಂಡು ಅಂಜುವುದಿಲ್ಲೆಂದು ಹೇಗೆ ಗೊತ್ತು? ಅವರೊಡನೆ ಸಂಪರ್ಕ ಬೆಳೆಸುವ ಒಂದು ಉಪಾಯವನ್ನು ನಾನು ಯೋಚಿಸಿದೆ. ನನ್ನ ಸಹಕಾರಿಗಳೂ ಅದಕ್ಕೆ ಸಮ್ಮತಿಸಿದರು.

ನನ್ನಿಂದ ಒಂದು ಸನ್ನೆ ಬಂದ ಕೂಡಲೆ ನಾವು ನಾಲ್ಕೂ ಜನರು ಪೊದೆಗಳ ಮರೆಯಿಂದ ಅವರ ಮುಂದೆ ಜಿಗಿದು ನಿಂತೆವು. ಅವರು ಗಾಬರಿಯಾದರು. ಆದರೆ ನಾವು ನಮ್ಮ

ಬಂದೂಕು, ರಿವಾಲ್ವರುಗಳನ್ನು ಅವರ ಮುಂದೆ ಒಗೆದು ಅವರ ಭಾಷೆಯಲ್ಲಿ, "ನಾವು ಮಿತ್ರರು... ನಾವು ಮಿತ್ರರು" ಎಂದು ಕೂಗಿದೆವು. ನಮಗೆ ಬರುತ್ತಿದ್ದ ಅವರ ಭಾಷೆಯ ಶಬ್ದಗಳು ಅವು ಮಾತ್ರ!

ಅಚ್ಚರಿಗೊಂಡ ಅವರ ಕೆಲ ಗಂಡಸರು ತತ್‌ಕ್ಷಣ ತಮ್ಮ ಬಿಲ್ಲುಗಳನ್ನು ಎತ್ತಿಕೊಂಡು ನಮ್ಮೆದೆಗಳಿಗೆ ಗುರಿ ಹಿಡಿದರು. ಆದರೆ ನಾವು ಇದೊಂದನ್ನೂ ಗಮನಿಸದವರ ಹಾಗೆ ಮುಖಗಳನ್ನು ಇಷ್ಟಗಲ ಮಾಡಿಕೊಂಡು ಅವರನ್ನು ಸಮೀಪಿಸತೊಡಗಿದೆವು. ಆ ನಗೆಯನ್ನು ಮುಖದ ಮೇಲೆ ತುಳುಕಿಕೊಳ್ಳಬೇಕಾದರೆ ಎಷ್ಟು ಕಷ್ಟವಾಯಿತೆಂಬುದು ನಮಗೇ ಗೊತ್ತು. ಈ ಸಂದರ್ಭಕ್ಕಾಗಿಯೆ ಸಿದ್ಧವಾಗಿಟ್ಟುಕೊಂಡಿದ್ದ ಪುಟ್ಟ ಪುಟ್ಟ ಉಡುಗೊರೆಗಳನ್ನ ಜೇಬಿನಿಂದ ಹೊರ ತೆಗೆದು ಅವರಲ್ಲಿ ಪ್ರತಿಯೊಬ್ಬನಿಗೂ ಒಂದೊಂದರಂತೆ ಕೈಯಾರ ಕೊಟ್ಟೆವು. ಒಂದು ಚಿಕ್ಕ ಕನ್ನಡಿಯನ್ನಾಗಲಿ ಬಣ್ಣಬಣ್ಣದ ಕರವಸ್ತ್ರವನ್ನಾಗಲಿ ನಮ್ಮಿಂದ ತೆಗೆದುಕೊಳ್ಳಬೇಕಾದರೆ ಅವರು ತಮ್ಮ ಬಿಲ್ಲನ್ನಾಗಲಿ ಬಾಣವನ್ನಾಗಲಿ ಕೆಳಗೆ ಇಡಬೇಕಾಗುತ್ತಿತ್ತು. ಹೀಗೆ ಐದೇ ನಿಮಿಷಗಳೊಳಗೆ ಸುಮಾರು ಜನರು ನಿರಾಯುಧರಾಗಿದ್ದರು. ನಮ್ಮ ಆಯುಧಗಳ ಹಾಗೆ ಅವರವೂ ನೆಲದ ಮೇಲೆ ಬಿದ್ದಿದ್ದವು. ಅವರ ಕಂಚಿನಂಥ ಬಲು ಮೈಗಳನ್ನು ನಮ್ಮ ತೋಳುಗಳಿಂದ ತಬ್ಬಿಕೊಳ್ಳುತ್ತ ನಾವು "ನಾವು ಮಿತ್ರರು!" ಎಂಬ ಮೂಲ ಮಂತ್ರವನ್ನು ಪಠಿಸಿದೆವು. ನಮ್ಮ ರೂಪಗಳನ್ನು ಕಂಡೇ ಅವರು ಅಪ್ರತಿಭರಾಗಿದ್ದರು. ಮೇಲಾಗಿ ನಮ್ಮ ಮೈತ್ರಿ ಪ್ರದರ್ಶನದಿಂದಲೂ ಆಯುಧ ಕೆಳಗೊಗೆದು ನಾವು ತೋರಿಸಿದ ವಿಶ್ವಾಸದಿಂದಲೂ ಅವರು ತೀರ ಮಿದುವಾಗಿ ಹೋದರು.

ನಾವಿಬ್ಬರು ಗಂಡಸರು ಈ ರೀತಿ ಗಂಡಸರ ಮನವೊಲಿಕೆ ಮಾಡಿಕೊಳ್ಳುತ್ತಿದ್ದಾಗ ನಮ್ಮ ತಂಡದ ಇಬ್ಬರು ಮಹಿಳೆಯರು, ಹುಡುಗಿ ಮಕ್ಕಳ ಸಂಗಡ ಗುಡಿಸಲಿನ ಆಚೆ ಬದಿಗೆ ಪಲಾಯನ ಮಾಡಿದ್ದ ಹೆಂಗಸರೊಡನೆ ಸ್ನೇಹವನ್ನು ಸ್ಥಾಪಿಸುತ್ತಿದ್ದರು.

ಸಹ ಸ್ನಾನದಿಂದ ಸ್ನೇಹ ಸಿದ್ಧಿ

ಅರ್ಧ ತಾಸು ಕಳೆದ ಮೇಲೆ ವಾತಾವರಣ ತಿಳಿಯಾಗಲಾರಂಭಿಸಿತು. ಅಷ್ಟರಲ್ಲಿ ಗುಡಿಸಲೊಳಗಿಂದ ಮಧ್ಯ ವಯಸ್ಸಿನ, ದಪ್ಪ ಮೈಕಟ್ಟಿನ ಚಿರತೆ ಚರ್ಮದ ಶಿರಸ್ತ್ರಾಣ ಧರಿಸಿದ ವ್ಯಕ್ತಿಯೊಂದು ಪ್ರತ್ಯಕ್ಷವಾಯಿತು. ಅವನ ನಡಿಗೆ ಮಂದವೂ ಗಂಭೀರವೂ ಆಗಿತ್ತು. ಇವನೇ ಗೌಡನೆಂದು ಗುರುತಿಸಲು ನನಗೆ ತಡಹಿಡಿಯಲಿಲ್ಲ. ನಾನು ಕೊಡಮಾಡಿದ ಚೂರಿಯನ್ನು ಕಾಣಿಕೆಯಾಗಿ ಸ್ವೀಕರಿಸಿದ ನಂತರ ಅವನು ಭದ್ರ ಸ್ವರದಿಂದ "ತೊವೇಪ್" ಎಂದ.

ಇದೊಂದು ಬಗೆಯ ಸ್ವಾಗತ ವಚನವಿರಬೇಕೆಂದು ತಿಳಿದು ನಾನೂ "ತೊವೇಪ್" ಎಂದುತ್ತರವಿತ್ತೆ. ಆದರೆ ನನಗೆ ಅವನ ಮಾತು ತಿಳಿಯಲ್ಲವೆಂದು ಗೊತ್ತಾದ ಮೇಲೆ ಗೌಡನು ನನ್ನನ್ನು ಕೈಹಿಡಿದು ಅಡವಿಗೆ ಕರೆದೊಯ್ದನು. ನಾನು ಎದೆಗುಂದಿದರೂ ಅವನ ಸೂಚನೆಯಂತೆ ನಡೆದುಕೊಂಡೆ. ಸುಮಾರು ನೂರುಗಜ ಸಾಗಿದ ಮೇಲೆ ನಮಗೊಂದು ಚಿಕ್ಕ ನದಿ ಸಿಕ್ಕಿತು. ಅಬಾಸಿತೋ-ಗೌಡನ ಹೆಸರು ಅದು. ನದಿಯಲ್ಲಿಳಿದು ನನಗೂ ಮಿಂಯಲು ಸನ್ನೆ ಮಾಡಿದ. ಬೆವರುತ್ತಿದ್ದ ನನ್ನ ಮೈಗೆ ಈ ಸ್ನಾನ ಹಿತವೆನಿಸಿತು.

ನಾವು ಗುಡಿಸಲಿಗೆ ಮರಳಿದ ಕೆಲ ನಿಮಿಷಗಳಲ್ಲೇ ಆ ಜನರ ಮುಖ್ಯ ಮಾಂತ್ರಿಕನು ನನ್ನ ಹತ್ತಿರ ಬಂದು "ತೊವೇಪ್" ಎಂದ. "ಸ್ನಾನ ಮಾಡೋಣ ಬಾ" ಎಂದು ಇದರ ಅರ್ಥವೆಂದು ಆಗಲೇ ಅರಿತಿದ್ದ ನಾನು ಅಬಾಸಿತೋನ ಸಂಗಡ ನಾನೊಮ್ಮೆ ಮಿಂದಾಗಿದೆಯೆಂದು ಅವನಿಗೆ ತಿಳಿಹೇಳಲು ಯತ್ನಿಸಿದೆ. ಆದರೆ ಆತ ಕೇಳಲಿಲ್ಲ. ನಾನು ಹೋಗಿ ಅವನೊಡನೆಯೂ ಸ್ನಾನ ಮಾಡಬೇಕಾಯಿತು. ಅನಂತರ ನಾನು ಹಳ್ಳಿಯ ಪ್ರತಿಯೊಬ್ಬ ಪ್ರಮುಖನ ಸಂಗಡವೂ ಮಜ್ಜನ ಮಾಡುವ ಪ್ರಸಂಗ ಬಂತು. ಅಂತೂ ಸಂಜೆಯೊಳಗೆ ನಾನು ಇಪ್ಪತ್ತು ಸಲ ಸ್ನಾನ ಮಾಡಿದ್ದೆ. ನನ್ನ ಸಂಗಡಿಗನಿಗೂ ಅನಂತರ ಇದೇ ಅವಸ್ಥೆ ಬಂತು. ನಮ್ಮ ತಂಡದ ಮಹಿಳೆಯರೂ ಆ ಜನಾಂಗದ ಹೆಂಗಸರೊಡನೆ ಬೇರೊಂದು ಸ್ಥಳದಲ್ಲಿ ಹೀಗೆ ಸ್ನಾನ ಮಾಡಬೇಕಾಯಿತು.

ತಮ್ಮ ಜಾತಿಯಲ್ಲಿ ನಮ್ಮನ್ನು ಸುಯೋಗ್ಯ ಅತಿಥಿಗಳಾಗಿ ಸೇರಿಸಿಕೊಳ್ಳುವುದಕ್ಕೆ ಇದು ಅವರ ವಿಧಿಯಾಗಿತ್ತು.

ನಾವೇನೋ ಅತಿಥಿಗಳಾಗಿದ್ದೆವು. ಆದರೆ ಇಡೀ ಒಂದು ವಾರದವರೆಗೆ ಹನ್ನೆರಡು ಸಶಸ್ತ್ರ ಯೋಧರು ಅವರಿಗೆ ನಮ್ಮಿಂದೊದಗಬಹುದಾದ ಗಂಡಾಂತರವನ್ನು ನಿರೋಧಿಸಲು ಬಾಗಿಲ ಬಳಿ ಕಾವಲು ನಿಂತಿದ್ದರು.

ಇತ್ತ ನಾವಾದರೂ ಅದೇ ಕಾರಣಕ್ಕಾಗಿ ಸರದಿಯ ಮೇಲೆ ಒಬ್ಬೊಬ್ಬರೇ ಎಚ್ಚರವಿದ್ದು ರಾತ್ರಿಯೆಲ್ಲ ಕಾಯುತ್ತಲಿದ್ದೆವು. ಆದರೆ ದಿನಗಳೆದಂತೆ ನಮಗೆ ನಮ್ಮ ಯಜಮಾನರ ಪರಿಚಯವಾಗಿ ಅವರಲ್ಲಿ ವಿಶ್ವಾಸ ಹುಟ್ಟಿತು. ಒಂದು ವಾರದ ನಂತರ ನಮ್ಮಲ್ಲಿ ಪರಸ್ಪರ ಸ್ನೇಹ ಎಷ್ಟು ಮಟ್ಟಿಗೆ ಬೆಳೆದಿತ್ತೆಂದರೆ ನಮ್ಮ ಬಾಗಿಲ ಮುಂದಿದ್ದ ಕಾವಲು ಮೆಲ್ಲ ಮೆಲ್ಲನೆ ಚೆದುರಿತು. ಮತ್ತು ನಾವಾದರೂ ನಿಶ್ಚಿಂತೆಯಿಂದ ನಿದ್ರಿಸತೊಡಗಿದೆವು.

ನರಭಕ್ಷಣದ ಕಥೆ

ಎರಡು ವಾರ ಕಳೆಯುವುದರೊಳಗೆ ನಾನು ನರಭಕ್ಷಕರ ಗೌಡರಲ್ಲೊಬ್ಬನಾದ ತಕಿರಿರಿ ಎಂಬ ಮುದುಕನ ಗಾಢ ಮಿತ್ರನಾಗಿ ಹೋಗಿದ್ದೆ. ಒಂದು ದಿನ ನಾನು ಧೈರ್ಯ ಮಾಡಿ ಆತನನ್ನು ಕೇಳಿಯೇ ಬಿಟ್ಟೆ:

"ಏನ್ರೀ ತಕಿರಿರಿ, ನೀವು ನರಮಾಂಸವನ್ನು ತಿನ್ನುತ್ತೀರಂತೆ, ನಿಜವೇ?"

"ಇಲ್ಲ, ನಾವು ಹಾಗೇನೂ ಮಾಡುವುದಿಲ್ಲ...ಆದರೆ ಹಿಂದೆ ನಾವು ಆಗಾಗ್ಗೆ ಹಾಗೆ ಮಾಡುತ್ತಿದ್ದೆವು" ಆ ಮೇಲೆ ಅವನು ತಮ್ಮ ನರಭಕ್ಷಣದ ಕಥೆಯನ್ನು ನನಗೆ ವಿದಿತಪಡಿಸಿದ:

ಮೊದಮೊದಲು ಅವರು ತಮ್ಮ ಶತ್ರುಗಳನ್ನು ಕೊಂದು ತಿನ್ನುತ್ತಿದ್ದರಂತೆ. ಬಳಿಕ ತಮ್ಮ ಜಾತಿಯೊಳಗೇ ಯಾರನ್ನಾದರೂ ಸೇಡಿಗಾಗಿಯೋ ಇತರ ಕಾರಣಗಳಿಗಾಗಿಯೋ ಕೊಲೆ ಮಾಡಿದಾಗ ಅವರನ್ನು ತಿನ್ನುವ ರೂಢಿ ಬಂತು. ಆದರೆ ಅವರು ಹಸಿವು ಹಿಂಗಿಸಿಕೊಳ್ಳಲು ಹೀಗೆ ಮಾಡುತ್ತಿದ್ದರೆಂದಲ್ಲ. ಅಡವಿಯಲ್ಲಿ ಬೇಕಾದಷ್ಟು ಆಹಾರ ಸಿಗುತ್ತಿತ್ತು. ಅವರ ನರಭಕ್ಷಣಕ್ಕೆ "ಆಧ್ಯಾತ್ಮಿಕ" ಕಾರಣವಿತ್ತು. ಒಬ್ಬಾತನ ಮಾಂಸವನ್ನು ತಿಂದರೆ ಅವನ ಆತ್ಮವನ್ನೂ ತಿಂದಂತಾಯಿತೆಂದೂ ಅದರಿಂದ ಸತ್ತವನ ಆತ್ಮದ ತೇಜಸ್ಸಿನಿಂದ ತಿಂದವನ ಆತ್ಮದ ತೇಜಸ್ಸು ವೃದ್ಧಿಂಗತವಾಗುವುದೆಂದು ಅವರು ನಂಬಿದ್ದರು.

ಹಳ್ಳಿಯಲ್ಲಿ ಒಂದು ಕೊಲೆಯಾದ ಹೆಣ ಸಿಕ್ಕಿದೊಡನೆ ದೊಡ್ಡ ಸಮಾರಂಭವಾಗುತ್ತಿತ್ತು. ಕೆಲವರು ಅಂಗಳದಲ್ಲಿ ದೊಡ್ಡ ಬೆಂಕಿ ಉರುಸುತ್ತಿದ್ದರು. ಬೇರೆ ಕೆಲವರು ಅದರ ಸುತ್ತಲೂ ಕುಣಿದಾಡುತ್ತಿದ್ದರು. ಮತ್ತು ಕೊಲೆಯಾದವನನ್ನು ಒಂದು ಕೋಲಿಗೆ ಕಟ್ಟಿ ಅವನನ್ನು ಬೆಂಕಿಯಲ್ಲಿ ಹುರಿಯುತ್ತಿದ್ದರು. ಕೊನೆಗೆ ಎಲ್ಲರಿಗೂ ಅವರವರ ಪಾಲು ದೊರೆಯುತ್ತಿತ್ತು.

ಮಾನವ ಶರೀರದ ಎಲ್ಲಕ್ಕೂ ರುಚಿಯಾದ ಭಾಗ ಯಾವುದೆಂದು ನಾನು ಕೇಳಿದಾಗ ಅವನು ನನ್ನ ಕೈಯನ್ನು ತೆಗೆದುಕೊಂಡು ಅದನ್ನು ಲುಬ್ಧ ದೃಷ್ಟಿಯಿಂದ ನೋಡುತ್ತ, "ಆಹಾ, ನಿನ್ನ ಕೈಯನ್ನು ಹುರಿದರೆ ಅದು ಬಹಳ ರುಚಿಯಾದೀತು!" ಎಂದು ಹೇಳಿದ.

ನಾನು ಸರಕ್ಕನೆ ನನ್ನ ಕೈಯನ್ನು ಎಳೆದುಕೊಂಡು, "ಮಹಾರಾಯ, ಅದು ಈಗಿರುವಂತೆ ಹಸಿಯಾಗಿಯೇ ಇರಲಿ!" ಎಂದೆ.

1925ರ ಸುಮಾರಿಗೆ ತುಪಾರಿ ಜನರ ಸಂಖ್ಯೆ ಒಟ್ಟು ಒಂಬತ್ತು ಹಳ್ಳಿಗಳಲ್ಲಿ ಸುಮಾರು 2000 ಇತ್ತು. ಆದರೆ ಮುಂದಿನ ಇಪ್ಪತ್ತು ವರ್ಷಗಳಲ್ಲಿ ನರಭಕ್ಷಣದ ಚಟ ಎಷ್ಟು ಹೆಚ್ಚಾಯಿತೆಂದರೆ ಜನಾಂಗದ ಸಂಖ್ಯೆ 180ಕ್ಕೆ ಇಳಿದುಹೋಯಿತು.

ದಿನಕರನಿಗೆ

ಗೆಳೆಯಾ
ನಿನ್ನ
ಕಣ್ಣ
ಬೆಳಕಲ್ಲಿ
ತಾರೆಗಳೂ
ಮಸುಕಾಗುತ್ತವೆ
ಇನ್ನು ನನ್ನ ಪಾಡೇನು?

ಪ್ರಕಾಶ.ಎಸ್.ಮನ್ನಂಗಿ

ಆಗ ಒಂದು ಹಳ್ಳಿಯ ಗೌಡನಾಗಿದ್ದ ಅಬಾಸಿತೋ ಮುಂದೆ ಬಂದ. ಆತ ಎಲ್ಲ ಹಳ್ಳಿಗಳ ಗೌಡರನ್ನೂ, ಮಂತ್ರವಾದಿಗಳನ್ನೂ ಒಂದೆಡೆ ಕೂಡಿಸಿ, "ನಮ್ಮ ನರಭಕ್ಷಕ ಅಭ್ಯಾಸ ಹೀಗೆಯೇ ಮುಂದುವರಿದರೆ ಕೆಲ ದಿನಗಳಲ್ಲೇ ನಮ್ಮ ಕೊಲೆಯ ಸರದಿಯೂ ಬರುವುದು ಖಂಡಿತ. ಈಗಲೇ ನಮ್ಮ ಸಂಖ್ಯೆ ತೀರ ಕಡಿಮೆಯಾಗಿದೆ. ಇನ್ನು ನಮ್ಮ ಜನಾಂಗವೇ ಇಲ್ಲದಂತಾದೀತು" ಎಂದು ವಿವರಿಸಿದ. ತನ್ನ ಸಂಗಡಿಗರ ಚಿಂತಾಕ್ರಾಂತ ಮುಖಗಳನ್ನು ಕಂಡು ಆತ ಇಂದಿನಿಂದ ನಾವು ನರಮಾಂಸ ಭಕ್ಷಣವನ್ನು ತ್ಯಜಿಸಬೇಕು ಎಂದು ಸೂಚಿಸಿದ. ಬಹಳ ಹೊತ್ತು ಚರ್ಚೆಯಾಗಿ ಅದು ಸ್ವೀಕೃತವಾಯಿತು. ಜನಾಂಗದ ಉಳಿದುಳಿದ ಜನರು ಆ ಹಳ್ಳಿಯಲ್ಲಿ ಬಂದು ಶಾಂತಿಯಿಂದ ಬಾಳತೊಡಗಿದರು.

ಇದು ನಡೆದದ್ದು ನಾನು ತುಪಾರಿ ನಾಡಿಗೆ ಬರುವುದಕ್ಕೆ ಐದು ವರ್ಷಗಳ ಹಿಂದೆ; ಸುದೈವದಿಂದ ಐದು ವರ್ಷಗಳ ನಂತರವಲ್ಲ. ಹಾಗೇನಾದರೂ ಆಗಿದ್ದರೆ ಈ ಕಥೆ ಹೇಳಲು ನಾನು ಮರಳುತ್ತಿದ್ದೇನೋ ಇಲ್ಲವೋ ಎಂಬುದು ಸಂದೇಹವೇ.

ಬಿಳಿ ಮಂತ್ರವಾದಿ!

ಬ್ರೆಜಿಲಿನ ಅಮೆಜಾನ್ ಅರಣ್ಯವಾಸಿ ನರಭಕ್ಷಕರಲ್ಲಿ ತುಪಾರಿಗಳೇ ಕಟ್ಟಕಡೆಯವರು. ಅವರ ಧರ್ಮದ ಒಂದು ಅಂಶ ತಮ್ಮ ಪೂರ್ವಜರ ಪ್ರೇತಾತ್ಮಗಳಲ್ಲಿ ವಿಶ್ವಾಸ. ಯಾರಾದರೂ ಕಾಯಿಲೆಯಾದರೆ ಅವರನ್ನು ಗುಣಪಡಿಸುವುದರಲ್ಲಿ, ಭೂಮಿಯಲ್ಲಿ ಬೆಳೆ ಹೆಚ್ಚಿಸುವ ವಿಚಾರದಲ್ಲಿ, ಬೇಟೆಯನ್ನು ಯಶಸ್ವಿಗೊಳಿಸುವಲ್ಲಿ ತಮ್ಮ ಪೂರ್ವಜರ ಸಲಹೆ ಬೇಕಾದಾಗ ಅವರು ಮಂತ್ರವಾದಿಗಳನ್ನು ಸೇರಿಸಿ ಪಿತೃಗಳನ್ನು ಆರಾಧಿಸುತ್ತಾರೆ.

ಈ ಮಂತ್ರವಾದಿಗಳ ಒಂದು ಅಧಿವೇಶನವನ್ನು ನನಗೆ ತೋರಿಸಬೇಕೆಂದು ನಾನೆಷ್ಟೋ ಅವರನ್ನು ಕಾಡಿಬೇಡಿದೆ. ಆದರೆ ಮಂತ್ರವಾದಿಗಳ ಅಧಿವೇಶನವು ತಮ್ಮ ಜನಾಂಗದ ಅತಿ ಗುಪ್ತವಾದ ವಿಧಿಯೆಂದು ಅವರ ಭಾವನೆಯಾಗಿದ್ದುದರಿಂದ ಯಾವಾಗಲೂ ನನಗೆ ನಕಾರವೇ ಉತ್ತರವಾಗಿ ಬರುತ್ತಿತ್ತು. ಸ್ವತಃ ಮಂತ್ರವಾದಿಯಲ್ಲದವನು ಅದನ್ನು ನೋಡುವುದಿರಲಿ, ಅದರ ಹೆಸರು ಕೂಡ ಉಚ್ಚರಿಸತಕ್ಕದ್ದಲ್ಲವೆಂದರವರು. ಯಾರಾದರೂ ಹಾಗೆ ಮಾಡಿದ್ದೇ ಆದರೆ ಪಿತೃಗಳು ನಮ್ಮ ಜಾತಿಯನ್ನೇ ನಾಶ ಮಾಡಿಬಿಟ್ಟಾರು. ಇಷ್ಟರ ಮೇಲೆ ನಾನು ಹೆಚ್ಚು ಒತ್ತಾಯ ಮಾಡುವಂತಿರಲಿಲ್ಲ. ನಾನು ಅಧಿವೇಶನವನ್ನು ಸಂದರ್ಶಿಸಿದ ಒಂದು ತಿಂಗಳ ಮೇಲೆ ಯಾರಾದರೂ ಅಕಸ್ಮಾತ್ತಾಗಿ ಸತ್ತುಹೋದರೆಂದುಕೊಳ್ಳಿರಿ. ಆಗ ಅವರು ಈ ಎರಡು ಘಟನೆಗಳಲ್ಲಿ ಸಂಬಂಧಕಲ್ಪಿಸಿ ನಮ್ಮನ್ನೆಲ್ಲ ಕೊಂದು ಹಾಕಿದರೂ ಆಶ್ಚರ್ಯವಿರಲಿಲ್ಲ.

ಆದರೆ ನನಗೆ ಕುತೂಹಲ ತಾಳುವುದಾಗಲಿಲ್ಲ. ಒಂದು ದಿನ ನಾನು ಮುಖ್ಯ ಮಂತ್ರವಾದಿಯ ಹತ್ತಿರ ಹೀಗಂದೆ: "ದೂರದಿಂದಾದರೂ ಒಮ್ಮೆ ನಿಮ್ಮ ಅಧಿವೇಶನವನ್ನು ಕೆಲವೇ ನಿಮಿಷಗಳ ಮಟ್ಟಿಗೆ ನನಗೆ ತೋರಿಸಿರಿ. ಹಾಗೆ ಕೇಳಿದರೆ ನಾನೂ ನಮ್ಮ ಬಿಳಿಯರ ಜಾತಿಯಲ್ಲಿ ಒಬ್ಬ ಮಂತ್ರವಾದಿಯೇ ಇದ್ದೇನೆ."

"ಓಹೋ, ಮೊದಲೇ ಯಾಕಪ್ಪ ನಮಗೆ ಹೇಳಲಿಲ್ಲ? ನೀನು ಮಂತ್ರವಾದಿಯಾಗಿದ್ದರೆ ನಮ್ಮ ಕೂಟಕ್ಕೆ ನೀನು ಬರಬಹುದಷ್ಟೇ ಅಲ್ಲ, ಪ್ರೇತಾತ್ಮಗಳನ್ನು ಆಹ್ವಾನಿಸಲು ನೀನು ನೆರವಾಗಲೇ ಬೇಕು" ಎಂದನಾತ.

ಅವರ ಅಧಿವೇಶನಕ್ಕೆ ಹೊರಡುತ್ತಿದ್ದಾಗ ನನ್ನ ಹೃದಯದಲ್ಲಿ ಏನೋ ಒಂದು ತರಹ ಭಾವನೆಯಾಯಿತು. ಹೊರಗಿನವರಾರಿಗೂ ಗೊತ್ತಿಲ್ಲದ ಗುಪ್ತ ಪ್ರಪಂಚದಲ್ಲಿ ನಾನೀಗ ಪ್ರವೇಶಿಸುತ್ತಿದ್ದೆ.

ಮಂತ್ರವಾದಿಗಳು ತಮ್ಮ ಚಿಕ್ಕ ಪೀಠಗಳ ಮೇಲೆ ವರ್ತುಲಾಕಾರದಲ್ಲಿ ಕುಳಿತಿದ್ದರು. ಅವರು ಒಟ್ಟು ಹನ್ನೆರಡು ಮಂದಿ. ವರ್ತುಲದ ಮಧ್ಯದಲ್ಲಿ ಒಂದು ಚಿಕ್ಕ ಮೇಜು, ಮೇಜಿನ ಮೇಲೆ ಒಂದು ಕಂದು ಬಣ್ಣದ ಪುಡಿಯ ರಾಶಿ. ಅದನ್ನು ಅವರು ತಯಾರಿಸುತ್ತಿದ್ದುದನ್ನು ನಾನು ನೋಡಿದ್ದೆ. ಅದರಲ್ಲಿ ಹುರಿದ ತಂಬಾಕು, ಮೆಣಸಿನಕಾಯಿ ಮತ್ತು ಒಂದು ಬಗೆಯ ಮೆಣಸಿನ ಕಾಳು ಇವುಗಳ ಪುಡಿಯ ಮಿಶ್ರಣವಿತ್ತು.

ಆ ಮೇಲೆ ಪ್ರಾರಂಭವಾಯಿತು ವಿಧಿ. ಪಂಚ ಭೂತಗಳ ಸ್ತುತಿಯ ನಂತರ ಮಂತ್ರ

ವಾದಿಗಳಲ್ಲೊಬ್ಬನು ಒಂದು ಗಜ ಉದ್ದವಾದ ಬೆಂಡಿನ ಕೊಳವೆಯಲ್ಲಿ ಆ ಪುಡಿಯನ್ನು ತುಂಬಿ ಮುಖ್ಯ ಮಂತ್ರವಾದಿಯ ಮೂಗಿನಲ್ಲಿ ಅದನ್ನೂದಿದನು. ಯಾರಾದರೂ ನಿರೀಕ್ಷಿಸಬ ಹುದಾದಂತೆ ಆತ ಸೀನಲು, ಕೆಮ್ಮಲು ಮತ್ತು ಕಾರಲು ಪ್ರಾರಂಭಿಸಿದನು. ಆದರೆ ಇತರ ಮಾಂತ್ರಿಕರು ಅವನ ಮೂಗಿನ ಹೊಳ್ಳೆಯೊಳಗ ಮತ್ತೂ ಊದುತ್ತಲೇ ಇದ್ದರು. ಅದಾದ ಮೇಲ ಮುಖ್ಯ ಮಂತ್ರವಾದಿಯು ಇತರರ ಮೂಗಿನೊ ಳಗೆ ಅವರಿಗೆ ತಾಳಿಕೊಳ್ಳಲು ಸಾಧ್ಯವಾದಷ್ಟು ಸಲ ಊದಿದನು. ಇದೇ ಮಂತ್ರವಾದಿಗಳ ಸತ್ವ ಪರೀಕ್ಷೆಯ ನಿಕಷವಾಗಿತ್ತು. ಎಷ್ಟು ಹೆಚ್ಚು ಈ ಊತವನ್ನು ಸಹಿಸಿಕೊಳ್ಳುವನೋ ಅಷ್ಟು ಸತ್ವ ಶಾಲಿ ಆ ಮಂತ್ರವಾದಿಯೆಂದು ಪರಿಗಣಿಸಲಾ ಗುತ್ತಿತ್ತು. ಅದು ಅವರಿಗೆ ಘನತೆ ಮತ್ತು ಸ್ವಾಸ ಮಾನದ ಪ್ರಶ್ನೆಯಾಗಿತ್ತು.

ನನ್ನ ಸಮ್ಮುಖದಲ್ಲೇ ಮುಖ್ಯ ಮಂತ್ರವಾ ದಿಯು ಆ ಕಂದು ಪುಡಿಯ 240 ಊತಗಳನ್ನು ಪಡೆದನು. ಅವನ ನಂತರದವನು 175 ಸಲ, ಮುಂದಿನವರು 128 ಸಲ ಮತ್ತು 75 ಬಾರಿ ತೀರ ಚಿಕ್ಕ ಮಂತ್ರವಾದಿಗಳು 12 ಮತ್ತು 10 ಊತಗಳನ್ನು ಸಹಿಸಿಕೊಂಡರು.

ಆ ಅನುಭವ

ಈಗ ನನ್ನ ಸರದಿ ಬಂತು. ನಾನೂ ಅವ ರಂತೆ ಕೊಳವೆಯ ತುದಿಯನ್ನು ನನ್ನ ಮೂಗಿ ನಲ್ಲಿ ಸೇರಿಸಿಕೊಂಡೆ. ಮೂಗಿನ ಹೊಳ್ಳೆ ಯನ್ನು ಆದಷ್ಟು ಕುಗ್ಗಿಸಿಕೊಳ್ಳಲು ಯತ್ನಿಸಿದೆ. ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. ಮುಖ್ಯ ಮಂತ್ರವಾದಿ ಊದಿದ ಭರಕ್ಕೆ ಆ ಅಸಹ್ಯ ಪುಡಿಯು ನನ್ನ ತಲೆಯನ್ನೇ ತುಂಬಿಕೊಂ ಡಿದ್ದಲ್ಲದೆ ಸಮಿಭಿವಾಂತವಾಗಿ ಶರೀರವನ್ನೆಲ್ಲಾ ವ್ಯಾಪಿಸಿತು. ಮಿಂಚು ಮೈಯಲ್ಲಿ ಸಂಚರಿಸಿದ ಹಾಗೆ ನನಗೆ ಭಾಸವಾಯಿತು. ಕಣ್ಣು ಕತ್ತ ಲಿಕ್ಕಿ ಆ ಅಗಾಧ ಅಂಧಕಾರದಲ್ಲಿ ಅಲ್ಲೊಂದು ಇಲ್ಲೊಂದು ತಾರೆ ತೇಲುತ್ತಿರುವಂತೆನಿಸಿತು. ನನ್ನ ಜೀವಮಾನದಲ್ಲೇ ಅದು ಅತ್ಯಂತ ಘೋರ ಕ್ಷಣ ವಾಗಿತ್ತು.

ನನಗೂ ಸೀನು ಬಂತು, ಕೆಮ್ಮು ಬಂತು ಅನ್ನಿ. ಅನಂತರ ಎಷ್ಟೋ ಕ್ಷಣ ನಾನು ನಿರ್ವಿ



"ಹತ್ತು ಗಂಟೆಯ ಬಸ್ಸು ಎಷ್ಟು ಗಂಟೆಗೆ ಬಿಡುತ್ತದೆ, ಸಾರ್ ?"

ಣ್ಣನಾಗಿದ್ದ. ಕೊನೆಗೆ ಕಣ್ಣು ತೆರೆದು ನೋಡಿದಾಗ, ನನ್ನ ಸಹಮಾಂತ್ರಿಕರ ನಗುಮುಖಗಳು ಎದು ರಿಗಿದ್ದವು. "ನೀನೆಂಥ ಮಂತ್ರವಾದಿಯಯ್ಯಾ? ಒಂದು ಊತವನ್ನು ಸಹಿಸಿಕೊಳ್ಳಲಾಗಲಿಲ್ಲ ನಿನಗೆ!" ಎಂದು ನನ್ನನ್ನವರು ಚೇಷ್ಟೆ ಮಾಡಿ ದರು.

ನನ್ನ ಜಾತಿಯ-ಬಿಳಿಯರ ಜಾತಿಯ-ಮಾನ ವುಳಿಸಲು ನಾನೇನನ್ನಾದರೂ ಮಾಡಲೇಬೇಕೆಂದು ನನಗಾಗ ತೋರಿತು. ನಾನು ತಲೆ ಕೊಡವಿ ಮತ್ತೆ ಊದಲು ಮುಖ್ಯ ಮಂತ್ರವಾದಿಗೆ ಸನ್ನೆ ಮಾಡಿದೆ. ಆತ ಎರಡನೇ ಬಾರಿ ಊದಿದ, ಮೂರನೇ ಬಾರಿ, ನಾಲ್ಕನೇ ಬಾರಿ. ಆ ಮೇಲೆ ನನಗೇನೂ ತಿಳಿಯಲಿಲ್ಲ. ನನ್ನ ಸುತ್ತ ಗಾಢಾಂ ಧಕಾರ ಆವರಿಸಿತು. ನಾನು ಸ್ಮೃತಿ ತಪ್ಪಿಬಿದ್ದೆ.

ಚೇತರಿಸಿಕೊಂಡಾಗ ಎರಡು ತಾಸು ದಾಟಿತ್ತು. ನಾನು ಮಂತ್ರವಾದದ ಸ್ಥಳದಿಂದ ನೂರು ಗಜ ದೂರದಲ್ಲಿ ನದೀ ತೀರದಲ್ಲಿ ಮಲ ಗಿದ್ದೆ. ಮೈಯೆಲ್ಲ ಒದ್ದೆಯಾಗಿತ್ತು. ಏನಾಯಿತು ಎಂದು ಕೇಳಿದಾಗ, ನಾನು ಮಂತ್ರದ ಸ್ಥಳ ದಲ್ಲೇ ಚೇತನ ತಪ್ಪಿ, ಬೀಳಲಿಲ್ಲವೆಂದೂ ಅರ್ಧ ಸ್ಮರಣಾವಸ್ಥೆಯಲ್ಲಿ ನದಿಯ ಕಡೆ ತೆವಳಿಕೊಂಡು ಹೋಗಿ ನೀರಿನಲ್ಲಿ ಧುಮುಕಿದ್ದೆನೆಂದೂ ತಿಳಿ

ಯಿತು. ಮಂತ್ರವಾದಿಗಳಲ್ಲಿ ನನ್ನ ಪ್ರಿಯ ಮಿತ್ರನಾಗಿದ್ದ ತಕಿರಿರಿ ಬಂದು ನನ್ನನ್ನು ನೀರಿನಿಂದ ಹೊರಗೆಳೆದನಂತೆ. ಅಂದು ನನ್ನ ಜೀವ ಉಳಿಸಿದವನು ಆತನೇ.

ಮರುದಿನ ನಾನು ಯಾವುದೋ ಕೆಲಸದಲ್ಲಿ ವ್ಯಸ್ತನಾಗಿದ್ದಾಗ ಮುಖ್ಯ ಮಂತ್ರವಾದಿ ಬಂದ. ನನ್ನನ್ನು ಮತ್ತೊಂದು ಅಧಿವೇಶನಕ್ಕಾಗಿ ಕರೆದ. "ನನಗಾಗಿ ಕಾಯಬೇಡಿ. ಅದರಲ್ಲಿ ನನಗೇನೂ ಆಸ್ಥೆ ಉಳಿದಿಲ್ಲ" ಎಂದೆ. ಆದರೆ ಅವನು ಕೇಳಬೇಕಲ್ಲ. "ಅದು ಹೇಗಾದೀತು? ನೀನೀಗ ಮಂತ್ರವಾದಿ. ಪಿತೃಗಳ ಆವಾಹನೆಗೆ ನೀನು ನೆರವಾಗಲೇಬೇಕು. ಇಲ್ಲವಾದರೆ ಅವರು (ಪಿತೃಗಳು) ಸಿಟ್ಟಾಗುವರು."

ನಾನು ಮತ್ತೇನು ಮಾಡಬಹುದಾಗಿತ್ತು? ಅವರೊಡನೆ ಸೇರದೆ ವಿಧಿಯಿರಲಿಲ್ಲ. ಅಂದಿನಿಂದ ನಾನು ಅವರ ಪ್ರತಿಯೊಂದು ಅಧಿವೇಶನದಲ್ಲಿಯೂ ಭಾಗವಹಿಸುತ್ತ ಹೋದೆ. ಕೊನೆಗೆ ಆ ಭಯಾನಕ ಪುಡಿಯ ನಲವತ್ತು ಊತಗಳನ್ನು ನಾನು ಸುಲಭವಾಗಿ ಸೈರಿಸಬಲ್ಲವನಾದೆ. ನಲವತ್ತು ಊತಗಳನ್ನು ಸೈರಿಸಬಲ್ಲವನು ಉತ್ತಮ ಮಂತ್ರವಾದಿಯೆಂದು ಗಣನೆಯಿದ್ದುದರಿಂದ ನಾನು ಅಷ್ಟಕ್ಕೇ ನಿಲ್ಲಿಸಿದೆ. ಅಂದಿನಿಂದ ನನಗೆ ಅವರ ಮಂತ್ರ ಮಾಟಗಳ ರಹಸ್ಯವೆಲ್ಲ ಲಭ್ಯವಾಯಿತು. ಅವರು ನನಗೊಂದು ತಾಯಿತ ಕೊಟ್ಟರು. ಅರಣ್ಯದಲ್ಲಿ ನಮ್ಮ ಸಂಶೋಧನೆಗಳಿಗೆ ಅದು ತುಂಬ ನೆರವಾಯಿತು.

ಪುಡಿಯ ಘ್ರಾಣದಿಂದ ಒಂದು ತರದ ಅಮಲು ಬರುತ್ತದೆ. ಆಗ ಮಂತ್ರವಾದಿಗಳು ಏನೇನೋ ಅಸ್ಪಷ್ಟ ಶಬ್ದಗಳನ್ನು ಉಚ್ಚರಿಸುತ್ತಾರೆ. ಆ ಶಬ್ದಗಳಿಂದ ಉಳಿದವರು ಪಿತೃಗಳ ಇಚ್ಛೆಯ ಅರ್ಥಹೇಳುತ್ತಾರೆ. ಈ ಅರ್ಥ ಸ್ವಾಭಾವಿಕವಾಗಿ ಅವರ ಸ್ವಂತ ಇಚ್ಛೆಗಳಿಗೆ ಅನುರೂಪವಾಗಿರುತ್ತದೆಂಬ ಮಾತು ಬೇರೆ.

ಆದರೆ ಅವರ ಮಂತ್ರವಾದದ ಈ ಆಚಾರಕ್ಕೆ ನಿಜವಾದ ಕಾರಣ, ನನ್ನನ್ನು ಕೇಳಿದರೆ, ಅವರಿಗೆ ಈ ಅಮಲಿನಿಂದ ದೊರೆಯುವ ಆನಂದವೇ ಆಗಿದೆ. ಹೆಂಡ, ಅಫು, ತಂಬಾಕು, ಗಾಂಜಾಗಳ ಚಟವುಳ್ಳವನಂತೆ ಇವರಿಗೂ ಇದೊಂದು ಪ್ರಿಯ ಚಟವಾಗಿದೆ. ಇವಾವುವೂ ಪ್ರಥಮ ಅನುಭವದಲ್ಲಿ ಹಿತವಾಗಿರುವುದಿಲ್ಲ. ಬರುಬರುತ್ತ ಅವು ಚಟವಾಗಿ ಮುಂದೆ ಒಂದು ಹುಚ್ಚೇ ಆಗಿಬಿಡುತ್ತವೆ.

ನಿಷ್ಕ್ರಮಣ

ನಾವು ತಿರುಗಿ ಬರುತ್ತಿದ್ದಾಗ ವಜೂರೂ ಜನಾಂಗದವರ ಸಂಪರ್ಕ ಬಂದು ಒಂದೆರಡು ದಿನ ಅವರೊಡನೆ ಕಳೆದೆವು. ಎರಡನೇ ದಿನ ಅಲ್ಲೊಂದು ಮಂತ್ರವಾದಿಗಳ ಅಧಿವೇಶನ ನಡೆಯಿತು. ಅದರಲ್ಲಿ ನಾನೂ ನನ್ನ ಆದಿಮವಾಸಿ ಸಂಗಡಿಗರಲ್ಲಿ ಮಂತ್ರವಾದಿಗಳೆನಿಸಿದ ಕೆಲವರೂ ಭಾಗವಹಿಸಬೇಕಾಯಿತು. ಆ ವಿಧಿ ಐದು ತಾಸುಗಳ ವರೆಗೆ ಸತತವಾಗಿ ಸಾಗಿತು. ಕೊನೆಗೆ ಪಿತೃಗಳು ಆಮಂತ್ರಣವನ್ನು ಸ್ವೀಕರಿಸಿ ಅಂದೇ ರಾತ್ರಿ ಬರುವುದಾಗಿ ಹೇಳಿದಂತೆ ಸೂಚನೆಗಳು ಕಾಣಬಂದವು.

ಅವರನ್ನು ಯಥಾಯೋಗ್ಯವಾಗಿ ಸ್ವಾಗತಿಸಿ ಗುಡಿಸಲಿನ ಮುಂದೆ ಬಣ್ಣ ಬಣ್ಣದ ಚಾಪೆ ಹಾಕಿ ಅದರ ಮುಂದೆ ಆಹಾರವನ್ನೂ ಗೋವಿನ ಜೋಳದಿಂದ ತಯಾರಿಸಿದ ಮದ್ಯವನ್ನೂ ಸಾಲಾಗಿ ಇರಿಸಿದ್ದಾಯಿತು.

ಗಾಢ ರಾತ್ರಿಯಲ್ಲಿ ಪಿತೃಗಳು ಗೋಡೆಗಳನ್ನೂ, ಕಂಬಗಳನ್ನೂ ಗಿಡಗಳ ಟೊಂಗೆಗಳಿಂದ ಬಡಿಯುತ್ತ ತಮ್ಮ ಬರವನ್ನು ಸಾರಿದರು. ಬಳಿಕ ಅವರು ಯಾವುದೋ ಹಾಡನ್ನು ಹಾಡತೊಡಗಿದರು. ಅದರ ಶಬ್ದಗಳಿಗೆ ಇಂದಿನ ವಜೂರೂ ಭಾಷೆಯಲ್ಲಿ ಏನೂ ಅರ್ಥವಿರಲಿಲ್ಲ. ಅದು ಪ್ರೇತಲೋಕದ ವಜೂರು ಭಾಷೆಯಾಗಿರಬೇಕೆಂಬುದರಲ್ಲಿ ಸಂಶಯವಿಲ್ಲ. ಹೆಂಗಸರು ಮಕ್ಕಳು ಭಯ ಭ್ರಾಂತರಾಗಿ ಅರಚತೊಡಗಿದರು. ಆದರೆ ಸ್ವಲ್ಪ ಹೊತ್ತಿನ ನಂತರ ಕೆಲ ಸ್ತ್ರೀಪ್ರೇತಾತ್ಮಗಳು ಆವೇಶ ಹೊಂದಿ ಪ್ರೇತ ಲೋಕದ ಗೀತೆಗಳನ್ನು ಹಾಡಲಾರಂಭಿಸಿದವು.

ಬಳಿಕ ಪಿತೃಭೋಜನ ಪ್ರಾರಂಭವಾಯಿತು. ಮಣ್ಣಿನ ಪಾತ್ರೆಗಳ ಕಣಕಣಾಟದಿಂದಲೂ ತಿನ್ನುವ ಸಪ್ಪಳಗಳಿಂದಲೂ ಇದು ಸ್ಪಷ್ಟವಾಯಿತು. ಕೊನೆಗೆ ಗೋಡೆಗಳನ್ನು ಕೆರೆಯುತ್ತ ಪಿತೃಗಳು ತಮ್ಮ ದೂರ ಸಂತಾನಗಳಿಂದ ಬೀಳ್ಕೊಂಡರು. ಅರಣ್ಯದಲ್ಲಿ ಪುನರಪಿ ಪ್ರಶಾಂತ ನೀರವದ ರಾಜ್ಯ ಹಬ್ಬಿತು. *



ಕೆಂಬಾವುಟಗಳು ಕುಸಿದವೇಕೆ?



ಬದಲಾವಣೆಯ ಕೂಗು

ಭೌಗೋಳಿಕವಾಗಿ ಯುರೋಪಿನ ಮಧ್ಯಭಾಗದಲ್ಲಿದ್ದರೂ ಪೂರ್ವ ಯುರೋಪ್ ಎಂದೇ ಗುರುತಿಸಲ್ಪಡುವ, ಕಮ್ಯುನಿಷ್ಟ್ ಪ್ರಭುತ್ವ ಒಪ್ಪಿಕೊಂಡಿದ್ದ ಹಲವಾರು ದೇಶಗಳು ಇತ್ತೀಚೆಗೆ ಅಭೂತಪೂರ್ವ ಸ್ಥಿತ್ಯಂತರ ಕಾಣತೊಡಗಿವೆ. ಈ ದೇಶಗಳು ಇಳಿಬಿಟ್ಟುಕೊಂಡಿದ್ದ ಲೋಹ ಪರದೆಗಳು ಮೇಲೇರತೊಡಗಿವೆ. ಕೆಂಬಾವುಟಗಳು ಕಳೆಗುಂದತೊಡಗಿವೆ. ಹಾಗಾದರೆ ಇದು ಸಮಾಜವಾದದ ಸೋಲೇ ? ಅಥವಾ ತಾತ್ಕಾಲಿಕ ಹಿಂತೆಗೆತವೇ ? ಕೆಂಬಾವುಟಗಳ ನೆರಳಿನಡಿ ನಡೆದದ್ದೇನು ? ಒಂದು ಸಮಗ್ರ ವಿಶ್ಲೇಷಣೆ.

*ಎಸ್.ಬಿ.ನರಗುಂದಕರ

'ಇತಿಹಾಸ ಮರುಕಳಿಸುತ್ತದೆ'- ಇದು ರೂಢಿಯ ಮಾತು.'ಸಮಾಜವಾದದ ಹಂತಗಳು ಹಲವಾರು. ಒಮ್ಮೊಮ್ಮೆ ಅದು ಹಿಂತೆಗೆತವನ್ನು ಅನುಭವಿಸುತ್ತದೆ. ಆದರೆ ಅದು ವೈಫಲ್ಯವಲ್ಲ!'- ಇದು ಕಮ್ಯುನಿಸ್ಟ್ ಸಂತ ಕಾರ್ಲ್ ಮಾರ್ಕ್ಸ್‌ನ ಹೇಳಿಕೆ.

ಹಾಗಾದರೆ ಪೂರ್ವ ಯುರೋಪ್ ಎಂದು ಕರೆಯಲ್ಪಡುವ ರಾಷ್ಟ್ರಗಳಲ್ಲಿ ನಡೆದದ್ದಾದರೂ ಏನು? ಇತಿಹಾಸದ ಮರುಕಳಿಕೆಯೆ? ಸಮಾಜವಾದದ ತಾತ್ಕಾಲಿಕ ಹಿಂತೆಗೆತವೆ? ಗೂರ್ಬಚೇವ್‌ರ ಕಿರುನಗೆಯಷ್ಟೇ ಸಾಂಕ್ರಾಮಿಕವಾದ ಗ್ಲಾಸ್‌ನಾಸ್ಟ್ ಮತ್ತು ಪೆರಿಸ್ಟ್ರೋಯಿಕಾಗಳು ನೀಡಿದ ಚಾಲನೆಯೆ? ಏನಿದು?

ಗೋಡೆ ಮತ್ತು ಪರದೆ

1945ರ ತನಕ ಸ್ವಾರ್ಥ ಹುಚ್ಚುನಾಯಿಯಂತೆ ಯುರೋಪನಾದ್ಯಂತ ಎರಡನೆ ಜಾಗತಿಕ ಯುದ್ಧದ ಎಲುಬುಗಳನ್ನು ಹಿಡಿದುಕೊಂಡು ಓಡಿದ್ದು ಈಗ ಇತಿಹಾಸ. ಯುದ್ಧ ಮುಗಿದು

ರಣರಂಗ ಸ್ತಬ್ಧಗೊಂಡ ಸಮಯ. ಅದರ ಉತ್ತರದಲ್ಲಿಯ ಬಾಲ್ಟಿಕ್ ಸಮುದ್ರದಿಂದ ದಕ್ಷಿಣದಲ್ಲಿಯ ಅಡ್ರಿಎಕ್ ಸಮುದ್ರ ತೀರದ ಯುಗೋಸ್ಲಾವಿಯಾದ ಟ್ರೈಸ್ಟಿಯವರೆಗೂ ಒಂದು 'ಲೊಹ ಪರದೆ'ಯನ್ನು ಎಳೆಯಲಾಯಿತು.

ಯುರೋಪ ಖಂಡ ಎರಡು ತುಂಡಾಗಿ ಪೂರ್ವ ಮತ್ತು ಪಶ್ಚಿಮ ಯುರೋಪ್‌ಗಳಾದವು. ಇದೇ ಲೋಹ ಪರದೆ ಇಡೀ ಜಗತ್ತನ್ನು ಎರಡು ಮಾಡಿ ಕಮ್ಯುನಿಸ್ಟ್ ಮತ್ತು ಕಮ್ಯುನಿಸ್ಟೇತರ ರಾಷ್ಟ್ರಗಳೆಂದು ಧ್ರುವೀಕರಿಸುವ ಕೆಲಸವನ್ನೂ ಮಾಡಿತು. ಈ ಪರದೆ ಮತ್ತೆ ಮೇಲೇಳುವ ಲಕ್ಷಣಗಳೇ ಕಾಣಲಿಲ್ಲ.

ಮುಂದೆ ಕೆಲವರ್ಷಗಳಲ್ಲಿ ಎದ್ದು ನಿಂತ ಬರ್ಲಿನ್ ಗೋಡೆ ಜರ್ಮನಿಯನ್ನು ಸೀಳಿತು. ಕಣ್ಣಿಗೆ ಕಾಣದ 'ಲೋಹಪರದೆ' ಮತ್ತು ಭೌತಿಕವಾದ ಬರ್ಲಿನ್ ಗೋಡೆ- ಇವೆರಡೂ ಈ ಶತಮಾನದ ರಾಜಕೀಯ, ಆರ್ಥಿಕ, ಭೌಗೋಳಿಕ ಮತ್ತು ಮಾನಸಿಕ ಛಿದ್ರತೆ ಹಾಗೂ ಧ್ರುವೀಕರಣಗಳ ಸಂಕೇತಗಳಾದವು.

ಆದರೆ ಕಾಲ ಸುಮ್ಮನಿರುವುದಿಲ್ಲ. ಎರದನೆಯ ಮಹಾ ಯುದ್ಧ ಮುಗಿದು ಐವತ್ತು ವರ್ಷ ಮುಗಿಯುವ ಹೊತ್ತಿಗೆ ಬರ್ಲಿನ್‌ಗೋಡೆ ಕುಸಿಯಿತು. ಲೋಹದ ಪರದೆ ಸರಿಯಿತು. ಯುರೋಪ್‌ನ ಪೂರ್ವದಲ್ಲಿನ ರಷ್ಯದ ಉರಾಲ್ ಪರ್ವತದ ಮೇಲೆ ಹೊಸ ನೇಸರನ ಕಿರಣಗಳು ಝುಂಡಾ ಎಬ್ಬಿಸಿದವು. ಮಂಜು ಕರಗತೊಡಗಿತು. ಮಿಖೇಲ್ ಗೋರ್ಬಚೇವ್‌ರ ಗ್ಲಾಸ್‌ನಾಸ್ಟ್ ಮತ್ತು ಪೆರಿಸ್ಟ್ರೋಯಿಕಾಗಳು ಪಶ್ಚಿಮ ತೀರಗಳನ್ನು ಕದಲಿಸುವ ಅಲೆಗಳಾದವು.

ಹೊಸ ದಿಕ್ಕಿನತ್ತ

ಯಾವುದನ್ನು ನಾವು ಪೂರ್ವ ಯುರೋಪ್ ಎನ್ನುತ್ತೇವೆಯೋ, ಅದು ವಾಸ್ತವಿಕವಾಗಿ ಭೌಗೋಳಿಕ ದೃಷ್ಟಿಯಿಂದ ಯುರೋಪ್‌ನ ಮಧ್ಯ ಭಾಗವಾಗಿದೆ. ಈ ಭಾಗದ ರಾಷ್ಟ್ರಗಳಾದ ಪೋಲೆಂಡ್, (ಅಂದಿನ) ಪೂರ್ವ ಜರ್ಮನಿ, ಝುಕೋಸ್ಲಾವಾಕಿಯಾ, ಹಂಗೇರಿ, ಬಲ್ಗೇರಿಯಾ ಮತ್ತು ರುಮಾನಿಯಾಗಳು ಹೊಸ ಆಕಳಿಕೆಗೆ ಒಳಗಾಗಿವೆ. ಮಗ್ಗಲು ಬದಲಿಸಿವೆ. ಅಲ್ಲೀಗ ಕಮ್ಯುನಿಸ್ಟ್ ಸರ್ಕಾರಗಳಿಲ್ಲ. 1989ರ ಆರಂಭದಲ್ಲಿ ಮೊಳಕೆಯೊಡೆದ ಬದಲಾವಣೆ ಆ

ಹಂಗೇರಿ: ಪುಟ್ಟ ಊರುಗಳ ರಾಷ್ಟ್ರ



ಹಂಗೇರಿಯನ್ನರು ಡ್ಯಾನೂಬ ನದೀಕೊಳ್ಳದ ದಕ್ಷಿಣ ಭಾಗದಲ್ಲಿ ನೆಲೆಗೊಂಡಿದ್ದಾರೆ. ಮೂಲತಃ ಇವರು ಕಪ್ಪು ಸಮುದ್ರದ ಉತ್ತರಕ್ಕಿರುವ ಹುಲ್ಲುಗಾವಲಿನವರು ಕೃಷಿಕರು. ಇವರದು ಮೆಗ್ಯೆರ್ ಭಾಷೆ. ಅತ್ಯಂತ ಕಡಿಮೆ ಪಟ್ಟಣಗಳಿರುವ ದೇಶವಾದ ಹಂಗೇರಿಯಲ್ಲಿ ಅತಿದೊಡ್ಡ ನಗರವೆಂದರೆ ಸಾಮಾನ್ಯ ವೈಶಾಲ್ಯದ ಬುಡಾಪೆಸ್ಟ್! 1956ರಲ್ಲಿ ಒಮ್ಮೆ ರಷ್ಯನ್ ಸರ್ಕಾರದ ವಿರುದ್ಧ ದಂಗೆಯೆದ್ದು ವಿಫಲರಾದ ಇವರು ತೀವ್ರವಾಗಿ ರಷ್ಯನ್ನರನ್ನು ದ್ವೇಷಿಸುತ್ತಾರೆ.

ವರ್ಷದ ಅಂತ್ಯದ ಹೊತ್ತಿಗೆ ತನ್ನ ಅಂತಿಮ ರೂಪ ತಳೆದದ್ದು ಈ ಶತಮಾನದ ಅತಿದೊಡ್ಡ ಅಚ್ಚರಿಗಳಲ್ಲೊಂದು.

ಎರಡನೆ ಜಾಗತಿಕ ಯುದ್ಧದ ನಂತರ ಸಮಾಜವಾದಿ ವ್ಯವಸ್ಥೆಯ ಕನಸು ಹೊತ್ತು ಕಮ್ಯುನಿಸ್ಟ್ ಸರ್ಕಾರಗಳನ್ನು ರಚಿಸಿಕೊಂಡ ಈ ರಾಷ್ಟ್ರಗಳು ಸಲವತ್ತೈದು ಮಳೆಗಾಲಗಳು ಕಳೆಯುವ ಹೊತ್ತಿಗೆ ಮತ್ತೆ ಬಂಡವಾಳ ವಾದಕ್ಕೆ ಮರಳಿವೆ. ಜಾಗತಿಕ ಕಮ್ಯುನಿಸ್ಟ್ ಚಳವಳಿಯ ಪ್ರಮುಖ ಕೇಂದ್ರ ಬಿಂದುವಾದ ಸೋವಿಯತ್ ರಷ್ಯ ಕೂಡ ಮುಕ್ಕಾಲು ಶತಮಾನದ ಬಳಿಕ ಇಂದು ಖಾಸಗೀಕರಣದ ಊರುಗೋಲು ಹಿಡಿದು ಮುಕ್ತ ಮಾರುಕಟ್ಟೆಯ ಅರ್ಥವ್ಯವಸ್ಥೆಯತ್ತ ನಡೆಯತೊಡಗಿರೆಯೆಂಬುದು ಗಮನೀಯ ಅಂಶ.

ಕೊಂಚ ಹಿಂದಕ್ಕೆ ಬನ್ನಿ. ಇದು ಸೂಕ್ತೆವತ್ತು ವರ್ಷಗಳ ಹಿಂದಿನ ಮಾತು. ಆಗಿನ ಪರಿಸ್ಥಿತಿಗಳಲ್ಲಿ ಪ್ರತಿ ಜನಾಂಗವೂ ತನ್ನದೇ ಆದ ಸ್ವತಂತ್ರ ರಾಜ್ಯ ಹೊಂದಿರಬೇಕೆಂಬ ವಿಚಾರವೊಂದು ಪ್ರಪಂಚಾದ್ಯಂತ ರಿಂಗಣಿಸತೊಡಗಿತು.. ಶುರುವಾಯಿತು ರಾಷ್ಟ್ರೋದಯಗಳ ಚೈತ್ರ ಯಾತ್ರೆ! ಈ ರಾಷ್ಟ್ರ-ರಾಜ್ಯಗಳ ಬೆಳವಣಿಗೆ ಎರಡು ತೆರನಾದ ಕಲಹಗಳಿಗೆ ಕಾರಣವಾಯಿತು. ಒಂದೆಡೆ ರಾಷ್ಟ್ರ-ರಾಷ್ಟ್ರಗಳ ನಡುವಿನ ಕಲಹವಾದರೆ ಮತ್ತೊಂದೆಡೆ ಪ್ರತಿರಾಷ್ಟ್ರಗಳಲ್ಲೂ ರೂಪುಗೊಂಡ ವರ್ಗ ಕಲಹಗಳು! ಇವುಗಳಿಗೆ ಒಂದು ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ನೆಲೆಗಟ್ಟಿತ್ತು. ಕಾಲಕ್ರಮದಲ್ಲಿ ಈ ಕಲಹಗಳು ರಾಷ್ಟ್ರವಾದಕ್ಕೂ, ಸಮಾಜವಾದಕ್ಕೂ ಸೈದ್ಧಾಂತಿಕ ನೆಲೆಗಟ್ಟನ್ನೊದಗಿಸಿದವು. ಇದು 19ನೇ ಶತಮಾನದ ಮೊದಲರ್ಧ ಭಾಗದ ಕಥೆ. ಮುಂದೆ ಈ ಎರಡೂ ಧೋರಣೆಗಳ ಕನಸುಗಳು ಸುಳ್ಳಾಗಿ ರಾಷ್ಟ್ರೀಯ ಅಥವಾ ಜನಾಂಗೀಯ ಘರ್ಷಣೆಗಳು ಮತ್ತು ವರ್ಗ ಕಲಹಗಳು ಭುಗಿಲೆದ್ದು ಬಿಟ್ಟವು.

ಬಾಲ್ಕನ್ ಪರ್ವತ ಶ್ರೇಣಿ ಗೊತ್ತಲ್ಲ. ಅದರ ಸುತ್ತಮುತ್ತ ಹಬ್ಬಿರುವ ಉತ್ತರದ ಪೋಲೆಂಡ್‌ನಿಂದ ಹಿಡಿದು ನೈರುತ್ಯದ ಅಲ್ಬೇನಿಯಾ, ಆಗ್ನೇಯದ ಬಲ್ಗೇರಿಯಾವರೆಗೆ ಹರಡಿಕೊಂಡ ಈ ದೇಶಗಳನ್ನೂ ಬಾಲ್ಕನ್ ದೇಶಗಳೆನ್ನುವುದುರೂಢಿ. ಇತಿಹಾಸದುದ್ದಕ್ಕೂ ಈ ದೇಶಗಳು ಪರಸ್ಪರ ಕಚ್ಚಾಡಿಕೊಂಡು ನೆತ್ತರು ಚೆಲ್ಲಿವೆ. ವಿವಿಧ ಜನಾಂಗಿಕ ಹಾಗೂ ಭಾಷಿಕ ಬುಡಕಟ್ಟುಗಳು ನೆಲೆಗೊಂಡಿರುವುದೇ ಈ ಕಲಹಗಳಿಗೆ

ನಾವು ಮಧ್ಯ

ಪೂರ್ವ ಯೂರೋಪಿನ ಬಗ್ಗೆ ಇಷ್ಟೆಲ್ಲ ಮಾತನಾಡಿ 'ಇವು ಪೂರ್ವ ಯೂರೋಪ್‌ನ ರಾಷ್ಟ್ರಗಳಲ್ಲ!' ಎಂದು ಹೇಳಿದರೆ ನಿಮಗೆ ಅಚ್ಚರಿಯಾಗಬಹುದು. ಆದರೆ ಅದು ಸತ್ಯ. ಕಮ್ಯುನಿಸ್ಟ್ ರಷ್ಯಾದ ವರ್ಚಸ್ಸಿನ ವಲಯಕ್ಕೆ ಸೇರಿದಾಗಿನಿಂದ ಈ ಭೂ ಭಾಗವನ್ನು 'ಪೂರ್ವ ಯೂರೋಪ್' ಎಂದು ಕರೆಯ ತೊಡಗಿದರು. ಜರ್ಮನಿಯ ವರ್ಚಸ್ಸಿಗೆ ಒಳಗಾಗಿದ್ದಾಗ ಇದನ್ನು ಮಧ್ಯ ಯೂರೋಪ್ ಎನ್ನುತ್ತಿದ್ದುದು ಗಮನಾರ್ಹ. ಇಲ್ಲಿಯ ಜನರಿಗೆ ಪೂರ್ವ ಯೂರೋಪ್ ಎಂಬ ಪದವೆಂದರೆ ಆಗದು. ಅದು ದಾಸ್ಯದ, ಅಧೀನತೆಯ ಸಂಕೇತ. ಅವರು ತಮ್ಮನ್ನು 'ಮಧ್ಯ ಯೂರೋಪ್'ನವರೆಂದು ಕರೆದುಕೊಳ್ಳುತ್ತಾರೆ. ಭೂಗೋಳ ಶಾಸ್ತ್ರಜ್ಞರೂ ಇದನ್ನು ಮಧ್ಯ ಯೂರೋಪ್ ಎಂದೇ ಪರಿಗಣಿಸುತ್ತಾರೆ. ಅವರ ಪ್ರಕಾರ ಉರಾಲ ಪರ್ವತದ ಪಶ್ಚಿಮಕ್ಕಿರುವ ರಷ್ಯದ ಭಾಗವು ಪೂರ್ವ ಯೂರೋಪ್ ಎನಿಸಿಕೊಳ್ಳುತ್ತದೆ ಉರಾಲ ಪರ್ವತದ

ಕಾರಣವಿರಬಹುದು. ಈ ಕಲಹ ಎಷ್ಟರಮಟ್ಟಿಗೆ ಖ್ಯಾತವಾಯಿತೆಂದರೆ ಭೇದ ನೀತಿಯ ಪಾಲನ ಅಥವಾ ಕಲಹ ಕಿತ್ತಾಟಗಳಿಗೆ 'ಬಾಲ್ಕನೈಸೇಷನ್' ಎಂಬ ಪರ್ಯಾಯ ಪದ ಬಳಸುವಷ್ಟರ ತನಕ ಹೋಗಿದೆ. ಒಂದೆಡೆ ಜರ್ಮನಿ, ಮತ್ತೊಂದೆಡೆ ರಷ್ಯಗಳು ಸೇರಿಕೊಂಡು ಈ ಬಾಲ್ಕನ್ ರಾಜ್ಯಗಳನ್ನು ಅತಂತ್ರಗೊಳಿಸಿದ್ದೂ, ಇವು ಎಂದೆಂದಿಗೂ ಸ್ವತಂತ್ರ ಅಸ್ತಿತ್ವವಿಲ್ಲದ ಸರಕಿದ್ದೂ ಅಂದಿನ ಐತಿಹಾಸಿಕ ಸತ್ಯಗಳು.

ಆದರೆ ಅದೆಲ್ಲ ಎಷ್ಟು ದಿನ? ಬಾಲ್ಕನ್ ಪ್ರಜೆಗಳ ಸಹನೆಗೊಂದು ಮಿತಿಯಿತ್ತು. ಅಕ್ಟೋಪಸ್ ಹಿಡಿತ ಸಡಿಲುಗೊಳ್ಳುವುದನ್ನೇ ಕಾದಿದ್ದ ಈ ದೇಶಗಳು 1989ರಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ತಿರುಗಿಬಿದ್ದವು. ಕೈಗೊಂಬೆ ಸರಕಾರಗಳನ್ನು ಕೆಡವಿ ಇತರ ರಾಷ್ಟ್ರಗಳಂತೆ ತಮಗೂ ಒಂದು ಸ್ವತಂತ್ರ ಅಸ್ತಿತ್ವವಿದೆಯೆಂಬುದನ್ನು ತೋರಿಸಿಕೊಡಲು ಹೆಣಗಿದರು ಜನ. ಪೋಲಂಡ್, ಪೂರ್ವಜರ್ಮನಿ, ಹಂಗೇರಿ, ಝೆಕೋಸ್ಲಾವಾಕಿಯಾ, ರುಮಾನಿಯಾ, ಬಲ್ಗೇರಿಯಾ ದೇಶಗಳ ಜನತೆ ತಮ್ಮ ಕಮ್ಯುನಿಸ್ಟ್ ಸರ್ಕಾರಗಳ ಹೆಸರಿನಲ್ಲಿ ಆಳುತ್ತಿದ್ದ ಆಳರಸರ ವಿರುದ್ಧ ಬಂದೆದ್ದರು. ಸುತ್ತಿಗೆ ಸೋತಿತು.

ಬಲ್ಗೇರಿಯಾ



'ಬಲ್ಗಾರ್' ಎಂದರೆ ಮಿಶ್ರ ರಕ್ತ (ಮಿಶ್ರತಳಿ)ದವನು ಎಂದರ್ಥ. ಬಲ್ಗೇರಿಯಾದ ಜನಾಂಗದಲ್ಲೂ ಹತ್ತು ಹಲವು ಪರಕೀಯ ಛಾಯೆಗಳು ಕಾಣಸಿಗುತ್ತವೆ. ಕೆಲಕಾಲ ಈ ದೇಶ ಅಂದಿನ ಟರ್ಕಿಯ ಉಸ್ಮಾನ್ (ottoman) ಸಾಮ್ರಾಜ್ಯದ ಭಾಗವಾಗಿತ್ತು. ಈಗಲೂ ಇಲ್ಲಿ ತುರ್ಕಿಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರ ಒಲವು ಸದಾ ಟರ್ಕಿಯ ಕಡೆಗೇ !

ಯೂರೋಪ್‌ನವರು

ಪೂರ್ವದಲ್ಲಿರುವ ರಷ್ಯ ಏಷ್ಯಾ ಖಂಡದಲ್ಲಿ ಪೆಸಿಫಿಕ್‌ವರೆಗೂ ಹಬ್ಬಿಕೊಂಡಿದೆ. ಒಂದು ಅರ್ಥದಲ್ಲಿ ಯುರೇಷಿಯನ್ (ಯೂರೋಪ್ ಮತ್ತು ಏಷ್ಯನ್) ಭೂಪ್ರದೇಶದಲ್ಲಿ ವಾಸಿಸುವ ಈ ಜನ ಹೆಚ್ಚಾಗಿ ಐರೋಪ್ಯ ಸಂಸ್ಕೃತಿಯೊಂದಿಗೆ ತಾದಾತ್ಮ್ಯತೆಯನ್ನು ಹೊಂದಲು ಬಯಸುತ್ತಾರೆ. ಯೂರೋಪೀಕರಣ (Europianisation) ಇಡೀ ಜಗತ್ತಿನಾದ್ಯಂತ ಬೀಸುತ್ತಿರುವ ಬಿರುಗಾಳಿಗೆ ಚೆಕ್, ಸ್ಲೋವಾಕ್‌ರು ಹಂಗೇರಿಯನ್ನರು, ಪೋಲರು ಹೊರತಲ್ಲ. ಇವರೆಲ್ಲರಿಗೂ ತಮ್ಮದೇ ಆದ ಸಾಂಸ್ಕೃತಿಕ ವೈಶಿಷ್ಟ್ಯತೆಗಳಿದ್ದಾಗ್ಯೂ ಇವು ಐರೋಪ್ಯ ಸಂಸ್ಕೃತಿಯ ಹೊರ ವಲಯದಲ್ಲಿ ಬೆಳೆಯುವಂತಹ ಉಪ ಸಂಸ್ಕೃತಿಗಳೇ ಹೊರತು ಬೇರಲ್ಲ.

ಸಂಸ್ಕೃತಿಯ ವಿಷಯದಲ್ಲೂ ಇವರು ರಷ್ಯನ್ ಸಂಸ್ಕೃತಿಗಿಂತ ಪಶ್ಚಿಮ ಯೂರೋಪ್‌ನ ಸಂಸ್ಕೃತಿಗೆ ಹೆಚ್ಚು ಹತ್ತಿರಾದವರೆಂಬುದು ಗಮನೀಯ ಅಂಶ.

*

ತುದುಗೋಲು ಮುರಿಯಿತು. ಮತ್ತೆ ಸೂರ್ಯವತ್ತು ವರ್ಷಗಳ ಹಿಂದಿನ ರಾಷ್ಟ್ರೋದಯದ ಜೈತ್ರಯಾತ್ರೆಗೆ ಚಾಲನೆ ದೊರೆಯಿತು.

ಯಾವುದು ಲಿಬರೇಷನ್?

ಏನಿದರ ಅರ್ಥ? ಇದು ಮಾರ್ಕ್ಸ್‌ನ ಸಿದ್ಧಾಂತದ ವಿರುದ್ಧ ನಡೆದ ಹೋರಾಟವೆ? ಪರಕೀಯ ಅಧಿಪತ್ಯ, ಹಸ್ತಕ್ಷೇಪಗಳ ವಿರುದ್ಧ ನಡೆದ ಕ್ರಾಂತಿಯೆ? ಪ್ರಜಾಪ್ರಭುತ್ವಕ್ಕಾಗಿ ನಡೆದ ಹೋರಾಟವೆ? ಕಮ್ಯುನಿಸ್ಟರ ಏಕಪಕ್ಷೀಯ-ನಿರಂಕುಶತ್ವದ ವಿರುದ್ಧ ಸಿಡಿತವೆ? ಬಂಡವಾಳವಾದದ ಪುನರಾಗಮನಕ್ಕೆ ನೀಡಿದ ಕರೆಯೆ? ಇವೆಲ್ಲ ಪ್ರಶ್ನೆಗಳಿವೆ. ಆದರೆ ಮಾನವ ಇತಿಹಾಸ ತುಂಬಾ ದೂರದ ಹಾದಿ ನಡೆದು ಬಂದಿದೆ. ಇವೆಲ್ಲ ಘಟನೆಗಳು ಘಟಿಸಿದ್ದು ತೀರ ಇತ್ತೀಚೆಗೆ, ಒಂದೇ ವರ್ಷದ ಹಿಂದೆ. ಈಗಲೇ ಕೂತು ಇವುಗಳನ್ನು ಇತಿಹಾಸದ ಟೇಬಲ್ಲಿನ ಮೇಲೆ ಮಲಗಿಸಿ ಪೋಸ್ಟ್‌ಮಾರ್ಟಂ ಮಾಡುವುದಾಗಲೀ, ಅರ್ಥೈಸುವುದಾಗಲೀ, ಉತ್ತರಿಸುವುದಾಗಲೀ ಆಗದ ಮಾತು. ಕದೆಯ ಪಕ್ಷ ವಿವರಣ ನೀಡುವುದೂ ಸಾಹಸದ ಮಾತಾದೀತು. ಸ್ಪಷ್ಟವಾಗಿ ಕಾಣದಷ್ಟು ಇವು ಕಣ್ಣಿಗೆ ಹತ್ತಿರವಾಗಿವೆ

1918ಕ್ಕೆ ಮೊದಲು ಬಲ್ಗೇರಿಯಾ ಒಂದರ ಹೊರತು ಈ ಭಾಗದ ಎಲ್ಲ ರಾಷ್ಟ್ರಗಳೂ ಆಸ್ಟ್ರೋ-ಹಂಗೇರಿಯನ್ ಸಾಮ್ರಾಜ್ಯದಲ್ಲಿದ್ದವು. ಜರ್ಮನಿಯ ಪರವಾಗಿ ಮೊದಲ ಜಾಗತಿಕ ಯುದ್ಧದಲ್ಲಿ ಪಾಲ್ಗೊಂಡ ಆಸ್ಟ್ರೊ- ಹಂಗೇರಿಯನ್ ಸಾಮ್ರಾಜ್ಯ ಸೋಲುಂಡಿತು. ಮುಂದ ವರ್ಸೈಲ್ಸ್ ಒಪ್ಪಂದದ ಮೇರೆಗೆ ಪೂರ್ವ ಯುರೋಪ್‌ನಲ್ಲಿನ ಹಲವಾರು ಜನಾಂಗದವರಿಗೆ ಸ್ವತಂತ್ರ ರಾಜ್ಯಗಳನ್ನು ನೀಡಲಾಯಿತು. ಯುಗೋಸ್ಲಾವಿಯಾ, ಅಲ್ಬೇನಿಯಾ, ಝೆಕೋ

ದುರಂತವೆಂಬ ನಿತ್ಯ ಮಂತ್ರ

ಪೂರ್ವ ಯೂರೋಪಿಯನ್ನರ ಸುಪ್ತ ಪ್ರಜ್ಞೆಗೆ ಚಾಲನೆಯಿತ್ತವರೆಂದರೆ ಮಿಲಾನ್ ಕುಂದೇರಾ ಎಂಬ ಝೆಕ್ ಕಾದಂಬರಿಕಾರ. ದೇಶ ಭ್ರಷ್ಟರಾಗಿ ಫ್ರಾನ್ಸ್‌ನಲ್ಲಿ ಜೀವಿಸುತ್ತಿದ್ದ ಇವರು 1980 ರಲ್ಲಿ "ಮಧ್ಯ ಯೂರೋಪ್‌ನ ದುರಂತ" ಎಂಬ ತಮ್ಮ ಪ್ರಬಂಧದಲ್ಲಿ ಈ ಪದವನ್ನೂ, ಎಲ್ಲ ಮರೆತ ಮಾತುಗಳನ್ನೂ ಮತ್ತೆ ಚರ್ಚೆಗೆ ತಂದರು. ಚರ್ಚೆ ಸಾಂಕ್ರಾಮಿಕವಾಯಿತು. ಇತರ ಲೇಖಕರು, ಪತ್ರಕರ್ತರು, ಶಿಕ್ಷಕರು, ವಿದ್ಯಾರ್ಥಿಗಳು ಎಲ್ಲರೂ ಈ ಬಗ್ಗೆ ಬರೆಯತೊಡಗಿದರು. 'ಮಧ್ಯ ಯೂರೋಪ್‌ನ ದುರಂತ' ಎಂಬ ಪದ ರಾಜಕಾರಣಿಗಳ ನಿತ್ಯ ಮಂತ್ರವಾಯಿತು. ಮಧ್ಯಯೂರೋಪಿನ ಸಂಸ್ಕೃತಿಯ ಬಗ್ಗೆ ಸಂಕಿರಣಗಳು, ಪತ್ರಿಕೆಗಳು, ಚರ್ಚಾಗೋಷ್ಠಿಗಳು ದಿನಗಟ್ಟಲೆ ನಡೆದವು. ಎಲ್ಲಿ ಅಡಗಿತ್ತೋ, ಅದೆಲ್ಲ ಚಿಂತನೆ ಹೊರಬಂತು.

ಹಂಗೇರಿಯನ್ ಕಾದಂಬರಿಕಾರ ಜಾರ್ಜ್ ಕ್ಯಾನರಾಡ್ ಹೇಳುವ ಮಾತು ಗಮನಾರ್ಹ "ಮಧ್ಯ ಯೂರೋಪಿನವರು ಎಂದು ಸಾಧಿಸಿಕೊಳ್ಳಬೇಕಿದ್ದರೆ ಅವರು ತಮ್ಮ ಜನಾಂಗಿಕ ಅಹಂಭಾವನೆಗಳನ್ನೂ ಮತ್ತು ರಾಷ್ಟ್ರೀಯ ಮಹತ್ವಾಕಾಂಕ್ಷೆಗಳನ್ನೂ ಅದುಮಿಟ್ಟುಕೊಳ್ಳುವುದು ಅವಶ್ಯಕ! ಏಕೆಂದರೆ ಮಧ್ಯ ಯೂರೋಪ್ ಎಂದರೆ ಬಹುರಾಷ್ಟ್ರೀಯರು ಮತ್ತು ಹತ್ತಾರು ಬುಡಕಟ್ಟಿನವರು ಒಂದೆಡೆ ಕಲೆಯುವ ಸ್ಥಾನ. ಅವರ 'ರೇಂದವೂ' (Rende zvous)"

ತಮ್ಮಜನಾಂಗಿಕ ಭಾವನೆಗಳನ್ನು ಅತಿರೇಕಕ್ಕೆ ಒಯ್ದಾಗಲೆಲ್ಲ ಈ ರಾಷ್ಟ್ರಗಳು ಪರಾಧೀನವಾಗಿವೆ. ಇದೊಂದು ಐತಿಹಾಸಿಕ ಆಕಸ್ಮಿಕವೂ ಇರಬಹುದು. ಅಥವಾ ಐತಿಹಾಸಿಕ ಅನಿವಾರ್ಯತೆಯೂ ಆಗಿದ್ದೀತು!

****

ಜಟಿಲ ಇತಿಹಾಸದ ರುಮಾನಿಯಾ



ದೊಡ್ಡ ಜನಸಂಖ್ಯೆಯಿರುವ ಈ ಸುವಿಶಾಲ ದೇಶಕ್ಕೆ ಜಟಿಲವಾದ ಇತಿಹಾಸವಿದೆ. ದೇಶದ ಜನಾಂಗದಲ್ಲಿ ಡೇಸಿಯನ್, ರೋಮನ್ ಮತ್ತು ಸ್ಲಾವ್ ಜನಾಂಗಗಳ ಛಾಯೆಯಿದೆ. ರುಮಾನಿಯಾದ ಉತ್ತರ ಭಾಗವನ್ನು ಟ್ರಾನ್ಸಿಲ್ವೇನಿಯಾ ಎನ್ನಲಾಗುತ್ತಿದ್ದು ಅಲ್ಲಿ ಹಂಗೇರಿಯನ್ನರು, ಜರ್ಮನರು, ಜ್ಯೂಗಳು, ಜಿಪ್ಸಿಗಳು, ತುರ್ಕೀಯರು ನೆಲೆಗೊಂಡಿದ್ದಾರೆ. ಎಲ್ಲ ಬಾಲ್ಕನ್ ದೇಶಗಳಂತೆ ಇಲ್ಲಿಯೂ ಜರ್ಮನರು ಅಲ್ಪಸಂಖ್ಯಾತರು ಮತ್ತು ಹಿಟ್ಲರನಿಗೆ ನೆರವು ನೀಡಿ ಇದ್ದ ಮನೆಗೆ ದ್ರೋಹ ಬಗೆದವರು!

ಸ್ಲೋವಾಕಿಯಾ, ಹಂಗೇರಿ ಮುಂತಾದ ದೇಶಗಳು ಹುಟ್ಟಿದ್ದು ಹೀಗೆ. ಆಗಲೇ ಆಸ್ಟ್ರಿಯಾ ಕೂಡ ಒಂದು ಸ್ವತಂತ್ರ, ಆದರೆ ಅತಿಚಿಕ್ಕ ರಾಷ್ಟ್ರವಾಗಿ ರೂಪುಗೊಂಡಿತು. ಇಷ್ಟಾದರೂ ಪ್ರಬಲ ಜನಾಂಗದ ರಾಜ್ಯದಲ್ಲಿ ಇತರೆ ಜನಾಂಗದವರು ಅಲ್ಪಸಂಖ್ಯಾತರಾಗಿ ಉಳಿದುಹೋದರು. ಅಷ್ಟೇ ಅಲ್ಲ, ಈ ದೇಶಗಳ ಸ್ವತಂತ್ರ ಅಸ್ತಿತ್ವ ಬಹುಕಾಲ ಉಳಿಯಲಿಲ್ಲ. ಮುಂದೆ ಹಿಟ್ಲರ್‌ನ ನಾಝಿ ದಾಹಕ್ಕೆ ಮೊದಲ ಬಲಿಪಶುವಾಗಿ 1939ರಲ್ಲಿ ಝೆಕೋಸ್ಲೋವಾಕಿಯಾ ತನ್ನ ಸ್ವಾತಂತ್ರ್ಯವನ್ನು ನೀಗಿಕೊಂಡಿತು. ಎರಡನೆ ಜಾಗತಿಕ ಯುದ್ಧದಲ್ಲಿ (1941 ರೊಳಗಾಗಿ) ಈ ಎಲ್ಲ ದೇಶಗಳ ಮೇಲೆ ನಾಝಿ ಪತಾಕೆ ರೆಕ್ಕೆ ಫಡಫಡಿಸಿತು. ನಾಝಿ ಸೈನ್ಯ ಸಾಲದೆಂಬಂತೆ ರಷ್ಯದೊಳಕ್ಕೂ ನುಗ್ಗಿ ನಡೆಯಿತು.

ಆದರೆ, ಆ ಹೊತ್ತಿಗಾಗಲೇ ಸಂಘಟಿತಗೊಂಡಿದ್ದ ಈ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ನಾಝಿಗಳ ವಿರುದ್ಧ ಹೋರಾಡತೊಡಗಿದವು. ಅತ್ತ ರಷ್ಯದ ಸ್ಟಾಲಿನ್ ಗ್ರಾಡ್‌ನಲ್ಲಿ ಕೆಂಪು ಸೈನ್ಯ ನಾಝಿಗಳನ್ನು ಸೋಲಿಸಿತು. ಒಂದೇ ಸಮನೆ ಹಿಟ್ಲರ್‌ನ ಸೈನಿಕರನ್ನು ಹಿಮ್ಮೆಟ್ಟಿಸಿಕೊಂಡು ಬಂತು. ಅಂತೆಯೇ ದಾರಿಯಲ್ಲಿ ನಾಝಿ ಆಕ್ರಮಣದ ಈ ಪೂರ್ವ ಯೂರೋಪ್ ದೇಶಗಳನ್ನು ಮುಕ್ತಗೊಳಿಸುತ್ತ ಬಂತು. ಇದಕ್ಕೆ 'ಲಿಬರೇಷನ್' (ವಿಮುಕ್ತಿ) ಎಂದು ಹೆಸರಿಟ್ಟು ಆಯಾ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಸರ್ಕಾರ ರಚಿಸಿಕೊಂಡು ಆಳತೊಡಗಿದವು.

ವರ್ಚಸ್ಸಿನ ವಲಯದಲ್ಲಿ

ಸರಿ, ಎರಡನೆ ಯುದ್ಧ ಮುಗಿಯಿತು. ನೇತಾರರಾದ ಸ್ಟಾಲಿನ್, ಚರ್ಚಿಲ್ ಮತ್ತು ರೂಸ್‌ವೆಲ್ಟರು ಸೌಮ್ಯಟಿಯ ವಾತಾವರಣದಲ್ಲಿ ಕೂತು ಯುದ್ಧಾನಂತರದ ಜಾಗತಿಕ ಪುನರ್ವ್ಯವಸ್ಥೆಯ ಕುರಿತು ಮಾತಾಡಿದರು. ಪೂರ್ವ ಯೂರೋಪ್‌ನಲ್ಲಿ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಸರ್ಕಾರಗಳು ಹಾಗೆಯೇ ಮುಂದುವರೆಯಲಿ ಎಂಬುದಕ್ಕೆ ಸಮ್ಮತಿ ನೀಡಿದರು. ಮೊದಲಿನಿಂದಲೂ ಸೋವಿಯತ್ ರಷ್ಯದ ವರ್ಚಸ್ಸಿನ ವಲಯದಲ್ಲೇ ಇದ್ದ ಈ ಸರ್ಕಾರಗಳು ಇವಾದ ನಂತರವಂತೂ ರಷ್ಯದ ಉಪಗ್ರಹಗಳೇ ಆಗಿಹೋದವು.



ಲೆಚ್ ವಲೇಸಾ
ಪೋಲಂಡಿನ ನೂತನ ಅಧ್ಯಕ್ಷ

ರಷ್ಯ, ಚೀನ, ಕ್ಯೂಬಾ ಮುಂತಾದ ರಾಷ್ಟ್ರಗಳಲ್ಲಿ ಜನರು ಸ್ವತಃ ಬಂದದ್ದು ಸಮಾಜವಾದಿ ಕ್ರಾಂತಿ ಸಾಧಿಸಿ ದುಡಿಯುವ ಜನತೆಯ (ಪ್ರಾಲಿಟೇರಿಯಟ್) ಸರ್ಕಾರಗಳನ್ನು ಸಾಧಿಸಿದ್ದು ಬೇರೆ ವಿಷಯ. ಪೂರ್ವ ಯುರೋಪ್‌ನಲ್ಲಿ ಹಾಗಾಗಲಿಲ್ಲ. ರಷ್ಯದ ಬಂದೂಕಿನ ನೆರವಿನಿಂದ ಇಲ್ಲಿ ಕೆಂಬಾವುಟಗಳು ಹಾರಿದ್ದವಷ್ಟೆ? ಈ ದೇಶಗಳ ಜನತೆಗೆ ಬೇರೆಯೇ ತರನಾದ ಸ್ವಾತಂತ್ರ್ಯದ ಕಲ್ಪನೆಯಿತ್ತು. ಕಮ್ಯುನಿಸ್ಟ್ ಆರ್ಥಿಕ ವಿಧಾನಗಳ ಬಗ್ಗೆ ಅಸಹನೆಯಿತ್ತು. ಒಂದು ಚಾಲನೆಗಾಗಿ ಅವರು ಕಾಯುತ್ತಲಿದ್ದರು.

ರಷ್ಯದ ವರ್ಚಸ್ಸಿನ ವಲಯದೊಳಗೆ ಸಂಪೂರ್ಣವಾಗಿ ಸಿಲುಕದೆ ಹೊರಗುಳಿದಿದ್ದ ಮೊದಲ ಸಮಾಜವಾದಿ ರಾಷ್ಟ್ರವೆಂದರೆ ಯುಗೋಸ್ಲಾವಿಯಾ. ಅದರ ಅಧ್ಯಕ್ಷ ಮಾರ್ಷಲ್ ಟಿಟೋ ಒಂದು ಹೊಸ ಕನಸಿನ ಹರಿಕಾರರಾದರು. ಭಾರತದ ನೆಹರೂ ಮತ್ತು ಈಜಿಪ್ಟಿನ ಜಮಾಲ್ ಅಬ್ದುಲ್‌ನಾಸಿರ್‌ರೊಂದಿಗೆ ಸೇರಿ ತೃತೀಯ ಜಾಗತಿಕ ಶಕ್ತಿಯಾದ ಅಲಿಪ್ತ ರಾಷ್ಟ್ರಗಳ ಬಣವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ಆದರೆಬದಲಾವಣೆಯಅತಿದೊಡ್ಡ ಅಲೆ ಬಂದದ್ದು 1989ರಲ್ಲಿ. ಮೊದಲು ಕದಲಿದ್ದು ಪೋಲಂಡ್. ಕಾರ್ಮಿಕರ ಒಕ್ಕೂಟವಾಗಿದ್ದ 'ಸಾಲಿಡಾರಿಟಿ' ಪಕ್ಷ ಲೆಚ್ ವಲೇಸಾರ ನೇತೃತ್ವದಲ್ಲಿ ಕ್ರಾಂತಿ ಸಿದ್ಧತೆಗೆ ತೊಡಗಿತು. 1989ರ ಏಪ್ರಿಲ್ 7 ರಂದು ಪೋಲಂಡ್‌ನ ಕಮ್ಯೂನಿಸ್ಟ್ ಸರಕಾರಕ್ಕೂ-ಸಾಲಿಡಾರಿಟಿಗೂ ಮಧ್ಯೆ ಒಪ್ಪಂದವಾಗಿ ಜೂನ್ 4ರಂದು ಚುನಾವಣೆಗಳು ನಡೆದವು. ಪೂರ್ವ ಯುರೋಪ್‌ನಲ್ಲಿ ನಡೆದ ಮೊಟ್ಟಮೊದಲ ಮುಕ್ತ ಚುನಾವಣೆಗಳಿವು. ನಿರೀಕ್ಷಿಸಿದಂತೆಯೇ ಸಾಲಿಡಾರಿಟಿ ಅಧಿಕಾರಕ್ಕೆ ಬಂತು. ಕೆಂಬಾವುಟ ಕೆಳಗಿಳಿಯಿತು. ಮುಂದೆ ಯಾವುದಕ್ಕೂ ತಡವಾಗಲಿಲ್ಲ. ಒಂದೊಂದಾಗಿ ರಷ್ಯದ ಕಮ್ಯುನಿಸ್ಟ್ ಉಪಗ್ರಹಗಳು ಕಳಚಿಬೀಳತೊಡಗಿದವು. ಪೋಲಂಡ್ ನೀಡಿದ ಚಾಲನೆಗೆ ಉತ್ತರವೆಂಬಂತೆ ಇಡೀ ಪೂರ್ವ ಯುರೋಪ್‌ನ ಎಲ್ಲ ಕಮ್ಯುನಿಸ್ಟ್ ಸರಕಾರಗಳ ಪತನವಾಯಿತು.

ಇಲ್ಲಿ ಗಮನಿಸಬೇಕಾದ ಒಂದು ವಿಶಿಷ್ಟ ಅಂಶವೆಂದರೆ, ರುಮಾನಿಯಾ ಒಂದರ ಹೊರತಾಗಿ ಉಳಿದೆಲ್ಲ ದೇಶಗಳಲ್ಲೂ ಬದಲಾವಣೆ ಅತ್ಯಂತ ಶಾಂತಿಯುತವಾಗಿ ಸಂಭವಿಸಿತೆನ್ನುವುದು.

ಉರುಳತೊಡಗಿದ ಚಕ್ರದ ದಿಕ್ಕನ್ನು ಅರಿತುಕೊಳ್ಳಲು ಹಂಗೇರಿಯ ಕಮ್ಯುನಿಸ್ಟ್ ಪಕ್ಷಕ್ಕೆ ಬಹಳ ಸಮಯ ಹಿಡಿಯಲಿಲ್ಲ. 1989ರ ಫೆಬ್ರವರಿ 11ರಂದು ಅದು ಒಂದು ಅತ್ಯಂತ ಮಹತ್ವದ ನಿರ್ಣಯವನ್ನು ಕೈಗೊಂಡಿತು. ಕಮ್ಯುನಿಸ್ಟೇತರ ರಾಜಕೀಯ ಪಕ್ಷಗಳಿಗೂ ಅಸ್ತಿತ್ವಕ್ಕೆ ಬರಲು ಅವಕಾಶ ಕಲ್ಪಿಸಿಕೊಟ್ಟ ಈ ನಿರ್ಣಯ ಬದಲಾವಣೆಗೆ ಕಾರಣವಾಯಿತು. ದಶಕಗಳ ಕಾಲ ಏಕಪಕ್ಷೀಯ ರಾಜಕೀಯ ವ್ಯವಸ್ಥೆಯನ್ನು ಕಂಡಿದ್ದ ಜಗತ್ತಿನಾದ್ಯಂತ ಕಮ್ಯುನಿಸ್ಟರು ಈ ಬಹುಪಕ್ಷೀಯ ರಾಜಕೀಯ ವ್ಯವಸ್ಥೆಯನ್ನು ಅಚ್ಚರಿ, ಕುತೂಹಲಗಳಿಂದ ವೀಕ್ಷಿಸಿದರು. ರಷ್ಯದಂಥಾ ರಷ್ಯದಲ್ಲೇ ಈ ಬದಲಾವಣೆ ಸಂಭವಿಸಿಹೋಯಿತು.


ಕೇವಲ ರಷ್ಯದ ಬೆಂಬಲದ ಮೇಲೆ ಹುಸಿ (Pseudo) ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದ ಈ ಉಪಗ್ರಹ ದೇಶಗಳ ಜನರಿಗೆ ಕಮ್ಯುನಿಜಂನ ಹೆಸರಿನಲ್ಲಿ ನಡೆಯುತ್ತಿದ್ದ ನಿರಂತರ ದಬ್ಬಾಳಿಕೆ ಅಸಹನೀಯವಾಗಿತ್ತು. ತಾವೇ ಆರಿಸಿ ತಂದ ಸರಕಾರ ಅದೆಂಥದ್ದೇ ಆಗಿರಲಿ, ಅವಧಿ ಮುಗಿಯುವ ತನಕವಾದರೂ ಅದನ್ನು ಜನತೆ

ಸಹಿಸಿಕೊಳ್ಳುತ್ತಾರೆ. ಆದರೆ ಪರಕೀಯ ಹಿತಾಸಕ್ತಿಗಳು ಸ್ಥಾಪಿಸಿದ ಸರ್ಕಾರಗಳನ್ನಲ್ಲ. ರುಮಾನಿಯಾದಂಥ ರಾಷ್ಟ್ರಗಳಲ್ಲಿ ಆದದ್ದೂ ಇದೇ. ಪರಕೀಯ ಹಸ್ತಕ್ಷೇಪದ ಜೊತೆಗೆ ನಿರಂಕುಶತ್ವವೂ ಜನರನ್ನು ರೊಚ್ಚಿಗೆಬ್ಬಿಸಿತು. ಕಮ್ಯುನಿಸಂ ಹೆಸರನ್ನೇ ಅನುಮಾನಿಸತೊಡಗಿದ ಜನತೆಗೆ ಸಮಾಧಾನತರಲೆಂದು ಹಂಗೇರಿಯ ಕಮ್ಯುನಿಸ್ಟ್ ಪಕ್ಷ ಒಂದು ಹೆಜ್ಜೆ ಮುಂದೆ ಹೋಗಿ ಪಕ್ಷದ ಹೆಸರನ್ನೇ ಬದಲಿಸಿತು. ಅದೀಗ ಹಂಗೇರಿಯನ್ ಸೋಷಲಿಸ್ಟ್ ಪಕ್ಷ ಮಾತ್ರ. ಅಷ್ಟಕ್ಕೇ ನಿಲ್ಲದ ಈ ಪಕ್ಷವು ಪೂರ್ವ ಜರ್ಮನಿಯ ಆಗುಹೋಗುಗಳಾದ ಜರ್ಮನ್ ಏಕೀಕರಣ, ಬರ್ಲಿನ್ ಗೋಡೆಯ ಪತನ ಮುಂತಾದವುಗಳಿಗೆ ತನ್ನ ಕುಮ್ಮಕ್ಕು ಕೊಟ್ಟಿದೆ.

ಗೋಡೆ ಬಿದ್ದು ಬಯಲಾಯಿತು

ಜರ್ಮನ್ ವಿಭಜನೆಯ ಸಂಕೇತವಾಗಿ(ಬರ್ಲಿನ್‌ಗೋಡೆಯನ್ನು ಬುಡಸಮೇತ ಕೆಡವಿಹಾಕಲು ನವೆಂಬರ್ 9 ರಂದು ಪೂರ್ವ ಜರ್ಮನಿಯ ಸರ್ಕಾರವೇ ಅನುಮತಿ ನೀಡಿದ್ದು ಮತ್ತೊಂದು ಐತಿಹಾಸಿಕ ಘಟನೆ. ಹಿಂದೆ ಫ್ರೆಂಚ್ ಕ್ರಾಂತಿಯ ಯೋಧರು ಬ್ಯಾಸ್ಟೈಲ ದುರ್ಗ ಕೆಡವಿದ (The fall of Bastill ಘಟನೆಯನ್ನು ನೆನಪಿಗೆ ತಂದದ್ದು ಈ ಬರ್ಲಿನ ಗೋಡೆಯ ಕೆಡಹುವಿಕೆ.

1990ರ ಅಕ್ಟೋಬರ್ 3 ರಂದು ಪೂರ್ವ ಮತ್ತು ಪಶ್ಚಿಮ ಜರ್ಮನಿಗಳು ಏಕವಾಗಿ ಯುರೋಪಿನ ನಕಾಶೆಯನ್ನೇ ಬದಲಿಸಿದವು. ಈ ಖಂಡದ ರಾಜಕೀಯಕ್ಕೇ ಹೊಸತಿರುವು ನೀಡಿದವು. ಇದರ ಪರಿಣಾಮಗಳಿಂದ ಜಗತ್ತಿನ ಯಾವ ರಾಷ್ಟ್ರವೂ ತಪ್ಪಿಸಿಕೊಳ್ಳಲಾರದೇನೋ



ಝೆಕ್ ಕಾದಂಬರಿಕಾರ ಮಿಲನ್ ಕುಂದೇರಾ

ಎಂಬಷ್ಟರ ಮಟ್ಟಿಗೆ ಗೋಡೆ ಬೀಳುವಾಗಿನ ಕಾಲದ ಕದಲಿಕೆಗಳು ಕಂಪನವುಂಟುಮಾಡಿವೆ.

ಸಮಾಜವಾದಿ ವಿರೋಧಿ ಜ್ವರ ಪಕ್ಕದ ಮನೆಗೆ ಹರಡಲು ತಡಮಾಡಲಿಲ್ಲ. ಬರ್ಲಿನ್ ಗೋಡೆ ಬಿದ್ದ ಮರುದಿನವೇ ಬಲ್ಗೇರಿಯಾದ ಮಹಾಜನತೆ ದಂಗೆಯ ಬಾವುಟವೆತ್ತಿದರು. ಅಖಂಡವಾಗಿ ಮೂವತ್ತೈದು ವರ್ಷಗಳ ಕಾಲ ರಾಜ್ಯವಾಳಿದ ಕಮ್ಯುನಿಸ್ಟ್ ಪ್ರಭು ಟ್ಯಡೋರ್ ಜಿವಕೋವ್ ಸರ್ಕಾರ ತನ್ನ ಚರಮಗೀತೆ ಹಾಡಿತು. ಗೋರ್ಬಚೇವ್ ರಷ್ಯಾದ ಜನತೆಗ ನೀಡಿದಂತಹವೇ ಆದ ಭರವಸೆಗಳನ್ನು ನೀಡಿ ಪೀಟರ್ ಲಿದೆನೋವ್ ಹೊಸ ಸರ್ಕಾರ ರಚಿಸಿದರು.

ಯುರೋಪ್‌ನ ಒಟ್ಟಾರೆ ಸಂಸ್ಕೃತಿಯ ಕೆನೆಯನ್ನು ತನ್ನ ಒಡಲಲ್ಲಿರಿಸಿಕೊಂಡಿರುವ ಝೆಕೋಸ್ಲೋವಾಕಿಯಾ ಕಂಡ ಬದಲಾವಣೆ ಮತ್ತೊಂದು ತೆರನಾದದ್ದು. ಇಲ್ಲಿ ಪ್ರಮುಖ ಪಾತ್ರ ವಹಿಸಿದ ಸ್ಥಿತ್ಯಂತರಕಾರರೆಂದರೆ ಆ ದೇಶದ ಬುದ್ಧಿಜೀವಿಗಳು. ಸಂಸ್ಕೃತಿ, ಪರಂಪರೆಗಳ ಪ್ರಿಯರಾದ ಈ ಜನ ಬರ್ಲಿನ್‌ಗೋಡೆ ಬಿದ್ದ ಎಂಟನೇ ದಿನದಂದು ಅಲ್ಲಿನ ಕಮ್ಯುನಿಸ್ಟ್ ಸರಕಾರಕ್ಕೆ ಸಮಾಧಿ ಕಟ್ಟಲು ಮೇಲೆದ್ದರು. 1989ರ ನವೆಂಬರ್ 17ರಂದು ಒಂದು ಜರುಗಬಾರದ ಘಟನೆ ಜರುಗಿಹೋಯಿತು. ಪ್ರಾಹ ಪಟ್ಟಣದ ಲಕ್ಷಾಂತರ ವಿದ್ಯಾರ್ಥಿಗಳು ತೆಗೆದ ಶಾಂತಿಯುತ ಪ್ರತಿಭಟನಾ ಮೆರವಣಿಗೆಯನ್ನು ಪೊಲೀಸರು ಅಮಾನುಷ ರೀತಿಯಲ್ಲಿ ತಡೆದು ಚದುರಿಸಿದರು. ಈ 'ಹತ್ಯಾಕಾಂಡ'ವನ್ನು ತೀವ್ರವಾಗಿ ಪ್ರತಿಭಟಿಸಿದ ಅಲ್ಲಿನ ವಿದ್ಯಾರ್ಥಿಗಳು, ಶಿಕ್ಷಕರು, ಲೇಖಕರು, ಪತ್ರಕರ್ತರು ಒಂದಾಗಿ ಸರ್ಕಾರಕ್ಕೆ ಛೀಮಾರಿ ಹಾಕಿದರು. ಝೆಕ್ ವಿದ್ಯಾರ್ಥಿಗಳು 'ನಾಗರೀಕ ವೇದಿಕೆಯನ್ನೂ', ಸ್ಲೋವಾಕ್‌ರು 'ಹಿಂಸಾ ವಿರೋಧಿ ವೇದಿಕೆ'ಯನ್ನು ರಚಿಸಿಕೊಂಡರು. ಇವರಿಗೆ ಬೆಂಬಲವಾಗಿ ಕಾರ್ಮಿಕ ಸಮೂಹ ಸಾರ್ವತ್ರಿಕ ಮುಷ್ಕರಕ್ಕಿಳಿಯಿತು. ಇದರ ನೇರ ಪರಿಣಾಮವೆಂದರೆ ಡಿಸೆಂಬರ್ 29ರಂದು ವೆಚೆಸ್ಲಾವ್ ಹವೆಲ್ ಅವರು ಕಮ್ಯುನಿಸ್ಟ್ ಸರಕಾರವನ್ನು ಕೆಡವಿ ಝೆಕೋಸ್ಲೋವಾಕಿಯಾದ ಅಧ್ಯಕ್ಷರಾದರು.

ಪಾಪಿಗಳನ್ನು ಕ್ಷಮಿಸಲಿಲ್ಲ

ಇದೆಲ್ಲ ಕನಸಿನ ಚಿತ್ರಗಳಂತೆ ಕದಲಿ ಹೋದ ಘಟನೆಗಳ ಕಥೆಯಾಯಿತು. ಆದರೆ ಒಳಗೇ ಕುದ್ದು ಸ್ಫೋಟಕ್ಕೆ ಸಿದ್ಧವಾಗಿದ್ದ ಒಂದು ನಾಡು ಕ್ರೈಸ್ತ ಹುಟ್ಟಿದ ದಿನದಂದೇ ದಾರುಣವಾಗಿ ಒಬ್ಬ ಸರ್ವಾಧಿಕಾರಿಯನ್ನು ಪತ್ನಿ ಸಮೇತವಾಗಿ ಹಿಡಿದು ಕೊಚ್ಚಿ ಹಾಕಿದ್ದು ಈ ದಶಕದ ಅತ್ಯಂತ ಭೀಭತ್ಸ ಘಟನೆ. ರುಮಾನಿಯಾಕ್ಕೆ ಹೋಗಿ ಬಂದ ಭಾರತದ ಗೆಳೆಯರು ಕೊಟ್ಟ ಚಿತ್ರಗಳಿಗೂ, ಅಲ್ಲಿ ನಡೆದುದನ್ನು ಟಿ. ವಿ.ಯಲ್ಲಿ ನೋಡಿದುದಕ್ಕೂ ತಾಳೆಯಾಗದೆ ಕಂಗಾಲಾಗುವುದು ನಮ್ಮ ಪಾಳಿಯಾಗಿತ್ತು. ನಿಕೋಲಾಯಿ ಚೌಸೆಸ್ಕು ಮತ್ತು ಆತನ ಮಡದಿ ಎಲೆನಾ ರುಮಾನಿಯಾದ ಜನತೆಯನ್ನು ಅದೆಷ್ಟು ಹೇಯವಾಗಿ ನಡೆಸಿಕೊಂಡಿದ್ದರೋ? 'ಸೆಕ್ಯೂರಿಟೇಟ್' ಎಂಬ ಅಂಗ ರಕ್ಷಕರ ಸೈನ್ಯವನ್ನೇ ಕಟ್ಟಿಕೊಂಡಿದ್ದ ಚೌಸೆಸ್ಕು, ಅದರ ಮೂಲಕ ಸರಕಾರಿ ಅಧಿಕಾರಿಗಳು ಹಾಗೂ ಸೈನ್ಯಾಧಿಕಾರಿಗಳನ್ನು ಹೆದರಿಸಿ ನಿಯಂತ್ರಣದಲ್ಲಿರಿಸಿಕೊಂಡಿದ್ದ. ಇನ್ನು ಜನಸಾಮಾನ್ಯರ ಪಾಡೇನು? ಆತ ಅನುಭವಿಸಿದ ಐಶ್ವರ್ಯ, ವಿಲಾಸಗಳಿಗೆ ಬಡ ರುಮಾನಿಯನ್ನರ ಬೆವರಿನ ಲೇಪವಿತ್ತು. ಜನ ಒಂದು ಚಾಲನೆಗಾಗಿ ಕಾಯುತ್ತಿದ್ದರು. ಆಮಿಸೋಅರಾ ಎಂಬ ಚಿಕ್ಕ ಊರಿನಲ್ಲಿ ನಡೆದ ಕ್ಷುಲ್ಲಕ ಘಟನೆ

ಯೊಂದು ರುಮಾನಿಯಾದ ಕ್ರಾಂತಿಗೆ ಕಾರಣವಾಯಿತು. ತಿರುಗಿಬಿದ್ದವರನ್ನು ಹತ್ತಿಕ್ಕಲು ಚೌಸೆಸ್ಕು ಮತ್ತೆ ತನ್ನ ಸಾಕುದೆವ್ವವಾದ ಸೆಕ್ಯೂರಿಟೇಟ್‌ನ ಅಂಗರಕ್ಷಕರನ್ನು ಬಳಸಿದ. ಅವರ ದೌರ್ಜನ್ಯಕ್ಕೆ ರೋಸಿಹೋದ ರುಮಾನಿಯಾದ ಸೈನ್ಯ ಕೂಡ ಪ್ರತಿಭಟನಕಾರರ ಪರವಾಗಿ ನಿಂತಿತು. ರಕ್ತ ಪಾತಕ್ಕೆ ಆರಂಭ ಬೇಕಿತ್ತೇ ಹೊರತು ಅಂತ್ಯವಲ್ಲ. ಉದ್ರಿಕ್ತ ಜನರ ಬೆಂಬಲಕ್ಕೆ ನಿಂತ ಸೈನ್ಯ ನಿರ್ದಯವಾಗಿ ಸೆಕ್ಯೂರಿಟೇಟ್ ಹಂತಕರನ್ನು ಸದೆಬಡಿದದ್ದಲ್ಲದೆ ಚೌಸೆಸ್ಕು ಮತ್ತು ಆತನ ಪತ್ನಿ ಎಲೆನಾರನ್ನು ಬಂಧಿಸಿ, ವಿಚಾರಣೆಯ ಪ್ರಹಸನದ ನಂತರ ಗುಂಡಿಕ್ಕಿ ಕೊಂದಿತು. ಅಂದು ಕ್ರಿಸ್‌ಮಸ್ ದಿವಸ! ದೇವರು ಕ್ಷಮಿಸಿದನೋ ಇಲ್ಲವೋ, ರುಮಾನಿಯಾನ್ನರು ಮಾತ್ರ ಪಾಪಿಗಳನ್ನು ಕ್ಷಮಿಸಲಿಲ್ಲ. ಇತಿಹಾಸಕ್ಕೆ ಈ ಹಿಂದ ಫ್ರೆಂಚ್ ಕ್ರಾಂತಿಯಲ್ಲಿ ಕೊಲ್ಲಲ್ಪಟ್ಟ ಸಾಮ್ರಾಟ 16ನೇ ಲೂಯಿ ಮತ್ತು ಆತನ ವಿಲಾಸವತಿ ಪತ್ನಿ ಮೇರಿ ಅಂಟೋನೆಟ್‌ರ ನೆನಪಾಗಿರಬೇಕು!

ಇತಿಹಾಸದಿಂದ ಪಾಠಕಲಿಯದಿದ್ದರೆ ಅದು ಮರುಕಳಿಸುತ್ತದೆ ಎಂಬ ಮಾತಿಗೆ ಪುಷ್ಟಿ ಸಿಕ್ಕಿದ್ದು ರುಮಾನಿಯಾದಲ್ಲಿ.

ಹೀಗೆ ಪೋಲೆಂಡ್‌ನಿಂದ ಪ್ರಾರಂಭವಾದ ಕಂಬಾವುಟ ಪತನ ಚೌಸೆಸ್ಕು ದಂಪತಿಗಳ ಕೊಲೆಯಲ್ಲಿ ಪರ್ಯವಸಾನವಾಯಿತು. ಬದಲಾವಣೆಯ ಪ್ರಹಸನದ ಒಂದು ಅಂಕ ಮುಗಿಯಿತು. ಎರಡು ತಲೆಮಾರುಗಳ ಕಾಲ ಯುರೋಪನ್ನು ಬೇರ್ಪಡಿಸಿದ್ದ ಲೋಹದ ತೆರೆ ಸರಿದು ಹೋಯಿತು.

ಕ್ರಾಂತಿಯ ಅಕ್ಕಪಕ್ಕದಲ್ಲಿ

'ಆರ್ಥಿಕ ಶಕ್ತಿಗಳೇ ರಾಜಕೀಯ ವ್ಯವಸ್ಥೆಯನ್ನು ರೂಪಿಸುತ್ತವೆ' ಎಂಬ ಕಾರ್ಲ್‌ಮಾರ್ಕ್ಸ್‌ನ ಮೂಲ ಸೂತ್ರ ಇಂದಿಗೂ ಸುಸಂಗತವಾದದ್ದೇ ಆಗಿದೆ. ಆದ್ದರಿಂದ ಈ ಎಲ್ಲ ಘಟನೆಗಳನ್ನು ಕೇವಲ ರಾಜಕೀಯ ಆಗುಹೋಗುಗಳೆಂಬಂತೆ ನೋಡದೆ ಅವುಗಳನ್ನು ಆರ್ಥಿಕ ಪರಿಣಾಮಗಳ ದೃಷ್ಟಿಯಿಂದ ನೋಡುವುದು ಹೆಚ್ಚು ಸೂಕ್ತ-ಸಮಂಜಸ.

ಪ್ರತಿ ನಿಮಿಷಕ್ಕೂ ಬೆಳೆಯುತ್ತಿರುವ ಆಧುನಿಕ ತಂತ್ರಜ್ಞಾನ ಇಡೀ ಜಗತ್ತಿನ ಆರ್ಥಿಕ ವ್ಯವಸ್ಥೆಯನ್ನೇ ತಾರುಮಾರಾಗಿಸುತ್ತಿದೆ. ಇದು ಎರಡನೆ ಔದ್ಯೋಗಿಕ ಕ್ರಾಂತಿಯ ಮೊದಲಿನ ಬಿರುಗಾಳಿಯೇನೋ ಎಂಬಂತೆ ಭಾಸವಾಗುತ್ತಿದೆ. ಅಂಥದರಲ್ಲಿ ಪೂರ್ವ ಯುರೋಪ್‌ನ ಜನ ಈ ತಂತ್ರಜ್ಞಾನದ ಅಗಾಧತೆಯನ್ನು ನಿಬ್ಬೆರಗಾಗಿ ನೋಡಿದುದರಲ್ಲಾಗಲೀ, ಅದರ ಫಲಾನುಭವದ ಬಗ್ಗೆ ಆತುರಗೊಂಡಿದ್ದರಲ್ಲಾಗಲೀ ಅಚ್ಚರಿಯೇನಿಲ್ಲ. ಪಕ್ಕದಲ್ಲೇ ಇರುವ ಪಶ್ಚಿಮ ಯುರೋಪ್‌ನ ರಾಷ್ಟ್ರಗಳ ಪ್ರಗತಿ, ಶ್ರೀಮಂತಿಕೆಗಳು ಇದರಲ್ಲಿ ಹೊಸ ಆಸೆ ಮೂಡಿಸಿದ್ದರೆ ಅದರಲ್ಲಿ ಆಶ್ಚರ್ಯವಾದದ್ದೇನಿದೆ?

ಕಮ್ಯುನಿಸ್ಟ್ ಸರ್ಕಾರದ ಕನಸುಗಳೇನೆಂಬುದು ಎಲ್ಲರಿಗೂ ಗೊತ್ತು. ತನ್ನ ನಾಗರೀಕರಿಗೆ ಬೇಕಾದ ಕನಿಷ್ಠ ಸೌಲಭ್ಯಗಳನ್ನೊದಗಿಸುವ ಹೊಣೆ ಅದರದು. ಊಟ, ವಸತಿ ಮತ್ತು ಉದ್ಯೋಗ ಒದಗಿಸಬಲ್ಲ ಈ ಸರ್ಕಾರಕ್ಕೆ ಅದರಾಚೆಗಿನ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿಲ್ಲ. ಅದರ ರಾಜ್ಯಪದ್ಧತಿ ಅಥವಾ Polityಯೇ ಅಂತಹುದು. ಇದು ಕಮ್ಯುನಿಸ್ಟ್ ಸರ್ಕಾರಗಳ ಮಿತಿಯೂ ಹೌದು. ಮುಕ್ಕಾಲು ಶತಮಾನಗಳ ಕಾಲ ಇವು ರಾಜ್ಯವಾಳಿದ್ದೂ ಇದೇ ರೀತಿಯಲ್ಲಿ. ತನ್ನ ಪ್ರಜೆಗಳಿಗ



ಕಳೆದ ರಾತ್ರಿ ನನಗೊಂದು ವಿಚಿತ್ರವಾದ ಸ್ವಪ್ನ ಬಿತ್ತು ನೋಡು ! ನಾನೇನೋ ಅಡುಗೆ ಮಾಡ್ತಾ ಇದ್ದ ಹಾಗೆ...

'ಸಕಲ' ಸೌಕರ್ಯಗಳನ್ನೂ ಒದಗಿಸುವುದರಲ್ಲಿ ಇವು ಸೋತಿವೆ ಎಂಬ ಆಪಾದನೆಯಿದೆ. ಮತ್ತು 'ಸಕಲ'ವೆಂಬ ಶಬ್ದದ ಹಿಂದೆ ಸಕಲವೂ ಅಡ ಗಿದೆ. ಒಟ್ಟನಲ್ಲಿ ಜನತೆಯ ಅಸೀಮ ಆಕಾಂಕ್ಷೆ ಗಳಿಗೆ ಅಸಂಗತವೆನಿಸುವ ಮತ್ತು ಆತಂಕಕಾರಿ

ಅಸ್ಥಿರತೆಯ ರೂಪಕ

ಜನಜೀವನದ ಎಲ್ಲ ಮಗ್ಗಲುಗಳನ್ನು ಆವರಿಸಿಕೊಳ್ಳುವ ರಾಜಕೀಯ ಅಸ್ಥಿರತೆಯ ತಲ್ಲಣ, ತಳಮಳಗಳು ಸಹಜವಾಗಿಯೇ ಪೂರ್ವ ಯೂರೋಪಿನ ಸಾಹಿತಿಗಳ ಕಾಳಜಿ ವಲಯ ಪ್ರವೇಶಿಸಿತು. ಆ ಕುರಿತು ಸಮೃದ್ಧ ಸಾಹಿತ್ಯ ಸೃಷ್ಟಿಯಾಗಿದೆ. ಪೋಲಂಡಿನವನೇ ಆದ ಜಗತ್ಪ್ರಸಿದ್ಧ ಕವಿ ಈಸೋಪನಂತೆಯೇ ಮತ್ತೊಬ್ಬ ಕವಿ ಜಬಿಗ್ನೆವ್ ಹರ್ಬರ್ಟ್ ಸಹ ರೂಪಕಲಂಕಾರ ಮಾಧ್ಯಮವನ್ನು ಸಮರ್ಥ ವಾಗಿ ಬಳಸಿಕೊಂಡು ಸ್ಫೋಟಕ ರಾಜಕೀಯ ಸ್ಥಿತಿಯನ್ನು ಅಕ್ಷರೀಕರಿಸಿಧ್ದಾರೆ. ಅವರ ಕಾವ್ಯ ಲಹರಿಯ ಜಾಡನ್ನು ಪ್ರತಿನಿಧಿಸುವ ಕೆಳಗಿನ ರೂಪಕವನ್ನು ಗಮನಿಸಬಹುದು.

"ವಸ್ತುಗಳು- ನಿರ್ಜೀವ ವಸ್ತುಗಳು ಎಂದಿಗೂ ತಪ್ಪು ಮಾಡಲಾರವು. ತಪ್ಪಿಗಾಗಿ ಅವುಗಳನ್ನು ತೆಗಳುವುದೂ ತಪ್ಪು. ಕುರ್ಚಿ ಯೊಂದು ತಾನಾಗಿಯೇ ಒಮ್ಮೆ ಒಂದು ಕಾಲಮೇಲೆ ಇನ್ನೊಮ್ಮೆ ಇನ್ನೊಂದು ಕಾಲ ಮೇಲೆ ನಿಲ್ಲುವುದನ್ನು ಯಾರು ನೋಡಿ ದ್ದಾರೆ? ಆಗಾಗ ಮುಂಗಾಲುಗಳನ್ನೆತ್ತಿ ಹಿಂಗಾಲುಗಳ ಮೇಲೆ ನಿಲ್ಲುವ ಪಲ್ಲಂಗಗ ಳನ್ನು ನಾನಂತೂ ನೋಡಿಲ್ಲ. ಇನ್ನು ಟೇಬ ಲ್ಲುಗಳು. ಅವು ಎಷ್ಟೇ ದಣಿದರೂ ಮೊಣ ಕಾಲು ಮಡಚಿ ಕುಳಿತುಕೊಳ್ಳುವ ಸಾಹಸ ಮಾಡುವುದಿಲ್ಲ. ವಸ್ತುಗಳ ಈ ವರ್ತನೆ ಯಲ್ಲಿ ಒಂದು ಶೈಕ್ಷಣಿಕ ಸತ್ಯ ಅಡಗಿದೆ ಯೆಂದು ನಾನು ಭಾವಿಸುತ್ತೇನೆ. ನಮ್ಮ ಅಸ್ಥಿ ರತೆಯನ್ನು ಕಂಡು ನಮಗೆ ಪಾಠ ಹೇಳಲು ವಸ್ತುಗಳು ಹಾಗೆ ವರ್ತಿಸುತ್ತವೆ ಎಂಬುದು ನನ್ನ ಬಾವನೆ".

ಯಾಗಿ ತೋರುವ ಕಮ್ಯುನಿಸ್ಟ್ ಸರ್ಕಾರಗಳ ಈ ಪಾರಂಪಾರಿಕವಾದ ಉತ್ಪಾದನೆ, ವಿತರಣೆ ಮತ್ತು ಬಳಕೆಯ ವಿಧಾನಗಳಿಂದ ಕೂಡಿದ ವ್ಯವಸ್ಥೆಯ ವಿರುದ್ಧ ಜನತೆಯ ಹೋರಾಟ ನಡೆದಿದೆ.

ಕಮ್ಯುನಿಸ್ಟ್ ದೇಶಗಳಲ್ಲಿ ಶುರುವಾದ ಈ ಆಕಾಂಕ್ಷೆಗಳ ಜ್ವರದ ನಾಡಿ ಬಡಿತವನ್ನು ಮೊಟ್ಟಮೊದಲಿಗೆ ಆಲಿಸಿ ಅರ್ಥಮಾಡಿಕೊಂಡ ವರು ಗೊರ್ಬಚೇವ್. ಮನುಷ್ಯ ರೊಟ್ಟಿಯೊಂದ ರಿಂದಲೇ ಸಂತೃಪ್ತನಾಗಲಾರ; ಸರಿ, ಬೆಣ್ಣೆಯನ್ನೂ ಒದಗಿಸುವ ಕೆಲಸ ಪ್ರಾರಂಭಿಸಿದರು. ರಷ್ಯಾದಲ್ಲಿ ಮುಕ್ತ ಮಾರುಕಟ್ಟೆಯ ಹೊಸ ಅರ್ಥವ್ಯವಸ್ಥೆಯ ಬೀಜಗಳ ನಾಟಿ ಪ್ರಾರಂಭಿಸಿದರು. ಅದಕ್ಕೆ ಪೂರ ಕವಾದ ರೀತಿಯಲ್ಲಿ ರಷ್ಯದ ಸಂವಿಧಾನವನ್ನೂ ಬದಲಾಯಿಸುತ್ತಿದ್ದಾರೆ. ಜ್ವರಕ್ಕೆ ಮನೆಯ ಹಿತ್ತಿ ಲಲ್ಲೇ ಮದ್ದು ಹುಡುಕುವ ಕೆಲಸವಿದು.

ಆದರೆ ಪೂರ್ವ ಯುರೋಪ್‌ನಲ್ಲಿ ಹೀಗಾ ಗಲಿಲ್ಲ. ಸರ್ಕಾರಗಳೇ ಧೂಳಿದ್ದು ಹೋದವು. ಒಂದು ಅಪೂರ್ವ ಕನಸು ಹೊತ್ತು ಅಲ್ಲಿಯ ಜನತೆ ರಾಜಕೀಯ ಮಟ್ಟದಲ್ಲಿ ಕ್ರಾಂತಿಯನ್ನು ಸಫಲಗೊಳಿಸಿದ್ದಾರೆ. ಆಸೆಯ ಕೊಂಬೆಯ ಮೇಲೆ ಸಾವಿರಾರು ಹಕ್ಕಿಗಳು! ತಾವೇ ಆರಿಸಿ ತಂದಿರುವ ಪ್ರಜಾಪ್ರಭುತ್ವವಾದಿ ವ್ಯವಸ್ಥೆ ತಮ್ಮೆಲ್ಲ ಕನಸುಗಳನ್ನು ಸಾಕಾರಗೊಳಿಸುತ್ತದೆಂಬ ನಂಬಿಕೆ ಜನತೆಗಿದೆ. ಎಷ್ಟರಮಟ್ಟಿಗೆ ನನಸಾ ದೀತೋ ಕಾದುನೋಡಬೇಕು. ಯೋಜನಾ ಬದ್ಧ ವಾದ ಮತ್ತು ಸಾಮೂಹಿಕ ಒಡೆತನದ ಅರ್ಥವ್ಯ ವಸ್ಥೆ ನಿರ್ವಹಿಸಲಾಗದ್ದನ್ನು ಈ ಬಂದಾವಾಳ ಶಾಹಿ ವ್ಯವಸ್ಥೆ ನಿರ್ವಹಿಸೀತೆಂಬ, ಜೀವನಮಟ್ಟ ವನ್ನು ಹೊಸ ಎತ್ತರಗಳಿಗೆ ಒಯ್ಯುತ್ತದೆಯೆಂಬ ಕನಸನ್ನು ಮೈಗೂಡಿಸಿಕೊಂಡ ಮಹಾಸ್ವಪ್ನಿಗಳು ಅವರು.

ಶಾಪಗ್ರಸ್ತ ದೇಶಗಳು

ಇತಿಹಾಸ ಹೇಳುವ ಮಾತೇ ಬೇರೆ! ಪೂರ್ವ ಯುರೋಪ್‌ನ ಈ ಎಲ್ಲ ರಾಷ್ಟ್ರಗ ಳಿಗೂ ಆರ್ಥಿಕವಾಗಿ ಹಿಂದುಳಿದಿರುವ ಶಾಪ ವಿದೆ. ರಾಜಕೀಯವಾಗಿಯೂ ಇವುಗಳಿಗೆ ಐತಿ ಹಾಸಿಕವಾದ ಲೋಕ ತಾಂತ್ರಿಕ ಅಥವಾ ಸಂಪ್ರ ದಾಯಗಳಿಲ್ಲ. ಇವಕ್ಕಿರುವುದು ಕೇವಲ ಒಂದು ಸಮೃದ್ಧ ಸಾಂಸ್ಕೃತಿಕ ನೆಲಗಟ್ಟು. ಮೂಲತಃ ಕೃಷಿ ಪ್ರಧಾನವಾದ ಈ ದೇಶಗಳಲ್ಲಿ ಔದ್ಯೋ

ಗೀಕರಣವಾದದ್ದು ತೀರ ಇತ್ತೀಚೆಗೆ. ಕಳೆದ ಅರ್ಧ ಶತಕದ ಕಮ್ಯುನಿಸ್ಟ್ ಆಳ್ವಿಕೆ ಇವರನ್ನು ಆರ್ಥಿಕವಾಗಿಯೂ ಸದೃಢಗೊಳಿಸಿಲ್ಲ. ಇವತ್ತಿನ ಸ್ಥಿತಿಯಲ್ಲಿ ಇವುಗಳ 'ಹಿರಿಯಣ್ಣ' ರಷ್ಯಾ ಕೂಡ ನೆರವಿಗೆ ಬರುವ ಮಟ್ಟದಲ್ಲಿಲ್ಲ. ಅಮೆರಿಕ ಮತ್ತು ಪಶ್ಚಿಮ ಯುರೋಪ್‌ನ ದೇಶಗಳು ಈ ಬಡ ರಾಷ್ಟ್ರಗಳಲ್ಲಿ ದೊಡ್ಡ ಮೊತ್ತದ ಬಂಡವಾಳ ತೊಡಗಿಸಿ, ಆಧುನಿಕ ತಂತ್ರ ಜ್ಞಾನವನ್ನೂ ನೆರವನ್ನೂ ಯಥೇಚ್ಛವಾಗಿ ಕೊಟ್ಟರೆ ಮಾತ್ರ ಇಲ್ಲಿ ಪ್ರಗತಿ ಸಾಧ್ಯವಾದೀತು.

ಪ್ರಜಾಪ್ರಭುತ್ವವಾದಿ ವ್ಯವಸ್ಥೆ ಮತ್ತು ಮುಕ್ತ ಮಾರುಕಟ್ಟೆ ಜೊತೆಗೆ ತಮ್ಮ ಕನಸುಗಳನ್ನು ಕಟ್ಟಿಕೊಂಡು ಇವರು ನಡೆಯಬೇಕಾದ ಹಾದಿ ಹತ್ತಿರದ್ದಲ್ಲ. ಆಸೆಗಳ ದಾರಿಯ ತುಂಬ ವೈಫಲ್ಯಗಳ ಕಾರ್ಮೋಡಗಳಿವೆ. ಅಸಮರ್ಥ ಕೈಗಾರಿಕೆಗಳು, ಕಳಪೆ ಉತ್ಪಾದನೆಗಳು, ಬಳಕೆದಾರರ ಸರಕುಗಳ ತುಟಾಗ್ರತೆ, ಗಗನಗಾಮಿಯಾದ ಬೆಲೆ ಏರಿಕೆ, ವಿದೇಶಿ ಸಾಲಗಳ ಮರುಪಾವತಿಯ ಹೊಣೆ ಇವೆಲ್ಲವುಗಳ ಬೆಳಕಿನಲ್ಲಿ ಆ ದೇಶಗಳ ಜನರ ಕನಸುಗಳನ್ನು ವೀಕ್ಷಿಸಿದರೆ ಎಂಥವರಿಗೂ ಹೆದರಿಕೆಯಾಗುತ್ತದೆ. ಜನರಿಗಾಗಬಲ್ಲ ಭ್ರಮನಿರಸನ ಮತ್ತಾವ ಅನಾಹುತದ ಕಿಡಿಗಳಿಗೆ ತಿದಿಯೊತ್ತುತ್ತದೋ ಎನಿಸುತ್ತದೆ.

ಮುಕ್ತಮಾರುಕಟ್ಟೆಯಲ್ಲಿ ಗೆಲುವು ಸಾಧಿಸುವುದು ಸುಲಭವೂ ಅಲ್ಲ. ಅದರಲ್ಲೂ ಹಿಂದುಳಿದ ರಾಷ್ಟ್ರಗಳು ಇತರರೊಂದಿಗೆ ಅನುಭವಿಸಬೇಕಾದ ಸ್ಪರ್ಧೆ ಸಾಧಾರಣವಾದುದಲ್ಲ. ಸರುಕು ಮಾರಲು ಹೋದವರ ಕನಸುಗಳೇ ಬಿಕರಿಯಾಗಿ ಹೋಗುವ ಆಪತ್ತು ಸದಾ ಇದೆ. ಆರ್ಥಿಕವಾಗಿ ಹಿಂದುಳಿದ ಯಾವುದೇ ರಾಷ್ಟ್ರ ಈ ತನಕ ಬಂಡವಾಳಶಾಹಿ ಅರ್ಥ ವ್ಯವಸ್ಥೆಯ ಹಾದಿ ಹಿಡಿದು ಏಳಿಗೆ ಸಾಧಿಸಿದ ಉದಾಹರಣೆ ಇತಿಹಾಸದಲ್ಲಿಲ್ಲ. ಹಾಗೆ ಪ್ರಗತಿಸಾಧಿಸಿದ ಪ್ರತಿ ದೇಶವೂ ಒಂದಲ್ಲ ಒಂದು ಬಗೆಯ ಯೋಜನಾಬದ್ಧ ಆರ್ಥಿಕ ಬೆಳವಣಿಗೆಯ ಮಾರ್ಗವನ್ನೇ ಅನುಸರಿಸಿವೆ. 'ಯೋಜನೆ' (Planning)

ದಾರ್ಶನಿಕರ ನೆಲೆವೀಡು ಝೆಕೋಸ್ಲೋವಾಕಿಯಾ



ಝೆಕೋಸ್ಲೋವಾಕಿಯಾದ ಜನಸಂಖ್ಯೆ ಹದಿನಾರು ಕೋಟಿ. ಇಲ್ಲಿ ಝೆಕ್ ಮತ್ತು ಸ್ಲಾವ್ ಭಾಷಿಕರ ಸಂಖ್ಯೆ ದೊಡ್ಡದು. ಇಬ್ಬರ ನಡುವೆ ವೈಮನಸ್ಸುಗಳೂ ಇವೆ. ಭಾಷೆಗಳು ಬೇರೆ ಬೇರೆಯಾದರೂ ಈ ಇಬ್ಬರ ಸಾಮಾಜಿಕ ರೀತಿ ರಿವಾಜುಗಳು ಒಂದೇ ಆಗಿದೆ. ಇವೆರಡು ಬಣಗಳಲ್ಲದೆ ಜರ್ಮನರು, ಮೆಗ್ಯೆರರು, ರುಥೆನ್ನರು ಮುಂತಾದ ಅಲ್ಪಸಂಖ್ಯಾತರು ಇಲ್ಲಿ ನೆಲೆಗೊಂಡಿದ್ದಾರೆ. ಅವರವರ ಭಾಷೆಗಳೂ ಬೇರೆ ಬೇರೆ. ಜರ್ಮನರಿಗೂ, ಸ್ಲಾವರಿಗೂ ನಡೆದ ಹೋರಾಟಗಳಿಗೆ ಭಾರೀ ಇತಿಹಾಸವಿದೆ.


ಇಲ್ಲಿನ ಬೊಹೇಮಿಯಾ ಪ್ರಾಂತ ಕೈಗಾರಿಕೆಗಳ ಕೇಂದ್ರಬಿಂದುವಾಗಿರುವಂತೆಯೇ ಕವಿ, ಕಲಾವಿದ, ದಾರ್ಶನಿಕರ ನೆಲೆಬೀಡೂ ಆಗಿದೆ.

ಎಂಬುದು ಈ ಯುಗದ ಎಲ್ಲ ರಾಷ್ಟ್ರಗಳ ಅನಿವಾರ್ಯತೆ. ಇದು ಇಲ್ಲವಾದಲ್ಲಿ ಆರ್ಥಿಕ ಅರಾಜಕತೆ ತಾಂಡವವಾಡುವುದು ಖಚಿತ. ಅದರಲ್ಲೂ ಪೋಲಂಡ್, ಹಂಗೇರಿ, ರುಮಾನಿಯಾಗಳ ಆರ್ಥಿಕ ಅಸ್ಥಿರತೆ ಭೀಕರವಾದುದು. ತೀವ್ರಗಾಮಿ ಆರ್ಥಿಕ ಕ್ರಮಗಳಿಂದ ಮಾತ್ರ ಈ ದೇಶಗಳ ಉದ್ಧಾರ ಸಾಧ್ಯ ಎಂಬುದು ಸಮಸ್ತ ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ಪೋಲಂಡ್‌ನ ಅರ್ಥಮಂತ್ರಿ ಬೆಲ್ಸರೋವಿಚ್ ಇತ್ತೀಚೆಗೆ ಮಂಡಿಸಿದ ಆರ್ಥಿಕ ಯೋಜನೆ ಪಶ್ಚಿಮ ಯೂರೋಪ್‌ನ ದೇಶಗಳ ಅರ್ಥ ವ್ಯವಸ್ಥೆಯ ಮಾದರಿಯಲ್ಲಿದ್ದು, ಬೆಲೆ ಏರಿಕೆಯನ್ನು ತಡೆಯುವ ಹಾಗೂ ನಿಜವಾದ ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ಬೇಕಾಗುವ ಸಾಂಸ್ಥಿಕ ಬದಲಾವಣೆಗಳನ್ನು ಮಾಡುವ ಉದ್ದೇಶ ಹೊಂದಿದೆ. ದುರ್ಬಲ ಉದ್ಯಮಗಳಿಗೆ ಒದಗಿಸುವ ಸಹಾಯಧನದಲ್ಲಿ ಕಡಿತ. ಬಜೆಟ್‌ನಲ್ಲಿ ಉಳಿತಾಯ ಸಾಧಿಸಿ ಬೆಲೆ ಏರಿಕೆ ತಡೆಯುವುದು. ನಷ್ಟದಲ್ಲಿರುವ ಉದ್ಯಮಗಳನ್ನು ಮುಚ್ಚುವಿಕೆ. ಸರ್ಕಾರೀ ಉದ್ಯಮಗಳಲ್ಲಿ ಕೆಲವನ್ನು ಖಾಸಗೀಕರಣಗೊಳಿಸುವುದು. ವಿದೇಶಿ ವ್ಯಾಪಾರದ ಉತ್ತೇಜನ ಮುಂತಾದ ಹತ್ತು ಹಲವು ಕನಸುಗಳು ಪೋಲಂಡ್‌ನ ಸರ್ಕಾರಕ್ಕೆ ಇವೆ.

ಆದರೆ ಇವೆಲ್ಲವನ್ನು ಜಾರಿಗೆ ತಂದರೆ ಇನ್ನೊಂದು ರೀತಿಯ ಸಮಸ್ಯೆ ಉದ್ಭವಿಸುವುದರ ಬಗ್ಗೆ ಅರ್ಥ ಶಾಸ್ತ್ರಜ್ಞರು ಎಚ್ಚರಿಕೆ ನೀಡಿದ್ದಾರೆ. ಪ್ರಾರಂಭದಲ್ಲಿ ಏರಿದ ಬೆಲೆಗಳನ್ನಿಳಿಸುವ ಪ್ರಯತ್ನ ಸೋಲಬಹುದೆನ್ನಲಾಗಿದೆ. ದಿವಾಳಿಯಾದ ಉದ್ಯಮಗಳನ್ನು ಪುನಶ್ಚೇತಗೊಳಿಸಬೇಕೇ ಹೊರತು ಮುಚ್ಚಿಹಾಕಿದರೆ ನಿರುದ್ಯೋಗ ಸಮಸ್ಯೆ ಹಠಾತ್ತನೆ ಉಲ್ಬಣಿಸುತ್ತದೆ. ಉತ್ಪಾದನೆ ಇಳಿಮುಖವಾಗುತ್ತದೆ. ಸರಕುಗಳ ತುಟಾಗ್ರತೆ ತಲೆದೋರುತ್ತದೆ. ಖಾಸಗಿ ರಂಗದಲ್ಲಿ ಹೊಸದಾಗಿ ನಿರುದ್ಯೋಗಗೊಂಡ ಜನಕ್ಕೆ ಸ್ಥಾನ ಸಿಗುವುದು ಕಷ್ಟ. ಈ ಎಲ್ಲ ಹೆದರಿಕೆಗಳ ಮಧ್ಯೆಯೇ ಸರ್ಕಸ್ಸು ನಡೆಯಬೇಕಾಗಿದೆ.

ಭಾರೀ ಹುಮ್ಮಸ್ಸಿನಲ್ಲಿ ಬಂಡೆದ್ದ ಜನತೆ ಹೊಸ ಅರ್ಥ ವ್ಯವಸ್ಥೆಯ ಅನಾನುಕೂಲತೆಗಳನ್ನು ಬಹಳ ಕಾಲ ಸಹಿಸಿಕೊಳ್ಳುವ ಸಮೃದ್ಧಿವಂತರಾಗಿರುವುದಿಲ್ಲ. ಈಗಾಗಲೇ ಅಸಹನೆಯ ಧ್ವನಿ ಶುರುವಾಗಿದೆ. ಒಂದು ಭರವಸೆಯ ಅಂಶವೆಂದರೆ, ಈ ಪೂರ್ವ ಯುರೋಪ್‌ನ ದೇಶಗಳಿಗೆ ಮುಂಚೆನಿಂದಲೂ ಮಾರ್ಗದರ್ಶನ ದೊರೆತದ್ದು ಪೋಲಂಡ್‌ನಿಂದ. ಈಗಲೂ ಹೊಸ



"ಮಹಾಪ್ರಭೋ....! ಊರಲ್ಲಿ ಸ್ವರ್ಗಸ್ಥರಾದರು ಅಂತ ಪ್ರಕಟಿಸಿದ್ದಾರೆ. ಆದ್ರೆ ನೀವು ಮಾತ್ರ ನನ್ನನ್ನು ನರಕಕ್ಕೆ ತಳ್ಳುತ್ತಿರುವುದು ಸರಿಯೇ....?!

ವ್ಯವಸ್ಥೆಗೆ ಪೋಲಂಡ್ ಪರಿವಾರ ಮತ್ತು ಆ ದೇಶದ ಆರ್ಥಿಕ ಯೋಜನೆಗಳು ಸುಸಂಬದ್ಧವಾಗಿದೆ. ಅದನ್ನೇ ಇತರೆ ದೇಶಗಳೂ ಅನುಕರಿಸಿದರೆ ಮಾತ್ರ ಯಶಸ್ಸು ಹತ್ತಿರವಾದೀತು.

ದೊರೆಗಳ ಆಲದ ಮರಕ್ಕೆ!

ಇನ್ನು ರಾಜಕೀಯ ಬಯಲಿನಲ್ಲೂ ಸುರಳಿತವಾದ ನೇರ ಹಾದಿ ಬಿಚ್ಚಿಕೊಂಡಿಲ್ಲ. ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ನಿರ್ಮಾಣ ಸರಳವಲ್ಲ. ಪ್ರಜಾಪ್ರಭುತ್ವ ಈ ದೇಶಗಳ ಸಾಂಸ್ಕೃತಿಕ ಜಾಯಮಾನಕ್ಕೆ ಗೊತ್ತೇ ಇಲ್ಲ. ಮೊದಲಿನಿಂದಲೂ ಅರಸೊತ್ತಿಗೆಗಳಿಂದ ಆಳಿಸಿಕೊಂಡ ಸಮೂಹವಿದು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಹಾಗೆ ಇಲ್ಲಿ ಪ್ರಜಾಪ್ರಭುತ್ವದ ಐತಿಹಾಸಿಕ ಸಂಸ್ಕಾರವಾಗಲೀ, ಪ್ರಾತಿನಿಧಿಕ ಸರ್ಕಾರಕ್ಕಾಗಿ ನಡೆದ ಹೋರಾಟದ ಇತಿಹಾಸವಾಗಲೀ ಇಲ್ಲ. ಇಂಗ್ಲೆಂಡ್, ಫ್ರಾನ್ಸ್ ಮತ್ತು ಸ್ವಿಟ್ಜರ್ಲೆಂಡ್ ಹೊರತಾಗಿ ಯೂರೋಪ್‌ನ ಎಲ್ಲ ದೇಶಗಳೂ ಅರಸೊತ್ತಿಗೆ ಅಥವಾ ನಿರಂಕುಶ ಯಾಜಮಾನ್ಯಕ್ಕೆ ಈಡಾದಂಥವುಗಳೇ. 1918ರಿಂದ 1939ರ ತನಕ ಯೂರೋಪಿನ ತುಂಬ ಸರ್ವಾಧಿಕಾರಿಗಳದೇ ಆದಳಿತ. ಎರಡನೆ ಮಹಾಯುದ್ಧದ ನಂತರವೇ ಇಲ್ಲಿ ಪ್ರಜಾಪ್ರಭುತ್ವಕ್ಕೆ ಗಟ್ಟಿ ನೆಲ ದೊರೆತದ್ದು. ನಾರ್ವೆ, ಸ್ವೀಡನ್, ಫಿನ್‌ಲಂಡ್ ಮುಂತಾದ ದೇಶಗಳಲ್ಲಿ ಪ್ರಜಾಪ್ರಭುತ್ವದ ಜೊತೆ ಜೊತೆಗೇ (ಇಂಗ್ಲೆಂಡಿನಲ್ಲಿದ್ದಂತೆ) ಅರಸೊತ್ತಿಗೆಗಳು ಮುಂದುವರೆದಿವೆ. ಪೂರ್ವ ಯುರೋಪ್‌ನಲ್ಲೂ ಅರಸೊತ್ತಿಗೆಗಳ, ಸರ್ವಾಧಿಕಾರಿಗಳ ಸಂತತಿಗೆ ಕೊರತೆಯಿಲ್ಲ. ಹಿಂದೆ ಆಸ್ಟ್ರೋ-ಹಂಗೇರಿಯನ್ ಸಾಮ್ರಾಜ್ಯದ ಹ್ಯಾಬ್ಸ್‌ಬರ್ಗ್ ವಂಶದ ಪ್ರಭುಗಳು ಈ ಎಲ್ಲ ದೇಶಗಳನ್ನೂ ಆಳಿದರು. ಇದು ಎಷ್ಟು ಆಳವಾಗಿ ಬೇರೂರಿದ ಸೆಂಟಿಮೆಂಟೆಂದರೆ 1989ರ ನಂತರ ಹಂಗೇರಿಯಲ್ಲಿ ಚುನಾವಣೆಗಳು ನಡೆದಾಗ ಅಲ್ಲಿನ ರಾಜಕೀಯ ಪಕ್ಷವೊಂದು ಓಟೋಹ್ಯಾಬ್ಸ್‌ಬರ್ಗ್ ಎಂಬುವವರನ್ನು ತನ್ನ ಪರವಾಗಿ ಅಧ್ಯಕ್ಷೀಯ ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲಿಸಿತು. ಈತ ಹಳೆಯ ಹ್ಯಾಬ್ಸ್‌ಬರ್ಗ್ ರಾಜ ಮನೆತನದವನು. ಈಗ ಜರ್ಮನಿಯ ನಿವಾಸಿ.

1989ರ ನಂತರ ರಚಿತವಾದ ಅನೇಕ

ವಿಕ್ಷಿಪ್ತರ ನಾಡಿನ ಪ್ರತಿಭಾವಂತರು

ಬಹುಕಾಲ ಪರಕೀಯರ ಹಿಡಿತದಲ್ಲಿದ್ದ ಈ ಪೂರ್ವ ಯೂರೋಪಿಯನ್ ದೇಶಗಳು ತಮ್ಮ ಸ್ವಂತಿಕೆಯನ್ನು ಮೆರೆಯುವ ಭರದಲ್ಲಿ ವಿಲಕ್ಷಣತೆ, ವಿಕ್ಷಿಪ್ತತೆ ಮತ್ತು ಚಕಿತಗೊಳಿಸುವ ವಿಧಿವಿಧಾನಗಳನ್ನುರೂಢಿಸಿಕೊಂಡಿವೆ. 'ಬೋಹೇಮಿಯಾ' ಪ್ರಾಂತ್ಯ ತನ್ನ ವಿಕ್ಷಿಪ್ತತೆಗೆ ಎಷ್ಟು ಹೆಸರುವಾಸಿಯೆಂದರೆ ಯಾರಾದರೂ ಯಡವಟ್ಟಾಗಿ ವರ್ತಿಸಿದರೆ ಅವರನ್ನು 'ಬೋಹೇಮಿಯನ್' ಎಂದು ಕರೆಯುವುದು ಯೂರೋಪಿಯನ್ನರ ರೂಢಿ! ಬಹುಶಃ ಈ ವಿಕ್ಷಿಪ್ತತೆಯೇ ಕ್ರಿಯಾಶೀಲತೆಗೂ ಕಾರಣವಾದೀತೇನೋ ಎಂಬಂತೆ ಇದೇ ಭೂ ಭಾಗದಿಂದ ಅನೇಕ ಮಹಾನ್ ಜೀವಿಗಳೆದ್ದು ಬಂದಿದ್ದಾರೆ. ಫ್ರಾಂಜ್ ಕಾಫ್ಕ ಮತ್ತು ರಾಬರ್ಟ್ ಮುಸಿಲ್‌ರಂತಹ ಬರಹಗಾರರು, ಗಸ್ಟಾವ್ ಕ್ಲಿಮಿಟ್ ಮತ್ತು ಓಸ್ಕರ್ ಕೋಕೋಸ್ಕಾರಂಥ ಚಿತ್ರಕಾರರು, ಶೋಯೆನ್‌ಬರ್ಗ್ ಮತ್ತು ಬೆಲಾ ಬಾರ್ಟೋಕ್‌ರಂಥ ವಿಕ್ಷಿಪ್ತ ಸಂಗೀತಗಾರರು, ಸಿಗ್ಮಂಡ್ ಫ್ರಾಯ್ಡ್ ನಂತಹ ಶ್ರೇಷ್ಠ ಮನಃಶಾಸ್ತ್ರ ತಜ್ಞ.... ಇವರೆಲ್ಲ ಈ ನೆಲದ ಕೊಡುಗೆಗಳೇ.

ಪಕ್ಷಗಳು ಇಂಗ್ಲೆಂಡಿನ ಕನ್ಸರ್‌ವೇಟಿವ್ ಪಕ್ಷದಂತೆ ಸಂಪ್ರದಾಯಶೀಲ ರಾಜನಿಷ್ಠ ಪಕ್ಷಗಳಾಗಿವೆ. ಹಳೆಯ ರಾಜಮನೆತನಗಳವರನ್ನು ಎಲ್ಲಿದ್ದರೂ ಹುಡುಕಿ ಕರೆತಂದು ಅವರಿಗೆ ಅಧಿಕಾರ ನೀಡುವ ಯತ್ನಗಳೂ ಈಗ ನಡೆದಿವೆ. ಜನತೆಯಲ್ಲೂ ಫ್ಯೂಡಲ್ ಮನೆತನಗಳ ಬಗ್ಗೆ ಗೌರವವಿದೆ. ಅದನ್ನು ಮೀರಿ ಪ್ರಜಾಪ್ರಭುತ್ವದ ಹೂವು ಅರಳುತ್ತದೆಯೋ? ಕಾದುನೋಡಬೇಕು.

ಕ್ರಾಂತಿಯೇನೋ ಆಗಿ ಹೋಯಿತು. ಆದರೆ ಅದರ ನಂತರದ ವ್ಯವಸ್ಥೆಗೆ ಬೇಕಾದ ಪೂರ್ವಸಿದ್ಧತೆಗಳಾಗಿದ್ದವೆ? ಇಲ್ಲ. ಕ್ರಾಂತಿ ಸಫಲವಾದೀತೆಂಬ ಭರವಸೆಯೂ ಕ್ರಾಂತಿಕಾರಿಗಳಿಗಿರಲಿಲ್ಲ. ನಿಶ್ಚಿತ ಗೊತ್ತುಗುರಿಗಳಿರಲಿಲ್ಲ. ಭವಿತ

ಷ್ಯದ ಯೋಜನೆಗಳ ಬಗ್ಗೆ ನಿಚ್ಚಳತೆ ಇರಲಿಲ್ಲ. ಪಶ್ಚಿಮ ದೇಶಗಳ ಶ್ರೀಮಂತಿಕೆ ಮತ್ತು ಪ್ರಜಾಪ್ರಭುತ್ವದ ಹಕ್ಕು ಚಲಾವಣೆಯ ಮೋಜುಗಳಷ್ಟೇ ಇದ್ದವು. ಅಷ್ಟೆ ಸಾಕೆ? ಕ್ರಾಂತಿಯ ನಂತರವೂ ಕೂಡ ತಂತಮ್ಮ ದೇಶಗಳ ಭವಿಷ್ಯ ರೂಪಿಸುವ ನಿರ್ಣಯದ ಹಕ್ಕು ಈ ದೇಶಗಳ ಜನರ ಕೈಲುಳಿದಿಲ್ಲ. ಪಶ್ಚಿಮದ ಪ್ರಬಲ ರಾಷ್ಟ್ರಗಳು ಈಗಾಗಲೇ ತಮ್ಮ ರೆಕ್ಕೆಗಳ ನೆರಳುಗಳನ್ನು ಹೊಚ್ಚತೊಡಗಿವೆ. ಸಾಧ್ಯವಾದಷ್ಟೂ ಬೇಗ ಈ ರಾಷ್ಟ್ರಗಳನ್ನು ಬಂಡವಾಳವಾದದ ಹಾದಿಯಲ್ಲಿ ಮುನ್ನಡೆಸುವ ಉದ್ದೇಶ ಅವುಗಳದು. ಇರಲಿ, ಆದರೆ ಅದಕ್ಕಾಗಿ ಈ ದೇಶಗಳ ಜನರು ತೆರಬೇಕಾದ ಬೆಲೆಯಾದರೂ ಎಂಥದು?

ಬಂಡವಾಳವಾದದತ್ತ ತೀವ್ರವಾಗಿ ಸಾಗಿ ಹೋಗುವ ಕನಸಿಗಾಗಿ ಅಲ್ಲಿನ ಜನರು ಪಡುತ್ತಿರುವ ಪಾಡು ಒಂದು ರೀತಿಯದಲ್ಲ. ಪೋಲಂಡ್‌ನ ಹೊಸ ಆರ್ಥಿಕ ಯೋಜನೆ ಕಾರ್ಯಗತಗೊಂಡಾಗ ಅಲ್ಲಿಯ ಜನರ ಜೀವನಮಟ್ಟ ಒಂದೇಟಿಗೆ ಶೇ. 40ರಷ್ಟು ಕೆಳಕ್ಕಿಳಿಯಿತು. ಇಂಥ ನಿದರ್ಶನ 1945ರ ನಂತರ ಯಾವ ದೇಶದಲ್ಲೂ ಕಂಡು ಬಂದಿರಲಿಲ್ಲ.

ಕಮ್ಯುನಿಸ್ಟ್ ರಷ್ಯ ಮತ್ತು ಬಂಡವಾಳಶಾಹಿ ಪಶ್ಚಿಮ ರಾಷ್ಟ್ರಗಳ ಮಧ್ಯೆ ಒಂದು ಸೇತುವೆಯಂತಿರುವ ಈ ಪೂರ್ವ ಯುರೋಪ್‌ನ ರಾಷ್ಟ್ರಗಳ ಮೇಲೆ ಹಿಡಿತವಿರಿಸಿಕೊಳ್ಳಲು ಎರಡೂ ಬಣಗಳಲ್ಲಿ ಆಸಕ್ತಿ ವಿಪರೀತವಾಗಿದೆ. ಈ ತನಕ ಕೆಂಬಾವುಟದ ಹಿಡಿತದಲ್ಲಿದ್ದ ಇವುಗಳನ್ನು ಸಂಪೂರ್ಣವಾಗಿ ತಮ್ಮ ಕೈಗೆ ತೆಗೆದುಕೊಳ್ಳಲು ಪಶ್ಚಿಮದ ಧಣಿಗಳು ಯತ್ನಿಸುತ್ತಿದ್ದಾರೆ. ರಷ್ಯಾವನ್ನು ಪಶ್ಚಿಮದಿಂದ ದೂರವಿಡುವ ಉದ್ದೇಶವೂ ಅವರದಾಗಿದೆ. ಏಕೀಕೃತ ಜರ್ಮನಿಯೂ ಸೇರಿದಂತೆ ಈ ಭೂಭಾಗ ಭೂರಾಜಕೀಯ (Geo political) ದೃಷ್ಟಿಯಿಂದ ಹೇಳಬೇಕೆಂದರೆ, ಯುರೋಪ್‌ನ ಹೃದಯ ಸ್ಥಾನದಂತಹುದು. ಇತಿಹಾಸದುದ್ದಕ್ಕೂ ಇಲ್ಲಿ ರಾಜಕೀಯ ತಲ್ಲಣಗಳಾಗಿವೆ. ಇವು ಮುಂದುವರೆದರೂ ಅಚ್ಚರಿಯಿಲ್ಲ. ಶಾಂತಿಯೇ ಇಲ್ಲದಾದಾಗ ಪ್ರಗತಿಯೆಲ್ಲಿಯದು? *

ಮನಸ್ಸಿನಲ್ಲಿರುವ ಭಾವವನ್ನು ಮಾತಿನ ಮೂಲಕ ಬಚ್ಚಿಡಬಹುದೇನೋ. ಆದರೆ ದೃಷ್ಟಿಯಿಂದ ಬಚ್ಚಿಡಲಾರೆವು. ನಾಲಿಗೆ ನಾವು ಹೇಳಿದಂತೆ ಕೇಳಬಹುದೇನೋ ಆದರೆ ಕಣ್ಣುಗಳು ನಾವು ಹೇಳಿದಂತೆ ಕೇಳಲಾರವು.

-ಅರ್ಲ್ ಆಫ್ ಚೆಸ್ಟರ್‌ಫೀಲ್ಡ್

ಮುಂಜಾನೆಯಿಂದ ಸಂಜೆಯವರೆಗೆ ಶ್ರಮಿಸಿ ದಣಿದವನಿಗಿಂತ, ಕೋಪದಿಂದ ವಿಚಾರದಿಂದ ದಿನ ಕಳೆದವನೇ ಹೆಚ್ಚು ದಣಿದಿರುತ್ತಾನೆ.

-ಜೇಮ್ಸ್ ಎಲನ್

ಮನಸ್ಸು ಸಂತೋಷವಾಗಿದ್ದಾಗ ಮಾತ್ರ ವ್ಯವಹಾರದಲ್ಲಿ ಉದಾರತೆ ಇರುತ್ತದೆ.

-ಪ್ರೇಮಚಂದ್

(ಸಂಗ್ರಹ) ಪಿ. ಶ್ರೀಕಾಂತ್

Printed and Published by V. G. VAIDYA on behalf of Loka Shikshana Trust at 'Samyukta Karnataka Press', Koppikar Road, Hubli-580020 (Phone: 64303), No. 2, Residency Road, Bangalore-560025 (Phone: 213265)
Managing Editor: K. SHAMA RAO.
Representatives: Bombay: V. Satyamurthy (Phone: 5510592)
Madras: S. K. Murthi (Phone: 414870)
New Delhi: V. K. Chopra (Phone:7114785)
Registered with the Registrar of Newspapers for India
under No. 3633/57



M. K. Publicity